prajavani.net prajavani www.prajavani.net

ಪ್ರಜಾ ವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನ ಪತ್ರಿಕೆ

ಪ್ರತಿಭಟನೆ

ಬೆಂಗಳೂರಿನಲ್ಲಿ ವಿದ್ಯಾರ್ಥಿನಿ ಮೇಲೆ ಅತ್ಯಾಚಾರ ಎಸಗಿದವರ ವಿರುದ್ಧ ಕಠಿಣ ಕ್ರಮಕ್ಕೆ ಆಗ್ರಹಿಸಿ ಮೈಸೂರಿನ ಹಳೆಯ ಜಿಲ್ಲಾಧಿಕಾರಿ ಕಚೇರಿ ಬಳಿ ಎಐಡಿಎಸ್‌ಒ ಸದಸ್ಯರು ಬುಧವಾರ ಪ್ರತಿಭಟನೆ ನಡೆಸಿದರು

ಪರ್ವತಾರೋಹಣ

ರಿಫಿನೆಸ್ ವಾರ್ಜಿರಿ (20 ವರ್ಷ) ಅವರು ಮೌಂಟ್ ಎವರೆಸ್ಟ್ ಶಿಖರವನ್ನು ಏರಿದ ಮೇಘಾಲಯದ ಕಿರಿಯ ವ್ಯಕ್ತಿ ಎಂಬ ಕೀರ್ತಿಗೆ ಭಾಜನರಾಗಿದ್ದಾರೆ

ಸೆನ್ಸೆಕ್ಸ್	ನಿಫ್ಟಿ	$/₹	ಚಿನ್ನ (Std. 10g)	ಶುದ್ಧ ಬೆಳ್ಳಿ (kg)
82,634	25,212	85.92	₹1.02 ಲಕ್ಷ (ಬೆಂಗಳೂರು)	₹1.18 ಲಕ್ಷ (ಬೆಂಗಳೂರು)

ಕೃಷಿಗೆ ₹24 ಸಾವಿರ ಕೋಟಿ ಯೋಜನೆ

ಉತ್ಪಾದಕತೆ ಹೆಚ್ಚಳ, ಬೆಳೆ ವೈವಿಧ್ಯಕ್ಕಾಗಿ ಕಾರ್ಯಕ್ರಮ: ಕೇಂದ್ರ ಸಚಿವ ಸಂಪುಟ ಅನುಮೋದನೆ

ಪ್ರಜಾವಾಣಿ ವಾರ್ತೆ

ನವದೆಹಲಿ: ಕೃಷಿ ಹಾಗೂ ಸಂಬಂಧಿತ ಕ್ಷೇತ್ರಗಳ ಅಭಿವೃದ್ಧಿಗೆ ಇನ್ನಷ್ಟು ಉತ್ತೇಜನ ನೀಡಲು 'ಪ್ರಧಾನಮಂತ್ರಿ ಧನ-ಧಾನ್ಯ ಯೋಜನೆ'ಗೆ ಕೇಂದ್ರ ಸಚಿವ ಸಂಪುಟ ಬುಧವಾರ ಅನುಮೋದನೆ ನೀಡಿದೆ.

ಈ ಯೋಜನೆಯು ದೇಶದ 100 ಜಿಲ್ಲೆಗಳಲ್ಲಿ ಅನುಷ್ಠಾನಗೊಳ್ಳಲಿದೆ. ಈ ಯೋಜನೆಯ ಅವಧಿ ಆರು ವರ್ಷಗಳು. ವಾರ್ಷಿಕ ₹24 ಸಾವಿರ ಕೋಟಿ ವೆಚ್ಚ ಒಳಗೊಂಡಿದೆ. ಈ ಯೋಜನೆಯಿಂದ 1.7 ಕೋಟಿ ರೈತರಿಗೆ ಅನುಕೂಲವಾಗಲಿದೆ. ಈ ಯೋಜನೆ ಬಗ್ಗೆ 2025-26ರ ಬಜೆಟ್‌ನಲ್ಲಿ ಘೋಷಣೆ ಮಾಡಲಾಗಿತ್ತು.

ಕೃಷಿ ಉತ್ಪಾದಕತೆ ಹೆಚ್ಚಳ, ಬೆಳೆಗಳಲ್ಲಿ ವೈವಿಧ್ಯ, ಸುಸ್ಥಿರ ಕೃಷಿ ಪದ್ಧತಿಗಳ ಅಳವಡಿಕೆಗೆ ಉತ್ತೇಜನ, ಪಂಚಾಯಿತಿ ಮತ್ತು ಬ್ಲಾಕ್ ಮಟ್ಟದಲ್ಲಿ ಕೊಯ್ಲಿನ ನಂತರದ ಸಂಗ್ರಹಣೆ ಹೆಚ್ಚಿಸುವುದು, ನೀರಾವರಿ ಸೌಲಭ್ಯಗಳ ಸುಧಾರಣೆ, ದೀರ್ಘಾವಧಿ ಮತ್ತು ಅಲ್ಪಾವಧಿ ಸಾಲದ ಲಭ್ಯತೆಯನ್ನು ಸುಗಮಗೊಳಿಸುವ ಗುರಿಯನ್ನು ಈ ಯೋಜನೆ ಹೊಂದಿದೆ ಎಂದು ಕೇಂದ್ರ ವಾರ್ತಾ ಹಾಗೂ ಪ್ರಸಾರ ಸಚಿವ ಅಶ್ವಿನಿ ವೈಷ್ಣವ್ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ಯೋಜನೆಯ ಪರಿಣಾಮಕಾರಿ ಅನುಷ್ಠಾನ ಮತ್ತು ಮೇಲ್ವಿಚಾರಣೆಗಾಗಿ ಜಿಲ್ಲೆ, ರಾಜ್ಯ ಮತ್ತು ರಾಷ್ಟ್ರ ಮಟ್ಟದಲ್ಲಿ ಸಮಿತಿಗಳನ್ನು ರಚಿಸಲಾಗುವುದು. ಜಿಲ್ಲಾ ಧನ ಧಾನ್ಯ ಸಮಿತಿಯು ಕೃಷಿ ಮತ್ತು ಸಂಬಂಧಿತ ಚಟುವಟಿಕೆಗಳ ಯೋಜನೆಗೆ ಅಂತಿಮ ರೂಪ ನೀಡುತ್ತದೆ. ಈ ಸಮಿತಿಯಲ್ಲಿ ಪ್ರಗತಿಪರ ರೈತರು ಇರುತ್ತಾರೆ ಎಂದರು.

11 ಇಲಾಖೆಗಳ 36 ಯೋಜನೆಗಳು

ಅಶ್ವಿನಿ ವೈಷ್ಣವ್

ಈ ಯೋಜನೆಯು 11 ಇಲಾಖೆಗಳಲ್ಲಿ ಅಸ್ತಿತ್ವದಲ್ಲಿರುವ 36 ಯೋಜನೆಗಳನ್ನು ಒಟ್ಟುಗೂಡಿಸುತ್ತದೆ. ಇದನ್ನು ರಾಜ್ಯ ಯೋಜನೆಗಳು ಮತ್ತು ಖಾಸಗಿ ವಲಯಗಳ ಜತೆಗೆ ಸ್ಥಳೀಯ ಸಹಭಾಗಿತ್ವದ ಮೂಲಕ ಜಾರಿಗೆ ತರಲಾಗುತ್ತದೆ. ಕಡಿಮೆ ಉತ್ಪಾದಕತೆ, ಕಡಿಮೆ ಬೆಳೆ ಮತ್ತು ಕಡಿಮೆ ಸಾಲ ವಿತರಣೆಯ ಮೂರು ಅಂಶಗಳ ಆಧಾರದಲ್ಲಿ 100 ಜಿಲ್ಲೆಗಳನ್ನು ಆಯ್ಕೆ ಮಾಡಲಾಗುತ್ತದೆ. ಪ್ರತಿ ರಾಜ್ಯ/ಕೇಂದ್ರಾಡಳಿತ ಪ್ರದೇಶದಲ್ಲಿ ಜಿಲ್ಲೆಗಳ ಸಂಖ್ಯೆಯು ನಿವ್ವಳ ಬೆಳೆ ಪ್ರದೇಶ ಮತ್ತು ಹಿಡುವಳಿಗಳ ಪಾಲನ್ನು ಆಧರಿಸಿರುತ್ತದೆ. ಆದಾಗ್ಯೂ, ಪ್ರತಿ ರಾಜ್ಯದಿಂದ ಕನಿಷ್ಠ 1 ಜಿಲ್ಲೆಯನ್ನು ಆಯ್ಕೆ ಮಾಡಲಾಗುತ್ತದೆ ಎಂದು ಅಶ್ವಿನಿ ವೈಷ್ಣವ್ ತಿಳಿಸಿದರು.

ಹೂಡಿಕೆ ವಿನಾಯಿತಿಗೆ ಅಸ್ತು

ಪ್ರಲ್ಹಾದ ಜೋಶಿ

ದೇಶದಲ್ಲಿ ನವೀಕರಿಸಬಹುದಾದ ಇಂಧನ ಕ್ಷೇತ್ರವನ್ನು ಮತ್ತಷ್ಟು ವಿಸ್ತರಿಸಲು ಮುಂದಾಗಿರುವ ಕೇಂದ್ರ ಸರ್ಕಾರವು ಇದೀಗ ಎನ್‌ಎಲ್‌ಸಿ ಇಂಡಿಯಾ ಲಿಮಿಟೆಡ್‌ಗೆ ಹೂಡಿಕೆ ವಿನಾಯಿತಿ ನೀಡಿದೆ ಎಂದು ಕೇಂದ್ರ ನವೀಕರಿಸಬಹುದಾದ ಇಂಧನ ಸಚಿವ ಪ್ರಲ್ಹಾದ ಜೋಶಿ ತಿಳಿಸಿದರು.

ಕೇಂದ್ರ ಸಾರ್ವಜನಿಕ ವಲಯದ ಉದ್ಯಮಗಳಿಗೆ ಅನ್ವಯವಾಗುವಂತೆ ಸದ್ಯ ಚಾಲ್ತಿಯಲ್ಲಿರುವ ಹೂಡಿಕೆ ಮಾರ್ಗಸೂಚಿಗಳಿಂದ ಈ ಸಂಸ್ಥೆಗೆ ವಿಶೇಷ ವಿನಾಯಿತಿ ನೀಡಲಾಗಿದೆ. ಸಚಿವ ಸಂಪುಟವು ಹೂಡಿಕೆ ವಿನಾಯಿತಿಗೆ ಅನುಮೋದನೆ ನೀಡಿದ್ದರಿಂದಾಗಿ ಸಂಸ್ಥೆಯು ಅಂಗಸಂಸ್ಥೆಯಾದ ಎನ್‌ಎಲ್‌ಸಿ ಇಂಡಿಯಾ ನವೀಕರಿಸಬಹುದಾದ ಇಂಧನ ಲಿಮಿಟೆಡ್ ₹7,000 ಕೋಟಿ ಹೂಡಿಕೆ ಮಾಡಬಹುದು ಎಂದರು.

NTPC

ಎನ್‌ಟಿಪಿಸಿ ₹20 ಸಾವಿರ ಕೋಟಿ ಹೂಡಿಕೆ

ನವೀಕರಿಸಬಹುದಾದ ಇಂಧನದ ಉತ್ಪಾದನೆ ವೇಗಗೊಳಿಸಲು ಕೇಂದ್ರ ಸರ್ಕಾರವು ರಾಷ್ಟ್ರೀಯ ಉಷ್ಣ ವಿದ್ಯುತ್ ನಿಗಮದ (ಎನ್‌ಟಿಪಿಸಿ) ಆರ್ಥಿಕ ಸ್ವಾಯತ್ತೆ ಹೆಚ್ಚಿಸಿದೆ.

ಸರ್ಕಾರಿ ಸ್ವಾಮ್ಯದ ಎನ್‌ಟಿಪಿಸಿ ಈಗ ತನ್ನ ನವೀಕರಿಸಬಹುದಾದ ಇಂಧನ ಅಂಗಸಂಸ್ಥೆಗಳಲ್ಲಿ ₹20,000 ಕೋಟಿಗಳವರೆಗೆ ಹೂಡಿಕೆ ಮಾಡಬಹುದು. ಈ ಹಿಂದೆ ಈ ಮಿತಿ ₹7,500 ಕೋಟಿ ಆಗಿತ್ತು.

ಶುಭಾಂಶುವಿಗೆ ಅಭಿನಂದನೆ– ನಿರ್ಣಯ

ಶುಭಾಂಶು ಶುಕ್ಲಾ

ಅಂತರರಾಷ್ಟ್ರೀಯ ಬಾಹ್ಯಾಕಾಶ ನಿಲ್ದಾಣದಲ್ಲಿ 18 ದಿನಗಳ ಐತಿಹಾಸಿಕ ಕಾರ್ಯಾಚರಣೆಯನ್ನು ಯಶಸ್ವಿಯಾಗಿ ಪೂರ್ಣಗೊಳಿಸಿದ ಗಗನಯಾತ್ರಿ ಶುಭಾಂಶು ಶುಕ್ಲಾ ಅವರನ್ನು ಸಚಿವ ಸಂಪುಟ ಅಭಿನಂದಿಸಿತು. ಅವರ ಸಾಧನೆಯು ಭಾರತದ ಬಾಹ್ಯಾಕಾಶ ಕಾರ್ಯಕ್ರಮದಲ್ಲಿ ಹೊಸ ಅಧ್ಯಾಯಕ್ಕೆ ನಾಂದಿ ಹಾಡಿತು ಎಂದು ಪ್ರತಿಪಾದಿಸಿತು.

'ಆಂಧ್ರದ ಆಮಿಷ ನಡೆಯದು'

ಬೆಂಗಳೂರು: ಉದ್ಯಮಿಗಳಿಗೂ ಜಮೀನು ದೊರಕಿಸಲು ರಾಜ್ಯ ಸರ್ಕಾರ ಶಕ್ತವಾಗಿದೆ. ಆಂಧ್ರಪ್ರದೇಶದ ಆಮಿಷಕ್ಕೆ ಒಳಗಾಗಿ ಯಾವ ಉದ್ಯಮಿಯೂ ರಾಜ್ಯ ತೊರೆಯುವುದಿಲ್ಲ ಎಂದು ಕೈಗಾರಿಕಾ ಸಚಿವ ಎಂ.ಬಿ. ಪಾಟೀಲ ಹೇಳಿದರು.

ಇನ್ನಷ್ಟು ವಿವರ 6

ಸಲಹಾ ಮಂಡಳಿಯ ಸಭೆಯಲ್ಲಿ ಗಂಭೀರ ಚರ್ಚೆ: ಮಹತ್ವದ ನಿರ್ಣಯ

ಒಬಿಸಿ ಒಗ್ಗೂಡಿಸಲು 'ಕೈ' ಕಾರ್ಯತಂತ್ರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಷ್ಟ್ರ ಮಟ್ಟದಲ್ಲಿ ಇತರ ಹಿಂದುಳಿದ ಸಮುದಾಯವನ್ನು (ಒಬಿಸಿ) ಪಕ್ಷದತ್ತ ಸೆಳೆಯಲು ಎಐಸಿಸಿ ನಾನಾ ಕಾರ್ಯತಂತ್ರ ಹೆಣೆದಿದೆ. ಅದೇ ಉದ್ದೇಶದಿಂದ ಇಲ್ಲಿ ಎರಡು ದಿನ ನಡೆದ ಪಕ್ಷದ ಹಿಂದುಳಿದ ವಿಭಾಗದ ಒಬಿಸಿ ಸಲಹಾ ಮಂಡಳಿಯ ಸಭೆಯು ಕೆಲವು ಮಹತ್ವದ ನಿರ್ಣಯಗಳನ್ನು ತೆಗೆದುಕೊಂಡಿದೆ.

ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ನೇತೃತ್ವದಲ್ಲಿ ಕೆಪಿಸಿಸಿ ಕಚೇರಿಯ ಭಾರತ್ ಜೋಡೋ ಭವನದಲ್ಲಿ ಮಂಗಳವಾರ ಹಾಗೂ ಶಾಂಗ್ರಿ-ಲಾ ಹೋಟೆಲ್‌ನಲ್ಲಿ ಬುಧವಾರ ನಡೆದ ಸಭೆಯಲ್ಲಿ ಮಾಜಿ ಮುಖ್ಯಮಂತ್ರಿ ಎಂ. ವೀರಪ್ಪ ಮೊಯಿಲಿ, ವಿಧಾನ ಪರಿಷತ್ ಸದಸ್ಯ ಬಿ.ಕೆ. ಹರಿಪ್ರಸಾದ್, ರಾಜಸ್ಥಾನದ ಮಾಜಿ ಮುಖ್ಯಮಂತ್ರಿ ಅಶೋಕ್ ಗೆಹಲೋತ್ ಸೇರಿದಂತೆ ಮಂಡಳಿಯ ಸದಸ್ಯರು ಭಾಗವಹಿಸಿ, ಗಂಭೀರ ಚರ್ಚೆ ನಡೆಸಿದರು.

6

ಮೀಸಲಾತಿ ಪ್ರಮಾಣ ಶೇ 75ಕ್ಕೆ ಹೆಚ್ಚಿಸಲು ಆಗ್ರಹ

- ಮೀಸಲಾತಿ ಪ್ರಮಾಣದ ಮಿತಿಯನ್ನು ಶೇ 75ರಷ್ಟು ಹೆಚ್ಚಿಸಿ, ಹಿಂದುಳಿದ ವರ್ಗಗಳಿಗೆ ಶೈಕ್ಷಣಿಕ, ಆರ್ಥಿಕ, ರಾಜಕೀಯ ಮತ್ತು ಇತರ ಕ್ಷೇತ್ರಗಳಲ್ಲಿ ಸೂಕ್ತ ಅವಕಾಶ ಕಲ್ಪಿಸಬೇಕು
- ಸಂವಿಧಾನದ ವಿಧಿ 15(5)ರ ಪ್ರಕಾರ ಖಾಸಗಿ ಶೈಕ್ಷಣಿಕ ಸಂಸ್ಥೆಗಳಲ್ಲಿ ಮೀಸಲಾತಿ ನೀಡಬೇಕು
- ತೆಲಂಗಾಣ ಸರ್ಕಾರ ನಡೆಸಿದ ಜಾತಿವಾರು ಜನಗಣತಿ ಮಾದರಿಯಲ್ಲಿ ರಾಷ್ಟ್ರ ಮಟ್ಟದಲ್ಲಿ ಜಾತಿವಾರು ಜನಗಣತಿ ಕೈಗೊಳ್ಳಬೇಕು

ಹೈಕಮಾಂಡ್ ತೀರ್ಮಾನಕ್ಕೆ ಬದ್ಧ– ಸಿ.ಎಂ

'ಹೈಕಮಾಂಡ್ ತೆಗೆದುಕೊಳ್ಳುವ ತೀರ್ಮಾನವನ್ನು ನಾನು ಮತ್ತು ಡಿ.ಕೆ. ಶಿವಕುಮಾರ್ ಅನುಸರಿಸುತ್ತೇವೆ' ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದರು.

'ಕಾಂಗ್ರೆಸ್‌ನಲ್ಲಿ ಹಿಂದುಳಿದ ವರ್ಗದ ಏಕೈಕ ಮುಖ್ಯಮಂತ್ರಿ ಸಿದ್ದರಾಮಯ್ಯ. ಕಾಂಗ್ರೆಸ್ ಅವರನ್ನು ಬದಲಾಯಿಸುತ್ತದೆಯೇ' ಎಂದು ಸುದ್ದಿಗಾರರು ಎಐಸಿಸಿ ಒಬಿಸಿ ವಿಭಾಗದ ಅಧ್ಯಕ್ಷ ಅನಿಲ್ ಜೈಹಿಂದ್ ಅವರನ್ನು ಪ್ರಶ್ನಿಸಿದಾಗ ಮಧ್ಯಪ್ರವೇಶಿಸಿದ ಮುಖ್ಯಮಂತ್ರಿ, 'ಈ ಪ್ರಶ್ನೆ ಇಲ್ಲಿ ಅಪ್ರಸ್ತುತ. ಇಂದಿನ ಸಭೆಗೆ ಸಂಬಂಧಿಸಿದ್ದಲ್ಲ. ನೀವು ಕೇಳುವ ಪ್ರಶ್ನೆಯ ವಿಚಾರದಲ್ಲಿ ಹೈಕಮಾಂಡ್ ನಿರ್ಣಯ ತೆಗೆದುಕೊಳ್ಳಲಿದೆ' ಎಂದರು. 'ಆ ರೀತಿಯ ಯಾವ ಪ್ರಸ್ತಾವವೂ ಇಲ್ಲ. ನಾವೆಲ್ಲರೂ ಸಿದ್ದರಾಮಯ್ಯ ಪರವಾಗಿ ಇದ್ದೇವೆ' ಎಂದು ಅನಿಲ್ ಜೈಹಿಂದ್ ಹೇಳಿದರು.

ನಿಂಗಪ್ಪ–ಶ್ರೀನಾಥ್ ನಂಟು ಬಿಚ್ಚಿಟ್ಟ ಚಾಟ್

ಬೆಂಗಳೂರು: ಲೋಕಾಯುಕ್ತ ಸಂಸ್ಥೆಯ ಹೆಸರಿನಲ್ಲಿ ಸರ್ಕಾರದ ವಿವಿಧ ಇಲಾಖೆಗಳ ಅಧಿಕಾರಿಗಳಿಂದ ಹಣ ವಸೂಲಿ ಮಾಡಿದ ಪ್ರಕರಣದಲ್ಲಿ ಆರೋಪಿ ನಿಂಗಪ್ಪ ಮತ್ತು ಐಪಿಎಸ್ ಅಧಿಕಾರಿ ಶ್ರೀನಾಥ್ ಜೋಷಿ ಮಧ್ಯದ ವಾಟ್ಸ್‌ಆ್ಯಪ್ ಚಾಟ್‌ಗಳ ಬೆನ್ನು ಬಿದ್ದಿದ್ದ ಲೋಕಾಯುಕ್ತ ಪೊಲೀಸರು, ಅವರಿಬ್ಬರ 'ನಂಟಿನ ಗಂಟು' ಹೇಗಿತ್ತೆಂಬುದನ್ನು ಪತ್ತೆ ಹಚ್ಚಿದ್ದಾರೆ.

ಇನ್ನಷ್ಟು ವಿವರ 6

ಬಿಜೆಪಿ ಶಾಸಕ ಬೈರತಿ ಬಸವರಾಜ್ ವಿರುದ್ಧ ಎಫ್‌ಐಆರ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೆ.ಆರ್.ಪುರ ವಿಧಾನಸಭಾ ಕ್ಷೇತ್ರದ ಬಿಜೆಪಿ ಶಾಸಕ ಬೈರತಿ ಬಸವರಾಜ್ ಸೇರಿದಂತೆ ಐವರ ವಿರುದ್ಧ ರೌಡಿ ಶೀಟರ್ ಶಿವಪ್ರಕಾಶ್ ಅಲಿಯಾಸ್ ಬಿಕ್ಲು ಶಿವು ಕೊಲೆ ಪ್ರಕರಣದಲ್ಲಿ ಭಾರತಿನಗರ ಪೊಲೀಸ್ ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿದೆ.

ಮೃತ ಶಿವಪ್ರಕಾಶ್ ತಾಯಿ ವಿಜಯಲಕ್ಷ್ಮಿ ಅವರು ನೀಡಿದ ದೂರಿನ ಆಧಾರದಲ್ಲಿ ಜಗದೀಶ್ (ಎ1), ಕಿರಣ್ (ಎ2), ವಿಮಲ್ (ಎ3), ಅನಿಲ್ (ಎ4), ಬೈರತಿ ಬಸವರಾಜ್ (ಎ5) ಅವರ ವಿರುದ್ಧ ಪ್ರಕರಣ ದಾಖಲಿಸಿಕೊಳ್ಳಲಾಗಿದೆ. ಕಿರಣ್, ವಿಮಲ್, ಮದನ್ ಹಾಗೂ ಸ್ಯಾಮ್ಯುಯಲ್ ಪ್ಯಾಟ್ರಿಕ್ ಎಂಬವರನ್ನು ಬುಧವಾರ ಸಂಜೆ ವಶಕ್ಕೆ ಪಡೆದುಕೊಂಡು ವಿಚಾರಣೆ ನಡೆಸಲಾಗುತ್ತಿದೆ ಎಂದು ಪೊಲೀಸರು ತಿಳಿಸಿದರು.

ಕೊಲೆಯಾದ ಶಿವಪ್ರಕಾಶ್ ಅವರು ರಿಯಲ್ ಎಸ್ಟೇಟ್ ವ್ಯವಹಾರ ನಡೆಸುತ್ತಿದ್ದರು.

7

ಚಿನಕುರುಳಿ ಪ್ರಕಾಶ್ ಶೆಟ್ಟಿ

ಹವಾಮಾನ ಮುನ್ಸೂಚನೆ: ನಗರದಲ್ಲಿ ಮೋಡ ಕವಿದ ವಾತಾವರಣ ಇರಲಿದ್ದು, ಭಾರಿ ಮಳೆಯಾಗುವ ಸಾಧ್ಯತೆಯಿದೆ

ಶ್ರೀವಾಸ್ತವ ಎಚ್‌ಎಎಲ್ ನಿರ್ದೇಶಕ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಹಿಂದೂಸ್ತಾನ್ ಏರೊನಾಟಿಕ್ಸ್ ಲಿಮಿಟೆಡ್ (ಎಚ್‌ಎಎಲ್) ಕಂಪನಿಯ ನಿರ್ದೇಶಕರಾಗಿ (ಎಂಜಿನಿಯರಿಂಗ್ ಹಾಗೂ ಸಂಶೋಧನೆ ಮತ್ತು ಅಭಿವೃದ್ಧಿ ವಿಭಾಗ) ಅಜಯ್ ಕುಮಾರ್ ಶ್ರೀವಾಸ್ತವ ಅವರು ಮಂಗಳವಾರ ಅಧಿಕಾರ ವಹಿಸಿಕೊಂಡಿದ್ದಾರೆ.

ಇದಕ್ಕೂ ಮೊದಲು ಅವರು ಎಚ್‌ಎಎಲ್ ಕಂಪನಿಯ ವಿಮಾನ ಸಂಶೋಧನೆ ಮತ್ತು ವಿನ್ಯಾಸ ಕೇಂದ್ರದ ಕಾರ್ಯನಿರ್ವಾಹಕ ನಿರ್ದೇಶಕ ಆಗಿದ್ದರು ಎಂದು ಪ್ರಕಟಣೆ ತಿಳಿಸಿದೆ.

ಅಜಯ್ ಕುಮಾರ್ ಶ್ರೀವಾಸ್ತವ

ಶ್ರೀವಾಸ್ತವ ಅವರು 1988ರಿಂದಲೂ ಎಚ್‌ಎಎಲ್‌ನಲ್ಲಿ ವಿವಿಧ ಜವಾಬ್ದಾರಿಗಳನ್ನು ನಿರ್ವಹಿಸಿದ್ದಾರೆ. ವಿಮಾನಗಳ ಕೆಲವು ಪ್ರಮುಖ ಬಿಡಿಭಾಗಗಳನ್ನು ಭಾರತದಲ್ಲೇ ತಯಾರಿಸುವ ಪ್ರಕ್ರಿಯೆಗಳಿಗೆ ಅವರು ನೇತೃತ್ವ ವಹಿಸಿದ್ದಾರೆ.

ಭಾರತ್ ಎಲೆಕ್ಟ್ರಾನಿಕ್ಸ್ ನೌಕರರ ಗೃಹ ನಿರ್ಮಾಣ ಸಹಕಾರ ಸಂಘ ನಿಯಮಿತ
(ನಂ.ಆರ್‌ಇಜಿ/ಎ12/ಡಿಆರ್‌ಸಿಎಸ್/61)
ಮೊದಲನೇ ಮಹಡಿ, ಭಾರತ್ ಎಲೆಕ್ಟ್ರಾನಿಕ್ಸ್ ಕೋ-ಆಪರೇಟಿವ್ ಸೊಸೈಟಿ, ಜಾಲಹಳ್ಳಿ ಅಂಚೆ, ಬೆಂಗಳೂರು- 560013. ದೂರವಾಣಿ: 080- 28381715.
ವೆಬ್ ಸೈಟ್:www.belhousingsociety.com ಇಮೇಲ್:beechbs@gmail.com

ಹರಾಜು ಪ್ರಕಟಣೆ

ನಮ್ಮ ಸಂಘವು ನೆಲಮಂಗಲದ ಸಮೀಪ ನಿರ್ಮಿಸಿರುವ ಬಿ.ಎಂ.ಆರ್.ಡಿ.ಎ ಅನುಮೋದಿತ ಬಿ.ಇ.ಎಲ್ ನಗರೂರು ಬಡಾವಣೆಯಲ್ಲಿ ಖಾಯ್ದಿರಿಸಿದ 13 ವಿವಿಧ ಅಳತೆಯ ಮೂಲೆ / ಮಧ್ಯಂತರ ನಿವೇಶನಗಳನ್ನು ಖಾಯಂ/ಸಹ ಸದಸ್ಯರಿಗೆ ದಿನಾಂಕ 11-08-2025 ರಂದು ಸಂಜೆ 05:30 ಗಂಟೆಗೆ ಹರಾಜು ಪ್ರಕ್ರಿಯೆಯ ಮೂಲಕ ವಿಲೇವಾರಿ ಮಾಡಲು ಪ್ರಕಟಣೆಯನ್ನು ನೀಡಲಾಗಿದೆ. ಷರತ್ತು ಮತ್ತು ನಿಬಂಧನೆಗಳಿಗಾಗಿ ಸಂಘದ ವೆಬ್‌ಸೈಟ್ ಲಿಂಕ್ **www.belhousingsociety.com** ಅಥವಾ ಸಂಘದ ಕಛೇರಿಯನ್ನು ಸಂಪರ್ಕಿಸಬೇಕಾಗಿ ನಮ್ಮ ಸಂಘದ ಸದಸ್ಯರಲ್ಲಿ ವಿನಂತಿಸುತ್ತೇವೆ.

ದಿನಾಂಕ: 14-07-2025
ಸ್ಥಳ: ಬೆಂಗಳೂರು

ಆಡಳಿತ ಮಂಡಳಿ ಅಪ್ಪಣೆಯ ಮೇರೆಗೆ
ಸಹಿ/-
ಮುಖ್ಯ ಕಾರ್ಯನಿರ್ವಾಹಕ

ಕರ್ನಾಟಕ ರಾಜ್ಯ ಲೆಕ್ಕಪರಿಶೋಧನೆ ಮತ್ತು ಲೆಕ್ಕಪತ್ರ ಇಲಾಖೆ,
ಪ್ರಧಾನ ನಿರ್ದೇಶಕರ ಕಛೇರಿ, 3ನೇ ಮಹಡಿ, ಟಿಟಿಎಂಸಿ ಕಟ್ಟಡ, ಎ ಬ್ಲಾಕ್, ಬಿಎಂಟಿಸಿ ಶಾಂತಿ ನಗರ, ಬೆಂಗಳೂರು.

ಪ್ರಕಟಣೆ

ಕರ್ನಾಟಕ ನಾಗರೀಕ ಸೇವಾ 1957 ರ
(ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮ 11 ರಡಿ

ಶ್ರೀಮತಿ ಮೀನಾ ಅಗ್ನೇಶ್ ಚೆರಿಯನ್, ಸಹಾಯಕ ನಿಯಂತ್ರಕರು, ಸ್ಥಳ ನಿರೀಕ್ಷಣೆ, ಕರ್ನಾಟಕ ರಾಜ್ಯ ಲೆಕ್ಕಪರಿಶೋಧನೆ ಮತ್ತು ಲೆಕ್ಕಪತ್ರ ಇಲಾಖೆ, ಬೆಂಗಳೂರು ಆದ ನೀವು ದಿನಾಂಕ: 23.09.2022 ರಿಂದ ಈವರೆವಿಗೂ ಕರ್ತವ್ಯಕ್ಕೆ ಅನಧಿಕೃತ ಗೈರು ಹಾಜರಿ ಹಾಗೂ ವಿದೇಶ ಪ್ರವಾಸ ವಿಸ್ತರಣೆಗೆ ಸಂಬಂಧಿಸಿದಂತೆ, ಸರ್ಕಾರದಿಂದ ಅನುಮತಿ ನೀಡಲಾಗಿರುವ ಪ್ರವಾಸದ ಅವಧಿ ಮತ್ತು ಷರತ್ತುಗಳನ್ನು ಪಾಲಿಸಿರುವುದಿಲ್ಲ ಮತ್ತು ಕರ್ನಾಟಕ ನಾಗರೀಕ ಸೇವಾ ನಡತೆ ನಿಯಮ (i), (ii) & (iii) ಮತ್ತು ನಿಯಮ(8)ನ್ನು ಸಂಪೂರ್ಣವಾಗಿ ಉಲ್ಲಂಘಿಸಿರುವ ಹಿನ್ನೆಲೆಯಲ್ಲಿ, ಸರ್ಕಾರದಿಂದ ನಿಮ್ಮ ವಿರುದ್ಧ ಕರ್ನಾಟಕ ನಾಗರೀಕ ಸೇವಾ (ಸಿಸಿಎ) ನಿಯಮಗಳು 1957 ರ ನಿಯಮ 11 ಅಡಿಯಲ್ಲಿ ದೋಷಾರೋಪಣಾ ಪಟ್ಟಿ ಜಾರಿ ಮಾಡಲಾಗಿರುತ್ತದೆ.

ಈ ಕುರಿತು ಮಿಂಚಂಚೆ (ಇ-ಮೇಲ್) ಮೂಲಕ, ವ್ಯಾಟ್ಸ್ ಆಪ್ ಮೂಲಕ ಕಳುಹಿಸಲಾಗಿರುತ್ತದೆ. ಹಾಗೂ ಈ ಕಛೇರಿಯಲ್ಲಿ ಲಭ್ಯವಿರುವ ಕಾರವಾರ ಜಿಲ್ಲೆಯಲ್ಲಿನ ನಿಮ್ಮ ಮನೆ ವಿಳಾಸಕ್ಕೆ ನೋಂದಾಯಿತ ಅಂಚೆಯ ಮೂಲಕ ಕಳುಹಿಸಿರುವ ಅನುಬಂಧ 1 ರಿಂದ 4 ದೋಷಾರೋಪಣ ಪಟ್ಟಿ ಸ್ವೀಕೃತಗೊಳ್ಳದೇ ಹಿಂದಿರುಗಿ ಬಂದಿರುತ್ತದೆ. ಮುಂದುವರೆದು, ಸದರಿ ಅನುಬಂಧ 1 ರಿಂದ 4 ನ್ನು ನಿಮ್ಮ ಮನೆಯ ಗೋಡೆಗೆ ಅಂಟಿಸಲಾಗಿರುತ್ತದೆ. ಆದಾಗ್ಯೂ ಅನುಬಂಧ 1 ರಿಂದ 4 ದೋಷಾರೋಪಣ ಪಟ್ಟಿಯಲ್ಲಿರುವ ಆರೋಪಗಳ ಕುರಿತು ನಿಮ್ಮ ಲಿಖಿತ ಹೇಳಿಕೆಯನ್ನು ಸಲ್ಲಿಸಿರುವುದಿಲ್ಲ.

ಆದ್ದರಿಂದ, ನಿಮ್ಮ ಈ ಅನಧಿಕೃತ ಗೈರು ಹಾಜರಾತಿ ಹಾಗೂ ವಿದೇಶ ಪ್ರವಾಸ ಅವಧಿ ವಿಸ್ತರಣೆ ಸಂಬಂಧ ಜಾರಿ ಮಾಡಲಾಗಿರುವ ಅನುಬಂಧ 1 ರಿಂದ 4 ದೋಷಾರೋಪಣ ಪಟ್ಟಿಗೆ ನಿಮ್ಮ ಪ್ರತಿವಾದದ ಹೇಳಿಕೆ ಏನಾದರೂ ಇದ್ದಲ್ಲಿ ನಿಮ್ಮ ವಿರುದ್ಧದ ಆರೋಪಗಳ ಕುರಿತು ವಿವರಣೆಯನ್ನು **ಲಿಖಿತ ರೂಪದಲ್ಲಿ 15 ದಿನಗೊಳಗಾಗಿ ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಆರ್ಥಿಕ ಇಲಾಖೆ, ಕೊಠಡಿ ಸಂ:255, 2 ನೇ ಮಹಡಿ, ವಿಧಾನಸೌಧ, ಬೆಂಗಳೂರು** ಇವರಿಗೆ ತಲುಪುವಂತೆ ಸಲ್ಲಿಸತಕ್ಕದ್ದು, ತಪ್ಪಿದಲ್ಲಿ ನಿಮ್ಮ ಹೇಳಿಕೆ ಏನೂ ಇಲ್ಲವೆಂದು ಭಾವಿಸಿ, ನಿಯಮಾನುಸಾರ ಮುಂದಿನ ಕ್ರಮ ಜರುಗಿಸಲಾಗುವುದು ಎಂದು ಈ ಮೂಲಕ ತಿಳಿಯಪಡಿಸಿದೆ.

ಇವರಿಗೆ, **ಶ್ರೀಮತಿ ಮೀನಾ ಆಗ್ನೇಶ್ ಚೆರಿಯನ್,**
ಸಹಾಯಕ ನಿಯಂತ್ರಕರು, ಕೇರ್ ಆಫ್ ಪಿ.ಕೆ.ಚೆರಿಯನ್,
ಕೆ.ಇ.ಬಿ. ಗ್ರಿಡ್ ಹತ್ತಿರ, ಮುಖೇರಿ ಖೇಳವಾಡ, ಕಾರವಾರ-581306.

ಸಹಿ/- ಪ್ರಧಾನ ನಿರ್ದೇಶಕರು
ಕರ್ನಾಟಕ ರಾಜ್ಯ ಲೆಕ್ಕಪರಿಶೋಧನೆ ಮತ್ತು ಲೆಕ್ಕಪತ್ರ ಇಲಾಖೆ, ಬೆಂಗಳೂರು
DIPR/CP/RO1835/AAPL/2025-26

ದಿ ನೆಹರೂನಗರ ಕೋ-ಆಪರೇಟಿವ್ ಬ್ಯಾಂಕ್ ನಿಯಮಿತ
ನಂ. 172, 1ನೇ ಮುಖ್ಯರಸ್ತೆ, ಶೇಷಾದ್ರಿಪುರಂ, ಬೆಂಗಳೂರು-560 020.
ದೂರವಾಣಿ: 080-23364376/23562609

ಬಹಿರಂಗ ಹರಾಜು ಪ್ರಕಟಣೆ

2002ರ ಸೆಕ್ಯೂರಿಟೈಸೇಶನ್ ಆ್ಯಂಡ್ ರೀಕನ್‌ಸ್ಟ್ರಕ್ಷನ್ ಆಫ್ ಫೈನಾನ್ಶಿಯಲ್ ಅಸೆಟ್ಸ್ ಮತ್ತು ಎನ್‌ಫೋರ್ಸ್‌ಮೆಂಟ್ ಆಫ್ ಸೆಕ್ಯೂರಿಟಿ ಇಂಟರೆಸ್ಟ್ ಕಾಯ್ದೆಯ 13(4)ನೇ ಸೆಕ್ಷನ್ ಪ್ರಕಾರ ದಿ ನೆಹರೂನಗರ ಕೋ-ಆಪರೇಟಿವ್ ಬ್ಯಾಂಕ್ ನಿಯಮಿತ ಅಧಿಕೃತ ಅಧಿಕಾರಿಯ ವಶದಲ್ಲಿರುವ ಈ ಕೆಳಕಂಡ ಷೆಡ್ಯೂಲ್‌ನಲ್ಲಿ ವಿವರಿಸಿರುವ ಸ್ವತ್ತನ್ನು (ಅಪಾರ್ಟ್‌ಮೆಂಟ್)ನ್ನು ಬಹಿರಂಗ ಹರಾಜು ಮಾಡುವ ಮೂಲಕ ಮಾರಾಟ ಮಾಡಲು ಬಿಡ್ಡುದಾರರಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ.

ಈ ಮೂಲಕ ಸಾರ್ವಜನಿಕರಿಗೆ ತಿಳಿಯಪಡಿಸುವುದೇನೆಂದರೆ, ಮೇಲೆ ಹೆಸರಿಸಿದ ದಿ ನೆಹರೂನಗರ ಕೋ-ಆಪರೇಟಿವ್ ಬ್ಯಾಂಕ್ ನಿ., ಬೆಂಗಳೂರು, ತನ್ನ ಸುಪರ್ದಿಯಲ್ಲಿರುವ ನಿರ್ಬಂಧರಹಿತ ವಾಸಯೋಗ್ಯ ಅಪಾರ್ಟ್‌ಮೆಂಟ್ / ಫ್ಲಾಟ್‌ವೊಂದನ್ನು ಬಹಿರಂಗ ಹರಾಜು ಪ್ರಕ್ರಿಯೆಯ ಮೂಲಕ ಮಾರಾಟ / ವಿಲೇವಾರಿ ಮಾಡಲು ನಿಶ್ಚಯಿಸಿದ್ದು, ಸದರಿ ನಿವೇಶನವನ್ನು "ಎಲ್ಲಿ ಹೇಗಿದೆಯೋ ಹಾಗೆ" ಇರುವ ಸ್ಥಿತಿಯಲ್ಲಿ ಹರಾಜು ಮಾಡಲಾಗುವುದು. ಅಪಾರ್ಟ್‌ಮೆಂಟ್ ಹಾಗು ಹರಾಜು ಪ್ರಕ್ರಿಯೆ ವಿವರ ಈ ಕೆಳಕಂಡಂತಿದೆ.

ಅ. ಅಪಾರ್ಟ್‌ಮೆಂಟ್‌ನ ವಿವರ:
ಷೆಡ್ಯೂಲ್ A: ಹಳೆ ಸರ್ವೆ ಸಂ. 102/1, ಹೊಸ ಸರ್ವೆ ಸಂ. 102/7, ಹೆಣ್ಣೂರ್ ವಿಲೇಜ್, ಕಸಬ ಹೋಬಳಿ, ಬೆಂಗಳೂರು ಉತ್ತರ ತಾಲ್ಲೂಕು, ಬೆಂಗಳೂರು. ಒಟ್ಟು 10.25 ಗುಂಟೆಗಳು ಅಳತೆಯುಳ್ಳ ಸ್ವತ್ತಿನ ಚಕ್ಕಂದಿ: ಪೂರ್ವಕ್ಕೆ: ಶ್ರೀ ದೊಡ್ಡಮಾರಪ್ಪ ಹಾಗು ಕುಟುಂಬಕ್ಕೆ ಮತ್ತು ಶ್ರೀ ಹನುಮಂತಪ್ಪ ಹಾಗು ಕುಟುಂಬದವರಿಗೆ ಸೇರಿರುವ ಸರ್ವೆ ಸಂ. 102/1ರಲ್ಲಿ ಉಳಿದಿರುವ ಭಾಗ, ಪಶ್ಚಿಮಕ್ಕೆ: ಸರ್ವೆ ಸಂ. 102/1ರಲ್ಲಿ ಉಳಿದಿರುವ ಭಾಗ, ಉತ್ತರಕ್ಕೆ: ರಸ್ತೆ, ದಕ್ಷಿಣಕ್ಕೆ: ರಸ್ತೆ.
ಷೆಡ್ಯೂಲ್ B: ಷೆಡ್ಯೂಲ್ ೦ ನಲ್ಲಿನ 318.36 ಚದರ ಅಡಿಗಳ ಅವಿಭಜಿತ ಪಾಲು.
ಷೆಡ್ಯೂಲ್ C: 2-ಬಿ.ಹೆಚ್.ಕೆ ಫ್ಲಾಟ್ / ಅಪಾರ್ಟ್‌ಮೆಂಟ್ ಸಂ, 202, "ಶ್ರೀನಿವಾಸ ಮಾನ್ಷನ್", 1ನೇ ಮಹಡಿ, ಸೂಪರ್ ಬಿಲ್ಟಪ್ ಏರಿಯಾ 1200 ಚ. ಅಡಿಗಳು, ಒಂದು ಕವರ್ಡ್ ಕಾರ್ ಪಾರ್ಕಿಂಗ್ ಹಾಗು ಇತರ ಸೌಲಭ್ಯಗಳನ್ನು ಬಳಸಿಕೊಳ್ಳಬಹುದಾಗಿದೆ. ಈ ಮೇಲೆ ತಿಳಿಸಿದ ಫ್ಲಾಟ್‌ಗೆ ಆರ್.ಸಿ.ಸಿ. ರೂಫಿಂಗ್, ವಿಟ್ರಿಫೈಡ್ ಟೈಲ್ಸ್ ಹಾಗು ವಿನೀರ್, ಮೌಲ್ಡೆಡ್ ಸ್ಕಿನ್ ಡೋರ್ಸ್ ಮತ್ತು ಅಲುಮಿನಂನಿಂದ ಮಾಡಿದ ಬಾಗಿಲು ಮತ್ತು ಕಿಟಕಿಗಳನ್ನು ಹೊಂದಿರುತ್ತದೆ.
ಆ. ಆರಂಭಿಕ ಬಿಡ್: **Residential**
ಇ. ಗುಣಕಗಳ ಬಿಡ್: **Rs. 5,000/- per Square Feet.**
ಈ. ಪ್ರಾರಂಭಿಕ ಠೇವಣಿ: **Rs. 10,00,000/-**
ಉ. ಹರಾಜಿನ ದಿನಾಂಕ: **18.08.2025**
ಊ. ಹರಾಜಿನ ಸಮಯ: **11.00 AM**
ಋ. ಹರಾಜಿನ ಸ್ಥಳ: ದಿ ನೆಹರೂನಗರ ಕೋ-ಆಪರೇಟಿವ್ ಬ್ಯಾಂಕ್ ನಿ., ನಂ. 172, 1ನೇ ಮುಖ್ಯ ರಸ್ತೆ, ಶೇಷಾದ್ರಿಪುರಂ, ಬೆಂಗಳೂರು-560 020.
ಎ. ಸಾಲಗಾರರ ಹೆಸರು ಮತ್ತು ವಿಳಾಸ: ಶ್ರೀ. ಶಿವರಾಮ ರೆಡ್ಡಿ. ಎಲ್. ಬಿನ್ ಲೇಟ್. ಲಚ್ಚಣ್ಣ, ವಯಸ್ಸು 71 ವರ್ಷಗಳು,
ವಾಸ: ಅಪಾರ್ಟ್‌ಮೆಂಟ್ / ಫ್ಲಾಟ್ ನಂ. 202, 1ನೇ ಮಹಡಿ, ಶ್ರೀನಿವಾಸ ಮಾನ್ಷನ್, 38ನೇ ಅಡ್ಡರಸ್ತೆ, 17ನೇ ಮುಖ್ಯರಸ್ತೆ, ಹೆಚ್.ಬಿ.ಆರ್. ಬಡಾವಣೆ, ಬೆಂಗಳೂರು-43.
ಏ. ಬಾಕಿಯಿರುವ ಸಾಲದ ಮೊತ್ತ (15.07.2025ಕ್ಕೆ): ರೂ. 88,52,789/- (ಎಂಬತ್ತೆಂಟು ಲಕ್ಷದ ಐವತ್ತೆರಡು ಸಾವಿರದ ಏಳು ನೂರ ಎಂಬತ್ತೊಂಬತ್ತು ರೂಪಾಯಿಗಳು ಮಾತ್ರ)
ಐ. ಹರಾಜಿ ನಿಬಂಧನೆ ಮತ್ತು ಷರತ್ತುಗಳು:
1) ಹರಾಜಿನಲ್ಲಿ ಭಾಗವಹಿಸಲಿಚ್ಛಿಸುವವರು ದಿನಾಂಕ 15.08.2025ರ ಮುಂಚೆ ಯಾ 15.08.2025ರಂದೇ ತಲುಪುವಂತೆ ದಿ ನೆಹರೂನಗರ ಕೋ-ಆಪರೇಟಿವ್ ಬ್ಯಾಂಕ್ ನಿ., ಹೆಸರಿನಲ್ಲಿ ಪ್ರಾರಂಭಿಕ ಠೇವಣಿ ರೂ. 10,00,000/- (ಹತ್ತು ಲಕ್ಷ ರೂಪಾಯಿಗಳು ಮಾತ್ರ)ಗಳನ್ನು ಡಿ.ಡಿ ಯಾ ಪೇ ಆರ್ಡರ್ ಮೂಲಕ ಸಲ್ಲಿಸತಕ್ಕದ್ದು.
2) ಹರಾಜು ಪ್ರಕ್ರಿಯೆಯಲ್ಲಿ ಯಶಸ್ವಿಯಾಗುವ ವ್ಯಕ್ತಿ, ಹರಾಜಿನಲ್ಲಿ ಭಾಗವಹಿಸಿ ಒಪ್ಪಿಕೊಂಡ ಒಟ್ಟು ಮೊತ್ತದ ನಾಲ್ಕನೇ ಒಂದು ಭಾಗವನ್ನು (ಪ್ರಾರಂಭಿಕ ಠೇವಣಿಯ ಮೊತ್ತವನ್ನೊಳಗೊಂಡಂತೆ) ಹರಾಜು ಪ್ರಕ್ರಿಯೆ ಮುಕ್ತಾಯವಾದ 72 (ಎಪ್ಪತ್ತೆರಡು) ಗಂಟೆಯೊಳಗೆ ಬ್ಯಾಂಕಿಗೆ ಸಲ್ಲಿಸತಕ್ಕದ್ದು.
3) ನಿವೇಶನದ ಉಳಿಕೆ ಮೊತ್ತವನ್ನು ಹರಾಜು ಸ್ಥಿರೀಕರಣಗೊಂಡ 45 (ನಲವತ್ತೈದು) ದಿವಸಗಳೊಳಗಾಗಿ ಬ್ಯಾಂಕಿಗೆ ಸಲ್ಲಿಸಬೇಕು.
4) ಈ ಹರಾಜು ಪ್ರಕ್ರಿಯೆಯಲ್ಲಿನ ಯಾವುದೇ ಬಿಡ್ಡನ್ನಾಗಲಿ ಒಪ್ಪಿಕೊಳ್ಳುವುದು ಯಾ ತಿರಸ್ಕರಿಸುವುದು ಬ್ಯಾಂಕಿನ ವಿವೇಚನೆಗೆ ಬಿಟ್ಟಿದ್ದಾಗಿದ್ದು, ಇದರ ಬಗ್ಗೆ ಮಧ್ಯಸ್ತಿಕೆಗೆ ಅವಕಾಶವಿರುವುದಿಲ್ಲ.
5) ಹರಾಜು ಪ್ರಕ್ರಿಯೆಯಲ್ಲಿ ಭಾಗವಹಿಸಿ ಯಶಸ್ವಿಯಾಗದ ಇತರೆ ಬಿಡ್ಡುದಾರರ ಪ್ರಾರಂಭಿಕ ಠೇವಣಿಯನ್ನು ಹರಾಜು ಪ್ರಕ್ರಿಯೆ ಮುಗಿದ 7 (ಏಳು) ದಿನಗಳೊಳಗಾಗಿ ಅವರವರಿಗೆ ಡಿ.ಡಿ / ಆರ್.ಟಿ.ಜಿ.ಟಿಸ್ ಮೂಲಕ ಹಿಂದಿರುಗಿಸಲಾಗುವುದು.
6) ಈ ಹರಾಜು ಪ್ರಕ್ರಿಯೆಗೆ ಸಂಬಂಧಿಸಿದಂತೆ ಹೆಚ್ಚಿನ ಮಾಹಿತಿ ಬೇಕಿದ್ದಲ್ಲಿ ಆಸಕ್ತಿಯುಳ್ಳವರು ಬ್ಯಾಂಕಿನ ಮುಖ್ಯ ಕಾರ್ಯನಿರ್ವಹಣಾಧಿಕಾರಿಯವರನ್ನು ಬ್ಯಾಂಕಿನ ವ್ಯವಹಾರದ ಸಮಯದಲ್ಲಿ ಸಂಪರ್ಕಿಸಿ ಪಡೆಯಬಹುದು.

ಸರ್ಫೆಸಿ ಕಾಯ್ದೆಯ ರೂಲ್ 8(6) ಅಡಿಯಲ್ಲಿ ನೀಡಿರುವ ಶಾಸನಬದ್ಧ ನೋಟೀಸು

ಈ ಮೇಲಿನ ಸಾಲಕ್ಕೆ ಸಂಬಂಧಿಸಿದಂತೆ ಸಾಲಗಾರರಿಗೆ/ಜಾಮೀನುದಾರರಿಗೆ ಹಣಕಾಸು ಆಸ್ತಿಗಳ ಭದ್ರತೀಕರಣ ಮತ್ತು ಪುನರ್ ನಿರ್ಮಾಣ ಹಾಗು ಭದ್ರತಾ ಹಿತಾಸಕ್ತಿ ಕಾಯ್ದೆ 2002ರ ರೂಲ್ 8(6) ಪ್ರಕಾರ ನೀಡುವ ನೋಟೀಸ್ ಈಡಲಾಗಿದ್ದು, ಅವರು ತೆಗೆದುಕೊಂಡ ಸಾಲವನ್ನು ನಿಗದಿತ ಅವಧಿಯಲ್ಲಿ ಮರುಪಾವತಿಸಲು ವಿಫಲವಾದ ಹಿನ್ನೆಲೆಯಲ್ಲಿ ಈ ಮೇಲೆ ತಿಳಿಸಿದ ಆಸ್ತಿಯ ಮಾರಾಟಕ್ಕಾಗಿ ಮೇಲಿನ ದಿನಾಂಕದಂದು ಹರಾಜಿನ ಮಾರಾಟ ಮಾಡಲಾಗುತ್ತಿದೆ. ಮೇಲೆ ಉಲ್ಲೇಖಿಸಿದ ಮೊತ್ತ ಹಾಗು ಬಡ್ಡಿ, ಖರ್ಚು-ವೆಚ್ಚ, ಇತ್ಯಾದಿಗಳನ್ನು ಮಾರಾಟ ಮಾಡಲು ನಿಗದಿಪಡಿಸಿದ ದಿನಾಂಕದ ಮೊದಲು ಪಾವತಿಸದೆ ಇದ್ದರೆ, ಆಸ್ತಿ ಮಾರಾಟ ಮಾಡಿದ ಬಳಿಕ ಯಾವುದೇ ಮೊತ್ತ ಬಾಕಿ ಇದ್ದಲ್ಲಿ, ಅವುಗಳನ್ನು ಬಡ್ಡಿ ಹಾಗು ಖರ್ಚು-ವೆಚ್ಚದೊಂದಿಗೆ ಮತ್ತೆ ವಸೂಲಿ ಮಾಡಲಾಗುವುದೆಂದು ಈ ಮೂಲಕ ಸೂಚಿಸಲಾಗಿದೆ.

ಸ್ಥಳ: ಬೆಂಗಳೂರು
ದಿನಾಂಕ: 17-07-2025

ಸಹಿ/-
ಮುಖ್ಯ ಕಾರ್ಯನಿರ್ವಹಣಾಧಿಕಾರಿ
ದಿ ನೆಹರೂನಗರ ಕೋ-ಆಪರೇಟಿವ್ ಬ್ಯಾಂಕ್ ನಿ., ಬೆಂಗಳೂರು.

ಕೆಳಗಿನ ಅಂಬಲಿಪುರ ಕೆರೆಗೆ ಪ್ರವೇಶವಿಲ್ಲ

ಬಿಬಿಎಂಪಿ ಕೋಟ್ಯಂತರ ವೆಚ್ಚದಲ್ಲಿ ಅಭಿವೃದ್ಧಿಪಡಿಸಿರುವ ಕೆರೆಗೆ ದಾರಿ ಇಲ್ಲ

ಪ್ರಜಾವಾಣಿ ವಾರ್ತೆ

ಮುಖ್ಯಾಂಶಗಳು
- ಕೆರೆ ಸುತ್ತಲೂ ಅಪಾರ್ಟ್‌ಮೆಂಟ್‌ಗಳು
- ಅಪಾರ್ಟ್‌ಮೆಂಟ್‌ಗಳಿಗೆ 'ಖಾಸಗಿ ಸೌಲಭ್ಯ' ವಾಗಿರುವ ಕೆರೆ
- ಒತ್ತುವರಿಯನ್ನು ತೆರವು ಮಾಡದ ಕಂದಾಯ ಇಲಾಖೆ

ಬೆಂಗಳೂರು: ಮಹದೇವಪುರ ವಲಯದಲ್ಲಿರುವ ಕೆಳಗಿನ ಅಂಬಲಿಪುರ ಕೆರೆಯ ಸುತ್ತಲಿನ ಐದು ಅಪಾರ್ಟ್‌ಮೆಂಟ್‌ನವರು ಸಾರ್ವಜನಿಕರ ಪ್ರವೇಶಕ್ಕೆ ಇದ್ದ ಗೇಟ್‌ಗಳನ್ನು ಮುಚ್ಚಿದ್ದಾರೆ.

ನಾಗರಿಕರಿಗೆ ಮುಕ್ತ ಪ್ರವೇಶ ಇಲ್ಲದಿದ್ದರೂ ಕೆರೆಯ ಸುತ್ತಲಿರುವ ಅಪಾರ್ಟ್‌ಮೆಂಟ್‌ಗಳು ಖಾಸಗಿ ಗೇಟ್‌ಗಳನ್ನು ಹೊಂದಿದ್ದು, ಅಲ್ಲಿನ ನಿವಾಸಿಗಳು ಕೆರೆಯ ಅಂಗಳಕ್ಕೆ ನೇರ ಪ್ರವೇಶ ಪಡೆಯುತ್ತಿದ್ದಾರೆ.

'ರಾಜಕಾಲುವೆಯೇ ಕೆಳಗಿನ ಅಂಬಲಿಪುರ ಕೆರೆಗಿರುವ 'ಸಾರ್ವಜನಿಕರ ಹಾದಿ'ಯಾಗಿದ್ದು, ನಗರ ಯೋಜನೆ ಬಗ್ಗೆ ಅಧಿಕಾರಿಗಳಿಗೆ ಇರುವ ನಿರ್ಲಕ್ಷ್ಯವನ್ನು ಸ್ಥಳೀಯರು ದೂರುತ್ತಿದ್ದಾರೆ.

ಸರ್ಜಾಪುರ ಮತ್ತು ಹರಳೂರು ರಸ್ತೆ ಸಮೀಪವಿರುವ ಇಬ್ಲೂರು ಜಂಕ್ಷನ್ ಬಳಿಯಿರುವ, ಸುಮಾರು ಏಳು ಎಕರೆ ವಿಸ್ತೀರ್ಣದಲ್ಲಿರುವ ಕೆಳಗಿನ ಅಂಬಲಿಪುರ ಕೆರೆಯಲ್ಲಿ ಹಲವು ಪ್ರಭೇದದ ಪಕ್ಷಿಗಳಿವೆ. ಕೆರೆ ಅಂಗಳದಲ್ಲಿ ನಿರ್ಮಿಸಿರುವ ಪಾದಚಾರಿ ಮಾರ್ಗದ ಸುತ್ತ ಹಲವು ಜಾತಿಯ ಮರಗಳಿವೆ.

ಕೆಳಗಿನ ಅಂಬಲಿಪುರ ಕೆರೆಯ ಒಂದು ಬದಿಯಲ್ಲಿ 600 ಎಕರೆ ಮಿಲಿಟರಿ ಭೂಮಿ ಇದೆ. ಮತ್ತೊಂದು ಬದಿಯಲ್ಲಿ, ಮಂತ್ರಿ ಫ್ಲೋರಾ, ಟ್ರಿನಿಟಿ ಎಕ್ರೆಸ್ ಆ್ಯಂಡ್ ವುಡ್ಸ್, ಎಸ್‌ಜೆಆರ್ ರೆಡ್‌ವುಡ್, ಎಸ್‌ಜೆಆರ್ ವಿಸ್ತಾ ಮತ್ತು ಲಾ ಪಲಜ್ಜೋ ಅಪಾರ್ಟ್‌ಮೆಂಟ್‌ಗಳಿವೆ. ಕೆರೆಯನ್ನು ತಲುಪಬೇಕಾದರೆ ಈ ಐದು ಅಪಾರ್ಟ್‌ಮೆಂಟ್‌ಗಳ ರಸ್ತೆಯಿಂದ ಮಾತ್ರ ಸಾಧ್ಯವಿದೆ.

ಅಪಾರ್ಟ್‌ಮೆಂಟ್‌ಗಳ ರಸ್ತೆಯ ಮೂಲಕ ಪತ್ರಿಕೆಯ ವರದಿಗಾರರು ಕೆರೆಯ ಅಂಗಳಕ್ಕೆ ಪ್ರವೇಶಿಸಲು ಪ್ರಯತ್ನಿಸಿದಾಗ ಭದ್ರತಾ ಸಿಬ್ಬಂದಿ ಅದಕ್ಕೆ ಅವಕಾಶ ನೀಡಲಿಲ್ಲ. 'ಕೆರೆಗೆ ದಾರಿಯೇ ಇಲ್ಲ' ಎಂದು ಹೇಳಿದರು. ಟ್ರಿನಿಟಿ ಅಪಾರ್ಟ್‌ಮೆಂಟ್‌ನ ಭದ್ರತಾ ಸಿಬ್ಬಂದಿ ಮೊದಲು ಪ್ರವೇಶಕ್ಕೆ ನಿರಾಕರಿಸಿದರೂ, ನಂತರ ಸ್ಥಳೀಯ ನಿವಾಸಿಗಳ ಮಧ್ಯ ಪ್ರವೇಶದಿಂದ ಅವಕಾಶ ಮಾಡಿಕೊಟ್ಟರು.

'ಕೆರೆ ಇರುವ ಬಗ್ಗೆ ಇಲ್ಲಿ ಫಲಕಗಳಿಲ್ಲ. ಬಿಬಿಎಂಪಿಯವರು ಅಭಿವೃದ್ಧಿಪಡಿಸಿದ್ದರೂ ಅಪಾರ್ಟ್‌ಮೆಂಟ್ ನಿವಾಸಿಗಳು ಇದನ್ನು ಖಾಸಗಿ ಕೆರೆ ಎಂದೇ ಭಾವಿಸಿದ್ದಾರೆ. ಕೆರೆಗೆ ದಾರಿ ಕಲ್ಪಿಸುವ ಜಾಗವನ್ನು ಒತ್ತುವರಿ ಮಾಡಿಕೊಂಡಿದ್ದರೂ ಕಟ್ಟಡ ನಕ್ಷೆ ನೀಡಲಾಗಿದೆ' ಎಂದು ಸ್ಥಳೀಯರು ದೂರಿದರು.

'ಭೂ ದಾಖಲೆಗಳ ಸಹಾಯಕ ನಿರ್ದೇಶಕರು ಸೆಪ್ಟೆಂಬರ್‌ನಲ್ಲಿ ಒತ್ತುವರಿಯನ್ನು ಗುರುತಿಸಿದ್ದಾರೆ. ಆದರೆ ಸರ್ವೆ ಮಾಡುವ ಕಾರ್ಯವನ್ನು ಮುಂದೂಡುತ್ತಲೇ ಬಂದಿದ್ದಾರೆ. ಹಲವು ಬಾರಿ ದೂರು ನೀಡಿದ್ದರೂ ಸರ್ವೆ ಮಾಡಿಲ್ಲ. ಕೆಳಗಿನ ಅಂಬಲಿಪುರ ಕೆರೆಯ ಕೋಡಿ ಇಬ್ಲೂರು ಕೆರೆಗೆ ತಲುಪುತ್ತದೆ. ಆದರೆ ಅದೂ ಒತ್ತುವರಿಯಾಗಿದೆ. ಇದರಿಂದ ಸರ್ಜಾಪುರ ರಸ್ತೆ ಹಾಗೂ ಕೆಲವು ಅಪಾರ್ಟ್‌ಮೆಂಟ್‌ಗಳಿಗೆ ಮಳೆ ನೀರು ನುಗ್ಗುತ್ತಿದೆ' ಎಂದು ಸ್ಥಳೀಯ ನಿವಾಸಿ ಆರೋಪಿಸಿದರು.

ಕೆಳಗಿನ ಅಂಬಲಿಪುರ ಕೆರೆಗೆ ದಾರಿ ಇಲ್ಲದಿದ್ದರೂ ಬಿಬಿಎಂಪಿ 2025-26ನೇ ಸಾಲಿನಲ್ಲಿ ₹1 ಕೋಟಿಯನ್ನು ಅಭಿವೃದ್ಧಿ ಕಾಮಗಾರಿಗಳಿಗೆ ಮೀಸಲಿರಿಸಿದೆ.

ಕೆಳಗಿನ ಅಂಬಲಿಪುರ ಕೆರೆಯಲ್ಲಿ ಬಾತುಗಳ ಈಜು ಚಿತ್ರ: ಪುಷ್ಕರ್ ವಿ

'ಚರಂಡಿ ಮೇಲೆ ರಸ್ತೆ'

'ಸ್ಥಳೀಯರು ದೂರು ನೀಡಿದ ನಂತರ ಸ್ಥಳ ಪರಿಶೀಲನೆ ಮಾಡಲಾಯಿತು. ರಾಜಕಾಲುವೆ ವಿಭಾಗಕ್ಕೆ ಈ ವಿಷಯವನ್ನು ಹಸ್ತಾಂತರಿಸಲಾಯಿತು. ಸರ್ಜಾಪುರ ರಸ್ತೆಯಿಂದ ಚರಂಡಿಯ ಮೇಲ್ಭಾಗದಲ್ಲಿ ದಾರಿ ಕಲ್ಪಿಸಲು ಸಾಧ್ಯವಿದೆ' ಎಂದು ಬಿಬಿಎಂಪಿ ಕೆರೆಗಳ ವಿಭಾಗದ ಮುಖ್ಯ ಎಂಜಿನಿಯರ್ ವಿಜಯಕುಮಾರ್ ಹರಿದಾಸ್ ತಿಳಿಸಿದರು.

'ಗೇಟೆಡ್ ಕಮ್ಯುನಿಟಿಯವರು ತಮ್ಮ ಖಾಸಗಿ ರಸ್ತೆಗಳ ಮೂಲಕ ಕೆರೆಗೆ ಹೋಗಲು ಸಾರ್ವಜನಿಕರಿಗೆ ಅವಕಾಶ ಮಾಡಿಕೊಡಬಹುದು' ಎಂದು ಎಂಜಿನಿಯರ್‌ರೊಬ್ಬರು ಸಲಹೆ ನೀಡಿದರು.

'ವಿದ್ಯುತ್ ವೈಫಲ್ಯವೂ ದುರಂತಕ್ಕೆ ಕಾರಣವಿರಬಹುದು'

ನವದೆಹಲಿ (ಪಿಟಿಐ): ಪತನಗೊಂಡ ಏರ್‌ಇಂಡಿಯಾ ವಿಮಾನದ ವಿದ್ಯುತ್ ವ್ಯವಸ್ಥೆಯ ವೈಫಲ್ಯದಿಂದಲೂ ಎಂಜಿನ್‌ಗಳಿಗೆ ಇಂಧನ ಪೂರೈಸುವ ಸ್ವಿಚ್‌ಗಳು 'ಕಟ್ ಆಫ್' ಸ್ಥಿತಿ ತಲುಪಿರಬಹುದು ಎಂದು ಕ್ಯಾಪ್ಟನ್ (ನಿವೃತ್ತ) ಎಹಸಾನ್ ಖಾಲಿದ್ ಅವರು ಬುಧವಾರ ಅಭಿಪ್ರಾಯಪಟ್ಟರು.

ವಿಮಾನ ಅಪಘಾತ ತನಿಖಾ ಬ್ಯೂರೊ (ಎಎಐಬಿ) ತನ್ನ ಪ್ರಾಥಮಿಕ ವರದಿಯಲ್ಲಿ, 'ವಿಮಾನವು ಟೇಕ್‌ಆಫ್ ಆದ ಒಂದೇ ಸೆಕೆಂಡ್‌ನಲ್ಲಿ ಎರಡೂ ಎಂಜಿನ್‌ಗಳಿಗೆ ಇಂಧನ ಪೂರೈಸುವ ಸ್ವಿಚ್‌ಗಳು 'ಕಟ್ ಆಫ್' ಆಗಿದ್ದವು. ಇದರಿಂದ ಕಾಕ್‌ಪಿಟ್‌ನಲ್ಲಿ ಗೊಂದಲ ಉಂಟಾಗಿತ್ತು' ಎಂದು ತಿಳಿಸಿತ್ತು.

ವರದಿಯಲ್ಲಿ ದುರಂತಕ್ಕೆ ಕಾರಣ ಏನು ಎಂಬ ಬಗ್ಗೆ ಅಂತಿಮ ನಿರ್ಣಯ ನೀಡದಿದ್ದರೂ ಪೈಲಟ್‌ಗಳಿಂದಲೇ ತಪ್ಪಾಗಿರುವ ಸಾಧ್ಯತೆ ಇದೆ ಎಂದು ಬೊಟ್ಟು ಮಾಡಲಾಗುತ್ತಿದೆ.

ಪಿಟಿಐ ಸುದ್ದಿಸಂಸ್ಥೆಯೊಂದಿಗೆ ಸಂದರ್ಶನದಲ್ಲಿ ಮಾತನಾಡಿದ ಖಾಲಿದ್ ಅವರು, 'ಎಎಐಬಿಯು ಕಾಕ್‌ಪಿಟ್‌ನ ಪೂರ್ಣ ವಾಯ್ಸ್ ರೆಕಾರ್ಡ್ ಬಿಡುಗಡೆ ಮಾಡಲಿ. ಆಗ ಎಲ್ಲ ಪ್ರಶ್ನೆಗಳಿಗೂ ಉತ್ತರ ಲಭ್ಯವಾಗಲಿದೆ. ಪೈಲಟ್‌ಗಳು ವಿಮಾನದ ಸುರಕ್ಷತೆಯನ್ನು ಬಯಸುವ ಗೋಲ್ ಕೀಪರ್‌ಗಳಂತೆ ನನ್ನ ಕಣ್ಣಿಗೆ ಭಾಸವಾಗುತ್ತಾರೆ' ಎಂದು ಹೇಳಿದರು.

'ಮಿಸ್ಸಿಂಗ್ ಲಿಂಕ್' ದುರಸ್ತಿ: ನೀರು ಪೂರೈಕೆ ಸರಾಗ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಹೊರಮಾವು ವ್ಯಾಪ್ತಿಯ ಕೆಲ ಬಡಾವಣೆಗಳಲ್ಲಿ ಕಾವೇರಿ ನೀರು ಸರಬರಾಜಾಗುವ ಮುಖ್ಯ ಕೊಳವೆ ಮತ್ತು ಮನೆಗೆ ಪೂರೈಸುವ ಕೊಳವೆಗಳ ನಡುವಿನ ಸಂಪರ್ಕಗಳು ತಪ್ಪಿಹೋಗಿದ್ದು (ಮಿಸ್ಸಿಂಗ್ ಲಿಂಕ್ಸ್), ಅವುಗಳನ್ನು ಗುರುತಿಸಿ, ಸರಿಪಡಿಸುವ ಮೂಲಕ ಸಮರ್ಪಕವಾಗಿ ನೀರು ಪೂರೈಸುತ್ತಿದ್ದೇವೆ' ಎಂದು ಜಲಮಂಡಳಿ ಅಧಿಕಾರಿಗಳು ತಿಳಿಸಿದ್ದಾರೆ.

ಕಲ್ಕೆರೆ, ಬಂಜಾರ ಬಡಾವಣೆ, ಪುಣ್ಯಭೂಮಿ ಬಡಾವಣೆಯ ಕೆಲವು ಮನೆಗಳಿಗೆ ಅಸಮರ್ಪಕ ನೀರು ಪೂರೈಕೆ ಕುರಿತು 'ಪ್ರಜಾವಾಣಿ'ಯ ಜುಲೈ 14ರ ಸಂಚಿಕೆಯಲ್ಲಿ 'ವಾರಕ್ಕೊಮ್ಮೆಯೂ ಬಾರದ ಕಾವೇರಿ' ಶೀರ್ಷಿಕೆಯಡಿ ವರದಿ ಪ್ರಕಟಿಸಲಾಗಿತ್ತು. ವರದಿಗೆ ಸ್ಪಂದಿಸಿ ತಕ್ಷಣ ಕಾರ್ಯಪ್ರವೃತ್ತರಾಗಿರುವ ಜಲಮಂಡಳಿ ಅಧಿಕಾರಿಗಳು, ಕೆಲವು ಕಡೆ ಸಮಸ್ಯೆಯನ್ನು ಪರಿಹರಿಸಿದ್ದಾರೆ.

ಸಂಪರ್ಕ ತಪ್ಪಿರುವ ಕಾವೇರಿ ನೀರು ಪೂರೈಕೆ ಕೊಳವೆಗಳನ್ನು ಜೋಡಿಸಿರುವುದು

ವರದಿ ಪರಿಣಾಮ

ಕಾವೇರಿ ನೀರು 5ನೇ ಹಂತದ ನೀರು ಪೂರೈಕೆ ಆರಂಭವಾಗುವ ಏಳೆಂಟು ವರ್ಷಗಳ ಹಿಂದೆ 110 ಹಳ್ಳಿಗಳಿಗಳಲ್ಲಿ ಮುಖ್ಯ ಕೊಳವೆಗಳ ಜೋಡಣೆ ಕಾರ್ಯ ನಡೆದಿದೆ. ಇದಾದ ನಂತರ ಹಳ್ಳಿಗಳ ಕೆಲ ಬಡಾವಣೆಗಳಲ್ಲಿ ರಸ್ತೆ, ವಿದ್ಯುತ್ ಸೇರಿದಂತೆ ವಿವಿಧ ಅಭಿವೃದ್ಧಿ ಕಾರ್ಯಗಳು ನಡೆದಿವೆ. ಆ ವೇಳೆ ಕೆಲವು ಮನೆಗಳಿಗೆ ನೀರು ಸರಬರಾಜು ಮಾಡುವ ಕೊಳವೆಗಳ ಸಂಪರ್ಕ (ಮಿಸ್ಸಿಂಗ್ ಲಿಂಕ್) ತಪ್ಪಿರಬಹುದು. ಈಗ ನೀರು ಪೂರೈಕೆ ಆರಂಭಿಸಿದಾಗ ಅಂಥ ಮನೆಗಳು ಯಾವುವು ಎಂದು ಗೊತ್ತಾಗುತ್ತಿದೆ. ನೀರು ಪೂರೈಕೆಯಲ್ಲಿ ವ್ಯತ್ಯಾಸವಾಗುತ್ತಿರುವ ಮನೆಗಳನ್ನು ಗುರುತಿಸಿ ಸರಿಪಡಿಸಲಾಗುತ್ತಿದೆ. ಈ ಪ್ರಕ್ರಿಯೆ ಹಂತ ಹಂತವಾಗಿ ನಡೆಯುತ್ತದೆ' ಎಂದು ಜಲಮಂಡಳಿಯ ಪೂರ್ವ ವಲಯದ ಅಧಿಕಾರಿಯೊಬ್ಬರು 'ಪ್ರಜಾವಾಣಿ'ಗೆ ತಿಳಿಸಿದರು.

ಬಂಜಾರ ಬಡಾವಣೆ ಹಾಗೂ ಸುತ್ತಮುತ್ತ ಲೇಔಟ್‌ಗಳಿಗೆ ಕಾವೇರಿ ನೀರು ಪೂರೈಸುವ ಮುಖ್ಯ ಕೊಳವೆಯು ಕೆಲವು ಕಡೆ ಒಡೆದು, ನೀರು ಸೋರಿಕೆಯಾಗುತ್ತಿದೆ. ಇದರಿಂದಲೂ ಮನೆಗಳಿಗೆ ನೀರು ಸರಿಯಾಗಿ ಪೂರೈಕೆಯಾಗುತ್ತಿಲ್ಲ. ಸೋರಿಕೆಯಾಗುತ್ತಿರುವ ಕೊಳವೆಗಳನ್ನು ಸರಿಪಡಿಸಲಾಗುತ್ತಿದೆ. ಹಂತ ಹಂತವಾಗಿ ಸಮಸ್ಯೆ ಬಗೆಹರಿಯಲಿದೆ. ವೇಳಾಪಟ್ಟಿ ನಿಗದಿಪಡಿಸಿ, ವಾರಕ್ಕೆ ಎರಡು ದಿನ ನೀರು ಬಿಡುವ ವ್ಯವಸ್ಥೆ ಮಾಡಲಾಗುತ್ತದೆ' ಎಂದು ಮೂಲಗಳು ತಿಳಿಸಿವೆ.

ನೈಋತ್ಯ ರೈಲ್ವೆ
ಟೆಂಡರು ಸೂಚನೆ ಸಂ.: Tele_CCTV_Goods Shed_SBC ದಿನಾಂಕ: 10.07.2025
ಈ ಕೆಳ ಸಹಿದಾರರು, ಭಾರತದ ರಾಷ್ಟ್ರಪತಿಗಳ ಪರವಾಗಿ ಕೆಳಗಡೆ ನೀಡಿರುವ ಕಾಮಗಾರಿಗಳಿಗೆ ಇ-ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ:

ಕಾಮಗಾರಿಯ ವಿವರ	ಅಂದಾಜು ಮೌಲ್ಯ
ನೈಋತ್ಯ ರೈಲ್ವೆ, ಬೆಂಗಳೂರು ವಿಭಾಗ: ಧರ್ಮಪುರಿ (ಡಿಪಿಜೆ), ಹೊಸೂರು (ಹೆಚ್‌ಎಸ್‌ಆರ್‌ಎ), ಹೀಲಲಿಗೆ (ಹೆಚ್‌ಎಲ್‌ಇ), ದೇವರಪಲ್ಲಿ (ಡಿಪಿಇ), ಬಿಡದಿ (ಬಿಐಡಿ), ನಿಡವಂದ (ಎನ್‌ಡಿವಿ) ನಿಲ್ದಾಣಗಳ ಗುಡ್ ಶೆಡ್‌ಗಳಲ್ಲಿ ಸಿಸಿಟಿವಿ ಕ್ಯಾಮೆರಾಗಳ ವ್ಯವಸ್ಥೆ.	ರೂ. 1,28,36,673.66/-

ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ: 01.08.2025, 15:00 ಗಂಟೆಯವರೆಗೆ
ಹೆಚ್ಚಿನ ಮಾಹಿತಿಗಾಗಿ www.ireps.gov.in ಗೆ ಲಾಗ್ ಆನ್ ಆಗಿ
ವರಿಷ್ಠ ವಿಭಾಗೀಯ ಸಿಗ್ನಲ್ & ದೂರಸಂಪರ್ಕ ಇಂಜಿನಿಯರ್/ಬೆಂಗಳೂರು
PUB/293/AAMO/PRB/SWR/2025-26
ಕಾಯ್ದಿರಿಸದ ಟಿಕೇಟುಗಳನ್ನು ಸುಲಭವಾಗಿ ಬುಕಿಂಗ್ ಮಾಡಲು ಗೂಗಲ್ ಪ್ಲೇ ಸ್ಟೋರ್‌ನಿಂದ ಯುಟಿಎಸ್ ಮೊಬೈಲ್ ಆ್ಯಪ್‌ಅನ್ನು ಡೌನ್‌ಲೋಡ್ ಮಾಡಿರಿ
South Western Railway - SWR | SWRRLY | SWRAILWAYHQ | sw_railways

---

ಕರ್ನಾಟಕ ಸರ್ಕಾರ
ಜಿಲ್ಲಾಧಿಕಾರಿಗಳ ಕಾರ್ಯಾಲಯ, ಬೆಂಗಳೂರು
ಕಂದಾಯ ಇಲಾಖೆ
ಬೆಂಗಳೂರು ಜಿಲ್ಲೆ, ಕೆಂಪೇಗೌಡ ರಸ್ತೆ, ಬೆಂಗಳೂರು-560009.
ದೂರವಾಣಿ: 080-22211292, 22211106, ಫ್ಯಾಕ್ಸ್: 080-22214553, 22211106
ಸಂಖ್ಯೆ: ರಾ.ಹ(ಸ್ವಾ.ದಿ)ಸಿ.ಆರ್/01/2025-26 ದಿನಾಂಕ: 10.07.2025

ಪ್ರಕಟಣೆ

15ನೇ ಆಗಸ್ಟ್ 2025 ರಂದು ಬೆಂಗಳೂರಿನ ಫೀಲ್ಡ್ ಮಾಣಿಕ್‌ಷಾ ಪೆರೇಡ್ ಮೈದಾನದಲ್ಲಿ ಏರ್ಪಡಿಸಲಿರುವ ರಾಜ್ಯಮಟ್ಟದ ಸ್ವಾತಂತ್ರ್ಯ ದಿನಾಚರಣೆ ಕಾರ್ಯಕ್ರಮದ ಪ್ರಯುಕ್ತ ಈ ಕೆಳಕಂಡ ಕಾರ್ಯವ್ಯವಸ್ಥೆಗಳಿಗೆ ಆಸಕ್ತಿಯುಳ್ಳ ಅನುಭವಿಗಳಿಂದ ದರಪಟ್ಟಿಗಳನ್ನು ಆಹ್ವಾನಿಸಲಾಗಿದೆ. ದರಪಟ್ಟಿಗಳನ್ನು ಸಲ್ಲಿಸಲು **ದಿನಾಂಕ: 24.07.2025ರ ಮಧ್ಯಾಹ್ನ 4-00 ಗಂಟೆವರೆಗೆ** ಅವಕಾಶವಿರುತ್ತದೆ. ಮೊಹರಾದ ದರಪಟ್ಟಿ ಲಕೋಟೆಗಳನ್ನು ಅದೇ ದಿನ ಸಂಜೆ 5.00 ಗಂಟೆಗೆ ತೆರೆಯಲಾಗುವುದು. ಈ ಬಗ್ಗೆ ಹೆಚ್ಚಿನ ಮಾಹಿತಿಯನ್ನು ಕಛೇರಿ ವೇಳೆಯಲ್ಲಿ ಪಡೆಯಬಹುದಾಗಿರುತ್ತದೆ.

1) **ಹೂವಿನ ನಾಮಫಲಕ ಮತ್ತು ಸ್ಟೇಜ್ ಅಲಂಕಾರ.**
2) **ಉಪಹಾರ ವ್ಯವಸ್ಥೆ.**
3) **ಫೋಟೋ ಹಾಗೂ ವಿಡಿಯೋ ಚಿತ್ರೀಕರಣ ಕಾರ್ಯವ್ಯವಸ್ಥೆಗಾಗಿ.**

ಸಹಿ/- ಜಿಲ್ಲಾಧಿಕಾರಿಗಳು,
ಬೆಂಗಳೂರು ಜಿಲ್ಲೆ, ಬೆಂಗಳೂರು.
ವಾಸಾಸಂಇ/ವಾಪ್ರ/1819/ಎಸ್‌ಎಸ್‌ಸಿ/2025-26

ನೈಋತ್ಯ ರೈಲ್ವೆ
ಇ-ಟೆಂಡರು ಸೂಚನೆ ಸಂ.: Y/E.29/2025-26/21
ದಿನಾಂಕ: 07.07.2025
ಈ ಕೆಳ ಸಹಿದಾರರು, ಭಾರತದ ರಾಷ್ಟ್ರಪತಿಗಳ ಪರವಾಗಿ ಕೆಳಗಡೆ ನೀಡಿರುವ ಕಾಮಗಾರಿಗಳಿಗೆ ಇ-ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ:

ಕಾಮಗಾರಿಯ ವಿವರ	ಅಂದಾಜು ಮೌಲ್ಯ
ಮೈಸೂರು ರೈಲು ನಿಲ್ದಾಣದಲ್ಲಿ ವಂದೇ ಭಾರತ್ ರೈಲುಗಳನ್ನು ಪರಿಚಯಿಸುವ ದೃಷ್ಟಿಯಿಂದ 1000 ಕೆವಿಎ ಸಿಎಸ್‌ಎಸ್ ಸಾಮರ್ಥ್ಯದ ವಿದ್ಯುತ್ ಪೂರೈಕೆಯ ವ್ಯವಸ್ಥೆಯ ಮೂಲಕ ವೃದ್ಧಿಗೊಳಿಸುವುದು,	ರೂ. 15,56,944.83

ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ: 28.07.2025, 11:00 ಗಂಟೆಯವರೆಗೆ
ಹೆಚ್ಚಿನ ಮಾಹಿತಿಗಾಗಿ www.ireps.gov.in ಗೆ ಲಾಗ್ ಆನ್ ಆಗಿ
ವರಿಷ್ಠ ವಿಭಾಗೀಯ ಎಲೆಕ್ಟ್ರಿಕಲ್ ಇಂಜಿನಿಯರ್/ ಸಾಮಾನ್ಯ/ಮೈಸೂರು
PUB/296/AAMO/PRB/SWR/2025-26
ಕಾಯ್ದಿರಿಸದ ಟಿಕೇಟುಗಳನ್ನು ಸುಲಭವಾಗಿ ಬುಕಿಂಗ್ ಮಾಡಲು ಗೂಗಲ್ ಪ್ಲೇ ಸ್ಟೋರ್‌ನಿಂದ ಯುಟಿಎಸ್ ಮೊಬೈಲ್ ಆ್ಯಪ್‌ಅನ್ನು ಡೌನ್‌ಲೋಡ್ ಮಾಡಿರಿ
South Western Railway - SWR | SWRRLY | SWRAILWAYHQ | sw_railways

---

PUBLIC NOTICE

This is to inform the general public that my client intends to purchase the immovable properties mentioned and described in the schedule below from M/s **Jindal Nature Care Private Limited**, a private limited company incorporated under the Companies Act, 1956 ("Owner"). The Owner represents that it is the absolute owner of the Schedule Properties and the same are free from all encumbrances, mortgage, charge, lien or litigation and it has not entered into any sort of agreement/ MOU/Deeds etc., for transfer of the Schedule Properties. Any person/s having any objection, claim, right, title and/or interest with respect to the Schedule Properties or any part or portion thereof by way of sale, agreement of sale, conveyance, acquisition, partition, transfer, memorandum of understanding, exchange, mortgage, pledge, charge, encumbrance, inheritance, succession, lease, easement or demand or objections or claims of any nature whatsoever for the proposed transaction shall lodge their claim(s)/objection(s)/demand(s) with the undersigned supported by documentary evidence **within Fifteen (15) days** from the date of publication of this Notice failing which, my client shall proceed with the above-mentioned transaction as though there are no claim(s)/objection(s)/demand(s) to the proposed transaction.

SCHEDULE

All that piece and parcel of the below mentioned properties situated at Muttugadahalli Village and Tharabanahalli Village, Doddabelavangala Hobli, Doddaballapura Taluk, Bangalore Rural District:

Sl. No.	Sy. No.	Extent in Acres & Guntas	East by	West by	North by	South by
Muthugadahalli Village						
1.	14/2	01-06	Tharabanahalli Village boundary	Survey No. 15	Survey No. 14/1	Survey No.16
2.	15/2	01-08	Survey No. 14/2	Survey No. 17	Survey No. 15/1	Survey No. 16
3.	16/1	02-20	Tharabanahalli Village boundary	Survey No. 17	Survey No. 16/1	Jois Agrahara Village boundary
4.	16/2	02-02	Tharabanahalli Village boundary	Survey No. 17	Survey No. 16/1	Jois Agrahara Village boundary
Tharabanahalli Village						
5.	51/1	00-35	Survey No. 51/3	Muttugadahalli Village boundary	Survey No. 52 & Road	Jois Agrahara Village boundary
6.	51/3	00-27	Survey No. 51/4	Survey No. 51/1	Survey No. 52 & Road	Jois Agrahara Village boundary
7.	51/4	00-35	Survey No. 51/2	Survey No. 51/3	Survey No. 52 & Road	Jois Agrahara Village boundary
8.	52/1	01-20	Survey No. 52/1	Muttugadahalli Village boundary	Survey No. 55	Survey No. 51
9.	55/5	00-20	Survey No. 55/4	Muttugadahalli Village boundary	Survey No. 55/3	Survey No. 52
10.	55/6	00-20	Survey No. 55/3	Muttugadahalli Village boundary	Survey No. 55/1	Survey No. 55/4
11.	56/1	01-06	Survey No. 54	Muttugadahalli Village boundary	Survey No. 57	Survey No. 56/2
12.	56/3	00-23.08	Survey No. 54	Muttugadahalli Village boundary	Survey No. 56/1	Survey No. 56/2
13.	56/4	00-23.08	Survey No. 54	Muttugadahalli Village boundary	Survey No. 56/2	Survey No. 56/1
14.	59/1	01-00	Survey No. 59/2	Muttugadahalli Village boundary	Survey No. 60	Survey No. 58
15.	61/5	00-10	Survey No. 61/3	Survey No. 61/4	Survey No. 61/1	Survey No. 60

Place : Bengaluru
Date : 14-07-2025

Vinay K. S., Advocate,
Vinay Kademane & Associates
307, 3rd Floor, Prestige Centre Point, No.7/49, Edward Road, Bengaluru-560001
Ph.: 080 22863885 Email:vinay@vinaykademane.in

ಪ್ರಜಾವಾಣಿ **ಕ್ಲಾಸಿಫೈಡ್ಸ್**
ಪ್ರತಿಯೊಬ್ಬರಿಗೂ ಉಪಯುಕ್ತ
email: classifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

PERSONAL

Change of Name

CHANGE OF NAME
I, **YASHODHA S RAI** W/o Late B S Somappa, residing at No. 204, Dwarkamai Nilaya, 2nd Main, 3rd Cross, Kolliganahalli Main Road, Lakshmipura, Bengaluru-562123 have changed my name to **K R YESHODHA S RAI** vide affidavit dated 16-07-2025 before notary L. Gopalakrishna, Bengaluru.

CHANGE OF NAME
I, **HASBEYA BEGUM** W/o Mohammed Arif, residing at # 41/1, F Street, Slaughter House, Shivajinagar, HKP Road, Bengaluru- 560051 have changed my name to **HASBIA BANU** vide affidavit dated 16-07-2025 before notary Sivakumara M.N., Bengaluru. Henceforth I shall be called as **HASBIA BANU** only

I, JAVALI Malati Bai, daughter of J Mohan Rao, aged about 75 years, residing at Shanteri, Kuvempu Road, Thirthahalli-577432, shivamogga District, Karnataka, do hereby declare that I have changed my name and shall hereafter be known as J.Malathi It is certified that I have complied with all legal requirements in this regard.

BUSINESS

Business Offers

Finance

MSME LOANS
Available for Any Startup Companies,Any Existing Companies
NOTE:Also one Approved Loan Available
Contact-7204995189

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
Advertisement Manager
The Printers (Mysore) Pvt. Ltd.
Bengaluru

CONNECT

BUILT-TO-SUIT OPPORTUNITY AT KUMBALGODU
4 Acres Available For Reputed Companies On Long-Term Lease.
Approx. 1 Lakh Sqft Can Be Developed. Prime Location With Good Vastu and 2-Side Road Access.
For details please call:
AMOD: 96395 39555
ROUNAQH

Initiation into Babaji's Kriya Yoga



MAHAVATAR KRIYA BABAJI
WEEKEND SEMINAR
On FRI, SAT, & SUN
Aug. 1st - 3rd 2025
Residential Program
INITIATION INTO:
Kriya Kundalini Pranayama, Hatha Yoga, Meditation, Based on the Ashtanga & ancient 18 Maha-Siddha Yoga Tradition.
VENUE:
THE SCHOOL OF ANCIENT WISDOM
IVC Road, Devanahalli, Kannamangala Palya- 562 110.
9845 66 1221 | 94 999 20007

DH Classifieds More value, more impact ಪ್ರಜಾವಾಣಿ
REAL ESTATE
BOOK YOUR REAL ESTATE ADS IN DH ALL KARNATAKA + PRAJAVANI BENGALURU CITY ON SATURDAY + SUNDAY
@ 2481/-* FOR 15 WORDS
*Conditions apply
www.dhclassifieds.com BOOK NOW
Book your ad with us now! For more details contact:
+91 9845114560 | +91 9886213331 | 080-45557163/164

ವೆಂಕಟೇಶ್‌ಗೆ ಕಲಾಭೂಷಣ ಪ್ರಶಸ್ತಿ

ಬೆಂಗಳೂರು: ಶ್ರೀಗುರು ಕುಮಾರ ಪಂಚಾಕ್ಷರೇಶ್ವರ ಸಂಗೀತ ಕಲಾ ವೇದಿಕೆಯಿಂದ ನೀಡುವ 'ಪಂಡಿತ ಶೇಷಾದ್ರಿ ಗವಾಯಿ ಸಂಗೀತೋತ್ಸವ ಹಾಗೂ ಪಂಚಾಕ್ಷರ ಕೃಪಾ ಭೂಷಣ' ಪ್ರಶಸ್ತಿಗೆ ಹಿಂದೂಸ್ತಾನಿ ಗಾಯಕ ಎಂ. ವೆಂಕಟೇಶ್ ಕುಮಾರ್ ಆಯ್ಕೆಯಾಗಿದ್ದಾರೆ.

ಪ್ರಶಸ್ತಿಯು ₹25 ಸಾವಿರ ನಗದು, ಪ್ರಶಸ್ತಿ ಪತ್ರ, ಸ್ಮರಣಿಕೆ ಒಳಗೊಂಡಿದೆ.

ಬೆಂಗಳೂರಿನ ದಿ ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ವರ್ಲ್ಡ್ ಕಲ್ಚರ್ ಸಭಾಂಗಣದಲ್ಲಿ ಜುಲೈ 20ರಂದು ನಡೆಯುವ ಕಾರ್ಯಕ್ರಮದಲ್ಲಿ ಬಸವ ಕಲ್ಯಾಣದ ಅನುಭವ ಮಂಟಪದ ಅಧ್ಯಕ್ಷ ಬಸವಲಿಂಗ ಪಟ್ಟದೇವರು ಸಾನ್ನಿಧ್ಯ ವಹಿಸಲಿದ್ದು, ಬೀದರ್ ಜಿಲ್ಲೆಯ ಭಾಲ್ಕಿ ಹಿರೇಮಠ ಸಂಸ್ಥಾನದ ಗುರುಬಸವ ಪಟ್ಟದೇವರು ಕಾರ್ಯಕ್ರಮ ಉದ್ಘಾಟಿಸಲಿದ್ದಾರೆ. ಕನ್ನಡ ಸಾಹಿತ್ಯ ಪರಿಷತ್ತಿನ ನಿಕಟಪೂರ್ವ ಅಧ್ಯಕ್ಷ ಮನು ಬಳಿಗಾರ್ ಪ್ರಶಸ್ತಿ ಪ್ರದಾನ ಮಾಡಲಿದ್ದಾರೆ ಎಂದು ಸಂಸ್ಥೆಯ ಅಧ್ಯಕ್ಷ ನಾಗೇಂದ್ರ ರಾಣಾಪೂರ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಬೆಸ್ಕಾಂ:19ಕ್ಕೆ ಗ್ರಾಹಕ ಸಭೆ

ಬೆಂಗಳೂರು: ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿ (ಬೆಸ್ಕಾಂ) ಇದೇ ಶನಿವಾರ ಮಧ್ಯಾಹ್ನ 3ರಿಂದ 5.30ರವರೆಗೆ ಗ್ರಾಹಕ ಸಂವಾದ ಸಭೆ ಹಮ್ಮಿಕೊಂಡಿದೆ. ಈ ಸಭೆಯಲ್ಲಿ ಗ್ರಾಹಕರು ಪಾಲ್ಗೊಂಡು, ವಿದ್ಯುತ್ ಸಂಬಂಧಿತ ಸಮಸ್ಯೆಗಳನ್ನು ಪರಿಹರಿಸಿಕೊಳ್ಳಬಹುದು ಎಂದು ಬೆಸ್ಕಾಂ ಪ್ರಕಟಣೆ ತಿಳಿಸಿದೆ.

ವೈದ್ಯಕೀಯ ತಪಾಸಣಾ ಭತ್ಯೆ ಹೆಚ್ಚಳ: ಸಿ.ಎಂ

ಕೆಎಸ್‌ಆರ್‌ಪಿ ಸಮುದಾಯ ಭವನ ಉದ್ಘಾಟನೆ • ಪೊಲೀಸ್ ಸಿಬ್ಬಂದಿ ಬಲಪಡಿಸಲು ಸರ್ಕಾರ ಸಿದ್ಧ: ಸಿದ್ದರಾಮಯ್ಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಪೊಲೀಸ್ ಸಿಬ್ಬಂದಿಯ ವೈದ್ಯಕೀಯ ತಪಾಸಣಾ ಭತ್ಯೆಯನ್ನು ₹1 ಸಾವಿರದಿಂದ ₹1,500ಕ್ಕೆ ಏರಿಕೆ ಮಾಡಲಾಗಿದೆ. ಅಗತ್ಯ ಬಿದ್ದರೆ ಇನ್ನೂ ಏರಿಕೆ ಮಾಡಲಾಗುವುದು’ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಭರವಸೆ ನೀಡಿದರು.

ರಾಜ್ಯ ಪೊಲೀಸ್ ಮತ್ತು ಬಿಎಂಆರ್‌ಸಿಎಲ್ ಸಹಯೋಗದಲ್ಲಿ ಬೆಂಗಳೂರಿನ ಕೋರಮಂಗಲದ ಸಿಲ್ಕ್ ಬೋರ್ಡ್ ಜಂಕ್ಷನ್ ಬಳಿ ನಿರ್ಮಿಸಿರುವ ಕೆಎಸ್‌ಆರ್‌ಪಿ ಸಮುದಾಯ ಭವನದ ಕಟ್ಟಡ ಉದ್ಘಾಟಿಸಿ ಅವರು ಮಾತನಾಡಿದರು.

ಕೋರಮಂಗಲದ ಸಿಲ್ಕ್ ಬೋರ್ಡ್ ಜಂಕ್ಷನ್ ಹತ್ತಿರ ನಿರ್ಮಿಸಿರುವ ನೂತನ ಕೆಎಸ್‌ಆರ್‌ಪಿ ಸಮುದಾಯ ಭವನದ ಹೊರನೋಟ ಪ್ರಜಾವಾಣಿ ಚಿತ್ರ

‘ಪೊಲೀಸ್ ಸಿಬ್ಬಂದಿ ಬಲಪಡಿಸಲು ಸರ್ಕಾರ ಸಿದ್ಧವಿದೆ. ಅಪರಾಧ ಪ್ರಕರಣಗಳನ್ನು ಕಡಿಮೆಗೊಳಿಸುವತ್ತ ಪೊಲೀಸರು ಗಮನ ನೀಡಬೇಕು. ರಾಜ್ಯದಲ್ಲಿ ಯಾವುದೇ ರೀತಿಯ ಅಹಿತಕರ ಘಟನೆಗಳು ನಡೆಯದಂತೆ ಎಚ್ಚರ ವಹಿಸಬೇಕು. ಯಾರೇ ತಪ್ಪು ಮಾಡಿದರೂ ಸರ್ಕಾರವನ್ನೇ ದೂಷಿಸಲಾಗುತ್ತದೆ. ಅಹಿತಕರ ಘಟನೆಗಳು ನಡೆದರೆ ಸರ್ಕಾರವೇ ಜವಾಬ್ದಾರಿ. ಅಂತಹ ಪರಿಸ್ಥಿತಿ ಬರದಂತೆ ನೋಡಿಕೊಳ್ಳಬೇಕು’ ಎಂದು ಸೂಚಿಸಿದರು.

‘ಕರಾವಳಿಯಲ್ಲಿ ಆಗಾಗ ಕೋಮು ಗಲಭೆಗಳು ನಡೆಯುತ್ತಲೇ ಇರುವುದರಿಂದ ವಿಶೇಷ ಕಾರ್ಯಪಡೆ ರಚಿಸಲಾಗಿದೆ. ಕೋಮುಗಲಭೆಗಳು ಪ್ರಾರಂಭವಾದರೆ ನಿರಂತರವಾಗಿ ನಡೆಯುತ್ತವೆ. ಅವುಗಳನ್ನು ಪ್ರಾರಂಭಿಕ ಹಂತದಲ್ಲಿಯೇ ಹತ್ತಿಕ್ಕಬೇಕು’ ಎಂದು ನಿರ್ದೇಶಿಸಿದರು.

‘ಹಿರಿಯ ಪೊಲೀಸ್ ಅಧಿಕಾರಿಗಳು ನಿರಂತರವಾಗಿ ಪೊಲೀಸ್ ಠಾಣೆಗೆ ಭೇಟಿ ನೀಡಬೇಕು. ರಾಜ್ಯದಲ್ಲಿ 2023ಕ್ಕೆ ಹೋಲಿಸಿದರೆ, 2024ರಲ್ಲಿ ಅಪರಾಧ ಪ್ರಕರಣಗಳ ಸಂಖ್ಯೆ ಕಡಿಮೆಯಾಗಿವೆ. ರಾಜ್ಯದ ಅಭಿವೃದ್ಧಿಯು ಪೊಲೀಸರ ಕಾರ್ಯಕ್ಷಮತೆಯ ಮೇಲೆ ಅವಲಂಬಿತವಾಗಿರುತ್ತದೆ. ರಾಜ್ಯದಲ್ಲಿ ಶಾಂತಿ ಸುವ್ಯವಸ್ಥೆ ಹಾಗೂ ಅಭಿವೃದ್ಧಿಗೆ ನೇರ ಸಂಬಂಧವಿದೆ. ಈ ದಿಸೆಯಲ್ಲಿ ಪೊಲೀಸರು ಶ್ರಮಿಸುತ್ತಿರುವುದು ಶ್ಲಾಘನೀಯ’ ಎಂದು ಹೇಳಿದರು.

‘ಪೊಲೀಸ್ ಕಾನ್‌ಸ್ಟೆಬಲ್ ಹಾಗೂ ಸಹಾಯಕ ಪೊಲೀಸ್ ನಿರೀಕ್ಷಕರಿಗೆ ಕಡಿಮೆ ದರದಲ್ಲಿ ಸಮುದಾಯ ಭವನವನ್ನು ಒದಗಿಸಬೇಕು. ಪೊಲೀಸ್ ಸಮುದಾಯ ಭವನ ಸುಸಜ್ಜಿತವಾಗಿದ್ದು, ನಿರ್ವಹಣೆಗೆ ಅಗತ್ಯವಿರುವಷ್ಟು ಆದಾಯ ಬರುವಂತೆ ನೋಡಿಕೊಳ್ಳಬೇಕು’ ಎಂದರು.

ಗೃಹ ಸಚಿವ ಜಿ.ಪರಮೇಶ್ವರ, ರಾಜ್ಯ ಪೊಲೀಸ್ ಮಹಾನಿರ್ದೇಶಕ ಎಂ.ಎ. ಸಲೀಂ ಉಪಸ್ಥಿತರಿದ್ದರು.

ವಿಡಿಯೊ ಬಿಡುಗಡೆ

ಅಪರಾಧ ಪ್ರಕರಣವೊಂದರಲ್ಲಿ ಜೀವಾವಧಿ ಶಿಕ್ಷೆಗೆ ಒಳಗಾಗಿರುವ ಅರುಣ್ ಎಂಬಾತನ ಪ್ರತಿಭೆ ಗುರುತಿಸಿ ಆತನಿಂದ ಜೈಲಾಧಿಕಾರಿಗಳು ತತ್ವಪದ ಹಾಡಿಸಿದ್ದಾರೆ.

ಸಂಗೀತ ನಿರ್ದೇಶಕ ಕೆ.ಕಲ್ಯಾಣ್ ಅವರ ಸಾಹಿತ್ಯದಲ್ಲಿ ಮೂಡಿ ಬಂದ ಉತ್ತಮರ ಸಂಗ... ಎಂಬ ಹಾಡನ್ನು ಕೈದಿ ಅರುಣ್ ಆಚಾರ್ ಹಾಡಿದ್ದಾನೆ.

ಕೇಂದ್ರ ಕಾರಾಗೃಹದ ಆವರಣದಲ್ಲಿ ನಿರ್ಮಿಸಿರುವ ವಸತಿಗೃಹಗಳ ಉದ್ಘಾಟನೆ ಸಮಾರಂಭದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಹಾಡಿನ ಮೇಕಿಂಗ್ ವಿಡಿಯೊವನ್ನು ಬಿಡುಗಡೆ ಮಾಡಿದರು.

ಅಪರಾಧ ಕೃತ್ಯಗಳಲ್ಲಿ ಭಾಗಿಯಾಗಿ ಜೈಲು ಸೇರಿರುವ ಕೈದಿಗಳಿಗೆ ಮನಪರಿವರ್ತಿಸುವ ಹಾಗೂ ಉತ್ತಮ ಸಮಾಜದೆಡೆಗೆ ಸ್ಫೂರ್ತಿ ನೀಡುವ ಹಾಡು ಇದಾಗಿದೆ. ಅರುಣ್‌ಗೆ ಗಾಯನದಲ್ಲಿ ಆಸಕ್ತಿಯಿರುವುದನ್ನು ಗಮನಿಸಿ ಜೈಲಿನ ಮುಖ್ಯಅಧೀಕ್ಷಕ ಕೆ.ಸುರೇಶ್ ಅವರು ಕೆ.ಕಲ್ಯಾಣ್ ಅವರ ಗಮನಕ್ಕೆ ತಂದಿದ್ದರು. ಕಲ್ಯಾಣ್ ಅವರು ಕಾರಾಗೃಹಕ್ಕೆ ಭೇಟಿ ನೀಡಿ ಅರುಣ್ ಪ್ರತಿಭೆ ಗುರುತಿಸಿ ತಿಂಗಳ ಕಾಲ ತರಬೇತಿ ನೀಡಿದ್ದರು.

ಕಾನ್‌ಸ್ಟೆಬಲ್‌ಗಳಿಗೆ ‘ಪಿ–ಕ್ಯಾಪ್’

‘ಪೊಲೀಸ್ ಕಾನ್‌ಸ್ಟೆಬಲ್‌ಗಳು ಸದ್ಯ ಧರಿಸುತ್ತಿರುವ ಟೋಪಿಗಳ ಬದಲಿಗೆ ‘ಪಿ–ಕ್ಯಾಪ್’ ಒದಗಿಸಲು ಪೊಲೀಸ್ ಮಹಾನಿರ್ದೇಶಕರಿಗೆ ಸೂಚಿಸಿದ್ದೇನೆ’ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದರು.

ವಸತಿಗೃಹ ಉದ್ಘಾಟನೆ

ಗಾಂಧಿನಗರದ ಬೆಂಗಳೂರು ಕೇಂದ್ರ ಕಾರಾಗೃಹದ ಆವರಣದಲ್ಲಿ ಪೊಲೀಸ್ ಗೃಹ–2025ರ ಯೋಜನೆ ಅಡಿ ನಿರ್ಮಿಸಲಾಗಿರುವ ವಸತಿಗೃಹಗಳ ಸಮುಚ್ಚಯವನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಉದ್ಘಾಟಿಸಿದರು.

ಸಮುಚ್ಚಯದಲ್ಲಿ 128 ವಸತಿಗೃಹಗಳು ಇದ್ದು, ರಾಜ್ಯ ಪೊಲೀಸ್ ವಸತಿ ಮತ್ತು ಮೂಲಭೂತ ಸೌಲಭ್ಯ ಅಭಿವೃದ್ಧಿ ನಿಗಮದ ₹40 ಕೋಟಿ ಅನುದಾನದಲ್ಲಿ ನಿರ್ಮಿಸಲಾಗಿದೆ.

ಕರ್ನಾಟಕ ಕಾರಾಗೃಹ ಮತ್ತು ಸುಧಾರಣಾ ಸೇವಾ ಅಕಾಡೆಮಿಯ ಆವರಣದಲ್ಲಿ ವಿವಿಧ ಕಟ್ಟಡಗಳ ನಿರ್ಮಾಣಕ್ಕೆ ಮುಖ್ಯಮಂತ್ರಿ ಶಂಕುಸ್ಥಾಪನೆ ನೆರವೇರಿಸಿದರು. ಗೃಹ ಸಚಿವ ಜಿ.ಪರಮೇಶ್ವರ, ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ಕಾರ್ಯಕ್ರಮದಲ್ಲಿ ಭಾಗಿಯಾಗಿದ್ದರು.

ಅತಿಥಿ ಸೋಗಿನಲ್ಲಿ ವಿದೇಶಿ ಗಣ್ಯರ ಬ್ಯಾಗ್ ಕಳ್ಳತನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸ್ಟಾರ್ ಹೋಟೆಲ್‌ಗಳಲ್ಲಿ ನಡೆಯುವ ಅಂತರರಾಷ್ಟ್ರೀಯ ವಿಚಾರಸಂಕಿರಣ ಹಾಗೂ ಕಾರ್ಯಾಗಾರಗಳಿಗೆ ಅತಿಥಿಯ ಸೋಗಿನಲ್ಲಿ ಹೋಗಿ ವಿದೇಶಿ ಗಣ್ಯರ ಬ್ಯಾಗ್‌ಗಳನ್ನು ಕಳ್ಳತನ ಮಾಡುತ್ತಿದ್ದ ಆರೋಪಿಯನ್ನು ಹೈಗ್ರೌಂಡ್ಸ್ ಠಾಣೆ ಪೊಲೀಸರು ಬಂಧಿಸಿದ್ದಾರೆ.

ಶ್ರೀನಿವಾಸಲು

ಆಂಧ್ರಪ್ರದೇಶದ ಹಬ್ಸಿಗುಡದ ರವೀಂದ್ರ ನಗರದ ನಿವಾಸಿ ಚಿಂತಕಿಂದಿ ಶ್ರೀನಿವಾಸಲು (57) ಬಂಧಿತ ಆರೋಪಿ.

ಆರೋಪಿಯಿಂದ 270 ಯುಎಸ್ ಡಾಲರ್ಸ್, 2,900 ತೈವಾನ್ ಡಾಲರ್ಸ್, 200 ಆಸ್ಟ್ರೇಲಿಯಾ ಡಾಲರ್ಸ್ ಮತ್ತು 10 ಸಾವಿರ ಲಾವೋಸ್‌ನ ‘ಲಾಹೋ ಕರೆನ್ಸಿ ಕಿಪ್’ ವಶಪಡಿಸಿಕೊಳ್ಳಲಾಗಿದೆ ಎಂದು ಪೊಲೀಸರು ಹೇಳಿದರು.

ಜೂನ್ 23ರಂದು ಶಾಂಗ್ರಿ–ಲಾ ಹೋಟೆಲ್‌ನಲ್ಲಿ ನಡೆಯುತ್ತಿದ್ದ ಕಂಪನಿಯೊಂದರ ವಾರ್ಷಿಕ ಸಭೆಯಲ್ಲಿ ಅತಿಥಿಯ ಸೋಗಿನಲ್ಲಿ ಭಾಗಿಯಾಗಿದ್ದ ಆರೋಪಿ, ಅತಿಥಿಯೊಬ್ಬರ ಬ್ಯಾಗ್‌ನಲ್ಲಿದ್ದ ವಿದೇಶಿ ಕರೆನ್ಸಿ ಕದ್ದು ಪರಾರಿಯಾಗಿದ್ದ. ಈ ಕುರಿತು ಹೋಟೆಲ್‌ನ ವ್ಯವಸ್ಥಾಪಕರು ನೀಡಿದ್ದ ದೂರಿನ ಮೇರೆಗೆ ಪ್ರಕರಣ ದಾಖಲಿಸಿಕೊಂಡು ಆರೋಪಿಯನ್ನು ಪತ್ತೆಹಚ್ಚಿ ಬಂಧಿಸಿದ್ದಾರೆ.

ಅಂತರರಾಷ್ಟ್ರೀಯ ಅತಿಥಿಗಳು ಭಾಗಿಯಾಗುವ ವಿಚಾರಸಂಕಿರಣ, ಕಾರ್ಯಾಗಾರಗಳು ನಡೆಯುವ ಸ್ಥಳಗಳ ಕುರಿತು ಪತ್ರಿಕೆಗಳು ಹಾಗೂ ಕಂಪನಿಯ ವೆಬ್‌ಸೈಟ್‌ನಲ್ಲಿ ತಿಳಿದುಕೊಳ್ಳುತ್ತಿದ್ದ ಆರೋಪಿ, ತಾನೂ ಆಹ್ವಾನಿತ ಅತಿಥಿಯ ಸೋಗಿನಲ್ಲಿ ಹೋಗುತ್ತಿದ್ದ ಎಂದು ಪೊಲೀಸರು ಹೇಳಿದರು.

ಅತಿಥಿಗಳು ತಮ್ಮ ಬ್ಯಾಗ್‌ಅನ್ನು ಇಟ್ಟು ಬೇರೆಡೆ ತೆರಳಿದಾಗ ಅವುಗಳನ್ನು ಕಳ್ಳತನ ಮಾಡುತ್ತಿದ್ದ. ವಿದೇಶಿ ಕರೆನ್ಸಿಯನ್ನೇ ಹೆಚ್ಚಾಗಿ ಕಳ್ಳತನ ಮಾಡುತ್ತಿದ್ದ ಎಂದು ಕೇಂದ್ರ ವಿಭಾಗದ ಡಿಸಿಪಿ ಅಕ್ಷಯ್ ಹಾಕೆ ಮಚ್ಚೇಂದ್ರ ತಿಳಿಸಿದರು.

ರೌಡಿ ಕೊಲೆ: ಎಸಿಪಿಗೆ ತನಿಖೆ ಜವಾಬ್ದಾರಿ

ಬೆಂಗಳೂರು: ಶಿವಪ್ರಕಾಶ್ ಅಲಿಯಾಸ್ ಬಿಕ್ಲು ಶಿವು ಕೊಲೆ ಪ್ರಕರಣದ ತನಿಖಾಧಿಕಾರಿಯಾಗಿ ಕೆ.ಜಿ.ಹಳ್ಳಿ ಉಪ ವಿಭಾಗದ ಎಸಿಪಿ ಪ್ರಕಾಶ್ ರಾಥೋಡ್ ಅವರನ್ನು ನೇಮಿಸಿ ನಗರ ಪೊಲೀಸ್ ಕಮಿಷನರ್ ಸೀಮಂತ್ ಕುಮಾರ್ ಆದೇಶಿಸಿದ್ದಾರೆ.

ಪ್ರಕರಣಕ್ಕೆ ಸಂಬಂಧಿಸಿದ ಕಡತವನ್ನು ಎಸಿಪಿ ಪ್ರಕಾಶ್ ರಾಥೋಡ್ ಅವರಿಗೆ ಭಾರತಿನಗರ ಠಾಣೆ ಪೊಲೀಸರು ಹಸ್ತಾಂತರಿಸಿದ್ದಾರೆ.

ಹಲ್ಲೆ ಆರೋಪ: ಸ್ಪಷ್ಟನೆ ಕೇಳಿ ಗಾಯಿತ್ರಿಗೆ ನೋಟಿಸ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕಲಾವಿದರ ಮೇಲೆ ಹಲ್ಲೆ ಮತ್ತು ಜಾತಿ ನಿಂದನೆ ಆರೋಪಕ್ಕೆ ಸಂಬಂಧಿಸಿದಂತೆ ಸ್ಪಷ್ಟನೆ ನೀಡುವಂತೆ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ನಿರ್ದೇಶಕಿ ಕೆ.ಎಂ. ಗಾಯಿತ್ರಿ ಅವರಿಗೆ ಇಲಾಖೆ ಕಾರ್ಯದರ್ಶಿ ವೆಂಕಟೇಶ್ ಎಂ.ವಿ. ನೋಟಿಸ್ ನೀಡಿದ್ದಾರೆ.

ಅಪರಾಧ ಸುದ್ದಿ

ಕಲಾವಿದರು ತಮ್ಮನ್ನು ಭೇಟಿ ಮಾಡುವ ಸಂದರ್ಭದಲ್ಲಿ ಜಾತಿ ನಿಂದನೆ ಮಾಡಿ, ಹಲ್ಲೆ ಮಾಡಿರುವ ಬಗ್ಗೆ ಮಾಧ್ಯಮಗಳಲ್ಲಿ ವರದಿಯಾಗಿದೆ. ಕಲಾವಿದ ಜೋಗಿಲ ಸಿದ್ಧರಾಜು ಅವರು ಎಸ್.ಜೆ. ಪಾರ್ಕ್ ಪೊಲೀಸ್ ಠಾಣೆಯಲ್ಲಿ ಎಫ್‌ಐಆರ್ ದಾಖಲಿಸಿರುವ ಬಗ್ಗೆ ಸ್ಪಷ್ಟನೆ ನೀಡಬೇಕು ಎಂದು ತಿಳಿಸಿದ್ದಾರೆ.

ಪರಿಶಿಷ್ಟ ಜಾತಿ ಉಪಯೋಜನೆಯ ಲೆಕ್ಕ ಶೀರ್ಷಿಕೆಯಡಿ ಧನಸಹಾಯ ಯೋಜನೆ ಮತ್ತು ಪ್ರಾಯೋಜನೆಗೆ ಹಂಚಿಕೆ ಮಾಡಿ, ಲಭ್ಯವಿರುವ ₹1.59 ಕೋಟಿಯನ್ನು ಕರ್ನಾಟಕ ಸಂಗೀತ ನೃತ್ಯ ಅಕಾಡೆಮಿ ಬ್ಯಾಂಕ್ ಖಾತೆಯಲ್ಲಿ ಕಾಯ್ದಿರಿಸಲಾಗಿದೆ. ಈ ಅನುದಾನವನ್ನು ಪ್ರಾಯೋಜನೆಗೆ ಬಳಸಲು ಅನುಮತಿ ನೀಡಲಾಗಿದ್ದರೂ ಬಳಕೆ ಮಾಡದಿರುವ ಬಗ್ಗೆ ಪಶ್ನಿಸಿದ್ದಾರೆ.

ಗಾಯಿತ್ರಿ

2025–26ನೇ ಸಾಲಿಗೆ ಇಲಾಖೆಯ ಯೋಜನೆ ಮತ್ತು ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಲು ₹2.50 ಕೋಟಿ ಅನುದಾನ ಬಿಡುಗಡೆ ಮಾಡಲಾಗಿದೆ. ಈ ಅನುದಾನದಲ್ಲಿ ಅನುಷ್ಠಾನ ಮಾಡಲಾದ ಯೋಜನೆ ಮತ್ತು ಕಾರ್ಯಕ್ರಮಗಳ ವಿವರ ಸಲ್ಲಿಸುವಂತೆ ತಿಳಿಸಿದ್ದಾರೆ.

ಅನುದಾನ ಬಿಡುಗಡೆ

ಪರಿಶಿಷ್ಟ ಜಾತಿ ಉಪಯೋಜನೆಯಡಿ 2022-23, 2023-24 ಹಾಗೂ 2024-25ನೇ ಸಾಲಿಗೆ ಕಲಾ ತಂಡಗಳಿಗೆ ಬಾಕಿ ಇರುವ ಗೌರವ ಸಂಭಾವನೆ ಪಾವತಿಗೆ ಸಂಬಂಧಿಸಿದಂತೆ ₹1.29 ಕೋಟಿ ಅನುದಾನವನ್ನು ಬಿಡುಗಡೆ ಮಾಡಿ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ನಿರ್ದೇಶಕಿ ಕೆ.ಎಂ. ಗಾಯಿತ್ರಿ ಆದೇಶ ಹೊರಡಿಸಿದ್ದಾರೆ. ಪರಿಶಿಷ್ಟ ಪಂಗಡ ಉಪಯೋಜನೆಯಡಿಯೂ ₹40.10 ಲಕ್ಷ ಅನುದಾನವನ್ನು ಬಿಡುಗಡೆಗೊಳಿಸಿ, ಆದೇಶಿಸಿದ್ದಾರೆ.

ಮಹಿಳಾ ಉದ್ಯೋಗಿ ಸಾವು

ಬೆಂಗಳೂರು: ಸಂಜಯನಗರ ಸಂಚಾರ ಪೊಲೀಸ್ ಠಾಣಾ ವ್ಯಾಪ್ತಿಯ ಭದ್ರಪ್ಪ ಲೇಔಟ್‌ನಲ್ಲಿ ಮಂಗಳವಾರ ರಾತ್ರಿ ಸ್ಕೂಟರ್ ಹಾಗೂ ಸಿಮೆಂಟ್ ಮಿಶ್ರಣದ ಲಾರಿ ನಡುವೆ ಸಂಭವಿಸಿದ ಅಪಘಾತದಲ್ಲಿ ಮಹಿಳೆಯೊಬ್ಬರು ಮೃತಪಟ್ಟಿದ್ದಾರೆ.

ಮತ್ತಿಕೆರೆಯ ಬಿ.ಕೆ.ನಗರದ ನಿವಾಸಿ ಆಯುಷಾ ಖಾನಂ (30) ಮೃತಪಟ್ಟ ಉದ್ಯೋಗಿ.

ಹೊರವರ್ತುಲ ರಸ್ತೆಯ ಭದ್ರಪ್ಪ ಲೇಔಟ್ ಬಸ್ ನಿಲ್ದಾಣ ಸಮೀಪ ಅಪಘಾತ ನಡೆಯಿತು. ಆಯುಷಾ ಅವರು ಸ್ಥಳದಲ್ಲೇ ಮೃತಪಟ್ಟಿದ್ದಾರೆ. ವಾಹನ ಚಾಲಕನ ಒಡಿಶಾ ಮೂಲದ ದಿಲೀಪ್ ಕುಮಾರ್‌ನನ್ನು ಬಂಧಿಸಲಾಗಿದೆ ಎಂದು ಪೊಲೀಸರು ಹೇಳಿದರು.

ಪತ್ನಿ ಕೊಲೆಗೆ ಯತ್ನ: ಪತಿ ಬಂಧನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪತ್ನಿ ಕೊಲೆಗೆ ಯತ್ನಿಸಿದ್ದ ಪತಿಯನ್ನು ರಾಜರಾಜೇಶ್ವರಿನಗರ ಠಾಣೆ ಪೊಲೀಸರು ಬಂಧಿಸಿದ್ದಾರೆ.

ರಾಮ್ ನರೇಶ್ ಬಂಧಿತ. ಉತ್ತರ ಪ್ರದೇಶದ ರಾಮ್ 15 ವರ್ಷಗಳ ಹಿಂದೆ ನಗರಕ್ಕೆ ಬಂದಿದ್ದ. ಪತ್ನಿ ಗಾಯತ್ರಿ, ಪುತ್ರಿ ಜತೆಗೆ ಆರ್.ಆರ್.ನಗರದ ಕೃಷ್ಣಪ್ಪ ಬಡಾವಣೆಯ ಬಾಡಿಗೆ ಮನೆಯೊಂದರಲ್ಲಿ ನೆಲಸಿದ್ದ. ಪತ್ನಿಯ ಬಗ್ಗೆ ಅನುಮಾನ ವ್ಯಕ್ತಪಡಿಸಿ, ಜುಲೈ 13ರಂದು ನೇಣು ಬಿಗಿದು ಕೊಲೆ ಮಾಡಲು ಯತ್ನಿಸಿ ಪರಾರಿಯಾಗಿದ್ದ. ಪ್ರಕರಣ ದಾಖಲಿಸಿಕೊಂಡಿದ್ದ ಪೊಲೀಸರು ಆರೋಪಿಯನ್ನು ಬಂಧಿಸಿದ್ದಾರೆ.

‘ಕಂಪನಿಯೊಂದರಲ್ಲಿ ಸೆಕ್ಯೂರಿಟಿ ಗಾರ್ಡ್ ಆಗಿ ರಾಮ್ ಕೆಲಸ ಮಾಡುತ್ತಿದ್ದ. ಮದ್ಯವ್ಯಸನಿ ಆಗಿದ್ದ ಆರೋಪಿ ಇತ್ತೀಚೆಗೆ ಕೆಲಸ ಬಿಟ್ಟಿದ್ದ. ಪತ್ನಿ ನೀಡಿದ ದೂರು ಆಧರಿಸಿ ಆರೋಪಿಯನ್ನು ಬಂಧಿಸಲಾಯಿತು ಎಂದು ಪೊಲೀಸರು ಹೇಳಿದರು.

ಸಾರ್ವಜನಿಕರ ಮೇಲೆ ಮಚ್ಚು ಬೀಸಿದ ಮೂವರು ಆರೋಪಿಗಳು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸಂಬಂಧಿಯನ್ನು ಹೆದರಿಸಲು ಹೋಗಿ ಸಾರ್ವಜನಿಕರ ಮೇಲೆ ಮಚ್ಚು ಹಾಗೂ ಕಬ್ಬಿಣದ ರಾಡ್‌ನಿಂದ ಹಲ್ಲೆ ಮಾಡಿದ್ದ ನಾಲ್ವರ ವಿರುದ್ಧ ನಂದಿನಿ ಲೇಔಟ್ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಗಾಯಾಳು ಪವನ್ ಕುಮಾರ್ ನೀಡಿದ ದೂರಿನ ಮೇರೆಗೆ ಆರೋಪಿ ರವಿ ಹಾಗೂ ತಲೆಮರೆಸಿಕೊಂಡಿರುವ ಆತನ ಮೂವರು ಸ್ನೇಹಿತರ ವಿರುದ್ಧ ಪ್ರಕರಣ ದಾಖಲಾಗಿದೆ.

‘ಮನೆಗೆ ನಡೆದು ಹೋಗುವಾಗ ಆರೋಪಿಗಳು ಏಕಾಏಕಿ ಹಲ್ಲೆ ಮಾಡಿದ್ದಾರೆ’ ಎಂದು ದೂರಿನಲ್ಲಿ ಪವನ್ ಆರೋಪಿಸಿದ್ದಾರೆ.

ಜುಲೈ 13ರಂದು ರಾತ್ರಿ ನಂದಿನಿಲೇಔಟ್‌ನ ಕಂಠೀರವ ನಗರದಲ್ಲಿ ಘಟನೆ ನಡೆದಿದೆ. ಹಲ್ಲೆಯ ದೃಶ್ಯ ಸಿ.ಸಿ.ಟಿ.ವಿ. ಕ್ಯಾಮೆರಾದಲ್ಲಿ ಸೆರೆಯಾಗಿದೆ. ಆರೋಪಿಗಳ ಪತ್ತೆಗಾಗಿ ವಿಶೇಷ ತಂಡ ರಚಿಸಿ ಶೋಧಕಾರ್ಯ ನಡೆಸುತ್ತಿದ್ದಾರೆ.

‘ಕಂಠೀರವ ನಗರದಲ್ಲಿ ನೆಲಸಿರುವ ಜಗದೀಶ್ ಅವರ ಅಕ್ಕನ ಮಗಳನ್ನು ರವಿ ಮದುವೆಯಾಗಲು ಮುಂದಾಗಿದ್ದ. ಇದಕ್ಕೆ ಜಗದೀಶ್ ಒಪ್ಪಿರಲಿಲ್ಲ. ಇದೇ ಕಾರಣಕ್ಕೆ ಕೋಪಗೊಂಡಿದ್ದ ರವಿ ತನ್ನ ಸಂಬಂಧಿಯೂ ಆಗಿರುವ ಜಗದೀಶ್ ಅಂಗಡಿ ಬಳಿಗೆ ಸ್ನೇಹಿತರೊಂದಿಗೆ ಬಂದು ಗಲಾಟೆ ಮಾಡಿದ್ದ. ಗಲಾಟೆ ತೀವ್ರಗೊಂಡಾಗ ಮಚ್ಚು ಬೀಸಿದ್ದ. ರಸ್ತೆಯಲ್ಲಿ ನಡೆದು ತೆರಳುತ್ತಿದ್ದ ದೂರುದಾರ ಪವನ್, ವೆಂಕಟೇಶ್, ಸ್ಯಾಮ್ಸನ್ ಅವರಿಗೆ ಏಟು ಬಿದ್ದಿತ್ತು’ ಎಂದು ಪೊಲೀಸರು ಹೇಳಿದರು.

ನಿಮ್ಮ ಸಂಬಳ ಕಡಿಮೆ ಇದ್ದಾಗಲೇ ಒಂದಿಷ್ಟು ಹಣ ಉಳಿಸಲು ಯತ್ನಿಸಿ. ನೀವು ಹೆಚ್ಚು ಸಂಪಾದಿಸಲು ಆರಂಭಿಸಿದ ನಂತರ ಉಳಿತಾಯ ಮಾಡುವುದು ಸಾಧ್ಯವೇ ಇಲ್ಲ!
ಜಾಕ್ ಬೆನ್ನಿ

ದುಡ್ಡಿನಂಥಾ ಮಾತು

ತ್ರೈಮಾಸಿಕ ಫಲಿತಾಂಶ

ಹೇಗಿರಬಹುದು ಸಾಧನೆ?

ಪ್ರಸಕ್ತ ಆರ್ಥಿಕ ವರ್ಷದ ಏಪ್ರಿಲ್–ಜೂನ್ ತ್ರೈಮಾಸಿಕ ಕೊನೆಗೊಂಡಿದೆ. ಹೊಸ ತ್ರೈಮಾಸಿಕ ಶುರುವಾಗಿ ಎರಡು ವಾರಗಳು ಕಳೆದಿವೆ. ಜೂನ್ ತ್ರೈಮಾಸಿಕದಲ್ಲಿ ಷೇರುಪೇಟೆಗಳು ಎಷ್ಟು ಬೆಳೆದವು? ಮುಂದಿನ ತ್ರೈಮಾಸಿಕದಲ್ಲಿ ಏನಾಗಬಹುದು? ಯಾವೆಲ್ಲ ವಲಯಗಳ ಮೇಲೆ ಹೂಡಿಕೆದಾರರು ಗಮನ ಇರಿಸಬೇಕು? ಈ ಎಲ್ಲ ಸಂಗತಿಗಳ ಬಗ್ಗೆ ಈ ಬರಹ ಪಕ್ಷಿನೋಟ ಹರಿಸಿದೆ

• ವಿನೋದ್ ನಾಯರ್

ಅರ್ಥ ವ್ಯವಸ್ಥೆಯಲ್ಲಿ ಚೇತರಿಕೆ ಕಂಡುಬಂದ ಕಾರಣಕ್ಕೆ ಪ್ರಸಕ್ತ ಹಣಕಾಸು ವರ್ಷದ ಮೊದಲ ತ್ರೈಮಾಸಿಕದಲ್ಲಿ ಭಾರತದ ಷೇರುಪೇಟೆಯ ಗಳಿಕೆಯು ಚೆನ್ನಾಗಿಯೇ ಇತ್ತು. ದೇಶದ ಜಿಡಿಪಿ ಬೆಳವಣಿಗೆ ದರವು 2024–25ರ ಕೊನೆಯ ತ್ರೈಮಾಸಿಕದಲ್ಲಿ ಶೇಕಡ 7.5ಕ್ಕೆ ಜಿಗಿಯಿತು. ಇದು ಆರ್ಥಿಕ ಚಟುವಟಿಕೆ ಬಲಗೊಂಡಿರುವುದನ್ನು ಹೇಳುತ್ತಿದೆ.

ಸರ್ಕಾರದ ಕಡೆಯಿಂದ ಆಗುವ ವೆಚ್ಚಗಳು ಹೆಚ್ಚಾಗಿದ್ದುದು ಆರ್ಥಿಕ ಚಟುವಟಿಕೆಗಳು ಚುರುಕುಗೊಳ್ಳಲು ಕಾರಣವಾದವು. ಇದು 2024–25ರ ಕೊನೆಯ ತ್ರೈಮಾಸಿಕದಲ್ಲಿ ಕಾರ್ಪೊರೇಟ್ ಲಾಭಗಳಿಕೆ ಹೆಚ್ಚಲೂ ನೆರವಾಯಿತು.

ಇದೇ ಅವಧಿಯಲ್ಲಿ ಜಾಗತಿಕ ಮಟ್ಟದಲ್ಲಿ ಕೆಲವು ಅಪಾಯಗಳು ಕೂಡ ಕಡಿಮೆಯಾದವು. ಪ್ರತಿಸುಂಕ ಜಾರಿಯನ್ನು 90 ದಿನ ಅಮಾನತಿನಲ್ಲಿ ಇರಿಸುವುದಾಗಿ ಅಮೆರಿಕವು ಏಪ್ರಿಲ್‌ನಲ್ಲಿ ಪ್ರಕಟಿಸಿತು. ಬೇರೆ ಬೇರೆ ದೇಶಗಳು ಈಗ ಅಮೆರಿಕದ ಜೊತೆ ನಡೆಸುತ್ತಿರುವ ವ್ಯಾಪಾರ ಒಪ್ಪಂದದ ಬಗ್ಗೆ ಬಂಡವಾಳ ಮಾರುಕಟ್ಟೆಯು ಬಹಳಷ್ಟು ನಿರೀಕ್ಷೆ ಇರಿಸಿಕೊಂಡಿದೆ. ದ್ವಿಪಕ್ಷೀಯ ಮಾತುಕತೆಗಳ ಮೂಲಕ ಎರಡೂ ಕಡೆಯವರಿಗೆ ಲಾಭ ಆಗುವಂತಹ ಒಪ್ಪಂದ ಸಾಧ್ಯವಾಗಬಹುದು ಎಂಬ ನಿರೀಕ್ಷೆ ಇದೆ.

ಪ್ರಸಕ್ತ ಹಣಕಾಸು ವರ್ಷದ ಜೂನ್ ತ್ರೈಮಾಸಿಕದ ಕೊನೆಯ ಹೊತ್ತಿಗೆ ಪಶ್ಚಿಮ ಏಷ್ಯಾದಲ್ಲಿನ ಬಿಕ್ಕಟ್ಟಿನ ತೀವ್ರತೆ ತಗ್ಗಿದ್ದು ಕೂಡ ಹೂಡಿಕೆದಾರರ ವಿಶ್ವಾಸವನ್ನು ಹೆಚ್ಚಿಸಿತು. ಕಚ್ಚಾ ತೈಲದ ಬೆಲೆಯು ಇಳಿಕೆ ಕಂಡಿತು, ಪೂರೈಕೆಯಲ್ಲಿನ ಅನಿಶ್ಚಿತತೆಗಳು ತಗ್ಗಿದವು. ಇವೆಲ್ಲ ಭಾರತದ ಕಾರ್ಪೊರೇಟ್ ವಲಯಕ್ಕೆ ಕೂಡ ಪೂರಕ. ಜಾಗತಿಕ, ದೇಶಿ ರಿಸ್ಕ್‌ಗಳ ತೀವ್ರತೆಯು ಏಕಕಾಲದಲ್ಲಿ ಕಡಿಮೆ ಆಗಿದ್ದು ದೇಶದ ಷೇರುಪೇಟೆ ಹೂಡಿಕೆದಾರರ ವಿಶ್ವಾಸ ವೃದ್ಧಿಸಿತು.

ಮೊದಲ ತ್ರೈಮಾಸಿಕದಲ್ಲಿ ನಿಫ್ಟಿ–50 ಸೂಚ್ಯಂಕವು ಶೇಕಡ 8.5ರಷ್ಟು ಏರಿಕೆ ಕಂಡಿದೆ. ವಿವಿಧ ವಲಯಗಳ ಕಂಪನಿಗಳನ್ನು ಪ್ರತಿನಿಧಿಸುವ ವಿಸ್ತೃತ ಮಾರುಕಟ್ಟೆಯು ಇದೇ ಅವಧಿಯಲ್ಲಿ ಶೇ 10.7ರಷ್ಟು ಏರಿಕೆ ಕಂಡಿದೆ. ಹಿಂದಿನ ಹಣಕಾಸು ವರ್ಷದ ದ್ವಿತೀಯಾರ್ಧದಲ್ಲಿ ವಿಸ್ತೃತ ಮಾರುಕಟ್ಟೆಯು ಶೇ 12ರಷ್ಟು ಇಳಿಕೆ ಕಂಡಿತ್ತು. ಈಗ ಹೂಡಿಕೆದಾರರು ಮೊದಲ ತ್ರೈಮಾಸಿಕದಲ್ಲಿ ಕಂಪನಿಗಳ ಗಳಿಕೆ ಹೇಗಿತ್ತು ಎಂಬುದರ ಕಡೆ, ಅಮೆರಿಕದ ಜೊತೆಗಿನ ವ್ಯಾಪಾರ ಒಪ್ಪಂದದ ಕಡೆ ಗಮನ ಹರಿಸಿದ್ದಾರೆ.

2025–26ರಲ್ಲಿ ಕಂಪನಿಗಳ ಗಳಿಕೆ ಚೆನ್ನಾಗಿರಲಿದೆ ಎಂಬ ನಿರೀಕ್ಷೆಯು ದೇಶಿ ಮಾರುಕಟ್ಟೆಯಲ್ಲಿ ಬಲವಾಗಿದೆ. ಈ ವರ್ಷದಲ್ಲಿ ಭಾರತದ ಕಂಪನಿಗಳ ಇಪಿಎಸ್ (ಪ್ರತಿ ಷೇರಿನಿಂದ ಗಳಿಸುವ ಹಣ) ಪ್ರಮಾಣ ಶೇ 10–12ರಷ್ಟು ಹೆಚ್ಚಬಹುದು ಎಂಬ ನಿರೀಕ್ಷೆ ಇದೆ. ಆದರೆ ಮೊದಲ ತ್ರೈಮಾಸಿಕದಲ್ಲಿ ಇಪಿಎಸ್ ಹೆಚ್ಚಳವು ಶೇ 5–7ರಷ್ಟು ಮಾತ್ರ ಆಗಬಹುದು ಎಂಬ ಅಂದಾಜಿದೆ.

ರೆಪೊ ದರದಲ್ಲಿನ ಇಳಿಕೆ, ನಗದು ಹರಿವಿನ ಹೆಚ್ಚಳ, ದೇಶಿ ಮಾರುಕಟ್ಟೆಯಲ್ಲಿ ಚಟುವಟಿಕೆಗಳು ಚುರುಕು ಪಡೆದಿರುವುದು, ಹಣದುಬ್ಬರ ಪ್ರಮಾಣವು ಕಡಿಮೆ ಆಗುತ್ತಿರುವುದು, ಗ್ರಾಮೀಣ ಪ್ರದೇಶಗಳಲ್ಲಿ ಹಾಗೂ ನಗರ ಪ್ರದೇಶಗಳ ಮಾರುಕಟ್ಟೆಯಲ್ಲಿ ಬೇಡಿಕೆ ಹೆಚ್ಚಾಗುತ್ತಿರುವುದು ಬೆಳವಣಿಗೆಗೆ ಪೂರಕವಾಗಿ ಒದಗಿಬರುವ ಸಾಧ್ಯತೆ ಇದೆ. ಆದರೆ ಲಾರ್ಜ್ ಕ್ಯಾಪ್ ಕಂಪನಿಗಳ ವರಮಾನ ಗಳಿಕೆಯು ಅಷ್ಟೇನೂ ದೊಡ್ಡ ಪ್ರಮಾಣದಲ್ಲಿ ಇರಲಿಕ್ಕಿಲ್ಲ. ಮಿಡ್‌ಕ್ಯಾಪ್ ಮತ್ತು ಸ್ಮಾಲ್‌ಕ್ಯಾಪ್ ವಲಯದ ಕಂಪನಿಗಳ ವರಮಾನ ಏರಿಕೆಯು ಶೇ 10ರಷ್ಟು ಆಗಬಹುದು ಎಂಬ ಅಂದಾಜು ಇದೆ.

ಲೇಖಕ: ಜಿಯೋಜಿತ್ ಇನ್ವೆಸ್ಟ್‌ಮೆಂಟ್ಸ್ ಲಿಮಿಟೆಡ್‌ನ ಸಂಶೋಧನಾ ಮುಖ್ಯಸ್ಥ

ಈ ವಲಯಗಳ ಮೇಲೆ ಇರಲಿ ಗಮನ

• **ಐ.ಟಿ.:** ಮಾಹಿತಿ ತಂತ್ರಜ್ಞಾನ (ಐ.ಟಿ.) ವಲಯದ ಮುನ್ನೋಟವು ಮಂದವಾಗಿದೆ. ಅಮೆರಿಕದಲ್ಲಿ ಐ.ಟಿ. ಸೇವೆಗಳ ಮೇಲಿನ ವೆಚ್ಚವು ಕಡಿಮೆ ಇರುವುದು ಇದಕ್ಕೆ ಕಾರಣ. 2025–26ರಲ್ಲಿ ವರಮಾನದ ಏರಿಕೆಯು ಶೇ 5ಕ್ಕಿಂತ ಕಡಿಮೆ ಇರಬಹುದು ಎಂದು ಈ ವಲಯದ ದೊಡ್ಡ ಕಂಪನಿಗಳು ಅಂದಾಜಿಸಿವೆ. ಮಧ್ಯಮ ಗಾತ್ರದ ಐ.ಟಿ. ಕಂಪನಿಗಳು ಹೊಸ ತಂತ್ರಜ್ಞಾನವನ್ನು ಅಳವಡಿಸಿಕೊಂಡು, ವೆಚ್ಚಗಳಲ್ಲಿ ನಿಯಂತ್ರಣ ಸಾಧಿಸಿ, ಲಾಭದ ಪ್ರಮಾಣ ಜಾಸ್ತಿ ಮಾಡಿಕೊಂಡು, ತಮ್ಮ ವರಮಾನ ಏರಿಕೆಯು ಹೆಚ್ಚಿನ ಪ್ರಮಾಣದಲ್ಲಿ ಆಗಬಹುದು ಎಂಬ ನಿರೀಕ್ಷೆಯಲ್ಲಿವೆ.

ಆದರೆ ಐ.ಟಿ. ವಲಯದ ಪರಿಸ್ಥಿತಿಯು ನಿಧಾನವಾಗಿ ಆಕರ್ಷಕವಾಗುವ ನಿರೀಕ್ಷೆ ಇದೆ. ಈಚೆಗೆ ಅನುಮೋದನೆ ಪಡೆದಿರುವ ಅಮೆರಿಕದ ಹಣಕಾಸು ಮಸೂದೆಯು ಅಲ್ಲಿ ಐ.ಟಿ. ವೆಚ್ಚಗಳಿಗೆ ನೆರವಾಗುವ ಸಾಧ್ಯತೆ ಇದೆ. ಅಮೆರಿಕದ ಕೇಂದ್ರೀಯ ಬ್ಯಾಂಕ್ ಮುಂದಿನ ದಿನಗಳಲ್ಲಿ ಬಡ್ಡಿ ದರ ಇಳಿಸುವ ವಿಚಾರವಾಗಿ ಒಮ್ಮತವೊಂದಕ್ಕೆ ಬರುತ್ತಿರುವಂತಿದೆ. ಐ.ಟಿ. ವಲಯದ ಷೇರುಗಳ

ಬಗ್ಗೆ ಈಗ ಒಳ್ಳೆಯ ಮುನ್ನೋಟ ಇರದಿದ್ದರೂ, ಇವೆಲ್ಲದರ ಪರಿಣಾಮವಾಗಿ ಕಂಪನಿಗಳ ಫಲಿತಾಂಶವು ಗಟ್ಟಿಯಾಗಿ ಇರುವ ನಿರೀಕ್ಷೆ ಇದೆ. ಇದು ದೀರ್ಘಾವಧಿ ಹೂಡಿಕೆದಾರರಿಗೆ ಒಳ್ಳೆಯ ಸಂಗತಿ.

• **ಬ್ಯಾಂಕ್:** ಷೇರುಪೇಟೆಯ ಪ್ರಮುಖ ವಲಯ ಇದು. ಬ್ಯಾಂಕಿಂಗ್ ವಲಯದ ಮುನ್ನೋಟ ಸಕಾರಾತ್ಮಕವಾಗಿದೆ. ಬ್ಯಾಂಕುಗಳು ಸಾಲ ನೀಡಲು ಬೇಕಿರುವ ಹಣವನ್ನು ಒಗ್ಗೂಡಿಸುವ ವೆಚ್ಚವು ಕಡಿಮೆ ಆಗಿದೆ. ಇದಕ್ಕೆ ಪೂರಕವಾಗಿ ನಗದು ಮೀಸಲು ಅನುಪಾತ (ಸಿಆರ್‌ಆರ್) ತಗ್ಗಿಸಲಾಗಿದೆ. ವ್ಯವಸ್ಥೆಯಲ್ಲಿ ನಗದು ಹರಿವು ಹೆಚ್ಚಿದೆ. ಇವೆಲ್ಲವೂ ದೀರ್ಘಾವಧಿಯಲ್ಲಿ ಸಾಲ ನೀಡಿಕೆಯನ್ನು ಹೆಚ್ಚಿಸುವ ನಿರೀಕ್ಷೆ ಇದೆ. ಆದರೆ, ಈ ವಲಯದ ಷೇರುಮೌಲ್ಯದಲ್ಲಿ ಈಚೆಗೆ ಕಂಡ ಜಿಗಿತವು, ಷೇರುಗಳನ್ನು ತುಸು ದುಬಾರಿ ಆಗಿಸಿದೆ. ಸಾಲದ ಮೇಲಿನ ಬಡ್ಡಿ ಕಡಿಮೆ ಆಗಿರುವುದು ಕಾರ್ಯಾಚರಣೆ ವರಮಾನವನ್ನು ಅಲ್ಪಾವಧಿಯಲ್ಲಿ ಕಡಿಮೆ ಮಾಡುವ ಸಾಧ್ಯತೆ ಇದೆ.

• **ಮೂಲಸೌಕರ್ಯ:** 2025–26ರಲ್ಲಿ ಸರ್ಕಾರದ ಕಡೆಯಿಂದ ಬಂಡವಾಳ ವೆಚ್ಚಗಳು ಹೆಚ್ಚಾಗಿರುವುದರಿಂದ ಮೂಲಸೌಕರ್ಯ ವಲಯವು ಆಕರ್ಷಣೆ ಪಡೆದುಕೊಂಡಿದೆ. ಈ ವಲಯದ ಷೇರುಗಳ ಮೌಲ್ಯವು ಸರಾಸರಿ ಮೌಲ್ಯಕ್ಕಿಂತ ಈಗ ಕಡಿಮೆ ಮಟ್ಟದಲ್ಲಿವೆ.

• **ಗ್ರಾಹಕ ಬಳಕೆ:** ಹಣದುಬ್ಬರ ಪ್ರಮಾಣವು ಇಳಿಕೆ ಕಂಡಿರುವುದರಿಂದ ಜನರ ಕೈಯಲ್ಲಿ ಖರ್ಚು ಮಾಡಲು ಹೆಚ್ಚು ಹಣ ಉಳಿಯುತ್ತಿದೆ. ಅಲ್ಲದೆ, ಆದಾಯ ತೆರಿಗೆ ಮಿತಿ ಹೆಚ್ಚಳ ಹಾಗೂ ಬಡ್ಡಿ ದರ ಇಳಿಕೆಯು ಕೂಡ ಪೂರಕವಾಗಿ ಒದಗಿಬಂದಿದೆ. ಇದರ ಪರಿಣಾಮವಾಗಿ ಗ್ರಾಹಕ ಬಳಕೆ ಉತ್ಪನ್ನಗಳ ವಲಯವು ಈ ವರ್ಷದಲ್ಲಿ ಪುಟಿದೇಳುವ ನಿರೀಕ್ಷೆ ಇದೆ.

ದೇಶಿ ಮಾರುಕಟ್ಟೆಯನ್ನು ಕೇಂದ್ರೀಕರಿಸಿಕೊಂಡಿರುವ ಎಫ್‌ಎಂಸಿಜಿ ವಲಯ, ಆಟೊಮೊಬೈಲ್, ಗ್ರಾಹಕ ಬಳಕೆ ಉತ್ಪನ್ನಗಳಿಗೆ ಹಣಕಾಸಿನ ನೆರವು ಒದಗಿಸುವ ವಲಯವು 2025–26ರಲ್ಲಿ ಹೆಚ್ಚಿನ ಪ್ರಯೋಜನ ಪಡೆಯುವ ಸಾಧ್ಯತೆ ಇದೆ. ಕುಟುಂಬಗಳ ಮಟ್ಟದಲ್ಲಿ ಆಗುವ ವೆಚ್ಚ ಏರಿಕೆ ಹಾಗೂ ಸರ್ಕಾರವು ಮಾಡುವ ವೆಚ್ಚಗಳಲ್ಲಿನ ಏರಿಕೆಯು ಈ ವಲಯಗಳಿಗೆ ಪೂರಕವಾಗಿ ಒದಗಿಬರಲಿವೆ.

• **ಇಲ್ಲಿ ಅಸ್ಥಿರತೆ ಕಾಣಬಹುದು:** ರಫ್ತನ್ನು ಹೆಚ್ಚಾಗಿ ಅವಲಂಬಿಸಿರುವ ಐ.ಟಿ., ಫಾರ್ಮಾ, ಬಿಡಿಭಾಗಗಳು, ಲೋಹ ವಲಯಗಳಲ್ಲಿ ಅಲ್ಪಾವಧಿಯಲ್ಲಿ ಹೆಚ್ಚು ಅಸ್ಥಿರತೆ ಇರಬಹುದು. ಬಂಡವಾಳ ಸರಕುಗಳು, ಇಂಧನ, ರಕ್ಷಣೆ, ಸಿಮೆಂಟ್ ಮತ್ತು ಕೈಗಾರಿಕಾ ವಲಯದ ಷೇರುಗಳ ಮೌಲ್ಯವು ದುಬಾರಿ ಆಗಿದೆ. ಈ ವಲಯಗಳ ಷೇರುಗಳು ಈ ವರ್ಷದಲ್ಲಿ ಹೆಚ್ಚಿನ ಗಳಿಕೆ ತಂದುಕೊಡಲಿಕ್ಕಿಲ್ಲ.

ಡೈರೆಕ್ಟ್ ಹಾಗೂ ರೆಗ್ಯುಲರ್ ಫಂಡ್ ಲಾಭದ ವ್ಯತ್ಯಾಸ ಲೆಕ್ಕ ಮಾಡಿ

ಮಾಹಿತಿ ಕಣಜ

ಮ್ಯೂಚುವಲ್ ಫಂಡ್‌ಗಳಲ್ಲಿ ಇರುವ 'ಡೈರೆಕ್ಟ್' ಹಾಗೂ 'ರೆಗ್ಯುಲರ್' ಎಂಬ ಪದಗಳು ಆರಂಭಿಕ ಹಂತದ ಹೂಡಿಕೆದಾರರಲ್ಲಿ ಒಂದಿಷ್ಟು ಗೊಂದಲ ಮೂಡಿಸುವುದು ಸಹಜ. ಏಜೆಂಟ್ ಮೂಲಕ ಹೂಡಿಕೆ ಆರಂಭಿಸುವವರು ಸಾಮಾನ್ಯವಾಗಿ, ಗೊತ್ತಿದ್ದೋ ಗೊತ್ತಿಲ್ಲದೆಯೋ, 'ರೆಗ್ಯುಲರ್' ಫಂಡ್‌ಗಳಲ್ಲಿ ಹೂಡಿಕೆ ಮಾಡುವುದಿದೆ. ಆದರೆ ಮ್ಯೂಚುವಲ್ ಫಂಡ್‌ಗಳ ಬಗ್ಗೆ ಒಂದಿಷ್ಟು ಅರಿವು ಹೊಂದಿರುವವರು ತಮ್ಮ ಹೂಡಿಕೆಯನ್ನು 'ಡೈರೆಕ್ಟ್' ಫಂಡ್‌ಗಳಲ್ಲಿ ಮಾಡುತ್ತಾರೆ.

ರೆಗ್ಯುಲರ್ ಫಂಡ್‌ಗಳ ಮೂಲಕ ಮಾಡುವ ಹೂಡಿಕೆಗಳಿಗೆ ಪಾವತಿಸಬೇಕಿರುವ ವೆಚ್ಚ ತುಸು ಹೆಚ್ಚು. ಏಕೆಂದರೆ, ಹೂಡಿಕೆದಾರ ಹಾಗೂ ಆಸ್ತಿ ನಿರ್ವಹಣಾ ಕಂಪನಿಯ ನಡುವೆ ಸೇತುವೆಯಂತೆ ಕೆಲಸ ಮಾಡುವ ವ್ಯಕ್ತಿಗೆ ಒಂದಿಷ್ಟು ಕಮಿಷನ್ ಕೊಡ ಬೇಕಾದ್ದರಿಂದ ವೆಚ್ಚದಲ್ಲಿ ಸಹಜವಾಗಿಯೇ ಹೆಚ್ಚಳ ಆಗುತ್ತದೆ. ವೆಚ್ಚ ಹೆಚ್ಚಳದ ಪರಿಣಾಮವಾಗಿ ಹೂಡಿಕೆಯ ಮೇಲೆ ಸಿಗುವ ಲಾಭವೂ ತುಸು ಕಡಿಮೆ ಆಗುತ್ತದೆ. ಆದರೆ ಡೈರೆಕ್ಟ್ ಫಂಡ್‌ಗಳಲ್ಲಿ ವೆಚ್ಚವು ರೆಗ್ಯುಲರ್ ಫಂಡ್‌ಗಳಿಗಿಂತ ಕಡಿಮೆ, ಹಾಗೆಯೇ ಸಿಗುವ ಲಾಭದ ಪ್ರಮಾಣ ಕೂಡ ತುಸು ಜಾಸ್ತಿ ಇರುತ್ತದೆ.

ವಾಸ್ತವದಲ್ಲಿ, ವಿವಿಧ ಹೂಡಿಕೆ ಆ್ಯಪ್‌ಗಳು ಪ್ರವರ್ಧಮಾನಕ್ಕೆ ಬಂದ ನಂತರದಲ್ಲಿ ರೆಗ್ಯುಲರ್ ಫಂಡ್‌ಗಳಿಗಿಂತ ಡೈರೆಕ್ಟ್ ಫಂಡ್‌ಗಳು ಹೆಚ್ಚು ಲಾಭದಾಯಕ ಎಂಬುದು ಹಲವರಿಗೆ ಗೊತ್ತಾಗಿದೆ. ಆದರೆ ಡೈರೆಕ್ಟ್ ಫಂಡ್‌ಗಳು ವಾಸ್ತವದಲ್ಲಿ ಎಷ್ಟರಮಟ್ಟಿಗೆ ಹೆಚ್ಚು ಲಾಭವನ್ನು ತಂದುಕೊಡುತ್ತವೆ?

ಇದನ್ನು ಲೆಕ್ಕಹಾಕಲು ಹಲವು ಕ್ಯಾಲ್ಕುಲೇಟರ್‌ಗಳು ಲಭ್ಯವಿವೆ. ಮೊಬಿಕ್ವಿಕ್ ವೆಬ್‌ಸೈಟ್‌ನಲ್ಲಿ ಲಭ್ಯವಿರುವ ಕ್ಯಾಲ್ಕುಲೇಟರ್ ಪ್ರಕಾರ ವ್ಯಕ್ತಿಯೊಬ್ಬ ಆರಂಭಿಕ ಮೊತ್ತವಾಗಿ ₹1000 ತೊಡಗಿಸಿ, ಪ್ರತಿ ತಿಂಗಳು ₹1,000 ಮೊತ್ತವನ್ನು ಎಸ್‌ಐಪಿ ರೂಪದಲ್ಲಿ ಐದು ವರ್ಷ ಹೂಡಿಕೆ ಮಾಡಿದರೆ, ರೆಗ್ಯುಲರ್ ಫಂಡ್‌ನಲ್ಲಿ ಆತ ₹73 ಸಾವಿರ ಒಗ್ಗೂಡಿಸ ಬಲ್ಲ. ಅದೇ ಮೊತ್ತವನ್ನು ಆತ ಡೈರೆಕ್ಟ್ ಫಂಡ್‌ನಲ್ಲಿ ತೊಡಗಿಸಿದರೆ ₹74,880 ಒಗ್ಗೂಡಿಸಬಲ್ಲ. ಅಂದರೆ ಆತನಿಗೆ ₹1,882 ಹೆಚ್ಚು ಲಾಭ ಸಿಗುತ್ತದೆ.

ಡೈರೆಕ್ಟ್ ಫಂಡ್ ಹಾಗೂ ರೆಗ್ಯುಲರ್ ಫಂಡ್‌ನಲ್ಲಿನ ಹೂಡಿಕೆಗಳಲ್ಲಿ ಇರುವ ವ್ಯತ್ಯಾಸವನ್ನು ಪೇಟಿಎಂ ಮನಿ ವೆಬ್‌ಸೈಟ್ ಇನ್ನೊಂದು ಬಗೆಯಲ್ಲಿ ವಿವರಿಸಿದೆ. ಆಸಕ್ತರು ತಾವು ಯಾವ ಆಸ್ತಿ ನಿರ್ವಹಣಾ ಕಂಪನಿಯ ಯಾವ ಫಂಡ್‌ನ ಬಗ್ಗೆ ಮಾಹಿತಿ ಬಯಸುತ್ತಿದ್ದೇವೆ ಎಂಬುದನ್ನು ಆಯ್ಕೆ ಮಾಡಿಕೊಳ್ಳಬೇಕು. ಆಗ ಅಲ್ಲಿ ರೆಗ್ಯುಲರ್ ಹಾಗೂ ಡೈರೆಕ್ಟ್ ಫಂಡ್‌ಗಳಿಗೆ ನಿಗದಿ ಮಾಡಿರುವ ವೆಚ್ಚದ ವಿವರ, ಅವುಗಳ ನಡುವಿನ ವ್ಯತ್ಯಾಸ ಎಷ್ಟು ಎಂಬುದರ ಮಾಹಿತಿ ಸಿಗುತ್ತದೆ. ₹10 ಲಕ್ಷ ತೊಡಗಿಸಿದರೆ ಡೈರೆಕ್ಟ್ ಫಂಡ್‌ಗಳು ರೆಗ್ಯುಲರ್ ಫಂಡ್‌ಗಳಿಗಿಂತ ಎಷ್ಟು ಮೊತ್ತವನ್ನು ಹೆಚ್ಚು ತಂದುಕೊಡಬಲ್ಲವು ಎಂಬ ಮಾಹಿತಿಯೂ ಲಭ್ಯವಾಗುತ್ತದೆ.



ಹಿಂದೂಸ್ತಾನ್ ಏರೊನಾಟಿಕ್ಸ್ ಲಿಮಿಟೆಡ್

ಬ್ರೋಕರೇಜ್ ಮಾತು

ಸರ್ಕಾರಿ ಸ್ವಾಮ್ಯದ ಹಿಂದೂಸ್ತಾನ್ ಏರೊನಾಟಿಕ್ಸ್ ಲಿಮಿಟೆಡ್ (ಎಚ್‌ಎಎಲ್) ಕಂಪನಿಯ ಷೇರುಮೌಲ್ಯವು ₹5,650ಕ್ಕೆ ತಲುಪಬಹುದು ಎಂದು ಬ್ರೋಕರೇಜ್ ಸಂಸ್ಥೆ ಆನಂದ ರಾಠಿ ಅಂದಾಜು ಮಾಡಿದೆ.

ದೇಶದ ರಕ್ಷಣೆ ಮತ್ತು ವೈಮಾನಿಕ ವಲಯದಲ್ಲಿ ಎಚ್‌ಎಎಲ್ ದೊಡ್ಡ ಪಾಲು ಹೊಂದಿರುವ ಕಂಪನಿ. ಇದಕ್ಕೆ ದೇಶಿ ಮಾರುಕಟ್ಟೆಯಲ್ಲಿ ಸ್ಪರ್ಧೆ ಇಲ್ಲ. ಯುದ್ಧ ವಿಮಾನ, ಯುದ್ಧದಲ್ಲಿ ಬಳಸುವ ಹೆಲಿಕಾಪ್ಟರ್‌ಗಳ ತಯಾರಿಕೆಯಲ್ಲಿ ಇದು ಪ್ರಮುಖವಾಗಿ ತೊಡಗಿಸಿಕೊಂಡಿದೆ. ದೇಶದ ರಕ್ಷಣಾ ವೆಚ್ಚಗಳು ಹೆಚ್ಚುತ್ತಿರುವುದರ ದೊಡ್ಡ ಪ್ರಯೋಜನವು ಕಂಪನಿಗೆ ದೊರೆಯಲಿದೆ ಎಂದು ಆನಂದ ರಾಠಿ ಹೇಳಿದೆ.

ದೇಶಿ ಮಾರುಕಟ್ಟೆಯಲ್ಲಿ ಯುದ್ಧ ವಿಮಾನಗಳ ತಯಾರಿಕಾ ವಿಭಾಗದಲ್ಲಿ ಕಂಪನಿ ಹೊಂದಿರುವ ನಾಯಕತ್ವದ ಸ್ಥಾನ, ಸರ್ಕಾರದ ಬಲವಾದ ಬೆಂಬಲವು ಕಂಪನಿಗೆ ಗಮನಾರ್ಹ ಪ್ರಮಾಣದಲ್ಲಿ ಪ್ರಯೋಜನಕಾರಿಯಾಗಿದೆ ಎಂದು ಕೂಡ ಬ್ರೋಕರೇಜ್ ಸಂಸ್ಥೆಯು ಹೇಳಿದೆ.

ರಕ್ಷಣಾ ಉಪಕರಣಗಳನ್ನು ದೇಶದಲ್ಲಿಯೇ ತಯಾರಿಸುವುದು ಎಚ್‌ಎಎಲ್‌ನ ಆದ್ಯತೆಯ ಕೆಲಸಗಳಲ್ಲಿ ಒಂದಾಗಿದೆ. ವಿದೇಶಗಳ ಮೇಲಿನ ಅವಲಂಬನೆಯನ್ನು ತಗ್ಗಿಸುವುದು ಕಂಪನಿಯ ಪ್ರಮುಖ ಗುರಿಗಳಲ್ಲಿ ಒಂದು. ದೇಶದ ರಕ್ಷಣಾ ಪಡೆಗಳು ಕಂಪನಿಯ ಪ್ರಮುಖ ಗ್ರಾಹಕರು ಎಂದು ಜುಲೈ 14ರಂದು ಸಿದ್ಧಪಡಿಸಿರುವ ವರದಿಯಲ್ಲಿ ಆನಂದ ರಾಠಿ ಹೇಳಿದೆ. ಬುಧವಾರದ ಅಂತ್ಯಕ್ಕೆ ಎಚ್‌ಎಎಲ್ ಷೇರು ಮೌಲ್ಯವು ₹4,859.90 ಆಗಿತ್ತು.

(ಬ್ರೋಕರೇಜ್ ಕಂಪನಿಗಳು ನೀಡುವ ಮಾಹಿತಿ, ವಿವರಗಳಿಗೆ ಪತ್ರಿಕೆ ಹೊಣೆಯಲ್ಲ)

ಎಸ್ಸೆಸ್ಸೆಲ್ಸಿ ಪರೀಕ್ಷೆ ದಿಕ್ಸೂಚಿ

ದಿಕ್ಸೂಚಿ ನಿಮಗಿಷ್ಟ ಆಗಿದೆಯೇ?
ನಿಮ್ಮ ಅನಿಸಿಕೆಯನ್ನು ಇಲ್ಲಿ ದಾಖಲಿಸಿ

ಇಂಗ್ಲಿಷ್

ಎಸ್ಎಸ್ಎಲ್‌ಸಿ–ಪಿಯುಸಿ ಪರೀಕ್ಷೆ ದಿಕ್ಸೂಚಿ

Biology

ಪಿಯುಸಿ ಪರೀಕ್ಷೆ ದಿಕ್ಸೂಚಿ

ಎಸ್ಸೆಸ್ಸೆಲ್ಸಿ ಗಣಿತ ವಿಷಯದ ಇಂಗ್ಲಿಷ್ ಮಾಧ್ಯಮದ ಪ್ರಶ್ನೋತ್ತರಕ್ಕಾಗಿ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

ಮಾಹಿತಿ: ಜ್ಞಾನಭಾರತಿ ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ ಕೇಂದ್ರ

Second Language ENGLISH

Unit-2 PROSE

There's a Girl by the Tracks!

Task 3: Prepare a questionnaire.

Imagine you are a correspondent of English daily and you have to interview the following persons on the issue 'Safety measures taken with regard to traffic and the public response'.

1.Superintendent of police
2.Traffic Inspector and
3. Local MLA

Prepare a set of questions to interview each one of the above. One example is done for you.

Note: Only questions for the interview are given, not the reply.

Ans:-

2) Traffic Inspector:

1.The number of drivers jumping the signal is increasing. When an alert policeman tries to stop such rash driver before a mishap happens, they even tried to run over the policeman /inspector. How do you wish to tackle such drivers while saving your life?

2.Do you have suitable equipment to stop vehicles driving dangerously, before any mishap occurs and catch such traffic offenders immediately?

3.Do you have sufficient number of assistant inspectors and constables to assist you during peak hours?

4.It is your duty to stop a driver for a traffic offence and book him for it. While booking an offence you check for any other offence like carrying a valid license and registration papers. That's fine. But why do you spend your time in routinely checking vehicle papers, which is the job of RTO?

Sir / Madam on behalf of our media I'm highly thankful to you

3) Local MLA:

Good morning Sir / Madam. I'm Shekhar. I'm a reporter from English daily. Let me thank you for giving my media your appointment for interview from 9am to 9.45am today on the issue of 'Safety measures taken with regard to traffic and the public response'.

Let me begin with my first question.

1.More and more number of vehicles being added to city roads every day even in areas connected by Metro rail while width of the road remains small and unable to accommodate them safely. How do you wish to tackle this?

2.Why is the average speed of vehicles even on major trunk roads in eight directions of city is lowest in India? How do you propose to raise it to global standard?

3.Why are you allowing multi storey buildings and commercial establishments on roads having small width that too in spite of orders prohibiting such practice by Supreme Court of India?

4.Your government runs media campaign and put up bill boards to follow traffic lanes. To follow discipline of lane traffic we need minimum three lanes-left, straight and right. Very few major trunk roads have such three lanes. But unfortunately ill planning of metro rail has taken away one lane below their stations. How do you wish to correct it? How soon do you wish ensure three lanes on all roads?

5.Corner sites obstruct view of driver and slow traffic at junctions. Also since such sites have shops on them, leads to illegal parking which slows traffic. Can you legislate to remove corner sites as in the developed countries?

6. Do wish to increase the quantum of punishment and penalties for traffic offences to make them effective as deterrence?

Sir / Madam on behalf of our media I'm highly thankful to you.

Learn grammar through communication

Task 1: Read the following paragraph and carefully observe the words underlined. One word is struck off. Consult your teacher or a grammar book and know the reason.

Everybody ~~know~~ / knows slow and steady ~~win~~ / wins the race'. Somebody ~~try~~ / tries to move slowly but some people want / ~~wants~~ to move at a faster pace. One of the students in my class is / ~~are~~ Jairaj. He is very industrious and energetic. He feels that in India everybody ~~want~~ / wants to get success, but a few work / ~~works~~ diligently. They opine / ~~opines~~ that "Time and tide ~~wait~~ / waits for none. So everybody ~~need~~ / needs to work round the clock to make India stronger and better.

Task 2: Choose the correct verb out of the two given in brackets:

1. Neither he nor you ---------- wrong. (Is /are)
2. His father and uncle --------- their own business. (Has/ have)
3. The first innings -------- very interesting. (Was/were)
4. Either Amrutha or her friends --------taken it. (Has / have)
5. Every one of the boys --------------- sitting silent in the hall. (Was/were)

(Contd……)

REPRODUCTION

REPRODUCTIVE HEALTH

Answer the following

1) Give a brief note on the sexually transmitted diseases.

Ans:- (………Contd)

Patients may become irritable and develop hallucinations. Motor areas of the cerebrum may be extensively damaged and hence the patient may be unable to control urine and bowel movements. The patients may develop liver and heart diseases also.

AIDS - Acquired immune deficiency syndrome, is caused by Human immuno deficiency virus (HIV). The virus enters the body through blood, semen and vaginal fluids. It destroys the antibody producing T – lymphocytes and cripples the immune system.

The following are the effects caused by this disease:- The victims are eventually killed by various diseases like - Chronic pneumonia, diarrhoea, infections which block the throat, lungs and intestine, cancer of skin and bone, swelling in the brain, destruction of brain tissue leading to loss of memory and personality changes.

Treatment for AIDS – there is no cure for AIDS, hence prevention is better than cure. Therefore awareness camps to educate people regarding the dangers of AIDS must be undertaken on a large scale by every organisation. Treatment for Gonorrhoea and Syphilis – Pencillin is the most effective drug and erythromycin, tetracycline, spiramycin etc., are other drugs.

2) Write a note on Trichomoniasis.

Ans:- Trichomoniasis – it is a sexually transmitted disease caused by tetraflagellate protozoan called *Trichomonas vaginalis.*

In females it causes foul smelling vaginitis with yellowish discharge, vulvar erythema and burning dysuria.

In males, the pathogen produces urethritis, epididymitis, prostatitis and burning dysuria.

Metronidazole is effective medicine.

3) Write a note on Chlamydia.

Ans:- Chlamydia - It is a sexually transmitted bacterial infection which also causes trachoma.

The pathogen is Chlamydia trachomatis. It is obligate intracellular parasite which passes through two stages, reticular body (for growth) and elementary body (for multiplication). The infection causes urethritis, epididymitis (with tenderness and pain), yellow mucous and pus, cervicitis, proctitis (rectal pain) and development of granulomatous masses (lymphogranuloma venereum).

Tetracycline, erythromycin, deoxycycline and azithromycin are useful drugs

4) Write a note on Genital Warts.

Ans:- Genital Warts - It is a sexually transmitted disease caused by *Human Papilloma Virus* (HPV). It produces warts over the skin, external genitalia and perianal area. They may aggregate. In women the warts may enter vagina and cervix. Podofilax (Podophyllum preparation), imiquimod and surgical removal of warts (through cauterization or cryosurgery) constitute the treatment.

5) Write a note on Genital Herpes.

Ans:- Genital Herpes - It is a sexually transmitted disease caused by Herpes Simplex virus. They cause vesiculopustular lesions and then clusters of reddish ulcers over external genitalia and perianal areas, swelling of inguinal lymph nodes, pain, vaginal and urethral discharges, dysuria, headache and malaise. Medicines are acyclovir, velacyclovir or famciclovir.

6) Write a note on Chancroid.

Ans:- Chancroid - it is a sexually transmitted infection that causes painful bleeding ulcers over the extrenal genitalia accompanied by swelling of nearby lymph nodes.

The disease is caused by bacterium Haemophilus ducreyi.

Drugs used in treatment are erythromycin, ciprofloxacin and ceftriaxone.

7) Mention some of the differences between Vasectomy and Tubectomy.

Ans:-

Sl. No	*Vasectomy*	*Tubectomy*
1.	It is a surgical sterilization technique for the males.	It is a surgical sterilization technique for the females.
2.	The two vasa deferentia are interrupted by giving cuts.	The two oviducts are interrupted by either ligation or cuts.
3.	Passage of sperms is prevented.	Passage of ova is prevented.

Fill in the blanks:-

1. India is the first country to introduce ……… health care as a social goal in ………
Ans:- Reproductive, 1951

2. RCH was launched in India in ………….
Ans:- 1997

3. Sex determination in amniocentesis is carried out through observation of …………. chromosomes.
Ans:- Sex

4. Couple protection is presently ………… in India.
Ans:- 55%

5. Immediately after parturition, women experience …………… amoenorrhoea.
Ans:- lactational

6. LNG - 20 is ……… releasing IUD.
Ans:- harmone

Write short notes on:-

1] Infertility in Males.

Ans:- Infertility in Males - Semen of a fertile male is 3 - 4 ml per ejaculation with a sperm *(Contd..)*

ಮುಜರಾಯಿ ಸುಪರ್ದಿಗೆ ಗಾಳಿ ಆಂಜನೇಯ ದೇಗುಲ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದ ಪ್ರಸಿದ್ಧ ಗಾಳಿ ಆಂಜನೇಯ ಸ್ವಾಮಿ ದೇವಾಲಯವನ್ನು ಮುಜರಾಯಿ ಇಲಾಖೆ ಸುಪರ್ದಿಗೆ ಒಪ್ಪಿಸಿರುವ ರಾಜ್ಯ ಸರ್ಕಾರದ ಕ್ರಮಕ್ಕೆ ತಡೆ ನೀಡಲು ಹೈಕೋರ್ಟ್ ನಿರಾಕರಿಸಿದೆ.

ಈ ಸಂಬಂಧ ‘ಶ್ರೀ ಗಾಳಿ ಆಂಜನೇಯ ಸ್ವಾಮಿ ದೇವಾಲಯ ಟ್ರಸ್ಟ್’ನ ಟ್ರಸ್ಟಿ ಮತ್ತು ಸಂಚಾಲಕರೂ ಆದ ಬಿ.ಪಿ.ನಾಗರಾಜು ಅಲಿಯಾಸ್ ಅಶೋಕ್ ಮತ್ತಿತರರು ಸಲ್ಲಿಸಿರುವ ರಿಟ್ ಅರ್ಜಿ ವಿಚಾರಣೆ ಆಲಿಸಿ ಕಾಯ್ದಿರಿಸಿದ್ದ ಮಧ್ಯಂತರ ಆದೇಶವನ್ನು ನ್ಯಾಯಮೂರ್ತಿ ಎಸ್.ಸುನಿಲ್ ದತ್ ಯಾದವ್ ಅವರಿದ್ದ ಏಕಸದಸ್ಯ ನ್ಯಾಯಪೀಠ ಬುಧವಾರ ಪ್ರಕಟಿಸಿತು.

‘ದೇಗುಲದಲ್ಲಿನ ಹುಂಡಿ ಹಣ ಎಣಿಕೆ ಮಾಡುವಾಗ ಹಣ ಕದ್ದಿರುವ ಬಗ್ಗೆ ವಿಡಿಯೊ ದಾಖಲೆಗಳಿವೆ. ಈ ದಾಖಲೆಗಳನ್ನು ಪರಿಶೀಲಿಸಿದಾಗ ಆಡಳಿತ ಮಂಡಳಿ ಹಣದ ವ್ಯವಹಾರಗಳಲ್ಲಿ ನಡೆಸಿರುವ ಹೇರಾಫೇರಿ ಮೇಲ್ನೋಟಕ್ಕೇ ಮನದಟ್ಟಾಗುತ್ತದೆ. ದೇಗುಲದ ಅವ್ಯವಹಾರಗಳ ಬಗ್ಗೆ ಜಿಲ್ಲಾಧಿಕಾರಿ ವಿಚಾರಣೆ ನಡೆಸಿ ಸರ್ಕಾರಕ್ಕೆ ವರದಿ ಸಲ್ಲಿಸಿದ್ದಾರೆ. ಈ ವರದಿಯಲ್ಲಿ ಅವ್ಯವಹಾರ ನಡೆದಿದೆ ಎಂದು ತಿಳಿಸಲಾಗಿದೆ. ಅಂತೆಯೇ, ಟ್ರಸ್ಟ್ ಸದಸ್ಯರ ಮಧ್ಯೆ ಸಿವಿಲ್ ವ್ಯಾಜ್ಯ ಇದೆ ಎಂಬುದನ್ನೂ ಜಿಲ್ಲಾಧಿಕಾರಿ ವರದಿಯಲ್ಲಿ ಉಲ್ಲೇಖಿಸಲಾಗಿದೆ. ಹೀಗಾಗಿ, ಈ ಎಲ್ಲಾ ಅಂಶಗಳ ಆಧಾರದಲ್ಲಿ ಸರ್ಕಾರದ ಆದೇಶಕ್ಕೆ ತಡೆ ನೀಡಲು ಆಗದು’ ಎಂದು ನ್ಯಾಯಪೀಠ ಅಭಿಪ್ರಾಯಪಟ್ಟಿದೆ.

ಪ್ರಕರಣವೇನು?: ‘ಗಾಳಿ ಆಂಜನೇಯ ಸ್ವಾಮಿ ದೇವಾಲಯದ ಆಡಳಿತ ಮಂಡಳಿಯ ಪದಾಧಿಕಾರಿಗಳಲ್ಲಿ ಹೊಂದಾಣಿಕೆ ಇಲ್ಲ. ದೇವಾಲಯಕ್ಕೆ ಲಕ್ಷಾಂತರ ರೂಪಾಯಿ ಆದಾಯ ಬರುತ್ತಿದ್ದರೂ ಪ್ರತಿ ವರ್ಷ ಉಳಿತಾಯವಿಲ್ಲದೇ ವೆಚ್ಚ ಮಾಡಲಾಗುತ್ತಿದೆ. ದೇವಸ್ಥಾನದ ಹಣ ದುರುಪಯೋಗವಾಗುತ್ತಿದೆ. ಆದಾಯ ಹಾಗೂ ವೆಚ್ಚಕ್ಕೆ ಸಂಬಂಧಿಸಿದಂತೆ ಕಳೆದ 25 ವರ್ಷಗಳಿಂದ ಯಾವುದೇ ದಾಖಲೆ ಇಡದೆ, ಸಹಾಯಕ ಆಯುಕ್ತರು ಮತ್ತು ಮುಜರಾಯಿ ಇಲಾಖೆ ನೋಟಿಸ್ ನೀಡಿದ ಬಳಿಕ ದಾಖಲೆ ಸೃಷ್ಟಿಸಿರುವುದು ಕಂಡು ಬಂದಿದೆ’ ಎಂಬ ಅಭಿಪ್ರಾಯದೊಂದಿಗೆ ಮುಜರಾಯಿ ಇಲಾಖೆ, ದೇವಾಲಯವನ್ನು ತನ್ನ ಸುಪರ್ದಿಗೆ ಪಡೆದಿದೆ. ಅರ್ಜಿದಾರರು ಸರ್ಕಾರದ ಈ ಆದೇಶವನ್ನು ಪ್ರಶ್ನಿಸಿ ಹೈಕೋರ್ಟ್ ಮೆಟ್ಟಿಲೇರಿದ್ದಾರೆ.

ಅಂಗವಿಕಲರಿಗೆ ಪಾದಚಾರಿ ಮಾರ್ಗ: ನೋಟಿಸ್

ಬೆಂಗಳೂರು: ‘ಅಂಗವಿಕಲರು, ಹಿರಿಯ ನಾಗರಿಕರಿಗೆ ತಡೆರಹಿತ ಹಾಗೂ ಸುರಕ್ಷಿತ ಸಂಚಾರಕ್ಕೆ ಅವಕಾಶ ಕಲ್ಪಿಸುವ ಪಾದಚಾರಿ ಮಾರ್ಗಗಳ ಮೂಲ ಸೌಕರ್ಯ ಅಭಿವೃದ್ಧಿಪಡಿಸುವ ನಿಟ್ಟಿನಲ್ಲಿ ನಗರ ಸಾರಿಗೆ ಸಚಿವಾಲಯ ಹೊರಡಿಸಿರುವ ಮಾರ್ಗಸೂಚಿಗಳನ್ನು ಕಟ್ಟುನಿಟ್ಟಾಗಿ ಪಾಲಿಸುವಂತೆ ಸರ್ಕಾರಕ್ಕೆ ನಿರ್ದೇಶಿಸಬೇಕು’ ಎಂದು ಕೋರಲಾದ ಅರ್ಜಿಗೆ ಸಂಬಂಧಿಸಿದಂತೆ ರಾಜ್ಯ ಸರ್ಕಾರಕ್ಕೆ ನೋಟಿಸ್ ಜಾರಿಗೊಳಿಸಲು ಹೈಕೋರ್ಟ್ ಆದೇಶಿಸಿದೆ.

ಈ ಸಂಬಂಧ ಮೈಕೊ ಲೇ ಔಟ್ ನಿವಾಸಿ ದೇವರಾಯ ಸಮುದ್ರಂ ವೆಂಕಟೇಶ ವಿಜಯಕುಮಾರ್ ಸಲ್ಲಿಸಿರುವ ಸಾರ್ವಜನಿಕ ಹಿತಾಸಕ್ತಿ ಅರ್ಜಿಯನ್ನು ಹಂಗಾಮಿ ಮುಖ್ಯ ನ್ಯಾಯಮೂರ್ತಿ ವಿ.ಕಾಮೇಶ್ವರ ರಾವ್ ನೇತೃತ್ವದ ವಿಭಾಗೀಯ ನ್ಯಾಯಪೀಠ ಬುಧವಾರ ವಿಚಾರಣೆ ನಡೆಸಿತು.

ಪ್ರತಿವಾದಿಗಳಾದ ನಗರಾಭಿವೃದ್ಧಿ ಇಲಾಖೆಯ ಪ್ರಧಾನ ಕಾರ್ಯದರ್ಶಿ, ನಗರ ಭೂ ಸಾರಿಗೆ ನಿರ್ದೇಶನಾಲಯದ ಆಯುಕ್ತರು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ (ಬಿಬಿಎಂಪಿ) ಮುಖ್ಯ ಆಯುಕ್ತರು, ಅಂಗವಿಕಲ ವ್ಯಕ್ತಿಗಳ ಹಕ್ಕುಗಳ ಅಧಿನಿಯಮದ ಆಯೋಗದ ರಾಜ್ಯ ಆಯುಕ್ತರಿಗೆ ನೋಟಿಸ್ ಜಾರಿಗೊಳಿಸಲು ಆದೇಶಿಸಿದ ನ್ಯಾಯಪೀಠ, ಆಕ್ಷೇಪಣೆ ಸಲ್ಲಿಸುವಂತೆ ನಿರ್ದೇಶಿಸಿ ವಿಚಾರಣೆಯನ್ನು ಸೆಪ್ಟೆಂಬರ್ 24ಕ್ಕೆ ಮುಂದೂಡಿತು.

ಅರ್ಜಿಯಲ್ಲಿ ಏನಿದೆ?: ‘ನಗರ ಭೂ ಸಾರಿಗೆ ನಿರ್ದೇಶಕರು 2014ರಲ್ಲಿ ಹೊರಡಿಸಿರುವ ಪಾದಚಾರಿ ಮೂಲಸೌಕರ್ಯ ಯೋಜನೆ, ಅನುಷ್ಠಾನ ಹಾಗೂ 2016ರಲ್ಲಿ ಹೊರಡಿಸಲಾದ ಪರಿಷ್ಕೃತ ಮಾರ್ಗಸೂಚಿಗಳನ್ನು ಅನುಷ್ಠಾನಕ್ಕೆ ತರಲು ನಿರ್ದೇಶಿಸಬೇಕು. ಅಂಗವಿಕಲರು ಮತ್ತು ಹಿರಿಯ ನಾಗರಿಕರಿಗೆ ಅಡಚಣೆ ರಹಿತ, ಸುರಕ್ಷಿತ ಪಾದಚಾರಿ ಮಾರ್ಗ, ರಸ್ತೆ-ಸಾರಿಗೆ ಸೌಲಭ್ಯಗಳನ್ನು ಆದ್ಯತೆಯ ಮೇರೆಗೆ ಒದಗಿಸುವ ನಿಟ್ಟಿನಲ್ಲಿ ನ್ಯಾಯಾಲಯ ನೀಡುವ ಆದೇಶಗಳನ್ನು ಜಾರಿಗೊಳಿಸಲು ವಿಶೇಷಾಧಿಕಾರ ಹೊಂದಿದ ಸಮಿತಿಯೊಂದನ್ನು ರಚಿಸಬೇಕು. ಅಂಗವಿಕಲ ಸ್ನೇಹಿ ಮೂಲಸೌಕರ್ಯಗಳನ್ನು ಒದಗಿಸಿ ಅವುಗಳ ನಿರ್ವಹಣೆಗೆ ವಾರ್ಡ್ ಮಟ್ಟದಿಂದ ಪಾಲಿಕೆ ಆಯುಕ್ತರ ಮಟ್ಟದವರಿಗೆ ಸೂಕ್ತ ಆಡಳಿತ ವ್ಯವಸ್ಥೆ ರೂಪಿಸುವಂತೆ ರಾಜ್ಯ ಸರ್ಕಾರ ಹಾಗೂ ಬಿಬಿಎಂಪಿಗೆ ನಿರ್ದೇಶಿಸಬೇಕು’ ಎಂದು ಅರ್ಜಿಯಲ್ಲಿ ಕೋರಲಾಗಿದೆ.

‘ರಾಜ್ಯದ ನ್ಯಾಯಮೂರ್ತಿಗಳ ವರ್ಗಾವಣೆ ಸಲ್ಲ’

‘ರಾಜ್ಯ ಹೈಕೋರ್ಟ್‌ನ ಸ್ಥಳೀಯ ನ್ಯಾಯಮೂರ್ತಿಗಳನ್ನು ಅನ್ಯ ರಾಜ್ಯಗಳಿಗೆ ವರ್ಗಾವಣೆ ಮಾಡುವ ಪದ್ಧತಿ ಒಳ್ಳೆಯ ಬೆಳವಣಿಗೆ ಅಲ್ಲ’ ಎಂದು ‘ಬೆಂಗಳೂರು ವಕೀಲರ ಸಂಘ’ (ಎಎಬಿ) ಆತಂಕ ವ್ಯಕ್ತಪಡಿಸಿದೆ.

ಈ ಸಂಬಂಧ ಸಂಘದ ಅಧ್ಯಕ್ಷ ವಿವೇಕ ರೆಡ್ಡಿ, ಉಪಾಧ್ಯಕ್ಷ ಸಿ.ಎಸ್.ಗಿರೀಶ್, ಪ್ರಧಾನ ಕಾರ್ಯದರ್ಶಿ ಎಚ್.ವಿ.ಪ್ರವೀಣ್ ಗೌಡ ಮತ್ತು ಖಜಾಂಚಿ ಶ್ವೇತಾ ರವಿಶಂಕರ್ ಸಹಿ ಮಾಡಿರುವ ಹೇಳಿಕೆಯನ್ನು ಮಾಧ್ಯಮಗಳಿಗೆ ಬಿಡುಗಡೆ ಮಾಡಲಾಗಿದೆ.

‘ಅನ್ಯ ರಾಜ್ಯದ ನ್ಯಾಯಮೂರ್ತಿಗಳನ್ನು ನಾವು ಸ್ವಾಗತಿಸುತ್ತೇವೆ ನಿಜ. ಆದರೆ, ಸ್ಥಳೀಯ ನ್ಯಾಯಮೂರ್ತಿಗಳು ಪ್ರಕರಣಗಳನ್ನು ಸುಲಭವಾಗಿ ಮತ್ತು ಶೀಘ್ರವಾಗಿ ಅರ್ಥೈಸಿಕೊಂಡು ಸೂಕ್ತ ನ್ಯಾಯ ಒದಗಿಸಲು ಅನುಕೂಲವಾಗುತ್ತದೆ ಎಂಬುದನ್ನು ಗಂಭೀರವಾಗಿ ಪರಿಗಣಿಸಬೇಕು. ಸಂಘವು ಈಗಾಗಲೇ ಇಂತಹ ವರ್ಗಾವಣೆ ನೀತಿಗೆ ವಿರುದ್ಧವಾಗಿದೆ ಎಂಬುದನ್ನು ಈಗ ಮತ್ತೊಮ್ಮೆ ಗಮನಕ್ಕೆ ತರಲಾಗುತ್ತಿದೆ’ ಎಂದು ಪ್ರಕಟಣೆಯಲ್ಲಿ ವಿವರಿಸಲಾಗಿದೆ.

‘ಪ್ರಕರಣಗಳ ಸಂಖ್ಯೆ ಏರುಗತಿಯಲ್ಲಿರುವ ಇಂದಿನ ದಿನಗಳಲ್ಲಿ ಅನ್ಯ ರಾಜ್ಯದ ನ್ಯಾಯಮೂರ್ತಿಗಳಿಗೆ ಸ್ಥಳೀಯ ಭಾಷೆಯ ತೊಡಕುಂಟಾಗುತ್ತದೆ. ಸರ್ಕಾರದ ಅಧಿಸೂಚನೆ, ಸುತ್ತೋಲೆ, ಆದೇಶಗಳನ್ನು ಕನ್ನಡದಿಂದ ಇಂಗ್ಲಿಷ್‌ಗೆ ತರ್ಜುಮೆ ಮಾಡುವ ಪ್ರಕ್ರಿಯೆಗೆ ಹೆಚ್ಚಿನ ಸಮಯ ತಗಲುತ್ತದೆ. ಅಂತೆಯೇ, ಇದು ಕಕ್ಷಿದಾರರ ಮೇಲೆ ಆರ್ಥಿಕ ಹೊರೆಯನ್ನು ಹೇರುತ್ತದೆ’ ಎಂದು ಕಳವಳ ವ್ಯಕ್ತಪಡಿಸಲಾಗಿದೆ.

ಸುಗಮ ಸಂಗೀತ ಪರಿಷತ್ತಿನ ಪ್ರಶಸ್ತಿ ಪ್ರಕಟ

ಪ್ರಜಾವಾಣಿ ವಾರ್ತೆ

ರತ್ನಮಾಲಾ ಪ್ರಕಾಶ್

ಸುರೇಖಾ

ದಾಮೋದರ ಶೆಟ್ಟಿ



ಬಿ.ಆರ್. ಲಕ್ಷ್ಮಣರಾವ್

ಬೆಂಗಳೂರು: ಕರ್ನಾಟಕ ಸುಗಮ ಸಂಗೀತ ಪರಿಷತ್ತಿನ 2023 ಹಾಗೂ 2024ನೇ ಸಾಲಿನ ‘ಕಾವ್ಯಶ್ರೀ’ ಮತ್ತು ‘ಭಾವ ಶ್ರೀ’ ಪ್ರಶಸ್ತಿಗಳನ್ನು ಪ್ರಕಟಿಸಲಾಗಿದೆ.

ಬುಧವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಪರಿಷತ್ತಿನ ಅಧ್ಯಕ್ಷ ವೈ.ಕೆ.ಮುದ್ದುಕೃಷ್ಣ, ‘2023ನೇ ಸಾಲಿನ ‘ಕಾವ್ಯಶ್ರೀ’ ಪ್ರಶಸ್ತಿಗೆ ಕವಿ ಬಿ.ಆರ್. ಲಕ್ಷ್ಮಣರಾವ್ ಮತ್ತು ‘ಭಾವ ಶ್ರೀ’ ಪ್ರಶಸ್ತಿಗೆ ಗಾಯಕಿ ರತ್ನಮಾಲಾ ಪ್ರಕಾಶ್ ಆಯ್ಕೆಯಾಗಿದ್ದಾರೆ. 2024ನೇ ಸಾಲಿನ ‘ಕಾವ್ಯಶ್ರೀ’ ಪ್ರಶಸ್ತಿಗೆ ಸಾಹಿತಿ ನಾ. ದಾಮೋದರ ಶೆಟ್ಟಿ ಮತ್ತು ‘ಭಾವ ಶ್ರೀ’ ಪ್ರಶಸ್ತಿಗೆ ಗಾಯಕಿ ಕೆ.ಎಸ್. ಸುರೇಖಾ ಅವರು ಆಯ್ಕೆಯಾಗಿದ್ದಾರೆ.

ಪ್ರಶಸ್ತಿಯು ತಲಾ ₹10 ಸಾವಿರ ನಗದು, ಪ್ರಶಸ್ತಿ ಪತ್ರ ಹಾಗೂ ಫಲಕವನ್ನು ಒಳಗೊಂಡಿದೆ’ ಎಂದು ಮಾಹಿತಿ ನೀಡಿದರು.

ಆಗಸ್ಟ್ 2 ಮತ್ತು 3ರಂದು ಮೈಸೂರಿನಲ್ಲಿ ನಡೆಯಲಿರುವ ರಾಜ್ಯಮಟ್ಟದ 19ನೇ ಸುಗಮ ಸಂಗೀತ ಸಮ್ಮೇಳನದಲ್ಲಿ ಪ್ರಶಸ್ತಿ ಪ್ರದಾನ ಮಾಡಲಾಗುತ್ತದೆ ಎಂದು ತಿಳಿಸಿದರು.

ಪ್ರಾಡಾಗೆ ಲಿಡ್ಕರ್ ನೋಟಿಸ್ ಜಾರಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೊಲ್ಹಾಪುರಿ ಚಪ್ಪಲಿ ಮಾರಾಟ ವಂಚನೆ ಸಂಬಂಧ ಲಿಡ್ಕರ್ ಸಂಸ್ಥೆಯು ಇಟಲಿ ಮೂಲದ ಪ್ರಾಡಾ ಕಂಪನಿ ಮತ್ತು ಪ್ರಾಡಾ ಜತೆ ಒಪ್ಪಂದ ಮಾಡಿಕೊಳ್ಳಲು ಮುಂದಾಗಿರುವ ಮಹಾರಾಷ್ಟ್ರ ಚೇಂಬರ್ ಆಫ್ ಕಾಮರ್ಸ್, ಇಂಡಸ್ಟ್ರಿ, ಅಗ್ರಿಕಲ್ಚರ್ ಸಂಸ್ಥೆಗೂ ಲೀಗಲ್ ನೋಟಿಸ್ ಜಾರಿ ಮಾಡಲಾಗಿದೆ ಎಂದು ಲಿಡ್ಕರ್ ವ್ಯವಸ್ಥಾಪಕ ನಿರ್ದೇಶಕಿ ವಸುಂಧರಾ ಕೆ.ಎಂ. ತಿಳಿಸಿದ್ದಾರೆ.

ಪ್ರಾಡಾ ಕಂಪನಿಯಿಂದ ಕೊಲ್ಹಾಪುರಿ ಚಪ್ಪಲಿ ಮಾರಾಟ ವಂಚನೆ ಸಂಬಂಧ ಖಾಸಗಿಯಾಗಿ ಸಲ್ಲಿಕೆಯಾಗಿದ್ದ ಅರ್ಜಿಯನ್ನು ಬಾಂಬೆ ಹೈಕೋರ್ಟ್ ಸಕಾರಣ ನೀಡಿ ವಜಾ ಮಾಡಿದೆ ಎಂದು ಪ್ರಕಟಣೆಯಲ್ಲಿ ತಿಳಿಸಿದ್ದಾರೆ. ಕರ್ನಾಟಕದ ಲಿಡ್ಕರ್‌ನ ಜಂಟಿ ಸಹಯೋಗದಲ್ಲಿ ಜಿಐ ಟ್ಯಾಗ್ ಹೊಂದಿರುವ ಮಹಾರಾಷ್ಟ್ರದ ಲಿಡ್‌ಕಾಮ್ ಜತೆ ವರ್ಚುವಲ್ ಸಭೆ ಮಾಡಿ, ಹಲವು ಪತ್ರ ವ್ಯವಹಾರ ನಡೆಸಲಾಗಿದೆ. ಎರಡೂ ಸಂಸ್ಥೆಗಳು ಜತೆಯಾಗಿ ಕಾನೂನು ಹೋರಾಟ ನಡೆಸಲು ನಿರ್ಧರಿಸಲಾಗಿದೆ ಎಂದು ಹೇಳಿದ್ದಾರೆ.

ನಗರದ ಎಲ್ಲ ಪ್ಯಾರಡೈಸ್ ಮಳಿಗೆಗಳಲ್ಲಿ ‘ಪ್ಯಾರಡೈಸ್ ಕಬಾಬ್ ಹಬ್ಬ’ ಆರಂಭವಾಗಿದ್ದು, ಜೆ.ಪಿ.ನಗರದ ಪ್ಯಾರಡೈಸ್ ಫುಡ್ ಕೋರ್ಟ್‌ನಲ್ಲಿ ಬುಧವಾರ ಹಬ್ಬಕ್ಕೆ ಚಾಲನೆ ನೀಡಲಾಯಿತು. ಪ್ಯಾರಡೈಸ್ ಫುಡ್ ಕೋರ್ಟ್ ಪ್ರೈವೆಟ್ ಲಿಮಿಟೆಡ್‌ನ ಸಿಇಒ ರಾಬಿಂದರ್ ಸಿಂಗ್, ಉಪಾಧ್ಯಕ್ಷ ಸ್ವತಂತ್ರ ಗೌತಮ್ ಮತ್ತು ಪಾಕ ತಜ್ಞರು ಉಪಸ್ಥಿತರಿದ್ದರು

ಶಾಸಕರ ಅಸಮಾಧಾನ- 22 ಸಚಿವರ ಜೊತೆ ಸುರ್ಜೇವಾಲಾ ಚರ್ಚೆ

ಸಿಎಂ, ಡಿಸಿಎಂಗೆ ‘ಉಸ್ತುವಾರಿ’ ವರದಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದಲ್ಲಿ ಮೂರು ದಿನ ಠಿಕಾಣಿ ಹೂಡಿದ್ದ ರಾಜ್ಯ ಕಾಂಗ್ರೆಸ್ ಉಸ್ತುವಾರಿ ರಣದೀಪ್ ಸಿಂಗ್ ಸುರ್ಜೇವಾಲಾ ಅವರು ಶಾಸಕರು ವ್ಯಕ್ತಪಡಿಸಿದ್ದ ಅಸಮಾಧಾನ, ದೂರು, ಆರೋಪಗಳನ್ನು 22 ಸಚಿವರ ಮುಂದಿಟ್ಟು ಚರ್ಚೆ ನಡೆಸಿದ್ದಾರೆ. ಶಾಸಕರ ಬೇಡಿಕೆಗಳಿಗೆ ಸಕಾರಾತ್ಮಕವಾಗಿ ಸ್ಪಂದಿಸುವ ಜೊತೆಗೆ, ವಿಶ್ವಾಸಕ್ಕೆ ತೆಗೆದುಕೊಂಡು ಕೆಲಸ ಮಾಡುವಂತೆ ಸಚಿವರಿಗೆ ಕಿವಿಮಾತು ಹೇಳಿದ್ದಾರೆ.

ಮುಖ್ಯಮಂತ್ರಿ ಸಿದ್ದರಾಮಯ್ಯ ಮತ್ತು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರನ್ನು ಬುಧವಾರ ಸಂಜೆ ಭೇಟಿ ಮಾಡಿದ ಸುರ್ಜೇವಾಲಾ, ಶಾಸಕರು ಮತ್ತು ಸಚಿವರ ಜೊತೆ ನಡೆಸಿದ ಸಭೆಯಲ್ಲಿ ಪ್ರಸ್ತಾಪಗೊಂಡ ವಿಚಾರಗಳು ಮತ್ತು ನಿಗಮ– ಮಂಡಳಿಗಳಿಗೆ ನೇಮಕದ ಬಗ್ಗೆ ಚರ್ಚೆ ನಡೆಸಿದರು.

ಸಚಿವರಾದ ಈಶ್ವರ ಖಂಡ್ರೆ, ಕೃಷ್ಣ ಬೈರೇಗೌಡ, ಎಂ.ಬಿ. ಪಾಟೀಲ, ರಾಮಲಿಂಗಾ ರೆಡ್ಡಿ, ಎನ್. ಚಲುವರಾಯಸ್ವಾಮಿ, ಎಚ್.ಕೆ. ಪಾಟೀಲ, ಜಿ. ಪರಮೇಶ್ವರ ಮತ್ತು ಕೆ.ಜೆ. ಜಾರ್ಜ್ ಜೊತೆ ಸುರ್ಜೇವಾಲಾ ಅವರು ಬುಧವಾರ ಸಭೆ ನಡೆಸಿದರು. ಸಚಿವರಾದ ಕೆ.ಎಚ್. ಮುನಿಯಪ್ಪ, ಶರಣಬಸಪ್ಪ ದರ್ಶನಾಪುರ, ಆರ್.ಬಿ. ತಿಮ್ಮಾಪುರ, ಶಿವರಾಜ್ ತಂಗಡಗಿ, ಎಂ.ಸಿ ಸುಧಾಕರ್, ಕೆ.ಎನ್. ರಾಜಣ್ಣ, ಶಿವಾನಂದ ಪಾಟೀಲ ಮತ್ತು ಮಂಕಾಳ ವೈದ್ಯ ಜೊತೆ ಚರ್ಚೆ ನಡೆಸಲು ಬಾಕಿಯಿದೆ.

ಸುರ್ಜೇವಾಲಾ ಅವರನ್ನು ಭೇಟಿ ಮಾಡಿದ ಬಳಿಕ ಮಾತನಾಡಿದ ಖಂಡ್ರೆ, ‘ರಿಯಲ್ ಎಸ್ಟೇಟ್ ಪಾಲಾಗುತ್ತಿದ್ದ ಎಚ್.ಎಂ.ಟಿ. ವಶದಲ್ಲಿರುವ ಅರಣ್ಯ ಜಮೀನು ಸಂರಕ್ಷಿಸಿ ಲಾಲ್‌ಬಾಗ್ ಮಾದರಿಯಲ್ಲಿ ಮತ್ತೊಂದು ಉದ್ಯಾನ ಮಾಡುವ ಉದ್ದೇಶಕ್ಕೆ ಸುರ್ಜೇವಾಲಾ ಮೆಚ್ಚುಗೆ ವ್ಯಕ್ತಪಡಿಸಿದರು. ಈಗಾಗಲೇ 160 ಎಕರೆ ಅರಣ್ಯ ಜಮೀನನ್ನು ಖಾಸಗಿ ರಿಯಲ್ ಎಸ್ಟೇಟ್ ಕಂಪನಿ ಸೇರಿದಂತೆ ವಿವಿಧ ಸಂಸ್ಥೆಗಳಿಗೆ ಮಾರಾಟ ಮಾಡಿರುವ ಕೇಂದ್ರ ಸರ್ಕಾರದ ಧೋರಣೆ ಬಗ್ಗೆಯೂ ಅವರು ಚರ್ಚಿಸಿದರು’ ಎಂದರು.

‘ಕ್ಷೇತ್ರದ ಅಭಿವೃದ್ಧಿ ಕೆಲಸಗಳಿಗೆ ಶಾಸಕರಿಗೆ ಸಹಕಾರ ಕೊಡುತ್ತಿದ್ದೇವೆ. ಹೊಸ ತಾಲ್ಲೂಕುಗಳಿಗೆ ತಾಲ್ಲೂಕು ಆಡಳಿತ ಸೌಧ ಇಲ್ಲ. ಹೊಸತಾಗಿ 64 ತಾಲ್ಲೂಕುಗಳು ರಚನೆ ಆಗಿವೆ. ಬಿಜೆಪಿ ಸರ್ಕಾರ 14 ತಾಲ್ಲೂಕುಗಳಿಗೆ ಪ್ರಜಾಸೌಧ ನಿರ್ಮಾಣಕ್ಕೆ ಮಂಜೂರಾತಿ ನೀಡಿತ್ತು. ಉಳಿದ ತಾಲ್ಲೂಕುಗಳಲ್ಲಿ ಮಂಜೂರಾತಿ ನೀಡಿರಲಿಲ್ಲ. ನಾವು ಅಧಿಕಾರಕ್ಕೆ ಬಂದ ಮೇಲೆ ಪ್ರಜಾಸೌಧ ನಿರ್ಮಾಣಕ್ಕೆ ಒತ್ತು ಕೊಟ್ಟಿದ್ದೇವೆ. ಒಂದು ವರ್ಷದಲ್ಲಿ 49 ಪ್ರಜಾಸೌಧ ಮಂಜೂರು ಮಾಡಿದ್ದೇವೆ’ ಎಂದು ಕೃಷ್ಣ ಬೈರೇಗೌಡ ತಿಳಿಸಿದರು.

ಸಚಿವರ ಮೌಲ್ಯಮಾಪನ ಅಲ್ಲ: ‘ನಾನು ಕೈಗಾರಿಕಾ ಸಚಿವನಾದ ಮೇಲೆ ರಾಜ್ಯಕ್ಕೆ ಯಾವೆಲ್ಲ ಕೈಗಾರಿಕೆಗಳು ಬಂದಿವೆ ಎಂಬ ಬಗ್ಗೆ ಸುರ್ಜೇವಾಲಾ ಅವರಿಗೆ ಮಾಹಿತಿ ನೀಡಿದ್ದೇನೆ. ನನ್ನ ಇಲಾಖೆಯ ಕೆಲಸದ ಬಗ್ಗೆ ಅವರು ಖುಷಿಯಾಗಿದ್ದಾರೆ. ಇದು ಸಚಿವರ ಮೌಲ್ಯಮಾಪನ ಅಲ್ಲ’ ಎಂದು ಎಂ.ಬಿ. ಪಾಟೀಲ ತಿಳಿಸಿದರು.

‘ಶಾಸಕರ ಬೇಡಿಕೆಗಳ ಬಗ್ಗೆ ಸುರ್ಜೇವಾಲಾ ಪ್ರಸ್ತಾಪಿಸಿದರು. ಬಸ್ ನಿಲ್ದಾಣಕ್ಕೆ ಕೆಲವು ಶಾಸಕರು ಬೇಡಿಕೆ ಇಟ್ಟಿದ್ದಾರೆ. ಮುಜರಾಯಿ ಇಲಾಖೆಗೆ ಸಂಬಂಧಿಸಿದಂತೆ ಶಾಸಕರಿಗೆ ಯಾವುದೇ ಅಸಮಾಧಾನ ಇಲ್ಲವೆಂದು ಅವರು ಹೇಳಿದರು. ಬಸ್ ನಿಲ್ದಾಣದ ಬಗ್ಗೆ ವಿವರಣೆ ಕೊಟ್ಟಿದ್ದೇನೆ’ ಎಂದು ರಾಮಲಿಂಗಾರೆಡ್ಡಿ ತಿಳಿಸಿದರು.

‘ನನ್ನ ಇಲಾಖೆ ಮೇಲೆ ಶಾಸಕರು ದೂರು ಕೊಟ್ಟಿಲ್ಲ. ಸಚಿವರು ಸಿಗುತ್ತಿಲ್ಲ ಎಂಬ ಶಾಸಕರ ಆರೋಪಗಳ ಬಗ್ಗೆಯೂ ಸುರ್ಜೇವಾಲಾ ನನ್ನ ಮುಂದೆ ಚರ್ಚಿಸಿಲ್ಲ. ಅಭಿವೃದ್ಧಿ ವಿಚಾರದ ಬಗ್ಗೆ ಮಾತ್ರ ಮಾತನಾಡಿದ್ದೇವೆ’ ಎಂದು ಎಚ್.ಕೆ. ಪಾಟೀಲ ತಿಳಿಸಿದರು.

‘ನಿಗಮ– ಮಂಡಳಿಗಳಿಗೆ ಶೀಘ್ರ ನೇಮಕ’

‘ನಿಗಮ, ಮಂಡಳಿಗಳಲ್ಲಿ ಪಕ್ಷದ ಕಾರ್ಯಕರ್ತರಿಗೆ ಸ್ಥಾನ ನೀಡಲು ಪಟ್ಟಿ ಸಿದ್ಧಪಡಿಸಲು ಹೈಕಮಾಂಡ್ ಸೂಚಿಸಿತ್ತು. ನನಗೆ ವಹಿಸಿದ್ದ ಜವಾಬ್ದಾರಿಯನ್ನು ನಿರ್ವಹಿಸಿದ್ದೇನೆ. ಈ ಬಗ್ಗೆ ಮುಖ್ಯಮಂತ್ರಿ, ಉಪ ಮುಖ್ಯಮಂತ್ರಿ ಮತ್ತು, ಹೈಕಮಾಂಡ್ ನಿರ್ಧರಿಸಲಿದೆ’ ಎಂದು ಸಚಿವ ಜಿ. ಪರಮೇಶ್ವರ ತಿಳಿಸಿದರು.

‘ಕಾರ್ಯಕರ್ತರಿಗೆ ಜವಾಬ್ದಾರಿ ಹಂಚಿಕೆ ಮಾಡಿರುವ ಬಗ್ಗೆ ಸುರ್ಜೇವಾಲಾ ಜೊತೆ ಚರ್ಚೆ ಮಾಡಿದ್ದೇನೆ. ಆದಷ್ಟು ಬೇಗ ನಿಗಮ, ಮಂಡಳಿಗಳಿಗೆ ನೇಮಕ ನಡೆಯಲಿದೆ’ ಎಂದರು.

ವಿದೇಶದಲ್ಲಿ ಸಚಿವ ರಾಜಣ್ಣ

ಸಚಿವ ಕೆ.ಎನ್. ರಾಜಣ್ಣ ಅವರು ಕುಟುಂಬ ಸಮೇತ ವಿದೇಶ ಪ್ರವಾಸಕ್ಕೆ ತೆರಳಿದ್ದಾರೆ. ಸುರ್ಜೇವಾಲಾ ಅವರು ಶಾಸಕರಿಂದ ಅಭಿಪ್ರಾಯ ಸಂಗ್ರಹಿಸುತ್ತಿರುವುದಕ್ಕೆ ಇತ್ತೀಚೆಗೆ ಬಹಿರಂಗವಾಗಿ ಆಕ್ರೋಶ ವ್ಯಕ್ತಪಡಿಸಿದ್ದ ರಾಜಣ್ಣ, ‘ಉಸ್ತುವಾರಿ ನನ್ನನ್ನು ಕರೆದು ಏನು ಕೇಳುತ್ತಾರೆ’ ಎಂದು ಪ್ರಶ್ನಿಸಿದ್ದರು. ಸುರ್ಜೇವಾಲಾ ಅವರು ಸಚಿವರ ಜೊತೆ ಸಭೆ ನಡೆಸುತ್ತಿರುವಾಗಲೇ ರಾಜಣ್ಣ ವಿದೇಶಕ್ಕೆ ತೆರಳಿರುವುದು ಚರ್ಚೆಗೆ ಗ್ರಾಸವಾಗಿದೆ.

ಮಕ್ಕಳ ಮೇಲಿನ ದೌರ್ಜನ್ಯ ತಡೆಗಟ್ಟಿ

ಕರ್ನಾಟಕ ಪರಿಶಿಷ್ಟ ಜಾತಿ ಅಲೆಮಾರಿ ಅಭಿವೃದ್ಧಿ ವೇದಿಕೆ ಆಗ್ರಹ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಅಲೆಮಾರಿ ಸಮುದಾಯದ ಹೆಣ್ಣುಮಕ್ಕಳ ಮೇಲೆ ನಡೆಯುತ್ತಿರುವ ಅತ್ಯಾಚಾರ, ದೌರ್ಜನ್ಯ, ಕೊಲೆಯಂತಹ ಗಂಭೀರ ಪ್ರಕರಣಗಳನ್ನು ತಡೆಗಟ್ಟಲು ಸರ್ಕಾರ ಕ್ರಮ ಕೈಗೊಳ್ಳಬೇಕು ಎಂದು ಕರ್ನಾಟಕ ಪರಿಶಿಷ್ಟ ಜಾತಿ ಅಲೆಮಾರಿ ಅಭಿವೃದ್ಧಿ ವೇದಿಕೆ ಆಗ್ರಹಿಸಿದೆ.

ಮಾಜಿ ಸಚಿವ ಎಚ್. ಆಂಜನೇಯ ಅಧ್ಯಕ್ಷತೆಯಲ್ಲಿ ಬುಧವಾರ ನಡೆದ ವೇದಿಕೆಯ ಸಭೆಯಲ್ಲಿ ಈ ಬಗ್ಗೆ ಚರ್ಚೆ ನಡೆಸಲಾಯಿತು.

ಜುಲೈ 9ರಂದು ಬೆಂಗಳೂರು ದಕ್ಷಿಣ ಜಿಲ್ಲೆ ಮಾಗಡಿ ತಾಲ್ಲೂಕಿನ ತಾವರೆಕೆರೆಯಲ್ಲಿ ಅರುಣಾ ಎಂಬ ಶಿಳ್ಳೆಕ್ಯಾತ ಸಮುದಾಯದ 13 ವರ್ಷದ ಬಾಲಕಿಯ ಮೇಲೆ ಅತ್ಯಾಚಾರವೆಸಗಿ ಕೊಲೆ ಮಾಡಿರುವ ಅಮಾನವೀಯ ಘಟನೆಯನ್ನು ಖಂಡಿಸಲಾಯಿತು. ಬಾಲಕಿಯ ಸಾವಿಗೆ ಸಂತಾಪ ಸೂಚಿಸಲಾಯಿತು.

ಮಾಜಿ ಸಂಸದ ಬಿ.ಎನ್. ಚಂದ್ರಪ್ಪ, ಕೆಪಿಸಿಸಿ ಎಸ್‌ಸಿ ವಿಭಾಗದ ಅಧ್ಯಕ್ಷ ಧರ್ಮಸೇನ, ಸಾಹಿತಿಗಳಾದ ಎಸ್‌.ಜಿ. ಸಿದ್ದರಾಮಯ್ಯ, ಬಂಜಗೆರೆ ಜಯಪ್ರಕಾಶ್, ವಡ್ಡಗೆರೆ ನಾಗರಾಜಯ್ಯ, ಬಾಲಗುರುಮೂರ್ತಿ, ಪತ್ರಕರ್ತ ಜಾಣಗೆರೆ ವೆಂಕಟರಾಮಯ್ಯ, ಆದಿಜಾಂಬವ ಅಭಿವೃದ್ಧಿ ನಿಗಮದ ಅಧ್ಯಕ್ಷ ಜಿ.ಎಸ್. ಮಂಜುನಾಥ್, ಮಾದಿಗ ಮೀಸಲಾತಿ ಹೋರಾಟ ಸಮಿತಿ ಮುಖಂಡರಾದ ಅಂಬಣ್ಣ ಆರೋಲಿಕರ, ಭೀಮಾಶಂಕರ್ ಹಾಗೂ ಅಲೆಮಾರಿ ಸಮುದಾಯದ ಮುಖಂಡ ಶೇಷಪ್ಪ ಅಂದೋಳ್ ಸಲಹೆಗಳನ್ನು ನೀಡಿದರು.

ಸದ್ಯದಲ್ಲೇ ಮುಖ್ಯಮಂತ್ರಿಗಳ ಬಳಿಗೆ ನಿಯೋಗ ಹೋಗಿ, ಅಲೆಮಾರಿ ಸಮುದಾಯದವರ ಮೇಲೆ ರಾಜ್ಯದ ಹಲವೆಡೆ ನಡೆಯುತ್ತಿರುವ ಲೈಂಗಿಕ ದೌರ್ಜನ್ಯ, ಶೋಷಣೆಗಳನ್ನು ತಡೆಯಲು ಕ್ರಮ ಕೈಗೊಳ್ಳುವಂತೆ ಮನವಿ ಮಾಡಲು ತೀರ್ಮಾನಿಸಲಾಯಿತು.

ಅಲೆಮಾರಿ ಸಮುದಾಯಗಳನ್ನು ಸಂಘಟಿಸಿ ಬೆಂಗಳೂರಿನಲ್ಲಿ ಬೃಹತ್ ಸಮಾವೇಶ ನಡೆಸಲು ನಿರ್ಧರಿಸಲಾಯಿತು. ಸಂತ್ರಸ್ತೆಯರ ಕುಟುಂಬಗಳಿಗೆ ಆರ್ಥಿಕ ನೆರವು, ಉದ್ಯೋಗ ನೀಡಲು ಕ್ರಮ ಕೈಗೊಳ್ಳುವಂತೆ ಸರ್ಕಾರವನ್ನು ಒತ್ತಾಯಿಸಲಾಯಿತು.

ಅಲೆಮಾರಿ ಸಮುದಾಯದ ಮುಖಂಡರಾದ ಚಾವಡೆ ಲೋಕೇಶ್, ಲೋಹಿತ್, ಕೆ. ವೀರೇಶ್, ಸುಭಾಷ್ ಚವಾಣ್, ಶಾಂತರಾಜ್, ಶಿವಕುಮಾರ್ ಬಳ್ಳಾರಿ, ಹನುಮಂತು, ಬಸವರಾಜ್ ನಾರಾಯಣಕೆರೆ, ಸಾವಿತ್ರಮ್ಮ ರತ್ನಾಕರ್, ಮಹಾಂತೇಶ್ ಸಂಕಲ್ ಭಾಗವಹಿಸಿದ್ದರು.

ಕರ್ನಾಟಕ ಪರಿಶಿಷ್ಟ ಜಾತಿ ಅಲೆಮಾರಿ ಅಭಿವೃದ್ಧಿ ವೇದಿಕೆಯ ಸಭೆ ಬುಧವಾರ ಶಾಸಕರ ಭವನದಲ್ಲಿ ನಡೆಯಿತು

ನಗರದಲ್ಲಿ ಇಂದು

ದಶ ಚಂಡಿಕಾ ಯಾಗ ಸೇರಿ ವಿವಿಧ ಧಾರ್ಮಿಕ ಕಾರ್ಯಕ್ರಮಗಳು: ಆಯೋಜನೆ: ಕಾಲಭೈರವೇಶ್ವರ ಯೋಗ ಕೇಂದ್ರ, ಸ್ಥಳ: ಆದಿಚುಂಚನಗಿರಿ ಸಮುದಾಯ ಭವನ, ವಿಜಯನಗರ, ಬೆಳಿಗ್ಗೆ 7.30ರಿಂದ

‘ಜೀವಮಾನ ಸಾಧನೆಯ ವಿವಿಧ ಪ್ರಶಸ್ತಿಗಳ ಪ್ರದಾನ: ಅತಿಥಿಗಳು: ಸಿದ್ದರಾಮಯ್ಯ, ಉಪಸ್ಥಿತಿ: ಡಿ.ಕೆ. ಶಿವಕುಮಾರ್, ಶಿವರಾಜ ತಂಗಡಗಿ, ಅಧ್ಯಕ್ಷತೆ: ಉದಯ್ ಬಿ. ಗರುಡಾಚಾರ್, ಆಯೋಜನೆ: ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಸ್ಥಳ: ರವೀಂದ್ರ ಕಲಾಕ್ಷೇತ್ರ, ಜೆ.ಸಿ. ರಸ್ತೆ, ಸಂಜೆ 5ರಿಂದ

‘ವಿಧಾನ ಪರಿಷತ್ತಿನ ಉಗಮ, ನಡೆದು ಬಂದ ಹಾದಿ ಹಾಗೂ ಇತಿಹಾಸ ಕುರಿತು ಕಿರುಚಿತ್ರ ಬಿಡುಗಡೆ: ಎಚ್‌.ಕೆ. ಪಾಟೀಲ, ಅಧ್ಯಕ್ಷತೆ: ಬಸವರಾಜ ಹೊರಟ್ಟಿ, ಉಪಸ್ಥಿತಿ: ಎಂ.ಕೆ. ಪ್ರಾಣೇಶ್, ಎನ್‌.ಎಸ್. ಭೋಸರಾಜು, ಅತಿಥಿಗಳು: ಛಲವಾದಿ ನಾರಾಯಣಸ್ವಾಮಿ, ಸಲೀಂ ಅಹ್ಮದ್, ಎನ್. ರವಿಕುಮಾರ್, ಆಯೋಜನೆ: ಕರ್ನಾಟಕ ವಿಧಾನ ಪರಿಷತ್ತು, ಸ್ಥಳ: ಸಮ್ಮೇಳನ ಸಭಾಂಗಣ, ವಿಕಾಸಸೌಧ, ಸಂಜೆ 6

‘ಶ್ರೀದೇವಿ ಮಹಾತ್ಮೆ’ ಯಕ್ಷಗಾನ ಪ್ರದರ್ಶನ: ಆಯೋಜನೆ: ಶ್ರೀ ಗುರುರಾಜ್ ಗಂಟಿಹೊಳೆ ಹಿತೈಷಿಗಳು ಬೆಂಗಳೂರು, ಸ್ಥಳ: ಬಂಟರ ಸಂಘ, ವಿಜಯನಗರ, ಅತ್ತಿಗುಪ್ಪೆ ಮೆಟ್ರೊ ನಿಲ್ದಾಣದ ಹತ್ತಿರ, ಸಂಜೆ 6ರಿಂದ

ವೈದ್ಯರ ದಿನಾಚರಣೆ: ಉದ್ಘಾಟನೆ: ಡಾ. ಶರಣಪ್ರಕಾಶ ಪಾಟೀಲ, ಅತಿಥಿಗಳು: ದಿನೇಶ್ ಗುಂಡೂರಾವ್, ಎಚ್‌.ಸಿ. ಮಹದೇವಪ್ಪ, ಡಾ. ಬಿ.ಸಿ. ಭಗವಾನ್, ಡಾ. ವಿ.ವಿ. ಚಿನಿವಾಲರ್, ಡಾ. ಸೂರಿ ರಾಜು ವಿ., ಅಧ್ಯಕ್ಷತೆ: ಡಾ. ವಿಜಯಾನಂದ ಎಸ್., ಭಾರತೀಯ ವೈದ್ಯಕೀಯ ಸಂಘ, ಸ್ಥಳ: ಹೋಟೆಲ್ ಲಾ ಮಾರ್ವೆಲ್ಲ, ಸೌತ್ ಎಂಡ್ ಸರ್ಕಲ್, ಜಯನಗರ, ಸಂಜೆ 7.30

‘ನಗರದಲ್ಲಿ ಇಂದು’ ಅಂಕಣದಲ್ಲಿ ಪ್ರಕಟಿಸಲು ಈ ಕೆಳಗಿನ ಇ-ಮೇಲ್‌ಗೆ (ಸಂಜೆ 6 ಗಂಟೆ ಒಳಗೆ) ಕಳುಹಿಸಿ
nagaradalli_indu@prajavani.co.in

ಮೆಟ್ರೊ ಹೊಸ ಮಾರ್ಗದಲ್ಲಿ ವೈಫೈ

ಎಸಿಇಎಸ್ ಇಂಡಿಯಾ ಜತೆ ಬಿಎಂಆರ್‌ಸಿಎಲ್ ಒಪ್ಪಂದ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಮ್ಮ ಮೆಟ್ರೊ ಎರಡನೇ ಹಂತದ ರೀಚ್ 5 ಮತ್ತು 6ರಲ್ಲಿ ಪ್ರಯಾಣಿಕರಿಗೆ ವೈಫೈ ಸೌಲಭ್ಯ ಸಿಗಲಿದೆ. ಇದಕ್ಕಾಗಿ ಅಡ್ವಾನ್ಸ್‌ಡ್ ಕಮ್ಯುನಿಕೇಶನ್ ಆ್ಯಂಡ್ ಎಲೆಕ್ಟ್ರಾನಿಕ್ಸ್ ಸಿಸ್ಟಮ್ಸ್ (ಎಸಿಇಎಸ್) ಇಂಡಿಯಾ ಜೊತೆಗೆ ಬೆಂಗಳೂರು ಮೆಟ್ರೊ ರೈಲು ಕಾರ್ಪೊರೇಷನ್ ಲಿಮಿಟೆಡ್ (ಬಿಎಂಆರ್‌ಸಿಎಲ್) ಒಪ್ಪಂದ ಮಾಡಿಕೊಂಡಿದೆ.

ಈ ಒಡಂಬಡಿಕೆಯಂತೆ ರಾಷ್ಟ್ರೀಯ ವಿದ್ಯಾಲಯ ರಸ್ತೆ–ಬೊಮ್ಮಸಂದ್ರ ಸಂಪರ್ಕಿಸುವ ಹಳದಿ ಮಾರ್ಗ (ರೀಚ್ 5) ಮತ್ತು ಕಾಳೇನ ಅಗ್ರಹಾರ–ನಾಗವಾರ ಸಂಪರ್ಕಿಸುವ ಗುಲಾಬಿ ಮಾರ್ಗದ (ರೀಚ್ 6) ನಿಲ್ದಾಣಗಳಲ್ಲಿ 13 ವರ್ಷ ವೈಫೈ ಸಿಗಲಿದೆ. ಅದಕ್ಕಾಗಿ ಐಬಿಎಸ್, ಬಿಟಿಎಸ್, ಸೆಲ್ಯುಲರ್ ಟವರ್‌ಗಳನ್ನು ಸ್ಥಾಪಿಸಲಿರುವ ಎಸಿಇಎಸ್ ನಿರ್ವಹಣೆಯನ್ನೂ ಮಾಡಲಿದೆ.



ನಮ್ಮ ಮೆಟ್ರೊ ಹಳದಿ ಮಾರ್ಗ

ಇದರಿಂದ ಹಲವು ಮೊಬೈಲ್ ಆಪರೇಟರ್‌ಗಳಿಗೆ ಬೆಂಬಲ ಸಿಗಲಿದೆ. ಮೆಟ್ರೊ ಜಾಗದ ಸಮರ್ಪಕ ಬಳಕೆಯೂ ಆಗುತ್ತದೆ. 4ಜಿ/5ಜಿ ಸೇವೆಗಳು ಲಭ್ಯವಾಗಲಿವೆ. ಪ್ರಯಾಣಿಕರಿಗೆ ಉತ್ತಮ ಅನುಭವವನ್ನು ನೀಡಲಿದೆ ಎಂದು ಬಿಎಂಆರ್‌ಸಿಎಲ್ ವ್ಯವಸ್ಥಾಪಕ ನಿರ್ದೇಶಕ ಎಂ. ಮಹೇಶ್ವರ ರಾವ್ ತಿಳಿಸಿದ್ದಾರೆ.

ಈ ಒಡಂಬಡಿಕೆಗೆ ಬಿಎಂಆರ್‌ಸಿಎಲ್‌ನ ಕಾರ್ಯನಿರ್ವಾಹಕ ನಿರ್ದೇಶಕ ಎ.ಎಸ್. ಶಂಕರ್, ಎಸಿಇಎಸ್ ಇಂಡಿಯಾ ವ್ಯವಸ್ಥಾಪಕ ನಿರ್ದೇಶಕ ಮೊಹಮ್ಮದ್ ಎನ್. ಮಝುರ್ ಸಹಿ ಹಾಕಿದರು. ಈ ಸಂದರ್ಭದಲ್ಲಿ ಬಿಎಂಆರ್‌ಸಿಎಲ್ ನಿರ್ದೇಶಕ ಸುಮತ್ ಭಟ್ನಾಗರ್, ಎಸಿಇಎಸ್ ಗ್ರೂಪ್ ಸಿಇಒ ಅಕ್ರಂ ಅಬುರಾಸ್ ಉಪಸ್ಥಿತರಿದ್ದರು.

ಹಳದಿ ಮಾರ್ಗದಲ್ಲಿ ರೈಲು ಸಂಚಾರವು ಆಗಸ್ಟ್‌ನಲ್ಲಿ ಆರಂಭಗೊಳ್ಳುವ ನಿರೀಕ್ಷೆ ಇದೆ. ಗುಲಾಬಿ ಮಾರ್ಗದಲ್ಲಿ 2026ರ ಅಂತ್ಯದೊಳಗೆ ಸಂಚಾರ ಆರಂಭಗೊಳ್ಳುವ ಸಾಧ್ಯತೆ ಇದೆ ಎಂದು ಬಿಎಂಆರ್‌ಸಿಎಲ್ ಅಧಿಕಾರಿಗಳು ತಿಳಿಸಿದ್ದಾರೆ.

ಧರ್ಮಸ್ಥಳದಲ್ಲಿ ಹತ್ಯೆ: ಎಸ್‌ಐಟಿಗೆ ಆಗ್ರಹ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಧರ್ಮಸ್ಥಳ ಪ್ರದೇಶದಲ್ಲಿ ನೂರಾರು ಅತ್ಯಾಚಾರ, ಹತ್ಯೆ ಮತ್ತು ಕಾಡಿನಲ್ಲಿ ಶವಗಳನ್ನು ಹೂಳಿರುವ ಆರೋಪದ ತನಿಖೆಗೆ ಸುಪ್ರೀಂ ಕೋರ್ಟ್ ಅಥವಾ ಹೈಕೋರ್ಟ್ ನಿವೃತ್ತ ನ್ಯಾಯಮೂರ್ತಿ ನೇತೃತ್ವದಲ್ಲಿ ವಿಶೇಷ ತನಿಖಾ ತಂಡ (ಎಸ್‌ಐಟಿ) ರಚಿಸಿ’ ಎಂದು ಹಲವು ವಕೀಲರು ಮತ್ತು ಸಾಮಾಜಿಕ ಕಾರ್ಯಕರ್ತರು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಮನವಿ ಮಾಡಿದ್ದಾರೆ.

ಸಿದ್ದರಾಮಯ್ಯ ಭೇಟಿ ಮಾಡಿದ ಸಿ.ಎಸ್.ದ್ವಾರಕನಾಥ್, ಎಸ್.ಬಾಲನ್, ಉಮಾಪತಿ ಎಸ್. ಮೊದಲಾದವರು, ಈ ಕುರಿತ ಪತ್ರವನ್ನು ನೀಡಿದರು.

‘ಧರ್ಮಸ್ಥಳದಲ್ಲಿ ಸಾಮೂಹಿಕ ಅತ್ಯಾಚಾರಗಳು, ಹತ್ಯೆಗಳು ನಡೆದಿವೆ. ನೂರಾರು ಶವಗಳನ್ನು ಸುತ್ತಮುತ್ತಲ ಅರಣ್ಯ ಪ್ರದೇಶದಲ್ಲಿ ಹೂಳಲಾಗಿದೆ ಎಂಬ ವಿವರ ಇರುವ ವರದಿಗಳು ಸುದ್ದಿ ಮಾಧ್ಯಮಗಳು ಹಾಗೂ ಸಾಮಾಜಿಕ ಜಾಲತಾಣಗಳಲ್ಲಿ ಬಿತ್ತರವಾಗಿವೆ. ಈ ಗಂಭೀರ ವಿಷಯದತ್ತ ನೀವು ಗಮನ ಹರಿಸಬೇಕು’ ಎಂದು ಕೋರಿದ್ದಾರೆ.

‘ಒಬ್ಬ ಸಾಕ್ಷಿಯು ಮ್ಯಾಜಿಸ್ಟ್ರೇಟ್ ನ್ಯಾಯಾಲಯಕ್ಕೆ ಹಾಜರಾಗಿ, ಕಳೇಬರದ ಮಾಹಿತಿ ಸಲ್ಲಿಸಿದ್ದಾನೆ. ಜತೆಗೆ ನೂರಾರು ಶವಗಳು ಇರುವ ಸ್ಥಳ ತೋರಿಸುತ್ತೇನೆ ಎಂದಿದ್ದಾನೆ. ನ್ಯಾಯಾಲಯದಲ್ಲಿ ಹೇಳಿಕೆ ದಾಖಲಿಸಿದ ನಂತರವಷ್ಟೇ ಎಫ್‌ಐಆರ್ ದಾಖಲಿಸಲಾಗಿದೆ. ಆದರೆ ಶವಗಳನ್ನು ಹುಡುಕಿ, ಹೊರತೆಗೆಯುವ ಕೆಲಸ ಇನ್ನೂ ಆರಂಭವಾಗಿಲ್ಲ’ ಎಂದು ಪತ್ರದಲ್ಲಿ ಉಲ್ಲೇಖಿಸಿದ್ದಾರೆ.

‘ಅತ್ಯಂತ ಪ್ರಭಾವಿ, ರಾಜಕೀಯ ನಂಟು ಇರುವ ವ್ಯಕ್ತಿಗಳ ವಿರುದ್ಧ ಆರೋಪ ಎದುರಾಗಿದೆ. ಆದರೆ ತನಿಖೆ ನಡೆಸುತ್ತಿರುವುದು ಸಬ್ ಇನ್‌ಸ್ಪೆಕ್ಟರ್ ದರ್ಜೆಯ ಅಧಿಕಾರಿ. ಆರೋಪಿಗಳು ತನಿಖೆಯನ್ನು ಪ್ರಭಾವಿಸುವ, ಸಾಕ್ಷ್ಯಗಳನ್ನು ನಾಶಪಡಿಸುವ ಅಪಾಯವಿದೆ. ಹೀಗಾಗಿ ನಿವೃತ್ತ ನ್ಯಾಯಮೂರ್ತಿಗಳ ಮೇಲ್ವಿಚಾರಣೆಯಲ್ಲಿ ಎಸ್‌ಐಟಿ ತನಿಖೆ ನಡೆಯಬೇಕು. ಎಡಿಜಿಪಿ ಒಬ್ಬರನ್ನು ತನಿಖಾ ತಂಡದ ಮುಖ್ಯಸ್ಥರಾಗಿ ನೇಮಕ ಮಾಡಬೇಕು’ ಎಂದು ಒತ್ತಾಯಿಸಿದ್ದಾರೆ.

ಒತ್ತಾಯಗಳು

- ವಿಧಿವಿಜ್ಞಾನ ತಜ್ಞರನ್ನು ಎಸ್‌ಐಟಿ ಒಳಗೊಂಡಿರಬೇಕು. ಜತೆಗೆ ಡಿಎನ್‌ಎ ಮತ್ತು ಡಿಜಿಟಲ್ ವಿಧಿವಿಜ್ಞಾನ ತಜ್ಞರ ಘಟಕಗಳೂ ಇರಬೇಕು
- ತನಿಖೆಯನ್ನು ಪೂರ್ಣ ಪ್ರಮಾಣದಲ್ಲಿ ಚಿತ್ರೀಕರಣ ಮಾಡಬೇಕು
- ಆರೋಪಿಗಳನ್ನು ತಕ್ಷಣವೇ ವಶಕ್ಕೆ ಪಡೆದು, ವಿಚಾರಣೆ ನಡೆಸಬೇಕು
- ಈ ಕೃತ್ಯಗಳು ನಡೆದಿರಬಹುದಾದ ಎಲ್ಲ ಸ್ಥಳಗಳನ್ನು ಕೂಲಂಕಷವಾಗಿ ಪರಿಶೀಲನೆಗೆ ಒಳಪಡಿಸಬೇಕು

‘ಪಹಲ್ಗಾಮ್ ದಾಳಿ ಉಗ್ರರುಉಳಿಯಲ್ಲ’

ನವದೆಹಲಿ (ಪಿಟಿಐ): ಪಹಲ್ಗಾಮ್ ದಾಳಿಗೆ ಕಾರಣರಾದ ಭಯೋತ್ಪಾದಕರನ್ನು ಗುರುತಿಸಲಾಗಿದ್ದು, ಅವರು ಹೆಚ್ಚು ದಿನ ಬದುಕುವುದಿಲ್ಲ ಎಂದು ಜಮ್ಮು ಮತ್ತು ಕಾಶ್ಮೀರದ ಲೆಫ್ಟಿನೆಂಟ್ ಗವರ್ನರ್ ಮನೋಜ್‌ಸಿನ್ಹಾಬುಧವಾರತಿಳಿಸಿದರು.

ಉಪನ್ಯಾಸವೊಂದರಲ್ಲಿ ಮಾತನಾಡಿದ ಅವರು, ‘ಒಳ್ಳೆಯ ಸುದ್ದಿ ಬರಲಿದೆ. ಆದರೆ ಅದನ್ನು ಈಗಲೇ ಬಹಿರಂಗಪಡಿಸುವುದು ಸೂಕ್ತವಲ್ಲ. ಐದು ವರ್ಷಗಳಲ್ಲಿ ಹಲವು ಭಯೋತ್ಪಾದಕ ಸಂಘಟನೆಗಳ ಭಯೋತ್ಪಾದಕರು ಹತರಾಗಿದ್ದಾರೆ. ಅವರಿಗಾದ ಗತಿಯೇ ಇವರಿಗೂ ಆಗುತ್ತದೆ’ ಎಂದರು.

ತಾರತಮ್ಯ: ಪರಿಶೀಲನೆಗೆ ಸೂಚನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೆಂಗಳೂರು ವಿಶ್ವವಿದ್ಯಾಲಯದಲ್ಲಿ ಎಸ್‌ಟಿ/ಎಸ್‌ಸಿ ಸಮುದಾಯದ ಅಧ್ಯಾಪಕರಿಗೆ ತಾರತಮ್ಯ ಮಾಡಲಾಗುತ್ತಿದೆ ಎಂಬ ದೂರನ್ನು ಪರಿಶೀಲನೆ ನಡೆಸಿ, ವರದಿ ನೀಡುವಂತೆ ಮುಖ್ಯಮಂತ್ರಿ ಸಿದ್ದರಾಮಯ್ಯ ಉನ್ನತ ಶಿಕ್ಷಣ ಇಲಾಖೆ ಪ್ರಧಾನ ಕಾರ್ಯದರ್ಶಿಗೆ ಸೂಚಿಸಿದ್ದಾರೆ.

‘ಹೊರಗಿನ ವಿಶ್ವವಿದ್ಯಾಲಯದಿಂದ ಬಂದ ಅಧ್ಯಾಪಕರ ಸೇವಾ ಹಿರಿತನ, ರೋಸ್ಟರ್ ಅನುಪಾತವನ್ನು ನಿರ್ಧರಿಸಬೇಕು. ಬ್ಯಾಕ್‌ಲಾಗ್ ಹುದ್ದೆಗಳನ್ನು ಭರ್ತಿ ಮಾಡಲು ಕ್ರಮಕೈಗೊಳ್ಳಬೇಕು ಎಂದು ಅಧ್ಯಾಪಕರು ಕೋರಿದ್ದಾರೆ. ಹಾಗಾಗಿ, ತಕ್ಷಣ ಪರಿಶೀಲನೆ ನಡೆಸಬೇಕು’ ಎಂದು ಹೇಳಿದ್ದಾರೆ.

ಬೇರೆ ವಿ.ವಿಗಳಿಂದ ಹಲವು ಅಧ್ಯಾಪಕರನ್ನು ಹುದ್ದೆರಹಿತವಾಗಿ ವರ್ಗಾವಣೆ ಮಾಡಲಾಗಿದೆ. ಅವರಲ್ಲಿ ಯಾರೊಬ್ಬರೂ ಪರಿಶಿಷ್ಟ ಜಾತಿ ಮತ್ತು ಪಂಗಡಗಳಿಗೆ ಸೇರಿಲ್ಲ. ವರ್ಗಾವಣೆಯಾದವರನ್ನು ಯಾವ ರೋಸ್ಟರ್ ಬಿಂದುಗಳಿಗೆ ಸೇರಿಸಲಾಗಿದೆ ಎಂಬ ಬಗ್ಗೆ ವಿ. ವಿ ನಿರ್ಧರಿಸಿಲ್ಲ. ಇದು ಸರ್ಕಾರದ ಮೀಸಲಾತಿ ನೀತಿಗೆ ವಿರುದ್ಧವಾಗಿದೆ. ಖಾಲಿ ಇರುವ 22 ಬ್ಯಾಕ್‌ಲಾಗ್ ಹುದ್ದೆಗಳನ್ನೂ ಭರ್ತಿ ಮಾಡಿಲ್ಲ. ವಿಶ್ವವಿದ್ಯಾಲಯ ಮೀಸಲಾತಿ ವಿರೋಧಿ ನೀತಿ ಅನುಸರಿಸುತ್ತಿದೆ ಎಂದು 67 ಅಧ್ಯಾಪಕರು ದೂರು ನೀಡಿದ್ದರು.

ಎಂಜಿನ್ ವೈಫಲ್ಯ: ತುರ್ತು ಭೂಸ್ಪರ್ಶ

ಮುಂಬೈ (ಪಿಟಿಐ): ದೆಹಲಿಯಿಂದ ಗೋವಾಕ್ಕೆ ತೆರಳುತ್ತಿದ್ದ ಇಂಡಿಗೊ ವಿಮಾನವು ಎಂಜಿನ್ ವೈಫಲ್ಯದ ಕಾರಣ ಮುಂಬೈನಲ್ಲಿ ಬುಧವಾರ ರಾತ್ರಿ 9.52ಕ್ಕೆ ತುರ್ತು ಭೂಸ್ಪರ್ಶ ಮಾಡಿದೆ.

ವಿಮಾನದಲ್ಲಿ ಒಟ್ಟು ಎಷ್ಟು ಪ್ರಯಾಣಿಕರು ಮತ್ತು ಸಿಬ್ಬಂದಿ ಇದ್ದರು ಎಂಬುದು ತಕ್ಷಣಕ್ಕೆ ತಿಳಿದುಬಂದಿಲ್ಲ.

ದೆಹಲಿಯಿಂದ ಗೋವಾ ಮಾರ್ಗದಲ್ಲಿ ಸಾಗುತ್ತಿದ್ದ ವಿಮಾನದಲ್ಲಿ ಒಂದು ಎಂಜಿನ್ ವೈಫಲ್ಯ ಕಂಡುಬಂದ ಕೂಡಲೇ ಪೂರ್ಣ ತುರ್ತು ಪರಿಸ್ಥಿತಿ ಘೋಷಿಸಲಾಗಿದೆ ಎಂದು ಮೂಲಗಳು ತಿಳಿಸಿವೆ.

ಕೇಂದ್ರದ ಕ್ರಮದಿಂದ ರಾಜ್ಯಕ್ಕೆ ಅನ್ಯಾಯ: ಸಚಿವ ಎಚ್‌. ಕೆ. ಪಾಟೀಲ

ಕೃಷ್ಣಾ ನ್ಯಾಯಮಂಡಳಿ ಅವಧಿ ವಿಸ್ತರಣೆ

ಪ್ರಜಾವಾಣಿ ವಾರ್ತೆ

ನವದೆಹಲಿ: ಕೃಷ್ಣಾ ನದಿಗೆ ಸಂಬಂಧಿಸಿ ದೀರ್ಘಕಾಲದಿಂದ ಬಾಕಿ ಇರುವ ಅಂತರ-ರಾಜ್ಯ ಜಲ ವಿವಾದ ಬಗೆಹರಿಸಲು ರಚನೆಯಾಗಿರುವ ಕೃಷ್ಣಾ ಜಲ ವಿವಾದ ನ್ಯಾಯಮಂಡಳಿ-2 (ಬ್ರಿಜೇಶ್ ಕುಮಾರ್ ಆಯೋಗ) ಅವಧಿಯನ್ನು ಕೇಂದ್ರ ಜಲಶಕ್ತಿ ಸಚಿವಾಲಯ ಮತ್ತೆ ಒಂದು ವರ್ಷ ವಿಸ್ತರಿಸಿದೆ. ಅವಧಿಯನ್ನು 2026ರ ಜುಲೈ 31ರ ವರೆಗೆ ವಿಸ್ತರಿಸಲಾಗಿದೆ.

ಮಹಾರಾಷ್ಟ್ರ, ಕರ್ನಾಟಕ ಮತ್ತು ಆಂಧ್ರ ಪ್ರದೇಶದ ನಡುವಣ ನೀರು ಹಂಚಿಕೆ ವಿವಾದಗಳ ಮಧ್ಯಸ್ಥಿಕೆ ವಹಿಸಲು 2004ರಲ್ಲಿ ನ್ಯಾಯಮಂಡಳಿ ರಚಿಸಲಾಗಿತ್ತು. ನ್ಯಾಯಮಂಡಳಿ 2010ರಲ್ಲಿ ಆರಂಭಿಕ ವರದಿ ಸಲ್ಲಿಸಿತ್ತು. ಮೂರು ರಾಜ್ಯಗಳಿಗೆ ನೀರು ಹಂಚಿಕೆ ಮಾಡಿತ್ತು. ಆದರೆ, ವರದಿಯ ಕೆಲವೊಂದು ಅಂಶಗಳಿಗೆ ರಾಜ್ಯಗಳು ಆಕ್ಷೇಪ ವ್ಯಕ್ತಪಡಿಸಿದ್ದವು. ಬಳಿಕ ನ್ಯಾಯಮಂಡಳಿಯ ಅವಧಿಯನ್ನು ವಿಸ್ತರಿಸಲಾಗಿತ್ತು.

2014ರಲ್ಲಿ ಆಂಧ್ರ ಪ್ರದೇಶದ ವಿಭಜನೆಯು ಜಲವಿವಾದವನ್ನು ಮತ್ತಷ್ಟು ಜಟಿಲಗೊಳಿಸಿತು. ಹೊಸದಾಗಿ ರೂಪುಗೊಂಡ ತೆಲಂಗಾಣವು ಕೃಷ್ಣಾ ಜಲ ವಿವಾದದಲ್ಲಿ ಪಾಲುದಾರನಾಯಿತು. ಅಂದಿನಿಂದ, ನ್ಯಾಯಮಂಡಳಿಯ ಗಡುವನ್ನು ಅಧಿಸೂಚನೆಗಳ ಮೂಲಕ ಹಲವು ಬಾರಿ ವಿಸ್ತರಿಸಲಾಗಿದೆ.

ರಾಜ್ಯಕ್ಕೆ ಅನ್ಯಾಯ (ಬೆಂಗಳೂರು ವರದಿ): ‘ಕೃಷ್ಣಾ ಜಲ ವಿವಾದ ನ್ಯಾಯಮಂಡಳಿ–2ರ (ಬ್ರಿಜೇಶ್ ಕುಮಾರ್ ಆಯೋಗ) ಅವಧಿಯನ್ನು ಮತ್ತೊಂದು ವರ್ಷ ವಿಸ್ತರಿಸಿರುವ ಕೇಂದ್ರ ಸರ್ಕಾರದ ಕ್ರಮ ಕರ್ನಾಟಕಕ್ಕೆ ಆಘಾತ ತಂದಿದೆ’ ಎಂದು ಕಾನೂನು, ಗಡಿ ಮತ್ತು ಜಲ ವಿವಾದ ಉಸ್ತುವಾರಿ ಸಚಿವ ಎಚ್‌.ಕೆ.ಪಾಟೀಲ ತಿಳಿಸಿದ್ದಾರೆ.

‘ನ್ಯಾಯಮಂಡಳಿ–2ರ ಅಂತಿಮ ತೀರ್ಪನ್ನು ಕೇಂದ್ರ ಸರ್ಕಾರ ಗೆಜೆಟ್‌ನಲ್ಲಿ ಪ್ರಕಟಿಸಬೇಕೆಂದು ಕರ್ನಾಟಕ ಹತ್ತು ವರ್ಷಗಳಿಂದ ಒತ್ತಾಯ ಮಾಡುತ್ತಿದೆ. ಇತ್ಯರ್ಥವಾಗಿರುವ ಜಲ ವಿವಾದದಲ್ಲಿ ನ್ಯಾಯ ಅಪೇಕ್ಷಿಸುತ್ತಿದ್ದ ಕರ್ನಾಟಕಕ್ಕೆ ಕೇಂದ್ರ್ರದ ತೀರ್ಮಾನದಿಂದ ಅನ್ಯಾಯವಾಗಿದೆ’ ಎಂದು ಪ್ರಕಟಣೆಯಲ್ಲಿ ಹೇಳಿದ್ದಾರೆ. ‘ಕೇಂದ್ರ ಸರ್ಕಾರ ಗೆಜೆಟ್‌ನಲ್ಲಿ ಪ್ರಕಟಣೆ ಮಾಡದೇ ಇರುವುದರಿಂದ ಕರ್ನಾಟಕದ ಪಾಲಿನ 200 ಟಿಎಂಸಿ ಅಡಿ ನೀರು ರಾಜ್ಯಕ್ಕೆ ದಕ್ಕದೇ ಬಹುದೊಡ್ಡ ಅನ್ಯಾಯಕ್ಕೆ ಕಾರಣವಾಗಿದೆ’ ಎಂದಿದ್ದಾರೆ.

ರಾಜ್ಯ ಸರ್ಕಾರ ಆಕ್ಷೇಪ

‘ಕೇಂದ್ರ ಸರ್ಕಾರದ ಈ ಕ್ರಮವು, ಇತ್ಯರ್ಥವಾಗಿರುವ ಜಲ ವಿವಾದದಲ್ಲಿ ನ್ಯಾಯ ಅಪೇಕ್ಷಿಸುತ್ತಿದ್ದ ಕರ್ನಾಟಕಕ್ಕೆ ಆಘಾತ ತಂದಿದೆ. ನ್ಯಾಯಮಂಡಳಿಯ ಅಂತಿಮ ತೀರ್ಪನ್ನು ಪ್ರಕಟಿಸಬೇಕು ಎಂದು ರಾಜ್ಯ ಸರ್ಕಾರ 10 ವರ್ಷಗಳಿಂದ ಒತ್ತಾಯಿಸುತ್ತಿದೆ. ಗೆಜೆಟ್ ಪ್ರಕರಣೆ ಆಗದಿರುವುದರಿಂದ 200 ಟಿಎಂಸಿ ನೀರನ್ನು ಬಳಸಲು ಸಾಧ್ಯವಾಗುತ್ತಿಲ್ಲ. ಕೇಂದ್ರ ಸರ್ಕಾರ ಕೂಡಲೇ ಈ ಅವಧಿ ವಿಸ್ತರಣೆಯನ್ನು ಮರಳಿ ಪಡೆಯಬೇಕು. ಇಲ್ಲವೇ ಗೆಜೆಟ್‌ನಲ್ಲಿ ಪ್ರಕಟಿಸಲು ನ್ಯಾಯಯುತ ಕ್ರಮಕೈಗೊಳ್ಳಬೇಕು’ ಎಂದು ಗಡಿ ಹಾಗೂ ಜಲವಿವಾದ ಸಚಿವ ಎಚ್‌.ಕೆ.ಪಾಟೀಲ ಆಗ್ರಹಿಸಿದ್ದಾರೆ.

ವಿದೇಶಿಯರಿಗೆ 'ಗುಹೆ'ಗಳೇಕೆ ಇಷ್ಟ?

ಗೋಕರ್ಣದ ಗುಹೆಗಳು: ಕೆಲವರಿಗೆ ಧ್ಯಾನ, ಹಲವರಿಗೆ ಮೋಜಿನ ತಾಣ

• ಗಣಪತಿ ಹೆಗಡೆ

ಕಾರವಾರ: ಗೋಕರ್ಣದ ಗುಹೆಯೊಂದರಲ್ಲಿ ಇಬ್ಬರು ಮಕ್ಕಳೊಂದಿಗೆ ರಷ್ಯಾದ ಮಹಿಳೆಯೊಬ್ಬರು ವಾಸವಿದ್ದ ಘಟನೆಯ ಬೆನ್ನಲ್ಲೇ ವಿದೇಶಿಯರಿಗೆ ಗುಹೆಗಳೇಕೆ ಇಷ್ಟ ಎಂಬ ಚರ್ಚೆ ಮುನ್ನೆಲೆಗೆ ಬಂದಿದೆ.

ಗೋಕರ್ಣದ ಮುಖ್ಯ ಕಡಲತೀರದ ಪಕ್ಕದ ಗುಡ್ಡ, ಕುಡ್ಲೆ ಕಡಲತೀರದ ಮೇಲ್ಭಾಗದ ಗುಡ್ಡದಲ್ಲಿ ಐದಕ್ಕೂ ಹೆಚ್ಚು ಗುಹೆಗಳಿವೆ. ಅವುಗಳಲ್ಲಿ ರಾಮತೀರ್ಥ, ಗೋಗರ್ಭ ಗುಹೆಗಳು ಹೆಚ್ಚು ಪ್ರಚಲಿತ.

'ಮಳೆಗಾಲದ ಬಳಿಕ ಗೋಕರ್ಣಕ್ಕೆ ಬರುವ ವಿದೇಶಿ ಪ್ರವಾಸಿಗರು ನಾಲ್ಕೈದು ತಿಂಗಳು ತಂಗುತ್ತಾರೆ. ಬೇಸಿಗೆಯಲ್ಲಿ ತಮ್ಮೂರಿಗೆ ಮರಳುತ್ತಾರೆ. ಇಲ್ಲಿದ್ದಷ್ಟು ದಿನ ಗುಹೆಗಳಲ್ಲಿ ಮೋಜು ಮಾಡುತ್ತಾರೆ. ಕೆಲವರು ಮಾತ್ರ ಧ್ಯಾನ, ಏಕಾಂತ ಬಯಸಿ ಗುಹೆಯಲ್ಲಿ ಇರುತ್ತಾರೆ' ಎಂದು ಸ್ಥಳೀಯರು ತಿಳಿಸಿದರು.

'ಏಕಾಂತ ಬಯಸುವ ಹಿಪ್ಪಿಗಳು ಮತ್ತು ಮಾದಕ ವ್ಯಸನಿ ಪ್ರವಾಸಿಗರು ಗುಹೆಗಳಲ್ಲಿ ತಂಗುತ್ತಾರೆ' ಎಂದು ಬಂಕಿಕೊಡ್ಲದ ನಿತ್ಯಾನಂದ ರಾಯ್ಕರ್ ಹೇಳಿದರು. 2018ರಲ್ಲಿ ರಷ್ಯಾದ ಪ್ರವಾಸಿಗನೊಬ್ಬ, ವೀಸಾ ಅವಧಿ ಮುಗಿದರೂ ಇಲ್ಲಿ ವಾಸವಿದ್ದ. ರಾಮತೀರ್ಥ ಗುಹೆಯಲ್ಲೇ ಸಿಕ್ಕಿಬಿದ್ದಿದ್ದ.

ವೀಸಾ ಅವಧಿ ಮೀರಿದ ನಂತರವೂ ಉಳಿಯುವ ಪ್ರವಾಸಿಗರು ಹೋಮ್ ಸ್ಟೇ, ರೆಸಾರ್ಟ್‌ಗಳಲ್ಲಿ ತಂಗಲು ಹಿಂಜರಿಯುತ್ತಾರೆ. ಅಲ್ಲಿ ವಿದೇಶಿಗರು ಸಿ-ಫಾರಂ (ದೃಢೀಕರಣ ಪತ್ರ) ಭರ್ತಿ ಮಾಡಬೇಕು. ಇದೇ ಕಾರಣಕ್ಕೆ ಗುಹೆ, ಜನ ಸಂಚಾರ ಇಲ್ಲದ ಗುಡ್ಡ, ಕಡಲತೀರದ ಪ್ರದೇಶಗಳನ್ನು ಆಯ್ದು ಅಲ್ಲಿಯೇ ತಿಂಗಳುಗಟ್ಟಲೆ ವಾಸ್ತವ್ಯ ಹೂಡುತ್ತಾರೆ' ಎಂದು ಸ್ಥಳೀಯ ನಿವಾಸಿ ಮಾಣಿ ಗೌಡ ಹೇಳಿದರು.

ಬಂಧನ ಕೇಂದ್ರದಲ್ಲಿ ರಷ್ಯಾದ ಮಹಿಳೆ

'ರಾಮತೀರ್ಥ ಗುಹೆಯಲ್ಲಿ ಜುಲೈ 9ರಂದು ಪತ್ತೆಯಾಗಿದ್ದ ರಷ್ಯನ್ ಮಹಿಳೆ ನೀನಾ ಕುಟಿನಾ ಮತ್ತು ಆಕೆಯ ಇಬ್ಬರು ಮಕ್ಕಳನ್ನು ಸದ್ಯ ತುಮಕೂರಿನ ವಿದೇಶಿ ಬಂಧನ ಕೇಂದ್ರದಲ್ಲಿ ಇರಿಸಲಾಗಿದೆ. ರಷ್ಯಾ ರಾಯಭಾರ ಕಚೇರಿಗೆ ಮಾಹಿತಿ ನೀಡಲಾಗಿದೆ. ಅಲ್ಲಿಂದ ಸೂಚನೆ ಬಂದ ಬಳಿಕ ಆಕೆಯನ್ನು ರಷ್ಯಾಗೆ ವಾಪಸ್ ಕಳಿಸಲಾಗುವುದು' ಎಂದು ಹೆಚ್ಚುವರಿ ಪೊಲೀಸ್ ವರಿಷ್ಠಾಧಿಕಾರಿ ಜಿ.ಕೃಷ್ಣಮೂರ್ತಿ ತಿಳಿಸಿದರು.

ಗೋಕರ್ಣದ ಗೋಗರ್ಭ ಗುಹೆಯಲ್ಲಿ ವಿದೇಶಿ ಪ್ರವಾಸಿಗರು ಧ್ಯಾನ ಮಾಡುತ್ತ ಕುಳಿತಿದ್ದರು (ಸಂಗ್ರಹ ಚಿತ್ರ)

ಮಾದಕ ವ್ಯಸನ ಹೆಚ್ಚು

'ಗೋಕರ್ಣದಲ್ಲಿ ಗುಡ್ಡದ ಮೇಲಿರುವ ಗುಹೆಗಳಿಗೆ ಸಾಗಲು ಕಾಲ್ನಡಿಗೆ ಅನಿವಾರ್ಯ. ಕಡಿದಾದ ದಾರಿ, ಕುರುಚಲು ಪೊದೆಗಳನ್ನು ದಾಟಿ ಸಾಗಬೇಕು.. ಪೊಲೀಸರು ಇಂತಹ ಸ್ಥಳಗಳಿಗೆ ಬರುವುದು ವಿರಳ. ಇದೇ ಕಾರಣಕ್ಕೆ ಗುಹೆ, ಗುಡ್ಡದ ಪ್ರದೇಶದಲ್ಲಿ ಮಾದಕ ವ್ಯಸನ ಚಟುವಟಿಕೆಗಳು ನಡೆಯುವುದು ಹೆಚ್ಚು. ಪೊಲೀಸರು ಭೇಟಿ ನೀಡಿದಾಗ ಧ್ಯಾನಸ್ಥರಾಗಿ ಕೂತಂತೆ ನಟಿಸುತ್ತಾರೆ' ಎಂದು ಹೋಟೆಲ್ ಉದ್ಯಮಿಯೊಬ್ಬರು ಹೇಳಿದರು.

ಯೋಧ ಹುತಾತ್ಮ

ಬೊಕಾರೊ (ಪಿಟಿಐ): ಜಾರ್ಖಂಡ್‌ನ ಬೊಕಾರೊ ಜಿಲ್ಲೆಯಲ್ಲಿ ಬುಧವಾರ ಭದ್ರತಾ ಸಿಬ್ಬಂದಿ ಹಾಗೂ ನಕ್ಸಲರ ನಡುವೆ ಗುಂಡಿನ ಚಕಮಕಿ ನಡೆದಿದ್ದು, ಸಿಆರ್‌ಪಿಎಫ್‌ನ ಯೋಧರೊಬ್ಬರು ಹುತಾತ್ಮರಾಗಿದ್ದಾರೆ. ನಕ್ಸಲ್ ಕುನ್ವಾರ್ ಮಾಂಝಿ ಹತನಾಗಿದ್ದಾನೆ.

ಚಿಟಿಕೆ ಸುದ್ದಿ

ಡಿಜಿಟಲ್ ಅರೆಸ್ಟ್: ₹40.95 ಕೋಟಿ ವಂಚಿಸಿದವ ಸೆರೆ

ಕಾರವಾರ: ಡಿಜಿಟಲ್ ಅರೆಸ್ಟ್ ಮೂಲಕ ದೇಶದ ವಿವಿಧೆಡೆ ₹40.95 ಕೋಟಿ ವಂಚಿಸಿದ್ದ ಬಿಹಾರ ರಾಜ್ಯದ ಪಾಟ್ನಾದ ಹರ್ದೀಪ್ ಸಿಂಗ್ (39) ಎಂಬುವನನ್ನು ಕಾರವಾರ ಸಿಇಎನ್ ಠಾಣೆಯ ಪೊಲೀಸರು ಬಿಹಾರದಲ್ಲಿ ಬಂಧಿಸಿದ್ದಾರೆ.

ನಗರದ ವಿಲ್ಸನ್ ಎಂಬುವರಿಗೆ 'ವಿದೇಶದಿಂದ ಪಾರ್ಸೆಲ್‌ನಲ್ಲಿ ಮಾದಕ ಪದಾರ್ಥ ಸಿಕ್ಕಿದೆ' ಎಂದು ಪೊಲೀಸ್ ಅಧಿಕಾರಿಗಳ ಸೋಗಿನಲ್ಲಿ ವಿಡಿಯೊ ಕರೆ ಮಾಡಿ, ಬೆದರಿಸಿ ₹3.80 ಲಕ್ಷ ವಂಚಿಸಿದ್ದಾಗಿ 2024ರ ಅಕ್ಟೋಬರ್ 23 ರಂದು ಪ್ರಕರಣ ದಾಖಲಾಗಿತ್ತು.

'ಸಿದ್ದರಾಮಯ್ಯ ನೇತೃತ್ವ ವಹಿಸಲಿ'

ಕಲಬುರಗಿ: 'ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಕನಿಷ್ಠ ಬೆಂಬಲ ಬೆಲೆ ಕಾಯ್ದೆ ಜಾರಿಗಾಗಿ ನಡೆಯುತ್ತಿರುವ ರಾಷ್ಟ್ರ ಮಟ್ಟದ ಹೋರಾಟದ ನೇತೃತ್ವ ವಹಿಸಿ, ರೈತರ ಧ್ವನಿಯಾಗಬೇಕು' ಎಂದು ರಾಜ್ಯ ಯೋಜನಾ ಆಯೋಗದ ಉಪಾಧ್ಯಕ್ಷ ಬಿ.ಆರ್.ಪಾಟೀಲ ಮನವಿ ಮಾಡಿದರು.

ಬುಧವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, 'ಸಿದ್ದರಾಮಯ್ಯ ಸ್ವಂತ ಹೊಲದಲ್ಲಿ ಉಳುಮೆ ಮಾಡಿದವರು. ದೇವನಹಳ್ಳಿಯಲ್ಲಿ ರೈತರ ಹಿತದೃಷ್ಟಿಯಿಂದ ಜಮೀನು ಮರಳಿಸುವಂಥ ಐತಿಹಾಸಿಕ ನಿರ್ಧಾರ ಕೈಗೊಂಡಿದ್ದಾರೆ. ಅದರಂತೆ, ಎಂಎಸ್‌ಪಿ ಕಾಯ್ದೆ ಜಾರಿ ಹೋರಾಟದ ನೇತೃತ್ವವನ್ನೂ ಅವರು ವಹಿಸಬೇಕು' ಎಂದು ಕೋರಿದರು.

'ಕಾರ್ಕಳ ಶಾಸಕರಿಂದ ರಾಜ್ಯದ್ರೋಹ'

ಉಡುಪಿ: 'ಪರಶುರಾಮನ ಕಂಚಿನ ಮೂರ್ತಿ ನಿರ್ಮಾಣ ಮಾಡಿದ್ದೇನೆ ಎಂದು ಹೇಳಿ ಕಾರ್ಕಳ ಶಾಸಕ ಸುನಿಲ್ ಕುಮಾರ್ ಅವರು ಅಂದಿನ ಮುಖ್ಯಮಂತ್ರಿ ಬೊಮ್ಮಾಯಿ ಮತ್ತು ಸಚಿವರನ್ನು ಕರೆಸಿ ನಕಲಿ ಮೂರ್ತಿ ಉದ್ಘಾಟನೆ ಮಾಡಿಸಿ ರಾಜ್ಯದ್ರೋಹ ಎಸಗಿದ್ದಾರೆ. ಅವರು ರಾಜೀನಾಮೆ ನೀಡಬೇಕು' ಎಂದು ಕಾರ್ಕಳ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಶುಭದರಾವ್ ಆರೋಪಿಸಿದರು.

ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿ 'ಶಾಸಕರ ತಪ್ಪಿನಿಂದ ಅಧಿಕಾರಿಗಳು ಶಿಕ್ಷೆ ಅನುಭವಿಸುವಂತಾಗಿದೆ' ಎಂದರು.

IN THE COURT OF THE HON'BLE 82ND ADDL. CITY CIVIL JUDGE AT BANGALORE
(Commercial Court - CCH 83)
Comm O.S. 1389/2024

Between : The Printers (Mysore) Private Limited
Registered office at,
#75, Mahatma Gandhi Road,
Bangalore-560 001
Represented by **Harish L.,**
Senior Manager, Advertisement
...PLAINTIFF

AND
M/s Yukta Advertisers
1, Opp Janatha Seva Co-operative Bank,
1st Main, RPC Layout, Vijayanagar,
Bangalore-560104 Karnataka
...DEFENDANT
Represented by its Proprietor
Mr. Niranjan

Whereas the Plaintiff has filed the above suit seeking recovery of **Rs. 14,50,188/- (Rupees Fourteen Lakh fifty Thousand one Hundred Eighty eight)** along with **18% interest** per annum.

The Defendants are hereby notified to appear before the Hon'ble Court in person or by pleader duly instructed on, **4th August 2025 at 11 'O' clock,** to show-cause against the above suit, take notice that, in default of your appearance on the date aforementioned, the suit will be heard and determined in your absence.

Given under my hand and the seal of court, this the **28th June 2025.**

Advocate for the Plaintiff
Tarunn Surana
Surana & Co, Advocates
58, Railway parallel Road, Kumarapark West, Bangalore-560020. 98459 10663
tarunn@suranaandco.com

By the order of the
Sd/- City Civil. & Session Judge, Bangalore City

ಕರ್ನಾಟಕ ಸರ್ಕಾರ
ನಗರಸಭೆ ಕಾರ್ಯಾಲಯ, ಶಹಾಪುರ
ಜಿ: ಯಾದಗಿರಿ. ಕರ್ನಾಟಕ ರಾಜ್ಯ.
Website:www.shahapurcity.gov.in e-mail: itstaff_ulb_shahapur@yahoo.com,

ಕ್ರ.ಸಂ/ನಸಶ/ತಾಂತ್ರಿಕ/ಟೆಂಡರ್/ಜಾ.ಪ್ರ./2025-26 ದಿನಾಂಕ:15.07.2025

ಇ-ಪ್ರೊಕ್ಯೂರ್‌ಮೆಂಟ್ ಟೆಂಡರ್ ಪ್ರಕಟಣೆ

ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಆದೇಶ 1999-2000ರ ಪ್ರಕಾರ ಪಾರದರ್ಶಕತೆ ಕಾಯ್ದೆ-2000 ನಿಯಮದಂತೆ 2024-25ನೇ ಸಾಲಿನ ಕೆ.ಕೆ.ಆರ್.ಡಿ.ಬಿ ಪ್ರಾದೇಶಿಕ ನಿಧಿ ಯೋಜನೆಯಡಿ ತೆಗೆದುಕೋಂಡ ಕಾಮಗಾರಿಯ ಅರ್ಹಗುತ್ತಿಗೆದಾರರಿಗೆ/ಏಜೆನ್ಸಿರವರು ಸ್ಟ್ಯಾಂಡರ್ಡ ಟೆಂಡರ್ ಡಾಕ್ಯೂಮೆಂಟ್ ನಿಬಂಧನೆಗೊಳಪಟ್ಟಂತೆ ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ www.kppp.karnatak.gov.in ಟೆಂಡರ್‌ಗಳನ್ನು ಅವ್ಹಾನಿಸಲಾಗಿದೆ.

1) Name of works: Providing of Elecricals Poles and Elecrification of Shahapur city. **Indent Number:** DMA/2025-26/EL/WORK_INDENT_43273. **Estimat cost (in lakhs):** 140.00. **E M D (in Rs):** As per E-Portal **Work period:** 06 Month **Class of contractor:** Class 2 and Above Elecrical.

1) **ಟೆಂಡರ್ ಪ್ರಾರಂಭ ದಿನಾಂಕ:** 16.07.2025 2) **ಭರ್ತಿ ಮಾಡಿದ ಟೆಂಡರಗಳನ್ನು ಸಲ್ಲಿಸುವ ಕೊನೆಯ ದಿನಾಂಕ:** 30.07.2025 ಸಾಯಂಕಾಲ 5:00 ಘಂಟೆಗೆ 3) **ಟೆಂಡರ್ ತೆರೆಯುವ ದಿನಾಂಕ:** 31.07.2025 ಸಾಯಂಕಾಲ 5.15. ಘಂಟೆಗೆ 4) **ವಿಳಾಸ:** www.kppp.karnataka.in

ಸಹಿ/- ಪೌರಾಯುಕ್ತರು
ನಗರಸಭೆ ಶಹಾಪುರ

ವಾ.ಸಾ.ಸಂ.ಇ/ಯಾದಗಿರಿ/154/ಕೆ.ಎಸ್.ಎಂ.ಸಿ.ಎ/2025-26

ಬೆಂಗಳೂರು ಘನತ್ಯಾಜ್ಯ ನಿರ್ವಹಣೆ ನಿಯಮಿತ
ನೋಂದಾಯಿತ ಕಚೇರಿ: 30/1, 1ನೇ ಮತ್ತು 2ನೇ ಮಹಡಿ, ಬಿಬಿಎಂಪಿ ಕಟ್ಟಡ, ತಿಮ್ಮಯ್ಯ ರಸ್ತೆ, ಮಿಲ್ಲರ್ಸ್ ಟ್ಯಾಂಕ್ ಬಂಡ್ ಪ್ರದೇಶ, ವಸಂತ ನಗರ, ಬೆಂಗಳೂರು- 560051. ಇಮೇಲ್-ಐಡಿ: dgm3bswml@gmail.com

ಸಂ: ಉಪ್ರವ್ಯ-3/ಬೆಂಘತ್ಯಾನಿನಿ/ಟೆಂಡ್/07/2025-26 ದಿನಾಂಕ:17.07.2025

ಅಲ್ಪಾವಧಿ ಟೆಂಡರ್‌ಗಾಗಿ ಆಹ್ವಾನ (ಐಎಫ್‌ಟಿ)
(ಜಿಒಕೆ ಕೆಪಿಪಿ ಪೋರ್ಟಲ್ ಮೂಲಕ ಮಾತ್ರ)

1. ಬಿಬಿಎಂಪಿ ಸ್ಥಾಪಿಸಿದ ತ್ಯಾಜ್ಯ ಸಂಸ್ಕರಣಾ ಘಟಕಗಳನ್ನು SOP ಪ್ರಕಾರ ಅನುಮೋದಿತ ತಂತ್ರಜ್ಞಾನದೊಂದಿಗೆ ಹಸಿ ತ್ಯಾಜ್ಯವನ್ನು ಸಂಸ್ಕರಿಸಿ ಕಾಂಪೋಸ್ಟ್ ಉತ್ಪಾದಿಸಲು ಕಾರ್ಯಾಚರಣೆ ಮತ್ತು ನಿರ್ವಹಿಸಬೇಕು.
2. ಈ ಹಿನ್ನೆಲೆಯಲ್ಲಿ, ಈ ಕೆಳಗಿನ ಕೆಲಸಗಳಿಗಾಗಿ ವ್ಯವಸ್ಥಾಪಕ ನಿರ್ದೇಶಕರ ಪರವಾಗಿ ಬೆಂಘತ್ಯಾನಿನಿ ಪರವಾಗಿ ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ.
3. ಕರ್ನಾಟಕ ಸಾರ್ವಜನಿಕ ಸಂಗ್ರಹಣೆ ಪೋರ್ಟಲ್ ಮೂಲಕ ಇ-ಪಾವತಿ ರೂಪದಲ್ಲಿ ಪ್ರತಿ ಕೆಲಸದ ಐಟಂ (ಮರುಪಾವತಿಸಲಾಗದ) ಮುಂದೆ ಸೂಚಿಸಲಾದ ನಿಗದಿತ ಶುಲ್ಕವನ್ನು ಪಾವತಿಸುವ ಮೂಲಕ ಟೆಂಡರ್ ದಾಖಲೆಗಳನ್ನು ಕರ್ನಾಟಕ ಸಾರ್ವಜನಿಕ ಸಂಗ್ರಹಣೆ ಪೋರ್ಟಲ್ ವೆಬ್‌ಸೈಟ್ (https://kppp.karnataka.gov.in) ನಿಂದ ಡೌನ್‌ಲೋಡ್ ಮಾಡಬಹುದು. ಬಿಡ್‌ದಾರರು ಕರ್ನಾಟಕ ಸಾರ್ವಜನಿಕ ಸಂಗ್ರಹಣೆ ಪೋರ್ಟಲ್ ಮೂಲಕ ಬಿಡ್ ಅನ್ನು ಸಲ್ಲಿಸಬೇಕು.

ಕ್ರ. ಸಂ.	ಕಾಮಗಾರಿಯ ವಿವರ	ಟೆಂಡರಿನ ಅಂದಾಜು ಮೊತ್ತ (ರೂ ಲಕ್ಷಗಳಲ್ಲಿ)	ಇಎಂಡಿ (ರೂಗಳಲ್ಲಿ)	ಪೂರ್ಣಗೊಳಿಸುವ ಅವಧಿ
1	ಸೀಗೆಹಳ್ಳಿಯಲ್ಲಿರುವ 120 ಟಿಪಿಡಿ ಸಾಮರ್ಥ್ಯದ ಹಸಿ ತ್ಯಾಜ್ಯ ಸಂಸ್ಕರಣಾ ಘಟಕದ ಕಾರ್ಯಾಚರಣೆ ಮತ್ತು ನಿರ್ವಹಣೆ (ಕರೆ 2).	994.27	ರೂ. 1,00,000/- ಇ-ಪಾವತಿಯ ಮೂಲಕ ಅಂದರೆ, ಆನ್‌ಲೈನ್/ ಆರ್‌ಟಿಜಿಎಸ್ / ಎನ್‌ಇಎಫ್‌ಟಿ / ಓಟಿಸಿ ಹಾಗೂ ಉಳಿದ ರೂ. 13,91,405/- ಬ್ಯಾಂಕ್ ಗ್ಯಾರಂಟಿ/ ಎಫ್‌ಡಿಆರ್ ಮೂಲಕ ರಾಷ್ಟ್ರೀಕೃತ/ ಶೆಡ್ಯೂಲ್ಡ್ ಬ್ಯಾಂಕ್‌ನಿಂದ ನೀಡುವುದು.	24 ತಿಂಗಳು
2	ಚಿಕ್ಕನಾಗಮಂಗಲದಲ್ಲಿರುವ 300 ಟನ್‌ಗಳಷ್ಟು ತೂಕದ ಹಸಿ ತ್ಯಾಜ್ಯ ಸಂಸ್ಕರಣಾ ಘಟಕದ ಕಾರ್ಯಾಚರಣೆ ಮತ್ತು ನಿರ್ವಹಣೆ (ಕರೆ 2).	1986.45	ರೂ. 1,00,000/- ಇ-ಪಾವತಿಯ ಮೂಲಕ ಅಂದರೆ, ಆನ್‌ಲೈನ್/ ಆರ್‌ಟಿಜಿಎಸ್ / ಎನ್‌ಇಎಫ್‌ಟಿ / ಓಟಿಸಿ ಹಾಗೂ ಉಳಿದ ರೂ. 18,86,450/- ಬ್ಯಾಂಕ್ ಗ್ಯಾರಂಟಿ/ ಎಫ್‌ಡಿಆರ್ ಮೂಲಕ ರಾಷ್ಟ್ರೀಕೃತ/ ಶೆಡ್ಯೂಲ್ಡ್ ಬ್ಯಾಂಕ್‌ನಿಂದ ನೀಡುವುದು.	24 ತಿಂಗಳು

1) ಬಿಡ್ ಪೂರ್ವಭಾವಿ ಸಭೆಯು **22.07.2025 ರಂದು 15:00 ಗಂಟೆಗೆ** ಮುಖ್ಯ ಅಭಿಯಂತರರು ಮತ್ತು ಮುಖ್ಯ ಪ್ರಧಾನ ವ್ಯವಸ್ಥಾಪಕರು (ತಾಂತ್ರಿಕ), ಬೆಂಗಳೂರು ಘನ ತ್ಯಾಜ್ಯ ನಿರ್ವಹಣೆ ನಿಯಮಿತ, ಯುಎನ್‌ಐ ಕಟ್ಟಡ, ತಿಮ್ಮಯ್ಯ ರಸ್ತೆ, ವಸಂತ ನಗರ, ಬೆಂಗಳೂರು - 560052 ಕಚೇರಿಯಲ್ಲಿ ನಡೆಯಲಿದೆ. 2) ಟೆಂಡರ್ ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ : **01.08.2025ರ ಸಂಜೆ 4.00 ಗಂಟೆಯವರೆಗೆ,** ತಾಂತ್ರಿಕ ಬಿಡ್ ತೆರೆಯುವ ದಿನಾಂಕ : **02.08.2025 ರ ಸಂಜೆ 16.30 ಗಂಟೆಗೆ.**

ಸಹಿ/-
ಉಪ ಪ್ರಧಾನ ವ್ಯವಸ್ಥಾಪಕರು-3, ಬೆಂಘತ್ಯಾನಿನಿ

ವಾಸಾಸಂಇ/ವಾಪ್ರ/ಜಿಎ/1870/2025-26

ಪುರಸಭಾ ಕಾರ್ಯಾಲಯ, ಹೊಸದುರ್ಗ-577527 (ಜಿಲ್ಲೆ: ಚಿತ್ರದುರ್ಗ.)
ಫೋನ್ ನಂ. 08199-230221 E-mail:tmchosadurga@yahoo.com Webist: hosadurgatown.gov.in
ಕ್ರಮಾಂಕ : ತಾ.ಶಾ/ಸಿಆರ್-04/2025-26/02 ದಿನಾಂಕ: 14-07-2025

ಇ-ಪ್ರಕ್ಯೂರ್‌ಮೆಂಟ್ ಟೆಂಡರ್ ಪ್ರಕಟಣೆ
(ಸ್ಟ್ಯಾಂಡರ್ಡ್ ಟೆಂಡರ್ ಡಾಕ್ಯೂಮೆಂಟ್ ನಿಬಂಧನೆಗಳಿಗೊಳಪಟ್ಟು ಟೆಂಡರ್ ಆಹ್ವಾನಿಸಲಾಗಿದೆ.)

ಕರ್ನಾಟಕ ರಾಜ್ಯದ ರಾಜ್ಯಪಾಲರ ಪರವಾಗಿ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ (ತಿದ್ದುಪಡಿ) ಅಧಿನಿಯಮ 2016 ಪ್ರಕಾರ ಹೊಸದುರ್ಗ ಪುರಸಭೆ ವ್ಯಾಪ್ತಿಯಲ್ಲಿ 2025-26ನೇ ಸಾಲಿನ 15ನೇ ಹಣಕಾಸು ಆಯೋಗದ ಅನುದಾನ, ಎಸ್.ಎಫ್.ಸಿ., ಎಸ್.ಸಿ.ಎಸ್.ಪಿ, ಟಿ.ಎಸ್.ಪಿ ಮತ್ತು ಎಸ್.ಎಫ್.ಸಿ ಕುಡಿಯುವ ನೀರಿನ ಅನುದಾನದಡಿ ಹಾಗೂ 15ನೇ ಹಣಕಾಸು ಆಯೋಗದ ಅನುದಾನ, ಎಸ್.ಎಫ್.ಸಿ ಅನುದಾನದ ಅಡಿಗಳಲ್ಲಿ ಉಳಿತಾಯ ಮೊತ್ತದಲ್ಲಿ ಮಂಜೂರಾದ ಈ ಕೆಳಕಂಡ ಕಾಮಗಾರಿಗಳಿಗೆ ಲೋಕೋಪಯೋಗಿ ಇಲಾಖೆಯಲ್ಲಿ ನೋಂದಾಯಿಸಲ್ಪಟ್ಟ ಅರ್ಹ ದರ್ಜೆಯ ಗುತ್ತಿಗೆದಾರರಿಂದ ಕರ್ನಾಟಕ ಪಬ್ಲಿಕ್ ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಐಟಂವಾರು ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ. ದಿನಾಂಕ 29.07.2025 ರ ಸಂಜೆ 5:00 ಗಂಟೆವರೆಗೆ ಕರ್ನಾಟಕ ಪಬ್ಲಿಕ್ ಪ್ರೊಕ್ಯೂರ್‌ಮೆಂಟ್ ಪೋರ್ಟಲ್ (https://kppp.karnataka.gov.in) ನಲ್ಲಿ ಟೆಂಡರ್‌ಗಳನ್ನು ಡೌನ್‌ಲೋಡ್ ಮಾಡಿಕೊಂಡು ಭರ್ತಿ ಮಾಡಿ ಅಪ್‌ಲೊಡ್ ಮಾಡಬಹುದಾಗಿರುತ್ತದೆ. ಹೆಚ್ಚಿನ ಮಾಹಿತಿಗಾಗಿ ಈ ಕೆಳಕಂಡ ವೆಬ್ ಸೈಟ್‌ನಲ್ಲಿ ವೀಕ್ಷಿಸಬಹುದಾಗಿರುತ್ತದೆ.
www.hosdurgatown.mrc.gov.in ಮತ್ತು https://kppp.karnataka.gov.in ಹಾಗೂ ಕಛೇರಿಯ ಸೂಚನಾ ಫಲಕದಲ್ಲಿ ಹಾಕಲಾಗಿರುರುತ್ತದೆ. ಮತ್ತು ಹೆಚ್ಚಿನ ಮಾಹಿತಿಗಾಗಿ ಕಛೇರಿ ವೇಳೆಯಲ್ಲಿ ತಾಂತ್ರಿಕ ಶಾಖೆಯಲ್ಲಿ ಪಡೆಯಬಹುದು.

ಕ್ರ. ಸಂ	ಕಾಮಗಾರಿ ಹೆಸರು	ಟೆಂಡರ್‌ಗಿಟ್ಟ ಮೊತ್ತ (ರೂ.ಗಳಲ್ಲಿ) (ಜಿ.ಎಸ್.ಟಿ. ಹೊರತು ಪಡಿಸಿ)	ಇ.ಎಂ.ಡಿ (ರೂ.ಗಳಲ್ಲಿ)	ನಿಗಧಿ ಪಡಿಸಿದ ಕಾಲಾವಧಿ	ಮೀಸಲಾತಿ
1	DMA/2025-26/OW/WORK_INDENT44444	12,99,497-00	16,250/-	4 ತಿಂಗಳು	ಪರಿಶಿಷ್ಟ ಜಾತಿ
2	DMA/2025-26/OW/WORK_INDENT44680	13,03,190-00	32,580/-	4 ತಿಂಗಳು	ಇತರೆ
3	DMA/2025-26/OW/WORK_INDENT44685	13,10,294-00	32,757/-	4 ತಿಂಗಳು	ಇತರೆ
4	DMA/2025-26/OW/WORK_INDENT44690	8,45,186-00	21,130/-	4 ತಿಂಗಳು	ಇತರೆ
5	DMA/2025-26/OW/WORK_INDENT44700	8,59,066-00	21,477/-	4 ತಿಂಗಳು	ಇತರೆ
6	DMA/2025-26/RD/WORK_INDENT44709	5,89,911-00	7,374/-	3 ತಿಂಗಳು	ಪರಿಶಿಷ್ಟ ಜಾತಿ
7	DMA/2025-26/OW/WORK_INDENT44708	4,40,653-00	5,508/-	3 ತಿಂಗಳು	ಪ್ರವರ್ಗ 2ಎ
8	DMA/2025-26/OW/WORK_INDENT44764	1,68,753-00	4,219/-	3 ತಿಂಗಳು	ಇತರೆ
9	DMA/2025-26/RD/WORK_INDENT45094	7,61,874-00	9,523/-	3 ತಿಂಗಳು	ಪರಿಶಿಷ್ಟ ಜಾತಿ
10	DMA/2025-26/RD/WORK_INDENT45096	6,07,377-00	7,592/-	3 ತಿಂಗಳು	ಪರಿಶಿಷ್ಟ ಪಂಗಡ
11	DMA/2025-26/OW/WORK_INDENT45144	1,92,907-00	4,823/-	3 ತಿಂಗಳು	ಇತರೆ
12	DMA/2025-26/OW/WORK_INDENT45148	1,82,434-00	4561/-	3 ತಿಂಗಳು	ಇತರೆ
13	DMA/2025-26/WS/WORK_INDENT44770	3,38,538-00	4,232/-	3 ತಿಂಗಳು	ಪ್ರವರ್ಗ 2ಎ
14	DMA/2025-26/WS/WORK_INDENT44768	1,68,676-00	4,217/-	3 ತಿಂಗಳು	ಇತರೇ
15	DMA/2025-26/RD/WORK_INDENT44703	8,81,522-00	22,038/-	3 ತಿಂಗಳು	ಇತರೆ
16	DMA/2025-26/WS/WORK_INDENT44705	3,69,586-00	4,620/-	3 ತಿಂಗಳು	ಪ್ರವರ್ಗ 2ಎ
17	DMA/2025-26/EL/WORK_INDENT45157	10,92,397-00	27,310/-	3 ತಿಂಗಳು	ಇತರೆ

ಷರತ್ತುಗಳು:- ಹೆಚ್ಚಿನ ಮಾಹಿತಿಗಾಗಿ ಕಛೇರಿ ವೇಳೆಯಲ್ಲಿ ತಾಂತ್ರಿಕ ವಿಭಾಗದಲ್ಲಿ ಮಾಹಿತಿ ಪಡೆದುಕೊಳ್ಳಬಹುದಾಗಿದೆ ಮತ್ತು ಈ ಪುರಸಭೆಯ ಅಧಿಕೃತ ಅಂತರ್ಜಾಲ ತಾಣ http://www.hosadurgatown.mrc.gov.in ರ Tenders ವಿಭಾಗದಲ್ಲೂ ಸಹ ಟೆಂಡರ್ ಪ್ರಕಟಣೆಯನ್ನು ವೀಕ್ಷಿಸಬಹುದಾಗಿದೆ.

ಸಹಿ/- ಅಧ್ಯಕ್ಷರು, ಪುರಸಭೆ, ಹೊಸದುರ್ಗ.
DIPR/CTA/KSMCA/212/2025-26
ಸಹಿ/-ಮುಖ್ಯಾಧಿಕಾರಿಗಳು, ಪುರಸಭೆ, ಹೊಸದುರ್ಗ.

ಕರ್ನಾಟಕ ಉಚ್ಚ ನ್ಯಾಯಾಲಯ, ಬೆಂಗಳೂರು-01
HCC No.32/2023 ದಿನಾಂಕ: 15.07.2025
ಸಂಕ್ಷಿಪ್ತ ಟೆಂಡರ್ ಅಧಿಸೂಚನೆ

ಕರ್ನಾಟಕ ಉಚ್ಚ ನ್ಯಾಯಾಲಯ, ಬೆಂಗಳೂರು, ಪೀಠಗಳಾದ ಧಾರವಾಡ ಮತ್ತು ಕಲಬುರಗಿ ಮತ್ತು ಅಧೀನ ನ್ಯಾಯಾಲಯಗಳಲ್ಲಿರುವ ಹಾರ್ಡ್‌ವೇರ್‌ಗಳಿಗೆ ವಾರ್ಷಿಕ ನಿರ್ವಹಣೆ ಮಾಡಲು ಮಾನ್ಯ ಕರ್ನಾಟಕ ಉಚ್ಚ ನ್ಯಾಯಾಲಯವು ನಿರ್ಧರಿಸಿದ್ದು, ಅದಕ್ಕಾಗಿ ಟೆಂಡರುಗಳನ್ನು Karnataka Public Procurement Portal ನಲ್ಲಿ ಆಹ್ವಾನಿಸಲಾಗಿದೆ.

ಟೆಂಡರ್‌ನ್ನು **ದಿನಾಂಕ: 31.07.2025 ರ 4:00 ಗಂಟೆಯೊಳಗೆ** ಆಸಕ್ತರು upload ಮಾಡಬಹುದಾಗಿದೆ. ಹೆಚ್ಚಿನ ವಿವರಗಳನ್ನು https://kppp.karnataka.gov.in/#/portal/searchTender/live ಜಾಲತಾಣದ ಮೂಲಕ ಪಡೆದುಕೊಳ್ಳಬಹುದು.

ಸಹಿ/-
(ಎನ್.ಜಿ.ದಿನೇಶ)
ರಿಜಿಸ್ಟ್ರಾರ್ (ಗಣಕ) ಮತ್ತು ಟೆಂಡರ್ ಆಹ್ವಾನಿಸುವ ಪ್ರಾಧಿಕಾರ,
ಕರ್ನಾಟಕ ಉಚ್ಚ ನ್ಯಾಯಾಲಯ, ಬೆಂಗಳೂರು

ವಾಸಾಸಂಇ/ವಾಪ್ರ/1845/ಎಂಎಎ/25-26

ಲೋಕೋಪಯೋಗಿ ಇಲಾಖೆ
ಕಾರ್ಯನಿರ್ವಾಹಕ ಇಂಜಿನೀಯರರು,
ಲೋಕೋಪಯೋಗಿ ಇಲಾಖೆ, ವಿಭಾಗ ಚಿಕ್ಕೋಡಿ.

ಸಂಖ್ಯೆ : ಲೋ.ಇ./ಚಿ.ವಿ./ಸ.ಇಂ.-1/ಟೆಂಡರ್/2025-26/1983
ದಿನಾಂಕ : 15-07-2025

ಅಲ್ಪಾವಧಿ ಇ-ಟೆಂಡರ್ ಪ್ರಕಟಣೆ

ಲೋಕೋಪಯೋಗಿ ಇಲಾಖೆ ಚಿಕ್ಕೋಡಿ ವಿಭಾಗದಡಿ 2024-25 ನೇ ಸಾಲಿನ ಲೆಕ್ಕ ಶಿರ್ಷಿಕೆ 5054 - ಜಿಲ್ಲಾ ಮುಖ್ಯ ರಸ್ತೆ ಸುಧಾರಣೆ ಅಡಿ 04 ಕಾಮಗಾರಿಗಳು ಇದ್ದು, ಗುತ್ತಿಗೆಗೆ ಇಟ್ಟ ಕನಿಷ್ಠ ಮೊತ್ತ ರೂ. 240.00 ಲಕ್ಷ ಹಾಗೂ ಗರಿಷ್ಠ ಮೊತ್ತ ರೂ. 560.00 ಲಕ್ಷ ಇರುವ ಕಾಮಗಾರಿಗಳಿಗೆ ಟೆಂಡರ್ ಆಹ್ವಾನಿಸಲಾಗಿದೆ.

ಗುತ್ತಿಗೆ ಪ್ರಕ್ರಿಯೆಯ ನಿಗದಿತ ದಿನಾಂಕಗಳು ಈ ಕೆಳಗಿನಂತೆ ಇರುವುದು.

1) ಗುತ್ತಿಗೆ ಪೂರ್ವಭಾವಿ ಸಭೆ ವಿಭಾಗ ಕಚೇರಿಯಲ್ಲಿ : 28-07-2025 ರ ಬೆಳಿಗ್ಗೆ 11.00 ಗಂಟೆಗೆ, 2) ಆಕ್ಷೇಪಣೆ - ಸಂದೇಹ ಮತ್ತು ವಿವರಣೆಗಳಿಗೆ ಕೊನೆಯ ದಿನಾಂಕ : 29-07-2025 ರ ಸಂಜೆ 5.30 ಗಂಟೆಯವರೆಗೆ, 3) ಗುತ್ತಿಗೆ ಪತ್ರಗಳನ್ನು ಸ್ವೀಕರಿಸುವ ಕೊನೆಯ ದಿನಾಂಕ : 31-07-2025 ರ ಸಂಜೆ 5.00 ಗಂಟೆಯವರೆಗೆ, 4) ತಾಂತ್ರಿಕ ಬಿಡ್‌ನ್ನು ತೆರೆಯುವ ದಿನಾಂಕ (ದ್ವಿ-ಲಕೋಟೆ ಪದ್ಧತಿ) : 02-08-2025 ರ ಸಂಜೆ 4.30 ಗಂಟೆಗೆ, 5) ಹಣಕಾಸು ಬಿಡ್‌ನ್ನು ತೆರೆಯುವ ದಿನಾಂಕ (ದ್ವಿ-ಲಕೋಟೆ ಪದ್ಧತಿ) : ತಾಂತ್ರಿಕ ಬಿಡ್ ಅನುಮೋದನೆಯಾದ ನಂತರ, 6) ಯಾವುದೇ ಗುತ್ತಿಗೆ ಅಂತಿಮ ದಿನಾಂಕದಂದು ಸ್ವೀಕೃತವಾಗದಿದ್ದಲ್ಲಿ ಇ-ಪ್ರೋಕ್‌ದಲ್ಲಿ ಸ್ವಯಂಚಾಲಿತವಾಗಿ ಗುತ್ತಿಗೆ ಸಲ್ಲಿಸುವ ದಿನಾಂಕ 2 ದಿನ ವಿಸ್ತರಣೆಯಾಗುವುದು.

ಕಾಮಗಾರಿಗಳ ಎಲ್ಲ ವಿವರಗಳಿಗಾಗಿ ಇಲಾಖೆಯ ವೆಬ್‌ಸೈಟ್ : kppp.karnataka.gov.in ನ್ನು ಮತ್ತು ಟೆಂಡರ್ ಪ್ರಕಟಣೆಗಾಗಿ www.kpwd.gov.in ನ್ನು ಗಮನಿಸಲು ಅಥವಾ ಲೋಕೋಪಯೋಗಿ ಇಲಾಖೆ ವಿಭಾಗ ಚಿಕ್ಕೋಡಿ ಕಾರ್ಯಾಲಯವನ್ನು ಕಚೇರಿಯ ವೇಳೆಯಲ್ಲಿ ಸಂಪರ್ಕಿಸಲು ಕೋರಲಾಗಿದೆ.

ಸಹಿ/- ಕಾರ್ಯನಿರ್ವಾಹಕ ಇಂಜಿನೀಯರರು,
ಲೋಕೋಪಯೋಗಿ ಇಲಾಖೆ,
ವಿಭಾಗ ಚಿಕ್ಕೋಡಿ.

ಡಿಐಪಿಆರ್/ಬೆಳಗಾವಿ/657/ಮಣಿಪಾಲ್/2025-26

ಕರ್ನಾಟಕ ಸರ್ಕಾರ
ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಹಾಸನ
HASSAN INSTITUTE OF MEDICAL SCIENCES, HASSAN (An Autonomous Institute under the Dept of Medical Education, Government of Karnataka) SRI CHAMARAJENDRA HOSPITAL CAMPUS, HASSAN
Website: https://himshassan.karnataka.gov.in/
Phone/Fax No.08172-231699, 231599,
Email:directorhims@yahoo.com
ಸಂಖ್ಯೆ: HIMS/TS/OGT/2/2025-TNDR-HIMS-HSN
ದಿನಾಂಕ: 15.07.2025

:: ಇ-ಟೆಂಡರ್ ಪ್ರಕಟಣೆ::

ವಿಷಯ ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ ಮತ್ತು ಸಂಸ್ಥೆಯ ಅಧೀನದಲ್ಲಿ ಬರುವ ಇತರೆ ಸಂಸ್ಥೆಗಳಿಗೆ ಶುಶ್ರೂಷಾಧಿಕಾರಿಗಳ ಸೇವೆ ಮತ್ತು ವಿವಿಧ ತಾಂತ್ರಿಕ ಸಿಬ್ಬಂದಿಗಳ ಸೇವೆಗಳನ್ನು ಹೊರಸಂಪನ್ಮೂಲ ಏಜೆನ್ಸಿಯಿಂದ ಒಂದು ವರ್ಷದ ಅವಧಿಗೆ ಇ-ಟೆಂಡರ್ ಆಹ್ವಾನಿಸಿರುವ ಬಗ್ಗೆ. ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ ಮತ್ತು ಸಂಸ್ಥೆಯ ಅಧೀನದಲ್ಲಿ ಬರುವ ಇತರೆ ಸಂಸ್ಥೆಗಳಿಗೆ 2025-26ನೇ ಸಾಲಿಗೆ ಶುಶ್ರೂಷಾಧಿಕಾರಿಗಳ ಸೇವೆ ಮತ್ತು ವಿವಿಧ ತಾಂತ್ರಿಕ ಸಿಬ್ಬಂದಿಗಳ ಸೇವೆಗಳಿಗಾಗಿ ನೊಂದಾಯಿತ ಹೊರ ಸಂಪನ್ಮೂಲ ಏಜೆನ್ಸಿಯ ಮುಖಾಂತರ ಪಡೆಯಲು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆಯ (KTPP Act) ಅಧಿನಿಯಮ 1999 ಮತ್ತು ನಿಯಮಗಳು 2000 ರ ಪ್ರಕಾರ E-Procurement Portal ನಲ್ಲಿ ಟೆಂಡರ್ ಕರೆಯಲಾಗಿದೆ. ಕ್ರ.ಸ.01)ಟೆಂಡರ್ ಅಧಿಸೂಚನೆ ಸಂಖ್ಯೆ: HIMS/TS/OGT/2/2025-TNDR-HIMS-HSN ವಿವರ ಶುಶ್ರೂಷಾಧಿ ಕಾರಿಗಳ ಸೇವೆ ಮತ್ತು ವಿವಿಧ ತಾಂತ್ರಿಕ ಸಿಬ್ಬಂದಿಗಳ ಸೇವೆಗಳು ಅನ್ಲೈನ್ ಮೂಲಕ ಅರ್ಜಿ ಸಲ್ಲಿಕೆ ದಿನಾಂಕ ಮತ್ತು ಕೊನೆ ದಿನಾಂಕ 18.07.2025ರಿಂದ 18.08.2025 ಟೆಂಡರ್‌ನ ಅಂದಾಜು ಮೊತ್ತ (ರೂ ಲಕ್ಷಗಳಲ್ಲಿ)ರೂ 329.61 ಇ.ಎಂ.ಡಿ ಮೊತ್ತ (ರೂ ಲಕ್ಷಗಳಲ್ಲಿ)ರೂ 4.94 ಮೇಲಿನ ಟೆಂಡರ್ ಪ್ರಕ್ರಿಯೆ ದಿನಾಂಕಗಳನ್ನು ಹಾಗೂ ಇತರೆ ವಿವರಗಳನ್ನು ಕರ್ನಾಟಕ ಸರ್ಕಾರದ ಇ-ಪ್ರೊಕ್ಯೂರ್ ಮೆಂಟ್ ಪೋರ್ಟಲ್ ಸಿಸ್ಟಂ ಮುಖಾಂತರ www.kpppuat.karnataka.gov.in ನ ವೆಬ್ಸೈಟ್ ನಲ್ಲಿ ವೀಕ್ಷಿಸ ಬಹುದು. ಹೆಚ್ಚಿನ ಮಾಹಿತಿಗಾಗಿ ಕಛೇರಿ ವೇಳೆಯಲ್ಲಿ (ರಜಾ ದಿನಗಳನ್ನು ಹೊರತು ಪಡಿಸಿ) ಸಂಪರ್ಕಿಸಬಹುದು.

ಸಹಿ/-ಮುಖ್ಯ ಆಡಳಿತಾಧಿಕಾರಿಗಳು, ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಹಾಸನ.

ವಾಸಾಸಂಇ/ಹಿಸನಿ/ಹಾಸನ/343/ಕೆಎಸ್ಎಂಸಿಎ/2025-26

ಕರ್ನಾಟಕ ಸರಕಾರ
ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗಳ ಕಾರ್ಯಾಲಯ ಕೊಪ್ಪಳ.
ಸಂಖ್ಯೆ: ಉಗ್ರಾಣ/17,36/2024-25/543 ದಿನಾಂಕ : 15.07.2025

ಪ್ರಕಟಣೆ

ಕಲ್ಯಾಣ ಕರ್ನಾಟಕ ಪ್ರದೇಶಾಭಿವೃದ್ಧಿ ಮಂಡಳಿ 2024-25 ನೇ ಸಾಲಿನಲ್ಲಿ ಮಂಜೂರಾದ ವೈದ್ಯಕೀಯ ಉಪಕರಣ ಖರೀದಿ ಮಾಡಲು ಇ-ಪ್ರಕ್ಯೂರ್‌ಮೆಂಟ್ ಮೂಲಕ ಟೆಂಡರ್ ಕರೆಯಲಾಗಿದೆ. ಟೆಂಡರ್ ದಾಖಲೆಗಳನ್ನು e-Portal (https://kppp.karnataka.gov.in/) ನಲ್ಲಿ ಡೌನ್‌ಲೋಡ್ ಮಾಡಿಕೊಳ್ಳಬಹುದಾಗಿದೆ.

1.**Indent No:** DHFWS/2024-25/IND1477/ CALL-2 **Name Of the Equipment:** ಕೊಪ್ಪಳ ವಿಧಾನಸಭಾ ಕ್ಷೇತ್ರದ ಆಸ್ಪತ್ರೆಗಳಿಗೆ ಹೈಡ್ರಾಲಿಕ್ ಕಾಟ್, ಬೆಡ್, ಪಿಲ್ಲೋ, ಬೆಡ್ ಸೈಡ್ ಲಾಕರ್, 3 ಸೀಟರ್ ಚೇರ್, ಸ್ಟೀಲ್ ಅಲಮಾರ್, ಸ್ಟೀಲ್ ರ‍್ಯಾಕ್, ರಿವ್ಹೊಲಿಂಗ್ ಸ್ಟೂಲ್, 3*5 ಟೇಬಲ್, ಸ್ಟೆಫ್ ಸ್ಟೂಲ್, ಗ್ಲಾಸ್ ಡೋರ್ ಅಲ್ಮರಾ, ಡಾಕ್ಟರ್ ರಿವ್ಹೊಲಿಂಗ್ ಚೇರ್, 250 ಲೀಟರ್ ಆರ್.ಓ ಸಿಸ್ಟಮ್‌ನ್ನು ಸರಬರಾಜು ಮಾಡುವುದು. ಖರೀದಿಸಿ ಸರಬರಾಜು ಮಾಡುವುದು. **Amount(in Lakhs):** 125.00

2.**Indent No:** DHFWS/2024-25/IND1634 **Name Of the Equipment:** ಸಮುದಾಯ ಆರೋಗ್ಯ ಕೇಂದ್ರ ಕನಕಗಿರಿ ಆಸ್ಪತ್ರೆಗೆ 300 mA X-ray Machine, Ultra Sound Machine, ಸಮುದಾಯ ಆರೋಗ್ಯ ಕೇಂದ್ರ ಕಾರಟಗಿ ಆಸ್ಪತ್ರೆಗೆ 300 mA X-ray Machine, Dental Chair ಹಾಗೂ ಪ್ರಾಥಮಿಕ ಆರೋಗ್ಯ ಕೇಂದ್ರ ಮುಸಲಾಪೂರ ಆಸ್ಪತ್ರೆಗೆ ECG Machine, Crash Cot, 3 Seater Patient Waiting Chair ವೈದ್ಯಕೀಯ ಉಪಕರಣಗಳನ್ನು ಸರಬರಾಜು ಮಾಡುವುದು. **Amount(in Lakhs):** 76.18

ಟೆಂಡರ್ ಪ್ರಕಟಣೆ ದಿನಾಂಕ: **16-07-2025.** ಟೆಂಡರ್ ದಾಖಲೆಯನ್ನು ಡೌನಲೋಡ್ ಮಾಡಲು ಪ್ರಾರಂಭ ದಿನಾಂಕ: **16-07-2025.** ಆಕ್ಷೇಪಣೆಗಳನ್ನು ಸಲ್ಲಿಸಲು ಕೊನೆಯ ದಿನಾಂಕ: **19-07-2025** ರಂದು ಸಾಯಂಕಾಲ 5.30 ಗಂಟೆಯೊಳಗೆ. ಟೆಂಡರ್ ಅಪಲೋಡ್ ಮಾಡಲು ಕೊನೆಯ ದಿನಾಂಕ: **01-08-2025** ರಂದು ಸಾಯಂಕಾಲ 5.30 ಗಂಟೆಯೊಳಗೆ. ತಾಂತ್ರಿಕ ಬಿಡ್ ತೆರೆಯುವ ದಿನಾಂಕ: **03-08-2025** ಬೆಳಿಗ್ಗೆ 11.00 ಗಂಟೆಗೆ. ಆರ್ಥಿಕ ಬಿಡ್ ತೆರೆಯುವ ದಿನಾಂಕ: **04-08-2025** ಬೆಳಿಗ್ಗೆ 11.00 ಗಂಟೆಗೆ.

ಹೆಚ್ಚಿನ ವಿವರಗಳನ್ನು https://kppp.karnataka.gov.in ವೆಬ್‌ಸೈಟ್‌ನಲ್ಲಿ ಮೇಲಿನ ಟೆಂಡರ್ ನಂಬರಗಳ ಪ್ರಕಾರ ಪಡೆಯಬಹುದಾಗಿದೆ.

ಸಹಿ/- ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ, ಅಧಿಕಾರಿಗಳು ಕೊಪ್ಪಳ.

ಡಿಐಪಿಆರ್/ಕೊಪ್ಪಳ/224/ಕೆಎಸ್ಎಂಸಿಎ/2025-26

ಕರ್ನಾಟಕ ಸರ್ಕಾರ
ಉಪ ನಿರ್ದೇಶಕರು (ಆಡಳಿತ) ಹಾಗೂ ಜಿಲ್ಲಾ ಯೋಜನಾ ಸಮನ್ವಯಾಧಿಕಾರಿಗಳ ಕಾರ್ಯಾಲಯ, ಶಾಲಾ ಶಿಕ್ಷಣ ಇಲಾಖೆ, ಎಸ್.ಎಸ್.ಕೆ., ವಿಜಯಪುರ

ಟೆಂಡರ್ ಪ್ರಕಟಣೆ

ಸಮಗ್ರ ಶಿಕ್ಷಣ ಕರ್ನಾಟಕ ಯೋಜನೆಯಡಿಯಲ್ಲಿ 2024-25 ನೇ ಸಾಲಿನ ಪಿ.ಎ.ಬಿ ಅನುಮೋದಿತ 2025-26 ನೇ ಸಾಲಿಗೆ ಜಿಲ್ಲೆಯ 07 ಬ್ಲಾಕ್‌ಗಳಿಗೆ Academic Resource Person for Career Counselling ಕಾರ್ಯಕ್ರಮ ಅನುಷ್ಠಾನ ಸಂಬಂಧ Career Counsellor ಸೇವೆ ಪೂರೈಕೆಗಾಗಿ ಏಜೆನ್ಸಿ ಆಯ್ಕೆ ಮಾಡಲು ಇ-ಪ್ರಕ್ಯೂರಮೆಂಟ್ ಮೂಲಕ ಈ ಕೆಳಗಿನಂತೆ ಟೆಂಡರ್ ಆಹ್ವಾನಿಸಲಾಗಿದೆ. ಹೆಚ್ಚಿನ ಮಾಹಿತಿಗಾಗಿ: http:www.eproc.karnataka.gov.in ಹಾಗೂ ಕಛೇರಿಯ ದೂರವಾಣಿ ಸಂಖ್ಯೆ: 9448999389 ಕ್ಕೆ ಸಂಪರ್ಕಿಸಬಹುದು.

1) Tender reference no: SSK/2025-26/SE0249

ಸಹಿ/- ಉಪನಿರ್ದೇಶಕರು (ಆಡಳಿತ) ಹಾಗೂ ಪದನಿಮಿತ್ತ
ಜಿಲ್ಲಾ ಯೋಜನಾ ಸಮನ್ವಯಾಧಿಕಾರಿಗಳು,
ಸಮಗ್ರ ಶಿಕ್ಷಣ-ಕರ್ನಾಟಕ, ಶಾಲಾ ಶಿಕ್ಷಣ ಇಲಾಖೆ, ವಿಜಯಪುರ

ವಾಸಾಸಂಇ/ವಿಜಯಪುರ/186/ಕೆಎಸ್ಎಂಸಿಎ/2025-26

ಕರ್ನಾಟಕ ಸರಕಾರ
ಹಿಂದೂ ಧಾರ್ಮಿಕ ಸಂಸ್ಥೆಗಳು ಹಾಗೂ ಧರ್ಮಾದಾಯ ದತ್ತಿ ಇಲಾಖೆ
ಕುಕ್ಕೆ ಶ್ರೀ ಸುಬ್ರಹ್ಮಣ್ಯ ದೇವಸ್ಥಾನ, ಸುಬ್ರಹ್ಮಣ್ಯ, ಕಡಬ ತಾಲೂಕು, ದ.ಕ. 574238
ದೂರವಾಣಿ: 08257-281700, 281423
ಕೆ.ಎಸ್.ಎಸ್.ಟಿ.ನಂ: ನಿ.ವಿ.ಪ.:1/ದಿನಸಿ/2025-26 ದಿನಾಂಕ: 07.07.2025

ಟೆಂಡರು ಪ್ರಕಟಣೆ

ಶ್ರೀ ದೇವಳಕ್ಕೆ ಅವಶ್ಯವಿರುವ ಅಕ್ಕಿ ಮತ್ತು ದಿನಸಿ ಸಾಮಾಗ್ರಿಗಳನ್ನು ಸರಬರಾಜು ಮಾಡುವ ಬಗ್ಗೆ ಇ-ಟೆಂಡರ್‌ನ್ನು ದ್ವಿ-ಲಕೋಟೆ ಪದ್ಧತಿಯಲ್ಲಿ ಇ-ಪೋರ್ಟಲ್ https://kppp.karnataka.gov.in websiteನಲ್ಲಿ ಆಹ್ವಾನಿಸಲಾಗಿದೆ. ಹೆಚ್ಚಿನ ಮಾಹಿತಿಗಾಗಿ ದೇವಳದ ಕಛೇರಿಯನ್ನು ಸಂಪರ್ಕಿಸುವುದು.

ಸಾಮಾಗ್ರಿಗಳ ವಿವರ:
01. ಪ್ರಥಮ ದರ್ಜೆ, ಉತ್ತಮ ಗುಣಮಟ್ಟದ ಅಕ್ಕಿ ಹಾಗೂ ಇತರ ಎಲ್ಲಾ ದಿನಸಿ ಸಾಮಾಗ್ರಿಗಳು ಬ್ರಾಂಡೆಡ್ ಮಾಲುಗಳಾಗಿರಬೇಕು. (ಅಕ್ಕಿ ಹಾಗೂ ದಿನಸಿ ಸಾಮಾಗ್ರಿಗಳ ವಿವರದ ಪಟ್ಟಿ ಪ್ರತ್ಯೇಕಲಗತ್ತಿಸಿದೆ)

ಇನ್ನಿತರ ವಿವರ:
1. ಇ.ಎಂ.ಡಿ. ಮೊತ್ತ: ₹. 10.00 ಲಕ್ಷ
2. ಟೆಂಡರು ಸಲ್ಲಿಸುವ ಕೊನೆಯ ದಿನಾಂಕ 06.08.2025 ರ ಸಾಯಂಕಾಲ 4.00 ಗಂಟೆಯ ವರೆಗೆ
3. ತಾಂತ್ರಿಕ ಬಿಡ್ಡು ತೆರೆಯುವ ದಿನಾಂಕ 08.08.2025 ರಂದು ಪೂರ್ವಾಹ್ನ ಗಂಟೆ 11.00 ಕ್ಕೆ.
4. ತಾಂತ್ರಿಕ ಬಿಡ್ಡು ಮಾನ್ಯ ಜಿಲ್ಲಾಧಿಕಾರಿಯವರಿಂದ ಅನುಮೋದನೆಗೊಂಡ ನಂತರ ಆರ್ಥಿಕ ಬಿಡ್ಡು ತೆರೆಯಲಾಗುವುದು.

ಈ ಕುರಿತಾದ ಹೆಚ್ಚಿನ ಮಾಹಿತಿ, ಅಕ್ಕಿ ಹಾಗೂ ದಿನಸಿ ಸಮಾಗ್ರಿಗಳ ವಿವರದ ಪಟ್ಟಿ ಹಾಗೂ ಟೆಂಡರ್ ಷರತ್ತುಗಳನ್ನು ಇ-ಪೋರ್ಟಲ್‌ನಲ್ಲಿ ಹಾಗೂ ದೇವಳದ ಕಛೇರಿಯಲ್ಲಿ ಪಡೆಯಬಹು. ಇಎಂಡಿ ಮೊತ್ತ ₹. 10,00,000.00 ವನ್ನು ಇ-ಪೇಮೆಂಟ್ ಮೂಲಕ ಇ-ಪೋರ್ಟಲ್ ಮುಖಾಂತರ ಸಲ್ಲಿಸತಕ್ಕದ್ದು.

ಸಹಿ/- ಕಾರ್ಯನಿರ್ವಹಣಾಧಿಕಾರಿ
ಕುಕ್ಕೆ ಶ್ರೀ ಸುಬ್ರಹ್ಮಣ್ಯ ದೇವಸ್ಥಾನ,
ಹಿಂದೂ ಧಾರ್ಮಿಕ ದತ್ತಿ ಇಲಾಖೆ,
ಸುಬ್ರಹ್ಮಣ್ಯ, ಕಡಬ ತಾಲೂಕು, ದ.ಕ.

DIPR / MNG / 489 / MPL / 25-26

ಕರ್ನಾಟಕ ಸರ್ಕಾರ ಲೋಕೋಪಯೋಗಿ ಇಲಾಖೆ
ಕಾರ್ಯಪಾಲಕ ಅಭಿಯಂತರವರ ಕಛೇರಿ, ಲೋಕೋಪಯೋಗಿ ಇಲಾಖೆ, ದಾವಣಗೆರೆ ವಿಭಾಗ, ದಾವಣಗೆರೆ.
ಪ್ರಕಟಣೆ ಸಂ: ಐಎಫ್‌ಟಿ-11/ಎಇ-1/2025-26 ದಿನಾಂಕ:- 16.07.2025

ಅಲ್ಪಾವಧಿ ಕೆಪಿಪಿಪಿ ಟೆಂಡರ್ ಪ್ರಕಟಣೆ

ಉಲ್ಲೇಖ : ಈ ಕಚೇರಿ ಟೆಂಡರ್ ಪ್ರಕಟಣೆ ಸಂಖ್ಯೆ : ಕಾಅ/ದಾವಿದಾ/ಐ.ಎಫ್.ಟಿ-11/ಎಇ-1/2025-26 ದಿನಾಂಕ:. 16.07.2025.

ಲೋಕೋಪಯೋಗಿ ಇಲಾಖೆ ವಿಭಾಗ ದಾವಣಗೆರೆ ವಿಭಾಗ ವ್ಯಾಪ್ತಿಯಲ್ಲಿನ ದಾವಣಗೆರೆ ಮತ್ತು ಚನ್ನಗಿರಿ ತಾಲ್ಲೂಕುಗಳಿಗೆ ಸಂಬಂಧಿಸಿದಂತೆ ಕೆಳಗೆ ಸಹಿ ಮಾಡಿರುವವರಿಂದ ಕರ್ನಾಟಕ ರಾಜ್ಯಪಾಲರ ಪರವಾಗಿ ಕೆಟಿಪಿಪಿ-2000ರನ್ವಯ ಮತ್ತು ಸ್ಟ್ಯಾಂಡರ್ಡ್ ಟೆಂಡರ್ ಡಾಕ್ಯೂಮೆಂಟ್ ನಿಯಮದಂತೆ **ಲೆಕ್ಕಶೀರ್ಷಿಕೆ :5054-03-337-0-17-154 ಯೋಜನೆ (ರಾಜ್ಯ ಹೆದ್ದಾರಿ ಸುಧಾರಣೆ) ಅಡಿ 1) ದಾವಣಗೆರೆ ತಾಲ್ಲೂಕು ದಾವಣಗೆರೆ - ಹುಣಸೇಕಟ್ಟೆ ರಾಜ್ಯ ಹೆದ್ದಾರಿ ರಸ್ತೆಯ ಕಿ.ಮೀ. 12.50 ರಿಂದ 18.00 ರವರೆಗೆ (ಆಯ್ದ ಭಾಗಗಳಲ್ಲಿ) ರಸ್ತೆ ಅಭಿವೃದ್ಧಿ ಕಾಮಗಾರಿ. (PWD/2024-25/RD/WORK_INDENT 19130) (Call-5) ಕಾಮಗಾರಿಗೆ ಮೊತ್ತ ರೂ. 100.00 ಲಕ್ಷ, 2) ದಾವಣಗೆರೆ ತಾಲ್ಲೂಕು ಮಲ್ಪೆ-ಮೊಳಕಾಲ್ಮೂರು ರಾಜ್ಯ ಹೆದ್ದಾರಿ-65 ರಸ್ತೆಯ ಕಿ.ಮೀ. 253.00 ರಿಂದ 254.29 ರವರೆಗೆ ರಸ್ತೆ ಅಭಿವೃದ್ಧಿ ನಿರ್ಮಾಣದ ಕಾಮಗಾರಿ. (19781) (3ನೇ ಕರೆ) ಕಾಮಗಾರಿಗೆ ಮೊತ್ತ ರೂ. 600.00 ಲಕ್ಷ, ಮತ್ತು ಲೆಕ್ಕಶೀರ್ಷಿಕೆ :4059-80-051-0-29-386 ಇಲಾಖಾ ಕಟ್ಟಡಗಳು ನಿರ್ಮಾಣ ಅಡಿ 3) ದಾವಣಗೆರೆ ಜಿಲ್ಲೆ, ಚನ್ನಗಿರಿ ತಾಲ್ಲೂಕು ಪಾಂಡೋಮಟ್ಟಿ ಗ್ರಾಮ ಗೋಪ್ಪೆನಹಳ್ಳಿ ರಸ್ತೆಯಲ್ಲಿ ಸರ್ಕಾರಿ ಶಾಲಾ ಕಟ್ಟಡ ನಿರ್ಮಾಣ ಕಾಮಗಾರಿ.(PWD/2024-25/BD/WORK_INDENT17013/CALL-3) ರೂ. 400.00 ಲಕ್ಷ** ಕರ್ನಾಟಕ ಸರ್ಕಾರದ ಕೆಪಿಪಿಪಿ ಪೋರ್ಟಲ್ ಮೂಲಕ ಕರ್ನಾಟಕ ಲೋಕೋಪಯೋಗಿ ಇಲಾಖೆಯಲ್ಲಿ ನೋಂದಣಿ ಮಾಡಿದ ಅರ್ಹ ಟೆಂಡರ್‌ದಾರರಿಂದ ದ್ವಿ ಲಕೋಟೆ ಪದ್ಧತಿಯಲ್ಲಿ ಟೆಂಡರ್‌ಅನ್ನು ಆಹ್ವಾನಿಸಲಾಗಿದೆ.

ಕ್ರ.ಸಂ. 1ರ ಕಾಮಗಾರಿಗೆ ಟೆಂಡರ್ ಸ್ವೀಕರಿಸಲು ಕೊನೆಯ ದಿನಾಂಕ: 23.07.2025 ಸಂಜೆ 4.00 ಗಂಟೆಯವರೆಗೆ, ತಾಂತ್ರಿಕ ಬಿಡ್‌ಗಳನ್ನು ತೆರೆಯುವ ದಿನಾಂಕ 24.07.2025 ಸಂಜೆ 4.30 ಗಂಟೆಯವರೆಗೆ ಮತ್ತು ಕ್ರ.ಸಂ. 2 ಮತ್ತು 3ರ ಕಾಮಗಾರಿಗಳಿಗೆ ಟೆಂಡರ್ ಸ್ವೀಕರಿಸಲು ಕೊನೆಯ ದಿನಾಂಕ: 30.07.2025 ಸಂಜೆ 4.00 ಗಂಟೆಯವರೆಗೆ, ತಾಂತ್ರಿಕ ಬಿಡ್‌ಗಳನ್ನು ತೆರೆಯುವ ದಿನಾಂಕ 31.07.2025 ಸಂಜೆ 4.30 ಗಂಟೆಯವರೆಗೆ ಹೆಚ್ಚಿನ ವಿವರಗಳನ್ನು ಸದರಿ ಕಛೇರಿಯ ಕೆಲಸದ ವೇಳೆಯಲ್ಲಿ (ದೂರವಾಣಿ : 08192 234951, 231530) ಅಥವಾ ವೆಬ್ ಸೈಟ್ https://kppp.karnataka.gov.in ನಲ್ಲಿ ಪಡೆಯಬಹುದು.

ವಾಸಾಇ/ಡಿವಿಜಿ/193/ಕೆಎಸ್ಎಂಸಿಎ/2025-26
ಸಹಿ/- ಕಾರ್ಯಪಾಲಕ ಅಭಿಯಂತರರು,
ಲೋಕೋಪಯೋಗಿ ಇಲಾಖೆ ವಿಭಾಗ ದಾವಣಗೆರೆ

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ಕಾರ್ಯಪಾಲಕ ಅಭಿಯಂತರರ ಕಛೇರಿ, ಸಿ ವಿ ರಾಮನ್ ನಗರ ವಿಭಾಗ, 8ನೇ ಕ್ರಾಸ್, 12ನೇ ಎ ಮುಖ್ಯರಸ್ತೆ, ಎಚ್‌ಎಎಲ್ 2ನೇ ಹಂತ, ಇಂದಿರಾನಗರ, ಬೆಂಗಳೂರು-560038

ಟೆಂಡರ್ ನಂ.: ಕಾಅ/ಸಿವಿಆರ್/ಕೆಪಿಪಿಪಿ/09/2025-26 ದಿನಾಂಕ : 16.07.2025

ಅಲ್ಪಾವಧಿ ಟೆಂಡರ್‌ಗಳಿಗಾಗಿ ಆಹ್ವಾನ
(ದ್ವಿ-ಲಕೋಟೆ ಪದ್ಧತಿ)
(ಕೆಪಿಪಿ ಪೋರ್ಟಲ್ https://kppp.karnataka.gov.in ಮೂಲಕ ಮಾತ್ರ)

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ರವರು ಕೆಳಗಿನ ಕೋಷ್ಟಕದಲ್ಲಿ ವಿವರಿಸಲಾದ ಕಾಮಗಾರಿಗಳ ನಿರ್ಮಾಣಕ್ಕಾಗಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಲ್ಲಿ ನೋಂದಾಯಿಸಲಾದ ಅರ್ಹ ಗುತ್ತಿಗೆದಾರರಿಂದ ಅಥವಾ / ಕೆಪಿಡಬ್ಲ್ಯೂಡಿ / ಸಿಪಿಡಬ್ಲ್ಯೂಡಿ / ರೈಲ್ವೆಗಳು / ಎಂಇಎಸ್ / ರಾಷ್ಟ್ರೀಯ ಹೆದ್ದಾರಿ ಅಥವಾ ಯಾವುದೇ ರಾಜ್ಯ ಸರ್ಕಾರಿ ಸಂಸ್ಥೆಗಳಲ್ಲಿ ಸಮಾನ ನೋಂದಣಿ ಹೊಂದಿರುವ ಅರ್ಹ ಗುತ್ತಿಗೆದಾರರಿಂದ ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ.

ಕ್ರ. ಸಂ.	ಕಾಮಗಾರಿಯ ಹೆಸರು
1.	ಹಳೆ ಬೈಯಪ್ಪನಹಳ್ಳಿ, ರಾಜೀವನಗರ, ಸಂಜಯನಗರ, ಸಿ.ವಿ. ರಾಮನ್ ನಗರ ಉಪವಿಭಾಗದ ಕೃಷ್ಣಯ್ಯನಪಾಳ್ಯ ಕೊಳಚೆ ಪ್ರದೇಶ ಮತ್ತು ಸಿ ಕಾಲೋನಿ (ಜನಗಣತಿ ಬ್ಲಾಕ್ ಸಂಖ್ಯೆ 61, 57.2, 53, 58, 63, 54, 62, 76/, 55. 77, 28, 64.2, 78, 25, 52, 29, 75/2, 76/1, 62, 63, 64, 64/1, 72, 50, 17, 22, 61, 48, 11, 23, 75/1, 620, 79, 73/2, ವಾರ್ಡ್ ನಂ. 108, ಬ್ಲಾಕ್ ನಂ. 43/1, ವಾರ್ಡ್ ನಂ. 109 & ಬ್ಲಾಕ್ ನಂ. 44, 71, 43, 45, 72, 11-4 38 ರಲ್ಲಿ ವಾರ್ಡ್ ನಂ. 110 (2ನೇ ಕರೆ) ರಲ್ಲಿ ಸಮಗ್ರ ಅಭಿವೃದ್ಧಿ ಕಾಮಗಾರಿ. ಕಾಮಗಾರಿ ಅಂದಾಜು ವೆಚ್ಚ: **ರೂ.995.00 ಲಕ್ಷಗಳು,** ಇಎಂಡಿ ಮೊತ್ತ **ರೂ. 9,95,000.00.**
2.	ಸುಧಾಮನಗರ, ಮರ್ಫಿ ಟೌನ್, ಜಯರಾಜನಗರ, ಜೀವನಭೀಮನಗರ ಉಪವಿಭಾಗದಲ್ಲಿರುವ ಆನಂದಪುರ, ಲಕ್ಷ್ಮೀಪುರ ಕೊಳಚೆ ಪ್ರದೇಶಗಳಲ್ಲಿ (ವಾರ್ಡ್ ನಂ.114 ರಲ್ಲಿ ಜನಗಣತಿ ಬ್ಲಾಕ್ ಸಂಖ್ಯೆ, 10-1, 10-2, 67, 33-1, 8, 64, 62, 69 & ವಾರ್ಡ್ ನಂ.115 ರಲ್ಲಿ ಬ್ಲಾಕ್ ಸಂಖ್ಯೆ 71, 58, 57, 70, 83, 72-2, 66, 68 (2ನೇ ಕರೆ) ರಲ್ಲಿ ಸಮಗ್ರ ಅಭಿವೃದ್ಧಿ ಕಾಮಗಾರಿ. ಕಾಮಗಾರಿ ಅಂದಾಜು ವೆಚ್ಚ: **ರೂ.995.00 ಲಕ್ಷಗಳು,** ಇಎಂಡಿ ಮೊತ್ತ **ರೂ. 9,95,000.00.**

ಟೆಂಡರ್‌ನ ಕಾರ್ಯಸೂಚಿ: (1) ಪ್ರಶ್ನೆಗಳನ್ನು ಸ್ವೀಕರಿಸಲು ಕೊನೆಯ ದಿನಾಂಕ **06.08.2025 ರಂದು ಮಧ್ಯಾಹ್ನ 15:00 ಗಂಟೆಯವರೆಗೆ.** (2) ಬಿಡ್ ಪೂರ್ವ ಸಭೆ ನಡೆಯುವ ದಿನಾಂಕ, ಸಮಯ ಮತ್ತು ಸ್ಥಳ : **08.08.2025 ರಂದು ಬೆಳಿಗ್ಗೆ 11:30 ಕ್ಕೆ** ಕಾರ್ಯಪಾಲಕ ಅಭಿಯಂತರರು, (ಸಿ.ವಿ.ರಾಮನ್ ನಗರ ವಿಭಾಗ), (3) ಭರ್ತಿ ಮಾಡಿದ ಪ್ರಸ್ತಾವನೆಗಳನ್ನು ಅಪ್‌ಲೋಡ್ ಮಾಡಲು ಕೊನೆಯ **ದಿನಾಂಕ: 16.08.2025 ರಿಂದ 16:00 ಗಂಟೆಗಳವರೆಗೆ** (4) ತಾಂತ್ರಿಕ ಪ್ರಸ್ತಾವನೆಗಳನ್ನು ತೆರೆಯುವ **ದಿನಾಂಕ 18.08.2025 ರಂದು 16:30 ಕ್ಕೆ** (5) ಇ-ಪ್ರೊಕ್ಯೂರ್‌ಮೆಂಟ್ ಮೂಲಕ ತಾಂತ್ರಿಕ ಪ್ರಸ್ತಾವನೆಗಳನ್ನು ಅನುಮೋದಿಸಿದ ನಂತರ ಹಣಕಾಸು ಪ್ರಸ್ತಾವನೆಗಳನ್ನು ತೆರೆಯುವ ದಿನಾಂಕವನ್ನು ತಿಳಿಸಲಾಗುವುದು.

ಸಹಿ/- ಕಾರ್ಯಪಾಲಕ ಅಭಿಯಂತರರು, ಸರ್.ಸಿ.ವಿ.ರಾಮನ್ ನಗರ ವಿಭಾಗ

ಚಿಟಿಕೆ ಸುದ್ದಿ

₹3 ಲಕ್ಷ ಲಂಚ: ನಗರಸಭೆ ಸದಸ್ಯ, ಆರ್.ಐ ಬಂಧನ

ಶಿರಸಿ: ನಗರಸಭೆ ವ್ಯಾಪ್ತಿಯಲ್ಲಿರುವ ಮನೆ ಮತ್ತು ಜಾಗದ ಪ್ರಕರಣಕ್ಕೆ ಸಂಬಂಧಿಸಿದಂತೆ ₹3 ಲಕ್ಷ ಲಂಚ ಪಡೆಯುತ್ತಿದ್ದ ಆರೋಪದ ಮೇಲೆ ನಗರಸಭೆ ಬಿಜೆಪಿ ಸದಸ್ಯ ಗಣಪತಿ ನಾಯ್ಕ ಮತ್ತು ಕಂದಾಯ ನಿರೀಕ್ಷಕ ಆರ್.ಎಂ.ವೆರ್ಣೇಕರ ಎಂಬುವರನ್ನು ಬುಧವಾರ ಲೋಕಾಯುಕ್ತ ಪೊಲೀಸರು ಬಂಧಿಸಿದ್ದಾರೆ.

ರಮೇಶ ಹೆಗಡೆ ಎಂಬುವರಿಂದ ₹3 ಲಕ್ಷ ಲಂಚ ಪಡೆಯುವಾಗ ಲೋಕಾಯುಕ್ತ ಪೊಲೀಸರ ಕಾರ್ಯಾಚರಣೆ ನಡೆಯಿತು. ನಗರಸಭೆಗೆ ಸೇರಿದ್ದ ಲಕ್ಷಾಂತರ ರೂಪಾಯಿ ಮೌಲ್ಯದ ಕಳವು ಆರೋಪ ಗಣಪತಿ ನಾಯ್ಕ ಅವರ ಮೇಲಿದೆ.

ಆ.5ರಿಂದ ಸಾರಿಗೆ ಬಸ್ ನೌಕರರ ಮುಷ್ಕರ

ಬೆಂಗಳೂರು: ವೇತನ ಪರಿಷ್ಕರಣೆ, ಹಿಂಬಾಕಿ ನೀಡುವುದು ಸೇರಿದಂತೆ ಸಾರಿಗೆ ನಿಗಮಗಳ ನೌಕರರ ಬೇಡಿಕೆಗಳನ್ನು ಈಡೇರಿಸಲು ಆಗ್ರಹಿಸಿ ಆಗಸ್ಟ್ 5ರಿಂದ ಅನಿರ್ದಿಷ್ಟಾವಧಿ ಮುಷ್ಕರ ನಡೆಸಲು ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮಗಳ ಕಾರ್ಮಿಕ ಸಂಘಟನೆಗಳ ಜಂಟಿ ಕ್ರಿಯಾ ಸಮಿತಿ ನಿರ್ಧರಿಸಿದೆ.

ಸಮಿತಿಯ ಪರವಾಗಿ ಕೆಎಸ್‌ಆರ್‌ಟಿಸಿ ಸ್ಟಾಫ್ ವರ್ಕರ್ಸ್ ಫೆಡರೇಷನ್ ಅಧ್ಯಕ್ಷ ಎಚ್.ವಿ. ಅನಂತಸುಬ್ಬರಾವ್ ಬುಧವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, 'ಕಾರ್ಮಿಕ ಸಂಘಗಳ ಕಾಯ್ದೆ, ಕೈಗಾರಿಕಾ ವಿವಾದ ಕಾಯ್ದೆಗಳು ನಿಗಮಕ್ಕೆ ಅನ್ವಯವಾಗುತ್ತಿದ್ದು, 1996ರಲ್ಲಿ ನಡೆದ ಒಪ್ಪಂದದಂತೆ ನಾಲ್ಕು ವರ್ಷಕ್ಕೊಮ್ಮೆ ವೇತನ ಪರಿಷ್ಕರಣೆ ನಡೆಯಬೇಕು. 2020ರಿಂದ ಅನ್ವಯವಾಗುವಂತೆ 2023ರಲ್ಲಿ ಪರಿಷ್ಕರಣೆ ಮಾಡಲಾಗಿತ್ತು. ಆದರೆ, ಆ 38 ತಿಂಗಳ ಹಿಂಬಾಕಿಯನ್ನು ಸರ್ಕಾರ ನೀಡಿರಲಿಲ್ಲ. 2024ಕ್ಕೆ ಮತ್ತೆ ವೇತನ ಪರಿಷ್ಕರಣೆಯಾಗಬೇಕಿತ್ತು, ಅದನ್ನೂ ಮಾಡಿಲ್ಲ. ಈ ಬಗ್ಗೆ ಹಲವು ಬಾರಿ ಸರ್ಕಾರದ ಗಮನಕ್ಕೆ ತಂದರೂ ಪ್ರಯೋಜನವಾಗಿಲ್ಲ' ಎಂದು ತಿಳಿಸಿದರು.

4 ಸಾವಿರ ವರ್ಷಗಳ ಹಿಂದಿನ ಜನವಸತಿ ಕುರುಹು ಪತ್ತೆ

ಪ್ರಜಾವಾಣಿ ವಾರ್ತೆ

ಮಸ್ಕಿ (ರಾಯಚೂರು ಜಿಲ್ಲೆ): ಅಶೋಕನ ಶಿಲಾಶಾಸನದ ಮೂಲಕ ಐತಿಹಾಸಿಕ ಮಹತ್ವ ಪಡೆದಿರುವ ಮಸ್ಕಿ, ಈಗ ಉತ್ಖನನದ ಮೂಲಕ ಮತ್ತೊಮ್ಮೆ ಸುದ್ದಿಯಲ್ಲಿದೆ. ಪಟ್ಟಣದಲ್ಲಿ ನಾಲ್ಕು ಸಾವಿರ ವರ್ಷಗಳ ಹಿಂದೆಯೇ ಜನವಸತಿ ಇತ್ತು ಎಂಬುದನ್ನು ದೃಢಪಡಿಸುವ ಕುರುಹುಗಳು ಇಲ್ಲಿ ಉತ್ಖನನ ನಡೆಸಿದ ವೇಳೆ ಲಭಿಸಿವೆ.

ಅಮೆರಿಕ, ಕೆನಡಾ ಹಾಗೂ ಭಾರತದ 20 ಸಂಶೋಧಕರ ತಂಡ ಕಳೆದ ಮೂರು ತಿಂಗಳಿನಿಂದ ಪಟ್ಟಣದ ಮಲ್ಲಿಕಾರ್ಜುನ ಬೆಟ್ಟ, ಬಯಲು ಆಂಜನೇಯ ದೇವಸ್ಥಾನದ ಸುತ್ತಲಿನ ಪ್ರದೇಶದಲ್ಲಿ ನಡೆಸಿದ ಉತ್ಖನನ ಹಾಗೂ ಸಂಶೋಧನೆ ವೇಳೆ ಈ ಅಂಶ ಕಂಡುಬಂದಿದೆ.

ಉತ್ಖನನ ಹಾಗೂ ಸಂಶೋಧನೆಗಾಗಿ ಈ ತಂಡವು ಇಲ್ಲಿ 271 ಸ್ಥಳಗಳನ್ನು ಗುರುತಿಸಿದೆ. ಗುರುತಿಸಿದ ಸ್ಥಳಗಳಲ್ಲಿ ಭೂಮಿ ಅಗೆದಾಗ ವಿವಿಧ ಕಾಲಘಟ್ಟದ ಜನವಸತಿ ಇತ್ತು ಎಂಬುದು ದೃಢಪಟ್ಟಿದೆ. ಜನರ ಜೀವನ ಮಟ್ಟ, ಆಹಾರ ಪದ್ಧತಿ ಹಾಗೂ ಅವರು ಬಳಸುತ್ತಿದ್ದ ಮನೆಗಳ ಆಕಾರ, ಮಣ್ಣಿನ ಮಡಕೆ ಸೇರಿದಂತೆ ಅನೇಕ ವಸ್ತುಗಳು ಪತ್ತೆಯಾಗಿವೆ. ಹೆಚ್ಚಿನ ಸಂಶೋಧನೆಗಾಗಿ ಅವುಗಳನ್ನು ಸಂಗ್ರಹಿಸಲಾಗಿದೆ ಎಂದು ಸಂಶೋಧಕರೊಬ್ಬರು ತಿಳಿಸಿದ್ದಾರೆ.

ಅಮೆರಿಕ, ಕೆನಡಾ, ಭಾರತದ ಸಂಶೋಧಕರ ತಂಡದಿಂದ ಜಂಟಿಯಾಗಿ ಉತ್ಖನನ ಕೈಗೊಳ್ಳಲಾಗಿದೆ. 4 ಸಾವಿರ ವರ್ಷಗಳ ಹಿಂದೆ ಜನವಸತಿ ಇರುವ ಬಗ್ಗೆ ಪ್ರಮುಖ ದಾಖಲೆಗಳನ್ನು ಸಂಗ್ರಹಿಸಲಾಗಿದೆ

ಹೇಮಂತ್ ಕಡಾಂಬಿ
ಪ್ರಾಧ್ಯಾಪಕ, ನೊಯಿಡಾ ವಿಶ್ವವಿದ್ಯಾಲಯ, ದೆಹಲಿ

ಕೇಂದ್ರ ಪುರಾತತ್ವ ಇಲಾಖೆಯ ಅನುಮತಿ ಪಡೆದ ಅಮೆರಿಕದ ಸ್ಟ್ಯಾನ್ ಫೋರ್ಡ್ ವಿಶ್ವವಿದ್ಯಾಲಯದ ಪ್ರಾಧ್ಯಾಪಕ ಆ್ಯಂಡ್ರಿಮ್ ಎಂ. ಬವೆರ್, ಕೆನಡಾದ ಮ್ಯಾಕ್ ಗಿಲ್ ವಿಶ್ವವಿದ್ಯಾಲಯದ ಪೀಟರ್ ಜಿ. ಜೋಹಾನ್ಸನ್ ಹಾಗೂ ದೆಹಲಿಯ ನೊಯಿಡಾ ವಿಶ್ವವಿದ್ಯಾಲಯದ ಹೇಮಂತ್ ಕಡಾಂಬಿ ನೇತೃತ್ವದಲ್ಲಿ 20ಕ್ಕೂ ಹೆಚ್ಚು ಸಂಶೋಧನಾ ವಿದ್ಯಾರ್ಥಿಗಳ ತಂಡ ಈ ಭಾಗದಲ್ಲಿ ಉತ್ಖನನ ಮಾಡಿ ಪ್ರಾಚೀನ ಕಾಲದಲ್ಲಿ ಬಳಕೆಯಲ್ಲಿದ್ದ ಪಳಿಯುಳಿಕೆಗಳನ್ನು ಸಂಗ್ರಹಿಸುತ್ತಿದೆ.

ಮಸ್ಕಿ ಸುತ್ತಮುತ್ತಲಿನ ಪ್ರದೇಶಗಳಲ್ಲಿ ಸಂಶೋಧಕರ ತಂಡ ಉತ್ಖನನ ನಡೆಸಿದೆ

ನಿಂಗಪ್ಪ–ಶ್ರೀನಾಥ್ ನಂಟು ಬಿಚ್ಚಿಟ್ಟ ಚಾಟ್

ಲೋಕಾಯುಕ್ತ ಹೆಸರಿನಲ್ಲಿ ಸರ್ಕಾರಿ ಅಧಿಕಾರಿಗಳಿಂದ ಹಣ ವಸೂಲಿ ಪ್ರಕರಣ

• ಜಯಸಿಂಹ ಆರ್.

ಬೆಂಗಳೂರು: ಲೋಕಾಯುಕ್ತ ಸಂಸ್ಥೆಯ ಹೆಸರಿನಲ್ಲಿ ಸರ್ಕಾರದ ವಿವಿಧ ಇಲಾಖೆಗಳ ಅಧಿಕಾರಿಗಳಿಂದ ಹಣ ವಸೂಲಿ ಮಾಡಿದ ಪ್ರಕರಣದಲ್ಲಿ ಆರೋಪಿ ನಿಂಗಪ್ಪ ಮತ್ತು ಐಪಿಎಸ್ ಅಧಿಕಾರಿ ಶ್ರೀನಾಥ್ ಜೋಷಿ ಮಧ್ಯದ ವಾಟ್ಸ್‌ಆ್ಯಪ್ ಚಾಟ್‌ಗಳ ಬೆನ್ನು ಬಿದ್ದಿದ್ದ ಲೋಕಾಯುಕ್ತ ಪೊಲೀಸರು, ಅವರಿಬ್ಬರ 'ನಂಟಿನ ಗಂಟು' ಹೇಗಿತ್ತೆಂಬುದನ್ನು ಪತ್ತೆ ಹಚ್ಚಿದ್ದಾರೆ.

'ನಿಂಗಪ್ಪ ಎಂಬಾತ ಲೋಕಾಯುಕ್ತರು, ಉಪ ಲೋಕಾಯುಕ್ತರು, ಲೋಕಾಯುಕ್ತ ಪೊಲೀಸ್ ಅಧಿಕಾರಿಗಳ ಹೆಸರಿನಲ್ಲಿ ಅಧಿಕಾರಿಗಳಿಂದ ಹಣ ವಸೂಲಿ ಮಾಡುತ್ತಿದ್ದಾನೆ ಎಂಬುದರ ವಿರುದ್ಧ ಹಲವು ದೂರುಗಳು ಬಂದಿದ್ದವು. ಲೋಕಾಯುಕ್ತರಿಗೆ, ಉಪ ಲೋಕಾಯುಕ್ತರಿಗೆ ಮತ್ತು ಲೋಕಾಯುಕ್ತ ಎಸ್‌ಪಿಗೂ ದೂರು ಬಂದಿತ್ತು. ಆ ದೂರುಗಳಲ್ಲಿ ಸತ್ಯಾಂಶ ಇರುವುದು ಪ್ರಾಥಮಿಕ ಪರಿಶೀಲನೆಯ ನಂತರ ಗೊತ್ತಾಯಿತು' ಎಂದು ಮೂಲಗಳು ಮಾಹಿತಿ ನೀಡಿವೆ.

'ನಿಂಗಪ್ಪನನ್ನು ಬಂಧಿಸಿ, ಆತನ ಫೋನ್ ಅನ್ನು ವಶಕ್ಕೆ ಪಡೆಯಲಾಯಿತು. ಫೋನ್‌ನಲ್ಲಿ ಇದ್ದ ವಾಟ್ಸ್‌ಆ್ಯಪ್ ಚಾಟ್‌ಗಳನ್ನು ಪರಿಶೀಲಿಸಲಾಯಿತು.

ಶ್ರೀನಾಥ್ ಜೋಷಿ ಜೊತೆಗಿನ ಚಾಟ್ ಒಂದನ್ನು ಹೊರತುಪಡಿಸಿ, ಉಳಿದೆಲ್ಲಾ ಚಾಟ್‌ಗಳನ್ನು ನಿಂಗಪ್ಪ ಅಳಿಸಿಹಾಕಿದ್ದಾನೆ. ಆ ಚಾಟ್ ಉಳಿದುಕೊಂಡಿದ್ದರಿಂದಲೇ, ಹಣ ವಸೂಲಿಯಲ್ಲಿ ಶ್ರೀನಾಥ್ ಜೋಷಿಗೆ ನಂಟಿದೆ ಎಂಬುದು ಗೊತ್ತಾಯಿತು' ಎಂದು ವಿವರಿಸಿವೆ.

'ನಿಂಗಪ್ಪನು ಬೇರೆಯವರ ಜತೆಗಿನ ಎಲ್ಲ ಚಾಟ್‌ಗಳನ್ನು ಅಳಿಸಿಹಾಕಿ, ಶ್ರೀನಾಥ್ ಜತೆಗಿನ ಚಾಟ್ ಅನ್ನು ಏಕೆ ಉಳಿಸಿಕೊಂಡ ಎಂಬ ದಿಕ್ಕಿನಲ್ಲೂ ತನಿಖೆ ನಡೆಸಲಾಗುತ್ತಿದೆ. ಶ್ರೀನಾಥ್ ಅವರ ಎರಡು ಫೋನ್‌ಗಳನ್ನು ವಶಕ್ಕೆ ಪಡೆದುಕೊಳ್ಳಲಾಗಿದೆ. ಅವುಗಳಲ್ಲಿನ ಬಹುತೇಕ ದತ್ತಾಂಶಗಳನ್ನು ಅಳಿಸಿಹಾಕಲಾಗಿದೆ. ಈಗ ಇರುವ ಕೆಲ ಮಾಹಿತಿಗಳನ್ನು ಕಲೆಹಾಕಿದ್ದು, ಉಳಿದ ದತ್ತಾಂಶ ಪಡೆದುಕೊಳ್ಳಲು ಫೋನ್‌ಗಳನ್ನು ವಿಧಿವಿಜ್ಞಾನ ಪ್ರಯೋಗಾಲಯಕ್ಕೆ ಕಳುಹಿಸಲಾಗುತ್ತದೆ' ಎಂದಿವೆ.

'ನಿಂಗಪ್ಪ ಮತ್ತು ಶ್ರೀನಾಥ್ ನಡುವೆ ಸಂಬಂಧ ಹೇಗೆ ಬೆಳೆಯಿತು ಎಂಬುದು ಗೊತ್ತಾಗಿದೆ. ಲೋಕಾಯುಕ್ತದ ತನಿಖೆಗೆ ಗುರಿಯಾಗಬೇಕಿದ್ದ ಸರ್ಕಾರಿ ಅಧಿಕಾರಿಗಳ ವಿವರವನ್ನು ಹೇಗೆ ಕಲೆಹಾಕಿ, ಹಣ ವಸೂಲಿ ಮಾಡುತ್ತಿದ್ದರು ಎಂಬುದನ್ನೂ ಪತ್ತೆ ಮಾಡಲಾಗಿದೆ. ಶ್ರೀನಾಥ್ ಅವರ ಫೋನ್‌ಗಳ ದತ್ತಾಂಶಗಳು ವಿಧಿ ವಿಜ್ಞಾನ ಪ್ರಯೋಗಾಲಯದಿಂದ ಬಂದ ನಂತರ ಹಲವು ದಿಕ್ಕಿನಲ್ಲಿ ತನಿಖೆ ಮುಂದುವರೆಯಲಿದೆ' ಎಂದು ಮಾಹಿತಿ ನೀಡಿವೆ.

ಸೈಬರ್ ಅಪರಾಧ ತಜ್ಞರ ನೆರವು

'ನಿಂಗಪ್ಪ ಅವರ ಮೊಬೈಲ್‌ನಲ್ಲಿನ ಕೆಲವು ದತ್ತಾಂಶಗಳನ್ನು ಕಲೆಹಾಕಲು ಸಿಐಡಿಯ ಸೈಬರ್ ಅಪರಾಧ ತಜ್ಞರ ನೆರವು ಪಡೆದುಕೊಳ್ಳಲಾಗಿದೆ. ಆರೋಪಿಯ ಕ್ರಿಪ್ಟೋ ಕರೆನ್ಸಿ ಹೂಡಿಕೆ ಸಂಬಂಧ ತನಿಖೆಗೂ ಅವರ ನೆರವನ್ನು ಪಡೆದುಕೊಳ್ಳಲಾಗುತ್ತಿದೆ ಎಂದು ತನಿಖಾಧಿಕಾರಿಗಳು' ಮಾಹಿತಿ ನೀಡಿದರು.

'ಕ್ರಿಪ್ಟೋ ಕರೆನ್ಸಿ ನಿರ್ವಹಣೆ ಮತ್ತು ವಹಿವಾಟಿನಲ್ಲಿ ನಿಂಗಪ್ಪ ಪರಿಣತಿ ಹೊಂದಿದ್ದಾನೆ. ಆತನ 13 ಕ್ರಿಪ್ಟೋ ವ್ಯಾಲೆಟ್‌ಗಳಲ್ಲಿ ಇರುವ ಹಣದ ಮೂಲ ಯಾವುದು ಎಂಬುದನ್ನು ಪತ್ತೆ ಮಾಡಲಾಗುತ್ತಿದೆ. ಕ್ರಿಪ್ಟೋ ಕರೆನ್ಸಿ ಪ್ರಕರಣಗಳ ನಿರ್ವಹಣೆಯಲ್ಲಿ ಪರಿಣತಿ ಹೊಂದಿರುವ ಅಧಿಕಾರಿಗಳು ತನಿಖೆಗೆ ನೆರವು ನೀಡುತ್ತಿದ್ದಾರೆ' ಎಂದು ತಿಳಿಸಿದರು.

'ಈ ವ್ಯಾಲೆಟ್‌ಗಳನ್ನು ಈಗಾಗಲೇ ಸ್ಥಗಿತಗೊಳಿಸಲಾಗಿದ್ದು, ಅದರಲ್ಲಿರುವ ಹಣವನ್ನು ಪಡೆದುಕೊಳ್ಳುವ ಬಗ್ಗೆ ಪರಿಶೀಲನೆ ನಡೆಸಲಾಗುತ್ತಿದೆ. ನಿಂಗಪ್ಪನ ಮನೆ ಶೋಧದ ವೇಳೆ ನಗದು ಪತ್ತೆಯಾಗಿಲ್ಲ. ಸರ್ಕಾರಿ ಅಧಿಕಾರಿಗಳಿಂದ ಹಣವನ್ನು ಹೇಗೆ ಪಡೆದುಕೊಳ್ಳಲಾಗಿದೆ, ಅದನ್ನು ಕ್ರಿಪ್ಟೋ ಕರೆನ್ಸಿಗಳಲ್ಲಿ ಹೂಡಿಕೆ ಮಾಡಿದ ಹಾದಿ ಯಾವುದು ಎಂಬುದನ್ನು ಪತ್ತೆ ಮಾಡಲಾಗುತ್ತಿದೆ' ಎಂದರು.

ಸುದ್ದಿ 2 ನಿಮಿಷ

'ಕ್ವಾಂಟಮ್'ಗೆ ಮಾರ್ಗಸೂಚಿ ಕಾರ್ಯಪಡೆ ರಚನೆ

ಬೆಂಗಳೂರು: ಕ್ವಾಂಟಮ್ ಕ್ಷೇತ್ರದ ಅಭಿವೃದ್ಧಿಗೆ ರಾಜ್ಯ ಸರ್ಕಾರ ಮಾರ್ಗಸೂಚಿ ಸಿದ್ಧಪಡಿಸಲು ಕಾರ್ಯಪಡೆ ರಚಿಸಲಿದೆ. ಜುಲೈ 31, ಆ. 1ರಂದು ಎರಡು ದಿನ 'ಕ್ವಾಂಟಮ್ ಇಂಡಿಯಾ' ಸಮಾವೇಶ ಆಯೋಜಿಸಲಾಗುತ್ತಿದೆ ಎಂದು ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವ ಎನ್.ಎಸ್. ಬೋಸರಾಜು ಹೇಳಿದರು.

ವಿಧಾನಸೌಧದಲ್ಲಿ ಬುಧವಾರ ಕ್ವಾಂಟಮ್ ಕ್ಷೇತ್ರದ ಕಂಪನಿಗಳ ಪ್ರಮುಖ ಪ್ರತಿನಿಧಿಗಳೊಂದಿಗೆ ನಡೆದ ಉನ್ನತಮಟ್ಟದ ಸಭೆಯ ನಂತರ ಸುದ್ದಿಗಾರರ ಜತೆ ಮಾತನಾಡಿದ ಅವರು, 'ಕ್ವಾಂಟಮ್ ಕ್ಷೇತ್ರದ ಅಭಿವೃದ್ಧಿಗೆ ಅಗತ್ಯವಾದ ಎಲ್ಲ ಸೌಲಭ್ಯ, ಹೊಸ ತಂತ್ರಜ್ಞಾನದ ಕೈಗಾರಿಕೆಗಳು, ಕೌಶಲ ಹೊಂದಿರುವ ಮಾನವ ಸಂಪನ್ಮೂಲ ರಾಜ್ಯದಲ್ಲಿವೆ. ಇಂತಹ ಸೌಲಭ್ಯ ಬೇರೆ ರಾಜ್ಯಗಳಲ್ಲಿ ಇಲ್ಲ. ಕೈಗಾರಿಕೆಗಳಿಗೆ ಅಗತ್ಯವಿರುವ ಜಮೀನು ಹಾಗೂ ಪೂರಕ ನೀತಿ ರೂಪಿಸಬೇಕಿದೆ' ಎಂದರು.



'ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರ ಜತೆ ಚರ್ಚೆ ನಡೆಸಿ, ಕಾರ್ಯಪಡೆ ರಚನೆ ಅಂತಿಮಗೊಳಿಸಲಾಗುವುದು. ಅಗತ್ಯವಿರುವ ನೀತಿ ರೂಪಿಸಲಾಗುವುದು. 2035ರ ವೇಳೆಗೆ 'ಕ್ವಾಂಟಮ್ ಅಡ್ವಾಂಟೇಜ್ ಡ್ರಿವನ್ ಎಕಾನಮಿ' ಆಗುವುದು ನಮ್ಮ ಗುರಿ' ಎಂದರು.

ಸಚಿವ ಜಾರ್ಜ್ ವಿರುದ್ಧ ದೂರು

ಬೆಂಗಳೂರು: 'ರಾಜ್ಯದಲ್ಲಿ ಸ್ಮಾರ್ಟ್ ಮೀಟರ್ ಅಳವಡಿಕೆಗೆ ಸಂಬಂಧಿಸಿದ ಟೆಂಡರ್ ಕಾನೂನು ಬಾಹಿರವಾಗಿದೆ ಮತ್ತು ಈ ಟೆಂಡರ್ ನೀಡಿಕೆಯಿಂದ ಅಂದಾಜು ₹16 ಸಾವಿರ ಕೋಟಿ ಮೊತ್ತದ ದುರ್ಲಾಭ ಪಡೆಯಲಾಗುತ್ತಿದೆ' ಎಂದು ಆರೋಪಿಸಿ, ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿಯ (ಬೆಸ್ಕಾಂ) ಅಧ್ಯಕ್ಷರೂ ಆದ ಇಂಧನ ಸಚಿವ ಕೆ.ಜೆ.ಜಾರ್ಜ್ ಮತ್ತಿತರರ ವಿರುದ್ಧ ಬಿಜೆಪಿ ಶಾಸಕ ಡಾ.ಸಿ.ಎನ್.ಅಶ್ವತ್ಥ ನಾರಾಯಣ ಅವರು ಜನಪ್ರತಿನಿಧಿಗಳ ವಿಶೇಷ ನ್ಯಾಯಾಲಯದಲ್ಲಿ ಖಾಸಗಿ ದೂರು ದಾಖಲಿಸಿದ್ದಾರೆ.

ಈ ಸಂಬಂಧ ಫಿರ್ಯಾದುದಾರರು ಮತ್ತು ಬಿಜೆಪಿಯ ಶಾಸಕರೂ ಆದ ಡಾ.ಸಿ.ಎನ್.ಅಶ್ವತ್ಥ ನಾರಾಯಣ, ಎಸ್.ಆರ್.ವಿಶ್ವನಾಥ್ ಮತ್ತು ಧೀರಜ್ ಮುನಿರಾಜು ಪರವಾಗಿ ಹೈಕೋರ್ಟ್‌ನ ಪದಾಂಕಿತ ಹಿರಿಯ ವಕೀಲೆ ಲಕ್ಷ್ಮಿ ಅಯ್ಯಂಗಾರ್ ಬುಧವಾರ, 'ಶಾಸಕರು–ಸಂಸದರ ವಿರುದ್ಧದ ಕ್ರಿಮಿನಲ್ ಪ್ರಕರಣಗಳ ವಿಚಾರಣೆ'ಯ ವಿಶೇಷ ನ್ಯಾಯಾಲಯದಲ್ಲಿ ಖಾಸಗಿ ದೂರು ದಾಖಲಿಸಿದರು. ದೂರನ್ನು ಸ್ವೀಕರಿಸಿದ ನ್ಯಾಯಾಧೀಶ ಸಂತೋಷ ಗಜಾನನ ಭಟ್ ಅವರು, ದೂರಿಗೆ ಸಂಖ್ಯೆ ನಮೂದಿಸಲು ಕಚೇರಿ ವಿಭಾಗಕ್ಕೆ ನಿರ್ದೇಶಿಸಿ ಗುರುವಾರ (ಜುಲೈ 17) ವಿಚಾರಣೆ ನಡೆಸುವುದಾಗಿ ತಿಳಿಸಿದರು.

ದೂರಿನಲ್ಲಿ ಸಚಿವ ಕೆ.ಜೆ.ಜಾರ್ಜ್, ಇಂಧನ ಇಲಾಖೆಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಗೌರವ್ ಗುಪ್ತ, ಬೆಸ್ಕಾಂ ಮಾಜಿ ವ್ಯವಸ್ಥಾಪಕ ನಿರ್ದೇಶಕ ಮಹಾಂತೇಶ ಬೀಳಗಿ ಹಾಗೂ ಬೆಸ್ಕಾಂನ ತಾಂತ್ರಿಕ ನಿರ್ದೇಶಕ ಎಚ್.ಜೆ.ರಮೇಶ್ ಅವರನ್ನು ಆರೋಪಿಗಳನ್ನಾಗಿ ಹೆಸರಿಸಲಾಗಿದೆ. ಫಿರ್ಯಾದುದಾರರಾದ ಡಾ.ಸಿ.ಎನ್.ಅಶ್ವತ್ಥ ನಾರಾಯಣ, ಎಸ್.ಆರ್.ವಿಶ್ವನಾಥ್ ಮತ್ತು ಧೀರಜ್ ಮುನಿರಾಜು ನ್ಯಾಯಾಲಯದಲ್ಲಿ ಖುದ್ದು ಹಾಜರಿದ್ದರು.

'ಆಂಧ್ರದ ಆಮಿಷ ನಡೆಯದು'

ಬೆಂಗಳೂರು: ಕೈಗಾರಿಕೆಗಳ ಸ್ಥಾಪನೆಗೆ ಅಗತ್ಯವಿರುಷ್ಟು ಜಮೀನು ರಾಜ್ಯದಲ್ಲಿದೆ. ಎಲ್ಲ ಉದ್ಯಮಿಗಳಿಗೂ ಜಮೀನು ದೊರಕಿಸಲು ರಾಜ್ಯ ಸರ್ಕಾರ ಶಕ್ತವಾಗಿದೆ. ಆಂಧ್ರಪ್ರದೇಶದ ಆಮಿಷಕ್ಕೆ ಒಳಗಾಗಿ ಯಾವ ಉದ್ಯಮಿಯೂ ರಾಜ್ಯ ತೊರೆಯುವುದಿಲ್ಲ ಎಂದು ಕೈಗಾರಿಕಾ ಸಚಿವ ಎಂ.ಬಿ. ಪಾಟೀಲ ಹೇಳಿದರು.

ಅತ್ಯಾಧುನಿಕ ರಕ್ಷಣಾ ಮತ್ತು ವೈಮಾಂತರಿಕ್ಷ ಪಾರ್ಕ್ ಸ್ಥಾಪನೆಗಾಗಿ ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ 13 ಗ್ರಾಮಗಳ ವ್ಯಾಪ್ತಿಯ 1,777 ಎಕರೆ ಜಮೀನಿನ ಸ್ವಾಧೀನವನ್ನು ರೈತರ ಹಿತಾಸಕ್ತಿಗಾಗಿ ಕೈಬಿಡಲಾಗಿದೆ. ಅಲ್ಲಿ ಸ್ಥಾಪಿಸಬೇಕಿದ್ದ ರಕ್ಷಣಾ ಮತ್ತು ವೈಮಾಂತರಿಕ್ಷ ಪಾರ್ಕ್‌ಗೆ ಬೇರೆ ಕಡೆ ಜಾಗ ನೀಡಲಾಗುವುದು. ಆಂಧ್ರಪ್ರದೇಶದ ಸಚಿವ ನಾರಾ ಲೋಕೇಶ್ ಹೇಳಿದ ತಕ್ಷಣ ಯಾರೂ ಆ ರಾಜ್ಯಕ್ಕೆ ಹೋಗುವುದಿಲ್ಲ. ಎಲ್ಲ ಉದ್ಯಮಗಳನ್ನೂ ಇಲ್ಲೇ ಉಳಿಸಿಕೊಳ್ಳುವ ಸಾಮರ್ಥ್ಯ ಈ ಪಾಟೀಲರಿಗೂ, ಕರ್ನಾಟಕಕ್ಕೂ ಇದೆ ಎಂದರು.

ಎಂ.ಬಿ ಪಾಟೀಲ

'ವೈಮಾಂತರಿಕ್ಷ ವಲಯದಲ್ಲಿ ದೇಶದ ಶೇ 65ರಷ್ಟು ಪಾಲನ್ನು ಕರ್ನಾಟಕ ಹೊಂದಿದೆ. ಜಾಗತಿಕ ಮಟ್ಟದಲ್ಲಿ ನಮ್ಮದು ಮೂರನೇ ಅತ್ಯುತ್ತಮ ಕಾರ್ಯ ಪರಿಸರ ಇರುವ ರಾಜ್ಯ. ಉದ್ಯಮಗಳಿಗೆ ಜಮೀನು ಕೊಟ್ಟ ಮಾತ್ರಕ್ಕೆ ಅವರು ಅಲ್ಲಿಗೆ ಹೋಗುವುದಿಲ್ಲ. ಕಾರ್ಯ ಪರಿಸರವೂ ಮಹತ್ವದ ಪಾತ್ರ ವಹಿಸುತ್ತದೆ. ವೈಮಾಂತರಿಕ್ಷ ಮಾತ್ರವಲ್ಲ, ಕೃತಕ ಬುದ್ಧಿಮತ್ತೆ, ಡೀಪ್-ಟೆಕ್ ತರಹದ ಉದ್ಯಮಗಳಿಗೂ ಜಮೀನು ನೀಡಲಾಗುವುದು. ಕೈಗಾರಿಕಾ ಪ್ರದೇಶಗಳಿಗೆ ತಮ್ಮ ಪಾಲಿನ ನೀರು ಬಳಸಿಕೊಳ್ಳಲು ₹3,600 ಕೋಟಿ ವೆಚ್ಚದಲ್ಲಿ ಸಮಗ್ರ ಯೋಜನೆ ರೂಪಿಸಲಾಗಿದೆ' ಎಂದು ಮಾಹಿತಿ ನೀಡಿದರು.

ರೋಲ್ಸ್‌ರಾಯ್ಸ್ ಜತೆ ಮಾತುಕತೆ

ದೇವನಹಳ್ಳಿ ವ್ಯಾಪ್ತಿಯ ಭೂಸ್ವಾಧೀನ ಕೈಬಿಟ್ಟ ಮರು ದಿನವೇ ಕೈಗಾರಿಕಾ ಸಚಿವ ಎಂ.ಬಿ. ಪಾಟೀಲ, ರಕ್ಷಣೆ ಹಾಗೂ ವೈಮಾಂತರಿಕ್ಷ ವಲಯದಲ್ಲಿ ಹೆಸರು ಮಾಡಿರುವ ರೋಲ್ಸ್‌ರಾಯ್ಸ್ ಕಂಪನಿಯ ಉನ್ನತಮಟ್ಟದ ನಿಯೋಗದ ಜತೆ ಮಾತುಕತೆ ನಡೆಸಿದರು.

ಹೂಡಿಕೆ-ವಿಸ್ತರಣೆ, ಭವಿಷ್ಯದ ಯೋಜನೆಗಳು ಮತ್ತು ತಂತ್ರಜ್ಞಾನ ಸೌಲಭ್ಯ, ಬೆಂಗಳೂರು ಘಟಕದ ವಿಸ್ತರಣೆ ಕುರಿತು ಕಂಪನಿಯ ಜಾಗತಿಕ ಮಟ್ಟದ ನಿರ್ದೇಶಕ ಫಿಲ್‌ಪ್ರೀಸ್ಟ್, ಭಾರತದಲ್ಲಿನ ವ್ಯವಹಾರಿಕ ಸೇವಾ ವಿಭಾಗದ ಮುಖ್ಯಸ್ಥ ಟಾಮ್ ಕ್ಯಾಂಡ್ರಿಕಾಲ್, ರಕ್ಷಣಾ ವಿಭಾಗದ ಭಾರತದ ಮುಖ್ಯಸ್ಥೆ ಗಾಯತ್ರಿ ಶರ್ಮಾ ಅವರು ಚರ್ಚೆ ನಡೆಸಿದರು.

ಎಡೆಕುಂಟೆ...

ಭರತ್ ಕಂದಕೂರ
ಪ್ರಜಾವಾಣಿ ಚಿತ್ರ

ಕೊಪ್ಪಳ ಜಿಲ್ಲೆಯ ಗಂಗಾವತಿ ತಾಲ್ಲೂಕಿನ ಚಿಕ್ಕಬೆಣಕಲ್ ಗ್ರಾಮದ ಹೊರವಲಯದಲ್ಲಿ ಬೆಳೆಗಳ ನಡುವಿನ ಕಳೆ ನಿವಾರಣೆಗಾಗಿ ರೈತರು ಎಡೆಕುಂಟೆ ಹೊಡೆದರು

ಜಲಾಶಯಗಳ ನೀರಿನ ಮಟ್ಟ (ಸಮುದ್ರ ಮಟ್ಟದಿಂದ)

ಜಲಾಶಯ	ಗರಿಷ್ಠ ಮಟ್ಟ (ಅಡಿಗಳಲ್ಲಿ)	ಇಂದಿನ ಮಟ್ಟ	ಒಳಹರಿವು (ಕ್ಯೂಸೆಕ್‌ಗಳಲ್ಲಿ)	ಹೊರಹರಿವು (ಕ್ಯೂಸೆಕ್‌ಗಳಲ್ಲಿ)
ಕೆ ಆರ್ ಎಸ್ *	124.80	122.96	17,628	13,422
ಹಾರಂಗಿ	2,859	2,855.72	5,155	1,958
ಕಬಿನಿ	2,284	2,281.15	10,995	12,000
ಹೇಮಾವತಿ	2,922	2,920.97	8,714	8,650
ಲಿಂಗನಮಕ್ಕಿ	1,819	1,801.75	24,544	5,625
ಸೂಪಾ (ಮೀ)	564	545.62	27,565.5	4,320.62
ಮಾಣಿ	595	587.31	1,240	0
ತುಂಗಭದ್ರಾ	1,633	1,626.06	40,117	29,607
ಮಲಪ್ರಭಾ	2,079.5	2,071.50	6,049	194
ಘಟಪ್ರಭಾ	2175	169.30	16,321	5,734
ಭದ್ರಾ *	186	176.9	9,122	3,590
ಆಲಮಟ್ಟಿ (ಮೀ)	519.6	518.02	40,737	30,818
ನಾರಾಯಣಪುರ (ಮೀ)	492.25	491.72	30,000	35,982

* ನೆಲಮಟ್ಟದಿಂದ

ಒಬಿಸಿ ಒಗ್ಗೂಡಿಸಲು 'ಕೈ' ಕಾರ್ಯತಂತ್ರ

ಒಂದನೇ ಪುಟದಿಂದ...

ನವದೆಹಲಿಯ ತಾಲ್‌ಕಟೋರ ಕ್ರೀಡಾಂಗಣದಲ್ಲಿ ಇದೇ 25ರಂದು ನಡೆಯಲಿರುವ 'ಕಾಂಗ್ರೆಸ್ ಒಬಿಸಿ ನಾಯಕತ್ವ ಭಾಗೀದಾರಿ ನ್ಯಾಯ ಸಮ್ಮೇಳನ'ವನ್ನು ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಉದ್ಘಾಟಿಸಲಿದ್ದು, ಲೋಕಸಭೆ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ ಸಮಾರೋಪ ಭಾಷಣ ಮಾಡಲಿದ್ದಾರೆ.

ಪ್ರತಿಯೊಂದು ರಾಜ್ಯದ ರಾಜಧಾನಿಯಲ್ಲಿ ಪಕ್ಷದ ಒಬಿಸಿ ನಾಯಕರನ್ನು ಸೇರಿಸಿ ಜಾತಿ ಜನಗಣತಿಗೆ ಸಂಬಂಧಿಸಿದಂತೆ ಮತ್ತು ಸಮುದಾಯದ ಸಮಸ್ಯೆಗಳ ಕುರಿತು ಚರ್ಚಿಸಲು ನಿರಂತರವಾಗಿ ಕಾರ್ಯಾಗಾರಗಳನ್ನು ಯೋಜಿಸಲು ಜೊತೆಯಾಗಿ ಕೆಲಸ ಮಾಡಲು ಕೂಡಾ ಮಂಡಳಿ ನಿರ್ಧರಿಸಿದೆ. ಅಲ್ಲದೆ, ಎಲ್ಲ ರಾಜ್ಯಗಳ ಕೇಂದ್ರ ಸ್ಥಾನದಲ್ಲಿ ಮಲ್ಲಿಕಾರ್ಜುನ ಖರ್ಗೆ ಮತ್ತು ರಾಹುಲ್ ಗಾಂಧಿ ನೇತೃತ್ವದಲ್ಲಿ ಬೃಹತ್ ಸಾರ್ವಜನಿಕ ರ್‍ಯಾಲಿಗಳನ್ನು ಹಮ್ಮಿಕೊಳ್ಳಲು, ದೇಶದಾದ್ಯಂತ ಇರುವ ಒಬಿಸಿ ಸಮುದಾಯವನ್ನು ಸಂಪರ್ಕಿಸಿ, ಸಂಘಟನೆ ಮತ್ತು ಚುನಾವಣಾ ಮಟ್ಟದಲ್ಲಿ ನಾಯಕತ್ವ ಬೆಳೆಸಲು ಕ್ರಿಯಾ ಯೋಜನೆ ರೂಪಿಸಲಾಗಿದೆ. ಕಾಂಗ್ರೆಸ್ ಪಕ್ಷದ ತತ್ವ, ಸಿದ್ಧಾಂತಗಳ ಕುರಿತು ನಾಯಕರಲ್ಲಿ ಜಾಗೃತಿ ಮೂಡಿಸಲು ಕೂಡಾ ಸಭೆಯಲ್ಲಿ ನಿರ್ಣಯ ತೆಗೆದುಕೊಳ್ಳಲಾಗಿದೆ.

ಸಭೆಯ ಬಳಿಕ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಮುಖ್ಯಮಂತ್ರಿ, ಒಬಿಸಿ ವರ್ಗವನ್ನು ಸಂಘಟಿಸುವ ಉದ್ದೇಶದಿಂದ 'ಬೆಂಗಳೂರು ಘೋಷಣೆ' ಹೆಸರಿನಲ್ಲಿ ತೆಗೆದುಕೊಂಡ ನಿರ್ಣಯಗಳ ಮಾಹಿತಿ ನೀಡಿದರು.

'ಭಾರತೀಯ ಜನಗಣತಿ ಆಯೋಗವು ತೆಲಂಗಾಣ ಸರ್ಕಾರ ನಡೆಸಿದ ಜಾತಿ ಜನಗಣತಿ ಸಮೀಕ್ಷೆಯನ್ನು ಮಾದರಿಯಾಗಿ ಇಟ್ಟುಕೊಂಡು ರಾಷ್ಟ್ರ ಮಟ್ಟದಲ್ಲಿ ಜಾತಿವಾರು ಜನಗಣತಿ ಕೈಗೊಳ್ಳಬೇಕು. ಜಾತಿವಾರು ಜನಗಣತಿಯು ಪ್ರತಿ ಜಾತಿ ಮತ್ತು ವ್ಯಕ್ತಿಯ ಸಾಮಾಜಿಕ, ಆರ್ಥಿಕ, ಶೈಕ್ಷಣಿಕ, ಔದ್ಯೋಗಿಕ, ರಾಜಕೀಯ ಅಂಶಗಳನ್ನು ಒಳಗೊಂಡಿರಬೇಕೆಂದು ಮಂಡಳಿಯು ನಿರ್ಣಯ ತೆಗೆದುಕೊಂಡಿದೆ' ಎಂದರು.

'ರಾಜ್ಯದಲ್ಲಿ ಸಲಹಾ ಮಂಡಳಿಯು ಮೊದಲ ಸಭೆ ನಡೆಸಿದೆ. ಮಂಡಳಿಯ ಸದಸ್ಯರು ತಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸಿದರು. ಬೆಂಗಳೂರು ಘೋಷಣೆಯ ನಿರ್ಣಯಗಳಿಗೆ ಕೈ ಎತ್ತುವ ಮೂಲಕ ಸರ್ವಾನುಮತದಿಂದ ಅಂಗೀಕರಿಸಲಾಯಿತು. ರಾಹುಲ್ ಗಾಂಧಿಯವರ ನಾಯಕತ್ವದಡಿಯಲ್ಲಿ ಭಾರತವು ಅತ್ಯುನ್ನತ ಸಾಂವಿಧಾನಿಕ ಉದ್ದೇಶವಾದ ಸಾಮಾಜಿಕ ಪರಿವರ್ತನೆಯನ್ನು ಸಾಕಾರಗೊಳಿಸಲಿದೆ' ಎಂದು ಹೇಳಿದರು.

'ದಿಟ್ಟ ನಿರ್ಧಾರ': 'ಕಾಂಗ್ರೆಸ್ ಪಕ್ಷ ಎಂದೆಂದಿಗೂ ಸಂವಿಧಾನಕ್ಕೆ ಬದ್ಧವಾಗಿರುತ್ತದೆ. ಅಹಿಂದ ತತ್ವ ಎಲ್ಲರಿಗೂ ಸಮಪಾಲು, ಸಮಬಾಳು ಎಂಬುದಾಗಿದೆ. ಇಂದಿನ ಕಾಲಮಾನದಲ್ಲಿ ಸಾಮಾಜಿಕ, ಆರ್ಥಿಕ, ಶೈಕ್ಷಣಿಕ ಸಮಾನತೆ ಇಲ್ಲ. ಈ ಕಾರಣಕ್ಕೆ ಹಿಂದುಳಿದ ಸಮುದಾಯಗಳಿಗೆ ಶಕ್ತಿ ತುಂಬಬೇಕಾಗಿದೆ. ರಾಹುಲ್ ಗಾಂಧಿಯವರು ಪ್ರತಿಪಾದಿಸುತ್ತಿರುವ ಜಾತಿವಾರು ಜನಗಣತಿ ಕೇವಲ ಜಾತಿಗಳ ಗಣತಿ ಆಗಿರದೆ, ಅದು ಸಾಮಾಜಿಕ, ಆರ್ಥಿಕ, ಶೈಕ್ಷಣಿಕವಾಗಿ ನಡೆಸುವ ಸಮೀಕ್ಷೆಯಾಗಿದೆ. ಹಿಂದುಳಿದ ಸಮುದಾಯಗಳಿಗೆ ಸಮಾನ ಅವಕಾಶ ಒದಗಿಸುವ ದಿಟ್ಟ ನಿರ್ಧಾರವನ್ನು ರಾಹುಲ್ ಕೈಗೊಂಡಿದ್ದಾರೆ' ಎಂದರು.

ಎಐಸಿಸಿ ಒಬಿಸಿ ಸಲಹಾ ಮಂಡಳಿ ಸಭೆಯಲ್ಲಿ ಮಂಡಳಿಯ ಸಂಚಾಲಕ ಅನಿಲ್ ಜೈ ಹಿಂದ್, ಸಿದ್ದರಾಮಯ್ಯ, ಮಾಜಿ ಮುಖ್ಯಮಂತ್ರಿಗಳಾದ ರಾಜಸ್ಥಾನದ ಅಶೋಕ್ ಗೆಹಲೋತ್, ಪುದುಚೇರಿಯ ವಿ. ನಾರಾಯಣಸ್ವಾಮಿ ಇದ್ದಾರೆ

ರಾಹುಲ್ ಗಾಂಧಿ 'ನ್ಯಾಯ ಯೋಧ'

ಸಮಾಜದ ನಿರ್ಲಕ್ಷಿತ ವರ್ಗಗಳಿಗೆ ಸಾಮಾಜಿಕ ನ್ಯಾಯ ಒದಗಿಸಲು ತೋರಿರುವ ಧೈರ್ಯ ಮತ್ತು ವಿಶೇಷವಾಗಿ ಹಿಂದುಳಿದ ವರ್ಗಗಳ ಪರವಾಗಿ ನಿಂತಿರುವ ಕಾರಣಕ್ಕೆ ಪಕ್ಷದ ನಾಯಕ ರಾಹುಲ್ ಗಾಂಧಿ ಅವರನ್ನು 'ನ್ಯಾಯ ಯೋಧ' ಎಂದು ಮಂಡಳಿಯ ಸಭೆಯು ಸರ್ವಾನುಮತದಿಂದ ನಿರ್ಣಯ ಕೈಗೊಂಡು ಧನ್ಯವಾದ ಸಲ್ಲಿಸಿದೆ. ಅವರ ದೃಢವಾದ ಹೋರಾಟದ ಪರಿಣಾಮವಾಗಿ ಮನುವಾದಿ ಮೋದಿ ಸರ್ಕಾರ ದೇಶದಲ್ಲಿ ಜಾತಿ ಜನಗಣತಿ ನಡೆಸುವುದಾಗಿ ಘೋಷಣೆ ಮಾಡಿತು. ಆ ಮೂಲಕ ಕೇಂದ್ರ ಸರ್ಕಾರ ಶರಣಾಗುವಂತೆ ಮಾಡಿತು. ಈ ಐತಿಹಾಸಿಕ ಸಾಧನೆಗಾಗಿ ಭಾರತದ ಎಲ್ಲ ಹಿಂದುಳಿದ ವರ್ಗಗಳ ಪರವಾಗಿ ಮಂಡಳಿಯು ರಾಹುಲ್ ಗಾಂಧಿಯವರನ್ನು ಶ್ಲಾಘಿಸಿತು ಎಂದು ನಿರ್ಣಯದಲ್ಲಿ ಉಲ್ಲೇಖಿಸಲಾಗಿದೆ.

ಸಿದ್ದರಾಮಯ್ಯಗೆ ಅಭಿನಂದನೆ: ದುರ್ಬಲರು, ಶೋಷಿತರ ಏಳಿಗೆಗಾಗಿ ಶ್ರಮಿಸುತ್ತಿರುವ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ನಾಯಕತ್ವಕ್ಕೂ ಸಭೆಯಲ್ಲಿ ಮೆಚ್ಚುಗೆ ವ್ಯಕ್ತಪಡಿಸಲಾಯಿತು. ಮಂಡಳಿಯ ಸಭೆಯನ್ನು ಮೊದಲ ಬಾರಿಗೆ ನಡೆಸಲು ಅವಕಾಶ ಮಾಡಿದ್ದಕ್ಕೆ ಅಭಿನಂದಿಸಲಾಯಿತು. ಸಾಮಾಜಿಕ ನ್ಯಾಯದ ಗುರಿ ತಲುಪುವಲ್ಲಿ ಸಿದ್ದರಾಮಯ್ಯ ದೊಡ್ಡ ಆಶಾಕಿರಣ ಆಗಿದ್ದಾರೆ. ಸಿದ್ದರಾಮಯ್ಯ ಅವರು ಒಬ್ಬ ಜನ ನಾಯಕ. ದೇಶದಲ್ಲಿ ಕಾಂಗ್ರೆಸ್ ಹಿಂದುಳಿದ ವರ್ಗಗಳ ಹೋರಾಟಕ್ಕೆ ಐತಿಹಾಸಿಕ ಕೊಡುಗೆ ನೀಡಲಿದ್ದಾರೆ ಎಂದೂ ಸಭೆಯಲ್ಲಿ ಅಭಿನಂದನೆ ಸಲ್ಲಿಸಿ ನಿರ್ಣಯ ತೆಗೆದುಕೊಂಡಿದೆ.

ಮೀನುಗಾರನ ಶವ ಪತ್ತೆ: ಮುಂದುವರಿದ ಶೋಧ

ಮಂಗಳೂರು: ದಕ್ಷಿಣ ಕನ್ನಡ ಜಿಲ್ಲೆಯ ಮಂಗಳೂರು, ಬಂಟ್ವಾಳ, ಮೂಲ್ಕಿ, ಸುಬ್ರಹ್ಮಣ್ಯ ಪ್ರದೇಶದಲ್ಲಿ ಬುಧವಾರವೂ ಉತ್ತಮ ಮಳೆ ಸುರಿಯಿತು. ಉಡುಪಿ ಜಿಲ್ಲೆಯಲ್ಲಿ ಸಾಧಾರಣ ಮಳೆ ಸುರಿದಿದೆ.

ಕುಂದಾಪುರ ಬಳಿಯ ಗಂಗೊಳ್ಳಿ ಅಳಿವೆ ಬಾಗಿಲಿನ ಹೊರ ಭಾಗದಲ್ಲಿ ಮಂಗಳವಾರ ಸಂಭವಿಸಿದ್ದ ನಾಡದೋಣಿ ದುರಂತದಲ್ಲಿ ನಾಪತ್ತೆಯಾಗಿದ್ದ ಮೂವರು ಮೀನುಗಾರರ ಪೈಕಿ ಲೋಹಿತ್ ಖಾರ್ವಿ (34) ಅವರ ಶವ ಬುಧವಾರ ಗಂಗೊಳ್ಳಿಯ ಲೈಟ್ ಹೌಸ್ ಪ್ರದೇಶದಲ್ಲಿ ಪತ್ತೆಯಾಗಿದೆ.

ಮೀನುಗಾರಿಕೆಗೆಂದು ಅರಬ್ಬಿ ಕಡಲಿಗೆ ಮಂಗಳವಾರ ತೆರಳಿದ್ದ ಗಂಗೊಳ್ಳಿಯ ನಾಲ್ವರು ಮೀನುಗಾರರಿದ್ದ ನಾಡದೋಣಿ ಕಡಲಿನ ಅಬ್ಬರಕ್ಕೆ ಮಗುಚಿ, ಮೂವರು ನಾಪತ್ತೆ ಆಗಿದ್ದರು. ಒಬ್ಬರನ್ನು ರಕ್ಷಿಸಲಾಗಿತ್ತು. ನಾಪತ್ತೆಯಾಗಿರುವ ಸುರೇಶ್ ಖಾರ್ವಿ ಮತ್ತು ಜಗನ್ನಾಥ್ ಖಾರ್ವಿ ಅವರ ಪತ್ತೆಗೆ ಶೋಧ ಕಾರ್ಯಾಚರಣೆ ಮುಂದುವರಿದಿದೆ.

ಮಡಿಕೇರಿಯಲ್ಲಿ ಮುಂದುವರಿದ ಭಾರಿ ಮಳೆ: ನಗರದಲ್ಲಿ ಬುಧವಾರವೂ ಭಾರಿ ಮಳೆ ಸುರಿಯಿತು. ಬೆಳಿಗ್ಗೆ ಸುಮಾರು 3 ಗಂಟೆಗೂ ಹೆಚ್ಚು, ಮಧ್ಯಾಹ್ನದ ನಂತರ 2 ಗಂಟೆಗೂ ಹೆಚ್ಚು ಬಿರುಸಿನ ಮಳೆಯಾಯಿತು. ಮಾಲ್ದಾರೆ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಬಾಡಗ ಬಾಣಂಗಾಲ ಗ್ರಾಮದ ನಿವಾಸಿ ಪಿ.ಎಸುಮಯ್ಯ ಎಂಬವರ ಮನೆ ಕುಸಿದು ಬಿದ್ದಿದೆ. ಭಾರಿ ಮಳೆಯ ಮುನ್ಸೂಚನೆ ನೀಡಿರುವ ಹವಾಮಾನ ಇಲಾಖೆಯು ಗುರುವಾರ (ಜುಲೈ 17) 'ಆರೆಂಜ್ ಅಲರ್ಟ್' ಘೋಷಿಸಿದೆ.

ತುಂತುರು ಮಳೆ: (ದಾವಣಗೆರೆ ವರದಿ): ನಗರವೂ ಸೇರಿದಂತೆ ಜಿಲ್ಲೆಯ ವಿವಿಧೆಡೆ ಬುಧವಾರ ತುಂತುರು ಮಳೆ ಸುರಿಯಿತು. ಬೆಳಗಿನ ಜಾವದಿಂದಲೇ ಆರಂಭವಾದ ಮಳೆ ಸೋನೆಯಂತೆ ಇಡೀ ದಿನ ಸುರಿಯಿತು. ಶಾಲೆ– ಕಾಲೇಜುಗಳಿಂದ ವಿದ್ಯಾರ್ಥಿಗಳು ಮನೆಗಳಿಗೆ ಮರಳುವಾಗ ಮಳೆಯಿಂದ ತೊಂದರೆ ಅನುಭವಿಸಿದರು. ವೇಗವಾಗಿ ಬೀಸುತ್ತಿದ್ದ ಗಾಳಿಯ ಜೊತೆಗೆ ಸುರಿದ ಮಳೆಯಿಂದಾಗಿ ಜನಜೀವನ ಅಸ್ತವ್ಯಸ್ತಗೊಂಡಿತು. ಮಂಗಳವಾರ ಸುರಿದ ಮಳೆಗೆ ಚನ್ನಗಿರಿ ತಾಲ್ಲೂಕಿನಲ್ಲಿ ಒಂದು ಮನೆಗೆ ಹಾನಿಯಾಗಿದೆ.

ಜೇವರ್ಗಿ: ಲೋಕಾಯುಕ್ತ ಅಧಿಕಾರಿಗಳ ಪರಿಶೀಲನೆ ವೇಳೆ ಬೆಳಕಿಗೆ

ಆಸ್ಪತ್ರೆ ಪುಸ್ತಕದಲ್ಲಿ ಚಿತ್ರಗೀತೆ, ಸ್ತೋತ್ರ

ಪ್ರಜಾವಾಣಿ ವಾರ್ತೆ

ಜೇವರ್ಗಿ (ಕಲಬುರಗಿ ಜಿಲ್ಲೆ): ಜೇವರ್ಗಿ ಪಟ್ಟಣದ ಸರ್ಕಾರಿ ಸಾರ್ವಜನಿಕ ಆಸ್ಪತ್ರೆಯ ಹೊರರೋಗಿ ವಿಭಾಗದ (ಒಪಿಡಿ) ದಾಖಲಾತಿ ಪುಸ್ತಕದಲ್ಲಿ ಆಸ್ಪತ್ರೆಯ ಸಿಬ್ಬಂದಿ ಚಿತ್ರಗೀತೆ, ದೇವರ ಸ್ತೋತ್ರಗಳನ್ನು ಬರೆದಿರುವುದು ಬುಧವಾರ ಲೋಕಾಯುಕ್ತ ಅಧಿಕಾರಿಗಳ ಪರಿಶೀಲನೆ ವೇಳೆ ಗೊತ್ತಾಗಿದೆ.

ತಾಲ್ಲೂಕಿನ ಮಾರಡಗಿ ಎಸ್.ಎ ಗ್ರಾಮದ ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆಯ ವಿದ್ಯಾರ್ಥಿಗಳು ಬಿಸಿಯೂಟ ಸೇವಿಸಿ ಅಸ್ವಸ್ಥಗೊಂಡು ಆಸ್ಪತ್ರೆಗೆ ದಾಖಲಾಗಿದ್ದರು. ಮಕ್ಕಳ ಆರೋಗ್ಯ ವಿಚಾರಿಸಲು ಲೋಕಾಯುಕ್ತ ಎಸ್.ಪಿ ಸಿದ್ದರಾಜು, ಡಿವೈಎಸ್‌ಪಿ ಗೀತಾ ಬೇನಾಳ ಅವರು ಆಸ್ಪತ್ರೆಗೆ ಭೇಟಿ ನೀಡಿದಾಗ ಒಪಿಡಿ ಪುಸ್ತಕ ದುರ್ಬಳಕೆ ಆಗಿರುವುದು ಬೆಳಕಿಗೆ ಬಂದಿದೆ.

'ಎರಡು ಕನಸು' ಚಲನಚಿತ್ರದ 'ಪೂಜಿಸಲೆಂದೇ ಹೂಗಳ ತಂದೆ...', ರೇಣುಕಾ ದೇವ್ಯಷ್ಟೋತ್ತರ ಸ್ತೋತ್ರದ 'ಓಂ ಅಸ್ಯ ಶ್ರೀ ರೇಣುಕಾ ದೇವ್ಯಷ್ಟೋತ್ತರಶತ ನಾಮಾವಲಿ', 'ನಾರಾಯಣೀ ಜಗನ್ಮಾತಾ ಜಗದ್ಬೀಜಾ ಜಗತ್ಪ್ರಭಾ' ಸೇರಿದಂತೆ 15ಕ್ಕೂ ಹೆಚ್ಚು ಸ್ತೋತ್ರಗಳನ್ನು ಒಪಿಡಿ ಪುಸ್ತಕದಲ್ಲಿ ಬರೆಯಲಾಗಿತ್ತು. ಇದನ್ನು ಗಮನಿಸಿದ ಲೋಕಾಯುಕ್ತ ಎಸ್‌ಪಿ ಸಿದ್ದರಾಜು ಅವರು ಸಿಬ್ಬಂದಿಯನ್ನು ತರಾಟೆಗೆ ತೆಗೆದುಕೊಂಡರು. ಆಸ್ಪತ್ರೆಯ ಅವ್ಯವಸ್ಥೆಯನ್ನು ಕಂಡು ಸಿಡಿಮಿಡಿಗೊಂಡರು.

ವಿಶ್ವ ಜನಸಂಖ್ಯಾ ದಿನಾಚರಣೆ ಕಾರ್ಯಕ್ರಮದ ಅಭ್ಯಾಸಕ್ಕಾಗಿ ಸಿಬ್ಬಂದಿಯೊಬ್ಬರು ಈ ರೀತಿ ಮಾಡಿದ್ದಾರೆ. ಸ್ಪಷ್ಟನೆ ಕೇಳಿ ಎಚ್ಚರಿಕೆಯ ನೋಟಿಸ್ ಕೊಡಲಾಗಿದೆ

ಡಾ. ಶರಣಬಸಪ್ಪ ಕ್ಯಾತನಾಳ ಡಿಎಚ್ಒ



ಒಪಿಡಿ ದಾಖಲಾತಿ ಪುಸ್ತಕದಲ್ಲಿ ಬರೆದಿರುವ ದೇವರ ಸ್ತೋತ್ರಗಳು

'ಅವ್ಯವಸ್ಥೆಯಲ್ಲಿ ನಂಬರ್ ಒನ್ ಆಸ್ಪತ್ರೆ'

ಔಷಧಾಲಯ, ಲ್ಯಾಬ್, ಆಯುಷ್ ಇಲಾಖೆ ಕಚೇರಿ, ಡ್ರೆಸಿಂಗ್ ಮತ್ತು ಸಿಬ್ಬಂದಿ ಕೋಣೆಗಳಲ್ಲಿನ ಅವ್ಯವಸ್ಥೆಯನ್ನು ಕಂಡು ಎಸ್.ಪಿ ಸಿದ್ದರಾಜು ಅವರು ಅಧಿಕಾರಿಗಳನ್ನು ತರಾಟೆಗೆ ತೆಗೆದುಕೊಂಡರು. ಔಷಧಗಳಿಗೆ ಹೊರಗಡೆ ಚೀಟಿ ಬರೆದು ಕೊಡುವ ಆರೋಪವೂ ರೋಗಿಗಳಿಂದ ಕೇಳಿಬಂತು. 'ಜೇವರ್ಗಿ ಆಸ್ಪತ್ರೆಗೆ ರಾಜ್ಯದಲ್ಲಿಯೇ ಅವ್ಯವಸ್ಥೆಯಲ್ಲಿ ನಂಬರ್ ಒನ್ ಸ್ಥಾನ ಕೊಡಬೇಕು' ಎಂದು ಸಿದ್ದರಾಜು ಸಿಡಿಮಿಡಿಗೊಂಡರು.

'ಸರ್ಕಾರ ನೀಡುವ ಸೌಲಭ್ಯಗಳನ್ನು ರೋಗಿಗಳಿಗೆ ಒದಗಿಸಲು ನಿರ್ಲಕ್ಷ್ಯ ವಹಿಸಬಾರದು. ನಮಗೇ ಉಡಾಫೆಯಿಂದ ಉತ್ತರ ನೀಡುವ ನೀವು, ಆಸ್ಪತ್ರೆಗೆ ಬರುವ ಜನರ ಜತೆಗೆ ಹೇಗೆ ವರ್ತಿಸುತ್ತಿರಬಹುದು' ಎಂದು ಬೇಸರ ವ್ಯಕ್ತಪಡಿಸಿದರು.



ಒಪಿಡಿ ದಾಖಲಾತಿ ಪುಸ್ತಕದಲ್ಲಿ ಬರೆದಿರುವ ಚಿತ್ರಗೀತೆ

‘ಖರ್ಗೆಯನ್ನು ಪ್ರಧಾನಿ ಅಭ್ಯರ್ಥಿ ಮಾಡಿ’

ಕಾಂಗ್ರೆಸ್‌ಗೆ ಸವಾಲು ಹಾಕಿದ ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ವಿಜಯೇಂದ್ರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಕಾಂಗ್ರೆಸ್ ಪಕ್ಷಕ್ಕೆ ಪರಿಶಿಷ್ಟ ಜಾತಿ, ಪಂಗಡಗಳ ಬಗ್ಗೆ ನಿಜವಾಗಿಯೂ ಕಾಳಜಿ ಇದ್ದರೆ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರನ್ನು ಪ್ರಧಾನಿ ಅಭ್ಯರ್ಥಿಯನ್ನಾಗಿ ಎಂದು ಘೋಷಿಸಲಿ’ ಎಂದು ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ.ವಿಜಯೇಂದ್ರ ಸವಾಲು ಹಾಕಿದ್ದಾರೆ.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ‘ಸಿದ್ದರಾಮಯ್ಯ ಅವರಿಗೆ ಧೈರ್ಯ ಇದ್ದರೆ ಮಲ್ಲಿಕಾರ್ಜುನ ಖರ್ಗೆ ಅವರನ್ನು ಪ್ರಧಾನಿ ಅಭ್ಯರ್ಥಿ ಎಂದು ಘೋಷಿಸುವ ಸಾಹಸ ಮಾಡಲಿ. ರಾಹುಲ್ ಗಾಂಧಿ ಮತ್ತು ಸೋನಿಯಾಗಾಂಧಿ ಅವರು ಇದನ್ನೆಲ್ಲ ಒಪ್ಪುವುದಿಲ್ಲ’ ಎಂದು ಹೇಳಿದರು.

‘ಹಿಂದೆ ಬಿಜೆಪಿ ಕೇಂದ್ರದಲ್ಲಿ ಅಧಿಕಾರದಲ್ಲಿ ಇದ್ದಾಗ ಎ.ಪಿ.ಜೆ. ಅಬ್ದುಲ್ ಕಲಾಂ ಅವರನ್ನು, ನರೇಂದ್ರ ಮೋದಿ ಅವಧಿಯಲ್ಲಿ ರಾಮನಾಥ ಕೋವಿಂದ್ ಮತ್ತು ದ್ರೌಪದಿ ಮುರ್ಮು ಅವರನ್ನು ರಾಷ್ಟ್ರಪತಿಗಳನ್ನಾಗಿ ಮಾಡಿದೆ. ಬಿಜೆಪಿ ಆಡಳಿತದ 6 ರಾಜ್ಯಗಳಲ್ಲಿ ಪರಿಶಿಷ್ಟ ಪಂಗಡದವರು, 4 ರಾಜ್ಯಗಳಲ್ಲಿ ಹಿಂದುಳಿದ ವರ್ಗಕ್ಕೆ ಸೇರಿದವರು ಮುಖ್ಯಮಂತ್ರಿಯಾಗಿ ಕಾರ್ಯನಿರ್ವಹಿಸುತ್ತಿದ್ದಾರೆ’ ಎಂದು ಹೇಳಿದರು.

ಡ್ರಗ್ ಮಾಫಿಯಾ ಕರ್ನಾಟಕಕ್ಕೆ ಹೊಸದಲ್ಲ. ಪ್ರಿಯಾಂಕ್ ಖರ್ಗೆ ಉಸ್ತುವಾರಿ ಸಚಿವರಾಗಿರುವ ಕಲಬುರಗಿ ಜಿಲ್ಲೆಯಲ್ಲಿ ಅದು ಗರಿಷ್ಠ ಪ್ರಮಾಣದಲ್ಲಿದೆ
ಬಿ.ವೈ.ವಿಜಯೇಂದ್ರ, ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ

‘ಸಿದ್ದರಾಮಯ್ಯ ತಮ್ಮನ್ನು ತಾವು ಹಿಂದುಳಿದ ವರ್ಗಗಳ ಚಾಂಪಿಯನ್ ಎಂದು ಕರೆದುಕೊಳ್ಳುತ್ತಾರೆ. ಇತ್ತೀಚೆಗೆ ಕಾಂತರಾಜ ನೇತೃತ್ವದ ಆಯೋಗದ ವರದಿಯನ್ನು ಸಚಿವ ಸಂಪುಟ ಸಭೆಯಲ್ಲಿ ಮಂಡಿಸಿ ಅಂಗೀಕರಿಸುವುದಾಗಿ ಬೊಗಳೆ ಹೊಡೆಯುತ್ತಿದ್ದ ಅವರು, ₹165 ಕೋಟಿ ಖರ್ಚು ಮಾಡಿ ಸಿದ್ಧಪಡಿಸಿದ್ದ ವರದಿಯನ್ನು ರಾಹುಲ್‌ಗಾಂಧಿ ಆದೇಶ ಮಾಡಿದ್ದಾರೆಂದು ಕಸದ ಬುಟ್ಟಿಗೆ ಎಸೆಯಲಿಲ್ಲವೇ? ಆಗ ಹಿಂದುಳಿದವರ ಬಗೆಗಿನ ಕಾಳಜಿ ಎಲ್ಲಿ ಹೋಗಿತ್ತು’ ಎಂದು ವಿಜಯೇಂದ್ರ ಪ್ರಶ್ನಿಸಿದರು.

‘ಬಿಜೆಪಿ ಹಿಂದುಳಿದವರ ವಿರೋಧಿ, ಸಾಮಾಜಿಕ ನ್ಯಾಯದ ವಿರೋಧಿ ಎಂದು ಸುಳ್ಳು ಹೇಳುತ್ತಾ ಬಂದಿರುವ ಸಿದ್ದರಾಮಯ್ಯ ಅವರು ಹೈಕಮಾಂಡ್ ಸೂಚನೆ ಮೇರೆಗೆ ಕಾಂತರಾಜ ಆಯೋಗದ ವರದಿಯನ್ನು ಮೂಲೆಗೆ ಹಾಕಿದ್ದು ಏಕೆ? ಇವರಿಂದ ಹಿಂದುಳಿದವರಿಗೆ ನ್ಯಾಯ ಕೊಡಲು ಸಾಧ್ಯವೇ’ ಎಂದು ಪ್ರಶ್ನಿಸಿದರು.

‘ಹಿಂದುಳಿದ ವರ್ಗ, ಪರಿಶಿಷ್ಟ ಜಾತಿ, ಪಂಗಡಗಳನ್ನು, ಅಲ್ಪಸಂಖ್ಯಾತರನ್ನು ತಮ್ಮ ಮನೆಯಾಳುಗಳ ರೀತಿ ನೆಹರೂ–ಗಾಂಧಿ ಕುಟುಂಬ ನೋಡಿಕೊಂಡು ಬಂದಿದೆ. ಇಂಥ ಕಾಂಗ್ರೆಸ್ ಪಕ್ಷದಿಂದ ಹಿಂದುಳಿದ ವರ್ಗಕ್ಕೆ ನ್ಯಾಯ ಕೊಡಲು ಸಾಧ್ಯವೇ ಎಂದು ದೇಶದ ಮತ್ತು ರಾಜ್ಯದ ಜನರು ಕೇಳುತ್ತಿದ್ದಾರೆ’ ಎಂದರು.

‘ರಾಜ್ಯದಲ್ಲಿ ‘ಸೂಪರ್ ಸಿಎಂ’ ಇಲ್ಲ’

ಮೈಸೂರು: ‘ಸಿದ್ದರಾಮಯ್ಯ ಮುಖ್ಯಮಂತ್ರಿ ಆಗಿದ್ದಾರೆ. ಅವರನ್ನು ಬಿಟ್ಟರೆ ಬೇರೆ ಯಾರೂ ಸೂಪರ್ ಸಿ.ಎಂ. ಇಲ್ಲ’ ಎಂದು ಸಮಾಜ ಕಲ್ಯಾಣ ಸಚಿವ ಡಾ.ಎಚ್.ಸಿ. ಮಹದೇವಪ್ಪ ಹೇಳಿದರು.

ಇಲ್ಲಿ ಬುಧವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ‘ಸಂವಿಧಾನದ ಪ್ರಕಾರ ಸಿ.ಎಂ. ಹುದ್ದೆ ಒಂದೇ ಇರುತ್ತದೆ. ಈಗ ಸಿದ್ದರಾಮಯ್ಯ ಅಲ್ಲಿ ಕುಳಿತಿದ್ದಾರೆ, ಆಡಳಿತ ನಡೆಸುತ್ತಿದ್ದಾರೆ. ಪಕ್ಷದ ರಾಜ್ಯ ಉಸ್ತುವಾರಿ ಸುರ್ಜೇವಾಲಾ ಸೂಪರ್ ಸಿ.ಎಂ. ಆಗಿ ನಡೆದುಕೊಂಡಿಲ್ಲ’ ಎಂದು ಪ್ರತಿಕ್ರಿಯಿಸಿದರು.

‘ಉಸ್ತುವಾರಿಯು ಶಾಸಕರ ಅಭಿಪ್ರಾಯ ಕೇಳಿದ್ದಾರೆ. ಸಚಿವರೊಂದಿಗೆ ಮಾತುಕತೆ ನಡೆಸಿದ್ದಾರೆ. ನಾನೂ ಭೇಟಿಯಾಗಿದ್ದೆ. ಪಕ್ಷದ ನಾಯಕರು ಕರೆದಾಗ ಹೋಗಿ ಚರ್ಚಿಸುವುದು ಸಾಮಾನ್ಯ. ಶಾಸಕರಲ್ಲಿ ಸಚಿವರ ಬಗ್ಗೆ ಯಾವುದೇ ಅಸಮಾಧಾನವಿಲ್ಲ. ಸುರ್ಜೇವಾಲಾ ಭೇಟಿಯಾದಾಗ ಅಪಸ್ವರ ತೆಗೆದಿಲ್ಲ’ ಎಂದರು.

‘ಮೈಸೂರಿನಲ್ಲಿ ಜುಲೈ 19ರಂದು ಅಭಿವೃದ್ಧಿ ಕಾಮಗಾರಿಗಳಿಗೆ ಶಂಕುಸ್ಥಾಪನೆ ಹಾಗೂ ಉದ್ಘಾಟನೆ ನಡೆಯಲಿದೆ. ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರನ್ನು ಮಾತ್ರ ಆಹ್ವಾನಿಸಲಾಗಿದೆ’ ಎಂದು ತಿಳಿಸಿದರು.

ಶಕ್ತಿ ಪ್ರದರ್ಶನದ ವೇದಿಕೆಯಲ್ಲ: ‘ಮೈಸೂರಿನ ಈ ಸಮಾವೇಶ ಸಿದ್ದರಾಮಯ್ಯ ಅವರ ಶಕ್ತಿ ಪ್ರದರ್ಶನದ ವೇದಿಕೆಯಲ್ಲ. ಐದು ವರ್ಷದವರೆಗೆ ಆಡಳಿತ ನಡೆಸಲು ಜನರು ಆಶೀರ್ವದಿಸಿದ್ದಾರೆ. ಅವರ ಬೆಂಬಲ, ಶಕ್ತಿಯಿಂದ ಕೆಲಸ ಮಾಡುತ್ತಿದ್ದೇವೆಯೇ ಹೊರತು ಬೇರೆ ಯಾವ ಶಕ್ತಿಯೂ ಇಲ್ಲ. ಈ ಕಾರ್ಯಕ್ರಮ ಮೊದಲೇ ನಿಗದಿಯಾಗಿತ್ತು. ನಾಯಕತ್ವ ಬದಲಾವಣೆ, ಅದಲು-ಬದಲು ಮೊದಲಾದ ವಿಚಾರಗಳು ಈಗ ಅನಗತ್ಯವಾಗಿವೆ. ನಮಗೆ ಅಭಿವೃದ್ಧಿಯಷ್ಟೇ ಮುಖ್ಯ’ ಎಂದು ಪ್ರತಿಕ್ರಿಯಿಸಿದರು.

‘ಸಿಗಂದೂರು ಸೇತುವೆಗೆ ಡಿಪಿಆರ್ ಸಿದ್ಧವಾಗಿದ್ದೇ ನಾನು ಲೋಕೋಪಯೋಗಿ ಸಚಿವನಾಗಿದ್ದಾಗ. ಇದರಲ್ಲಿ ನನ್ನ ಪಾಲೂ ಇದೆ’ ಎಂದರು.

‘ರಣದೀಪ್’ ಆಡಳಿತ: ವ್ಯಂಗ್ಯ

ಬೆಂಗಳೂರು: ‘ರಾಜ್ಯದಲ್ಲಿ ‘ರಣದೀಪ್’ ಆಡಳಿತ ಜಾರಿ ಆಗಿದೆಯಾ’ ಎಂದು ವಿಧಾನಸಭೆ ವಿರೋಧ ಪಕ್ಷದ ನಾಯಕ ಆರ್. ಅಶೋಕ ಪ್ರಶ್ನಿಸಿದ್ದಾರೆ.

‘ಲಾಟರಿ ಸಿ.ಎಂ ಸಿದ್ದರಾಮಯ್ಯ ಅವರ ಮೇಲೆ ಸಂಪೂರ್ಣ ವಿಶ್ವಾಸ ಕಳೆದುಕೊಂಡಿರುವ ಕಾಂಗ್ರೆಸ್ ಹೈಕಮಾಂಡ್ ಕರ್ನಾಟಕದಲ್ಲಿ ರಣದೀಪ್ ಆಡಳಿತ ಹೇರಿದೆ’ ಎಂದು ‘ಎಕ್ಸ್’ನಲ್ಲಿ ಟೀಕಿಸಿದ್ದಾರೆ.

‘ಗುರುವಾರದ ಸಚಿವ ಸಂಪುಟ ಸಭೆಯೂ ಸುರ್ಜೇವಾಲಾ ಅವರ ಅಧ್ಯಕ್ಷತೆಯಲ್ಲಿಯೇ ನಡೆಯುತ್ತದೆಯೇ’ ಎಂದು ಪ್ರಶ್ನಿಸಿರುವ ಅವರು, ‘ಕೆಪಿಸಿಸಿ ಕಚೇರಿಯಲ್ಲಿ, ಪಂಚತಾರಾ ಹೋಟೆಲ್‌ಗಳಲ್ಲಿ ಅತೃಪ್ತ ಶಾಸಕರ ದೂರು–ದುಮ್ಮಾನ ಕೇಳುತ್ತಿರುವ, ಮಂತ್ರಿಗಳ ಸಾಧನೆ ಪರಾಮರ್ಶೆ ಮಾಡುತ್ತಿರುವ ಸುರ್ಜೇವಾಲಾ ವಿಧಾನಸೌಧದಲ್ಲಿ ನಡೆಯುವ ಸಂಪುಟ ಸಭೆಗೂ ಬಂದು ಅಧ್ಯಕ್ಷತೆ ವಹಿಸಿದರೂ ಅಚ್ಚರಿಪಡಬೇಕಿಲ್ಲ’ ಎಂದು ವ್ಯಂಗ್ಯವಾಡಿದ್ದಾರೆ.

‘ಸಾಕ್ಷ್ಯ ರಕ್ಷಣೆ ಒದಗಿಸಲು ಸಾಕ್ಷಿದಾರ ಅಲಭ್ಯ’

ಪ್ರಜಾವಾಣಿ ವಾರ್ತೆ

ಮಂಗಳೂರು: ‘ಧರ್ಮಸ್ಥಳ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಈ ಹಿಂದೆ ನಡೆದಿದೆ ಎನ್ನಲಾದ ಅಪರಾಧ ಕೃತ್ಯಗಳಿಗೆ ಸಂಬಂಧಿಸಿದ ಮೃತದೇಹಗಳನ್ನು ವಿಲೇವಾರಿ ಮಾಡಿರುವ ಕುರಿತು ಧರ್ಮಸ್ಥಳ ಠಾಣೆಯಲ್ಲಿ ದಾಖಲಾದ ದೂರಿನ (ಸಂಖ್ಯೆ 39/2025) ಸಾಕ್ಷಿದಾರ ವ್ಯಕ್ತಿಯ ಇರುವಿಕೆ ಕುರಿತು ಯಾವುದೇ ಮಾಹಿತಿ ಲಭ್ಯವಿಲ್ಲ’ ಎಂದು ದಕ್ಷಿಣ ಕನ್ನಡ ಜಿಲ್ಲಾ ಪೊಲೀಸರು ತಿಳಿಸಿದ್ದಾರೆ.

‘ಹಾಗಾಗಿ ಅಂತಹ ಸಾಕ್ಷಿದಾರನಿಗೆ ಸಾಕ್ಷ್ಯ ರಕ್ಷಣೆ ನೀಡಲು ಸಾಧ್ಯವಿಲ್ಲ. ಈ ಬಗ್ಗೆ ಸಕ್ಷಮ ಪ್ರಾಧಿಕಾರಕ್ಕೆ ವರದಿ ಸಲ್ಲಿಸಲಿದ್ದೇವೆ’ ಎಂದೂ ಅವರು ತಿಳಿಸಿದ್ದಾರೆ.

‘ಸಾಕ್ಷಿದಾರರ ರಕ್ಷಣೆಗೆ ಸಂಬಂಧಿಸಿದ ನಿಯಮ 7ರ ಅಡಿಯಲ್ಲಿ ಸಾಕ್ಷಿದಾರನ ಒಪ್ಪಿಗೆ ಮತ್ತು ಸಹಕಾರವಿದ್ದಲ್ಲಿ ಮಾತ್ರ ತೆಗೆದುಕೊಳ್ಳಬಹುದಾದ ಹಲವು ಕ್ರಮಗಳಿವೆ. ಈ ಬಗ್ಗೆ ಜುಲೈ 10ರಂದು ಸಾಕ್ಷಿದಾರನ ಪರವಾದ ವಕೀಲರಿಗೆ ಇಮೇಲ್ ಮೂಲಕ ತಿಳಿಸಲಾಗಿದೆ. ಆದರೆ ಈವರೆಗೆ ಸಾಕ್ಷಿದಾರನ ಇರುವಿಕೆಯ ಬಗ್ಗೆ ಯಾವುದೇ ಮಾಹಿತಿಯನ್ನು ಅವರು ಪೊಲೀಸರೊಂದಿಗೆ ಹಂಚಿಕೊಂಡಿಲ್ಲ. ಪ್ರಕರಣದ ಬಗ್ಗೆ ವಕೀಲರೊಂದಿಗೆ ಎಲ್ಲಾ ಸಂವಹನಗಳು ಇಮೇಲ್ ಮೂಲಕ ಮಾತ್ರ ನಡೆಯುತ್ತಿವೆ. ಸಾಕ್ಷಿದಾರನ ಇರುವಿಕೆಯ ಬಗ್ಗೆ ಯಾವುದೇ ಮಾಹಿತಿಗಳು ಲಭ್ಯವಿಲ್ಲದಿದ್ದಾಗ, ಅಂತಹ ಸಾಕ್ಷಿದಾರನಿಗೆ ಸಾಕ್ಷಿ ರಕ್ಷಣೆ ನೀಡಲು ಸಾಧ್ಯವಿಲ್ಲ ಎಂಬುದಾಗಿ ಡಿವೈಎಸ್‌ಪಿಯವರು ಸಕ್ಷಮ ಪ್ರಾಧಿಕಾರಕ್ಕೆ ವರದಿ ಸಲ್ಲಿಸುತ್ತಾರೆ’ ಎಂದು ಪೊಲೀಸರು ತಿಳಿಸಿದ್ದಾರೆ.

‘ಧರ್ಮಸ್ಥಳ ಗ್ರಾಮದಲ್ಲಿ ಈ ಹಿಂದಿನಿಂದ ಹಲವಾರು ಅಪರಾಧ ಕೃತ್ಯಗಳು ನಡೆದಿವೆ. ನನಗೆ ಜೀವಬೆದರಿಕೆ ಒಡ್ಡಿ, ಈ ಅಪರಾದ ಕೃತ್ಯಗಳ ಮೃತದೇಹಗಳನ್ನು ರಹಸ್ಯವಾಗಿ ವಿಲೇವಾರಿ ಮಾಡಿಸಿದ್ದಾರೆ. ಈ ಬಗ್ಗೆ ಪಾಪಪ್ರಜ್ಞೆ ಕಾಡುತ್ತಿದೆ. ನನಗೆ ಹಾಗೂ ನನ್ನ ಕುಟುಂಬಕ್ಕೆ ಕಾನೂನಾತ್ಮಕವಾಗಿ ರಕ್ಷಣೆ ದೊರೆತ ಕೂಡಲೇ ಈ ಅಪರಾಧ ಕೃತ್ಯಗಳನ್ನು ನಡೆಸಿದವರ ಸಂಪೂರ್ಣ ಮಾಹಿತಿಯನ್ನು ನೀಡುತ್ತೇನೆ. ನಾನು ಮೃತದೇಹಗಳನ್ನು ವಿಲೇವಾರಿ ಮಾಡಿದ ಸ್ಥಳಗಳನ್ನು ಪೊಲೀಸರಿಗೆ ತೋರಿಸಲು ಸಿದ್ಧವಿದ್ದೇನೆ’ ಎಂದು ದೂರುದಾರ ವ್ಯಕ್ತಿ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಕಚೇರಿಗೆ ಹಾಗೂ ಧರ್ಮಸ್ಥಳ ಪೊಲೀಸ್ ಠಾಣೆಗೆ ಜುಲೈ 3ರಂದು ದೂರು ನೀಡಿದ್ದರು. ಈ ಬಗ್ಗೆ ಜುಲೈ 4ರಂದು ಪ್ರಕರಣ ದಾಖಲಾಗಿತ್ತು.

ಜುಲೈ 11ರಂದು ಮುಸುಕುಹಾಕಿ ಕೊಂಡಿದ್ದ ಸಾಕ್ಷಿ ದೂರುದಾರ ಬಿಗಿ ಪೊಲೀಸ್ ಭದ್ರತೆಯಲ್ಲಿ ವಕೀಲರೊಂದಿಗೆ ಬೆಳ್ತಂಗಡಿ ನ್ಯಾಯಾಲಯಕ್ಕೆ ಹಾಜರಾಗಿದ್ದರು ಎಂದು ಸಾಕ್ಷಿದೂರುದಾರರ ಪರ ವಕೀಲರು ತಿಳಿಸಿದ್ದರು.

ಅನನ್ಯ ಭಟ್ ತಾಯಿಯಿಂದ ದೂರು

‘ಅನನ್ಯ ಭಟ್ ಎಂಬ ಹೆಸರಿನ ವೈದ್ಯಕೀಯ ವಿದ್ಯಾರ್ಥಿನಿಯು 2003ನೇ ಇಸವಿಯಲ್ಲಿ ಧರ್ಮಸ್ಥಳ ದೇವಸ್ಥಾನದ ವಠಾರದಿಂದ ಕಣ್ಮರೆಯಾಗಿದ್ದು, ಈ ಬಗ್ಗೆ ವಿಚಾರಣೆ ನಡೆಸುವಂತೆ ಈ ಯುವತಿಯ ತಾಯಿ ದೂರು ಅರ್ಜಿ ನೀಡಿದ್ದಾರೆ. ಅದರ ವಿಚಾರಣೆ ನಡೆಸಿ ಸೂಕ್ತ ಕಾನೂನು ಕ್ರಮ ಕೈಗೊಳ್ಳಲಾಗುವುದು’ ಎಂದು ಪೊಲೀಸರು ತಿಳಿಸಿದ್ದಾರೆ.

ಬೆಂಗಳೂರಿನ ಸುಜಾತ ಭಟ್ ಅವರು ಮಂಗಳವಾರ ಸಂಜೆ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಅವರನ್ನು ಭೇಟಿಯಾಗಿ ದೂರು ಸಲ್ಲಿಸಿದ್ದರು.

ದೂರು ಸಲ್ಲಿಸಿದ ನಂತರ ಮಾಧ್ಯಮದವರಿಗೆ ಪ್ರತಿಕ್ರಿಯಿಸಿದ್ದ ಸುಜಾತ ಭಟ್, ‘ನನ್ನ ಪುತ್ರಿ ಮಣಿಪಾಲದಲ್ಲಿ ಎಂಬಿಬಿಎಸ್ ವ್ಯಾಸಂಗ ಮಾಡುತ್ತಿದ್ದಳು. ಧರ್ಮಸ್ಥಳಕ್ಕೆ ಪ್ರವಾಸಕ್ಕೆ ಬಂದಾಗ ಅಲ್ಲಿಂದ ಅವಳು ನಾಪತ್ತೆಯಾಗಿದ್ದಾಳೆ. ನಾನು ಕೋಲ್ಕತ್ತದಲ್ಲಿ ಸಿಬಿಐ ಕಚೇರಿಯಲ್ಲಿ ಸ್ಟೆನೋ ಆಗಿದ್ದೆ. ಅಲ್ಲಿಂದ ನಾನು ಬೆಳ್ತಂಗಡಿ ಪೊಲೀಸ್ ಠಾಣೆಗೆ ಬಂದು ದೂರು ನೀಡಿದರೆ ಅವರು ಸ್ವೀಕರಿಸಲಿಲ್ಲ. ನಂತರ ನಾನು ಧರ್ಮಸ್ಥಳಕ್ಕೆ ತೆರಳಿ ವಿಚಾರಿಸಿದಾಗ ಅವಾಚ್ಯವಾಗಿ ನನ್ನನ್ನು ನಿಂದಿಸಲಾಯಿತು. ನನ್ನ ಮೇಲೆ ಹಲ್ಲೆ ನಡೆಯಿತು. ಯಾರು ಹೊಡೆದಿದ್ದಾರೆ ಗೊತ್ತಿಲ್ಲ. ಕೆಲ ದಿನ ಕೋಮಾಕ್ಕೆ ಹೋಗಿದ್ದೆ. ಭಯದಿಂದ ನಾನು ಸುಮ್ಮನಿದ್ದೆ. ಶವ ಹೂಳಿದ್ದಾಗಿ ವ್ಯಕ್ತಿಯೊಬ್ಬರು ಹೇಳಿಕೊಂಡು ಮುಂದೆ ಬಂದಿದ್ದಾರೆ. ನನ್ನ ಮಗಳ ಅಸ್ಥಿ ಸಿಕ್ಕರೆ ಅದನ್ನು ಸಂಸ್ಕಾರ ಮಾಡಿ ಅವಳ ಆತ್ಮಕ್ಕೆ ಶಾಂತಿ ಕೊಡಿಸಬೇಕು ಎಂಬ ಕಾರಣಕ್ಕೆ ಈಗ ದೂರು ನೀಡಿದ್ದೇನೆ’ ಎಂದರು.

‘ತನಿಖಾಧಿಕಾರಿ ನಿರ್ಧರಿಸಿದಾಗ ಜಾಗ ಅಗೆಯುತ್ತೇವೆ’

‘ಸಮಾಧಿ ಅಗೆಯುವ ಪ್ರಕ್ರಿಯೆಯು ಮುಗಿಯುತ್ತಿದ್ದಂತೆಯೇ ಸಾಕ್ಷಿ ದೂರುದಾರನು ತಲೆಮರೆಸಿಕೊಳ್ಳುವ ಸಾಧ್ಯತೆ ಇದೆ ಎಂದು ಸ್ಥಳೀಯ ವ್ಯಕ್ತಿಗಳಿಂದ ಗುಪ್ತ ಮಾಹಿತಿ ದೊರಕಿದೆ’ ಎಂದು ದಕ್ಷಿಣ ಕನ್ನಡ ಜಿಲ್ಲಾ ಪೊಲೀಸರು ತಿಳಿಸಿದ್ದಾರೆ.

ಸತ್ತವರಿಗೂ ಧರ್ಮಸ್ಥಳಕ್ಕೂ ಸಂಬಂಧ ಕಲ್ಪಿಸುವ ಕೆಲಸ ನಡೆಯುತ್ತಿದೆ. ಧರ್ಮಸ್ಥಳವನ್ನೇ ಗುರಿ ಮಾಡಿಕೊಂಡಿರುವುದು ಸಂಚಿನ ಒಂದು ಭಾಗ. ಈ ಬಗ್ಗೆ ಸಮಗ್ರ ತನಿಖೆಯಾಗಲಿ
ಸಿ.ಟಿ.ರವಿ, ವಿಧಾನಪರಿಷತ್ ಸದಸ್ಯ

ಈ ಪ್ರಕರಣದ ಕುರಿತು ಬುಧವಾರ ಎರಡನೇ ಪತ್ರಿಕಾ ಹೇಳಿಕೆ ಬಿಡುಗಡೆ ಮಾಡಿರುವ ದಕ್ಷಿಣ ಕನ್ನಡ ಜಿಲ್ಲಾ ಪೊಲೀಸರು, ‘ಸೂಕ್ತ ತನಿಖಾ ಪ್ರಕ್ರಿಯೆಯನ್ನು ಅನುಸರಿಸದೇ ಸಮಾಧಿ ಅಗೆಯುವ ಪ್ರಕ್ರಿಯೆಯನ್ನು ನಡೆಸಲು ಆತುರ ತೋರುತ್ತಿರುವಂತೆ ಸುದ್ದಿ ಹರಿದಾಡುತ್ತಿದೆ. ಈ ವಿಷಯವನ್ನು ಸಾಕ್ಷಿದಾರರ ಪರವಾದ ವಕೀಲರಿಗೂ ತಿಳಿಸಲಾಗಿದೆ. ಈ ಸಾಧ್ಯತೆಗಳನ್ನು ಪರಿಶೀಲಿಸಲಾಗುತ್ತಿದೆ. ಶವಗಳನ್ನು ಹೂಳಲಾಗಿದೆ ಎನ್ನಲಾದ ಜಾಗವನ್ನು ಅಗೆಯುವ ಪ್ರಕ್ರಿಯೆಯನ್ನು ಯಾವ ಹಂತದಲ್ಲಿ ಕೈಗೊಳ್ಳುವುದು ಸೂಕ್ತವೆಂದು ತನಿಖಾಧಿಕಾರಿ ನಿರ್ಧರಿಸುತ್ತಾರೋ ಆಗಲೇ ಸೂಕ್ತ ಕಾನೂನು ಪ್ರಕ್ರಿಯೆ ಅನುಸರಿಸಿಕೊಂಡು ಜಾಗವನ್ನು ಅಗೆಯುವ ಪ್ರಕ್ರಿಯೆಯನ್ನು ನಡೆಸಲಾಗುವುದು’ ಎಂದು ಅವರು ಸ್ಪಷ್ಟಪಡಿಸಿದ್ದಾರೆ.

‘ಈ ಘಟನೆಗೆ ಸಂಬಂಧಿಸಿದಂತೆ ಸುಪ್ರೀಂ ಕೋರ್ಟ್‌ನಲ್ಲಿ ಅರ್ಜಿ ಸಲ್ಲಿಕೆಯಾಗಿರುವ ಬಗ್ಗೆ ತನಿಖಾಧಿಕಾರಿಗಳಿಗೆ ಇತ್ತೀಚೆಗೆ ಮಾಹಿತಿ ಬಂದಿದೆ. ಸಾಕ್ಷಿ ದೂರುದಾರ ಅಥವಾ ಅವರ ಪರವಾದ ವಕೀಲರು ಈ ವಿಷಯವನ್ನು ಪ್ರಕರಣದ ತನಿಖಾಧಿಕಾರಿ ಗಮನಕ್ಕೆ ತಂದಿಲ್ಲ. ಈ ಮಾಹಿತಿಯನ್ನು ಪರಿಶೀಲಿಸಬೇಕಾಗಿರುತ್ತದೆ’ ಎಂದು ಅವರು ತಿಳಿಸಿದ್ದಾರೆ.

‘ದೂರುದಾರ ಜೀವಂತ, ತನಿಖೆ ನೆರವಿಗೆ ಬದ್ಧ’

ಪ್ರಜಾವಾಣಿ ವಾರ್ತೆ

ಮಂಗಳೂರು: ‘ಧರ್ಮಸ್ಥಳದ ಮೃತದೇಹಗಳನ್ನು ಹೂತುಹಾಕಿದ ಪ್ರಕರಣ ಸಂಬಂಧ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಯವರ ಹೇಳಿಕೆಯಿಂದ ಅಚ್ಚರಿಯಾಗಿದೆ’ ಎಂದು ಸಾಕ್ಷಿದಾರ ವ್ಯಕ್ತಿಯ ಪರ ವಕೀಲರೆಂದು ಹೇಳಿಕೊಂಡ ಧೀರಜ್ ಎಸ್.ಜೆ ಮತ್ತು ಅನನ್ಯಾ ಗೌಡ ತಿಳಿಸಿದ್ದಾರೆ.

‘ನಾವು ಈಗ ಆತನ ಜೊತೆಗೆ ಇದ್ದು, ನಮ್ಮ ಸಹೋದ್ಯೋಗಿಗಳಾದ ಓಜಸ್ವಿ ಗೌಡ ಮತ್ತು ಸಚಿನ್ ದೇಶಪಾಂಡೆ ಅವರಿಂದ ಹೊಣೆ ವಹಿಸಿಕೊಂಡಿದ್ದೇವೆ’ ಎಂದು ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

‘ದೂರುದಾರ ವ್ಯಕ್ತಿ ಮೊದಲು ಪೊಲೀಸರನ್ನಾಗಲೀ ಅಥವಾ ಜಿಲ್ಲಾ ಪೊಲೀಸ್ ವರಿಷ್ಠರನ್ನಾಗಲೀ ಏಕೆ ಸಂಪರ್ಕಿಸಿಲ್ಲ ಎಂದರೆ, ಇಲ್ಲಿ ಯಾವುದೇ ಪ್ರಕರಣದ ತನಿಖೆ ಬಾಕಿ ಇರಲಿಲ್ಲ ಅಥವಾ ಮೃತಪಟ್ಟ ವ್ಯಕ್ತಿಗಳ ಅವಶೇಷಗಳಿಗಾಗಿ ಯಾರೂ ಹುಡುಕುತ್ತಿರಲಿಲ್ಲ. ದೇವರ ಮೇಲಿನ ಭಯ ಹಾಗೂ ಆತ್ಮಸಾಕ್ಷಿಯ ಕಾರಣಕ್ಕೆ ದೂರುದಾರ ತಪ್ಪೊಪ್ಪಿಕೊಳ್ಳುವ ಹಾಗೂ ಮಾರ್ಗದರ್ಶನ ಬಯಸುವ ಉದ್ದೇಶದಿಂದ ವಕೀಲರನ್ನು ಸಂಪರ್ಕಿಸಿದ್ದ. ಇತಿಹಾಸದಲ್ಲಿ ನಡೆದ ಘೋರ ಪ್ರಮಾದಗಳಿಗೆ ಅಂತ್ಯ ಹಾಡುವುದು ಆತನ ಉದ್ದೇಶವಾಗಿತ್ತು. ಈ ಘನ ಉದ್ದೇಶವನ್ನೇ ಪೊಲೀಸರು ಸತತ ನಿರ್ಲಕ್ಷ್ಯ ಮಾಡಿರುವುದು ಅವರ ಹೇಳಿಕೆಯಲ್ಲಿ ಕಂಡು ಬಂದಿದೆ’.

‘ದೂರು ನೀಡಿದ ವ್ಯಕ್ತಿಯು ಪರಿಶೀಲನೆಗೆ ಒಳಪಡುವುದರಿಂದ ತಪ್ಪಿಸಿಕೊಳ್ಳುವ ಉದ್ದೇಶದಿಂದ ತನ್ನ ಗುರುತು ಬಹಿರಂಗಪಡಿಸಬಾರದು ಎಂದು ಬಯಸುತ್ತಿಲ್ಲ. ಅದರ ಬದಲು, ಸ್ವತಃ ಮುಂದೆ ಬಂದು ಪರಿಷ್ಕೃತ ದೂರನ್ನು ನೀಡುವಂತೆ ತನ್ನ ವಕೀಲರಿಗೆ ಆತ ಸೂಚಿಸಿದ್ದು, ಎಫ್‌ಐಆರ್ ದಾಖಲಿಸಿದ್ದೆಲ್ಲವನ್ನೂ ಆತ ಪ್ರಜ್ಞಾಪೂರ್ವಕವಾಗಿಯೇ ಮಾಡಿದ್ದಾನೆ. ಈ ಹಂತದಲ್ಲಿ ಪೊಲೀಸರು ಆತನಿಗೆ ರಕ್ಷಣೆ ಒದಗಿಸಬೇಕಾದ ಕರ್ತವ್ಯದಿಂದ ಹಿಂದೆ ಸರಿಯುವುದು ತಪ್ಪು. ಪರಿಷ್ಕೃತ ದೂರನ್ನು ನೀಡುವಂತೆ ಅರ್ಜಿದಾರ ವ್ಯಕ್ತಿ ತನ್ನ ವಕೀಲರಿಗೆ ನಿರ್ದಿಷ್ಟ ಸೂಚನೆಯನ್ನೇನಾದರೂ ನೀಡಿದ್ದಾನೆಯೇ ಎಂದು ತನಿಖಾಧಿಕಾರಿ ತಿಳಿದುಕೊಳ್ಳಲು ಪ್ರಯತ್ನಿಸುವ ಮೂಲಕ ವಕೀಲರು ಮತ್ತು ಕಕ್ಷಿದಾರರ ಹಕ್ಕುಗಳಿಗೆ ಚ್ಯುತಿಯನ್ನು ಉಂಟು ಮಾಡುವುದು ತೀವ್ರ ಆಕ್ಷೇಪಾರ್ಹ’ ಎಂದು ಅವರು ಹೇಳಿದ್ದಾರೆ.

‘ಸಾಕ್ಷಿದಾರ ವ್ಯಕ್ತಿ ಹೇಳಿದ ಜಾಗದ ಬಗ್ಗೆ ತಿಳಿದಿಲ್ಲ ಹಾಗೂ ಅದು ಸುಳ್ಳು ಎಂದು ಎದ್ದುಕಾಣುತ್ತಿದೆ ಎಂದು ಪೊಲೀಸರು ಹೇಳಿದ್ದಾರೆ. ಜುಲೈ 14ರಂದು ಆತ ಹೇಳಿದ ಜಾಗದಲ್ಲೇ ಪೊಲೀಸರು ಸುಮಾರು ನಾಲ್ಕು ಗಂಟೆ ಆತನ ಜೊತೆಗಿದ್ದು ಹೇಳಿಕೆಗಳನ್ನು ಪಡೆದಿದ್ದಾರೆ. ಅಷ್ಟೇ ಅಲ್ಲದೇ ಜುಲೈ 13ರಂದು ಆತನ ತಾತ್ಕಾಲಿಕ ವಿಳಾಸವನ್ನು ಪೊಲೀಸರ ಜೊತೆಗೆ ಇಮೇಲ್ ಮೂಲಕ ಔಪಚಾರಿಕವಾಗಿಯೇ ಹಂಚಿಕೊಂಡಿದ್ದೆವು. ಆತ ಎಲ್ಲಿದ್ದಾನೋ ಗೊತ್ತಾಗಿಲ್ಲ, ಆತ ಲಭ್ಯವಿಲ್ಲ ಎಂಬ ಹೇಳಿಕೆಗಳು ಪೊಲೀಸರ ಕಡೆಯಿಂದ ಆಗಿರುವ ಲೋಪಗಳು. ಜುಲೈ 11ರಂದು ರಾತ್ರಿ ಮ್ಯಾಜಿಸ್ಟ್ರೇಟ್ ಎದುರು ನೀಡಿದ ಪ್ರಮಾಣೀಕೃತ ಹೇಳಿಕೆಯಲ್ಲಿ ನಿರ್ದಿಷ್ಟ ಹೆಸರುಗಳನ್ನು ಬಹಿರಂಗಪಡಿಸಿದ್ದೇನೆ ಎಂದು ದೂರುದಾರ ವ್ಯಕ್ತಿ ನಮಗೆ ತಿಳಿಸಿದ್ದಾನೆ. ತನ್ನ ಜೀವಕ್ಕೆ ಬೆದರಿಕೆ ಇದೆ ಎಂಬುದಾಗಿ ಆತ ತೀವ್ರ ಆತಂಕ ತೋಡಿಕೊಂಡಿದ್ದಾನೆ’.

‘ಜುಲೈ 11ರಂದು (ಭಾರತೀಯ ನಾಗರಿಕ ಸುರಕ್ಷಾ ಸಂಹಿತೆ ಸೆಕ್ಷನ್ 183ರಡಿ) ನೀಡಿರುವ 164 ಹೇಳಿಕೆಯ ಭಾಗವಾಗಿ ತಾನು ನಿರ್ದಿಷ್ಟ ಜಾಗದಿಂದ ಅಗೆದು ತೆಗೆದ ಮಾನವನ ಅಸ್ಥಿಪಂಜರವನ್ನು ಸ್ವಯಂಪ್ರೇರಿತವಾಗಿ ಹಸ್ತಾಂತರ ಮಾಡಿದ್ದಾನೆ. ಅದನ್ನು ವಿಧಿವಿಜ್ಞಾನ ತಜ್ಞರು ಗಂಟೆ ಗಟ್ಟಲೆ ಸಂಸ್ಕರಣೆಗೆ ಒಳಪಡಿಸಿದ ಬಳಿಕ ಪೊಲೀಸರು ತಮ್ಮ ವಶಕ್ಕೆ ತೆಗೆದುಕೊಂಡಿದ್ದಾರೆ. ಇದಾದ ಮರುದಿನವೇ ಪೊಲೀಸರು ಮಹಜರು ಹಾಗೂ ದಾಖಲೀಕರಣಕ್ಕಾಗಿ ತನ್ನನ್ನು ಕರೆಯುತ್ತಾರೆ ಎಂದು ಆತ ಭಾವಿಸಿದ್ದ’.

‘ಆದರೂ ಜುಲೈ 16ರವರೆಗೂ ಅಂತಹ ಯಾವುದೇ ಕ್ರಮಗಳನ್ನು ಪೊಲೀಸರು ಕೈಗೊಂಡಿಲ್ಲ. ಸಾಕ್ಷಿದಾರ ನೀಡಬಹುದಾದ ಅತ್ಯಂತ ಪ್ರಮುಖ ಹಾಗೂ ನಿರಾಕರಿಸಲಾಗದ ಸಾಕ್ಷ್ಯಗಳಾದ ಶವ ಹೂತ ಜಾಗ ಮತ್ತು ನೆಲದಿಂದ ಹೊರತೆಗೆದ ಅಸ್ಥಿಪಂಜರಗಳ ಬಗ್ಗೆ ಪೊಲೀಸರು ಸಂಪೂರ್ಣ ನಿರಾಸಕ್ತಿ ತೋರಿಸಿರುವಂತೆ ಕಂಡುಬರುತ್ತಿದೆ. ನಿರಂತರ ವಿಳಂಬವು ದೂರುದಾರನ ಪಾಲಿಗೆ ಆಘಾತಕರವಷ್ಟೇ ಅಲ್ಲ ಅದನ್ನು ಮಾತಿನಲ್ಲಿ ಹೇಳುವುದಕ್ಕೂ ಆಗದಂತಹದ್ದು’ ಎಂದು ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಬಿಜೆಪಿ ಶಾಸಕ ಬೈರತಿ ಬಸವರಾಜ್ ವಿರುದ್ಧ ಎಫ್‌ಐಆರ್

ಒಂದನೇ ಪುಟದಿಂದ...

ಹಲಸೂರಿನಲ್ಲಿರುವ ಮನೆಯ ಎದುರು ಮಂಗಳವಾರ ರಾತ್ರಿ ಕಾರಿನಲ್ಲಿ ಬಂದಿದ್ದ ದುಷ್ಕರ್ಮಿಗಳು ಮಾರಕಾಸ್ತ್ರಗಳಿಂದ ಕೊಚ್ಚಿ ಕೊಲೆ ಮಾಡಿ ಪರಾರಿ ಆಗಿದ್ದರು. ಶಿವಪ್ರಕಾಶ್ ವಿರುದ್ಧ ನಗರದ ವಿವಿಧ ಠಾಣೆಗಳಲ್ಲಿ ಪ್ರಕರಣಗಳು ದಾಖಲಾಗಿದ್ದವು. ಭಾರತಿನಗರ ಠಾಣೆಯಲ್ಲಿ ಶಿವಪ್ರಕಾಶ್ ವಿರುದ್ಧ ರೌಡಿ ಪಟ್ಟಿ ತೆರೆಯಲಾಗಿತ್ತು ಎಂದು ಮೂಲಗಳು ಹೇಳಿವೆ.

ಕೊಲೆಯಾದ ಶಿವಪ್ರಕಾಶ್

‘ಕಿತ್ತಗನೂರು ಬಳಿ, ಪುತ್ರ ಶಿವಪ್ರಕಾಶ್ 2023ರಲ್ಲಿ ಜಮೀನು ಖರೀದಿಸಿದ್ದ. ಅವನ ಹೆಸರಿನಲ್ಲಿ ಜಿಪಿಎ ಸಹ ಮಾಡಿಸಿಕೊಂಡಿದ್ದ. ಆ ಜಾಗದಲ್ಲಿ ಶೆಡ್ ನಿರ್ಮಿಸಿ ಜ್ಯೋತಿ ಹಾಗೂ ಹಂಸ ಅವರನ್ನು ಕಾವಲಿಗೆ ಇಟ್ಟಿದ್ದ. ಕಳೆದ ಫೆಬ್ರುವರಿ 11ರಂದು ಜಗದೀಶ್ ಹಾಗೂ ಕಿರಣ್ ಅತಿಕ್ರಮವಾಗಿ ಜಮೀನಿಗೆ ಪ್ರವೇಶಿಸಿ ಹೆಣ್ಣು ಮಕ್ಕಳನ್ನು ಶೆಡ್‌ನಿಂದ ಹೊರಕ್ಕೆ ಹಾಕಿದ್ದರು. ಆರೋಪಿ ಜಗದೀಶ್ ಕರೆ ಮಾಡಿ ಸ್ವತ್ತನ್ನು ತನ್ನ ಹೆಸರಿಗೆ ಜಿಪಿಎ ಮಾಡಿಸಿಕೊಡಬೇಕು. ಇಲ್ಲದಿದ್ದರೆ ಜೀವಸಹಿತ ಬಿಡುವುದಿಲ್ಲ ಎಂದು ಮಗನಿಗೆ ಬೆದರಿಕೆ ಹಾಕಿದ್ದ. ಜೀವಕ್ಕೆ ಅಪಾಯವಿದೆ ಎಂದು ಹೇಳಿ ಜಗದೀಶ್ ಅಲಿಯಾಸ್ ಜಗ್ಗ, ಕಿರಣ್, ಶಾಸಕ ಬೈರತಿ ಬಸವರಾಜ್ ವಿರುದ್ಧ ನನ್ನ ಮಗ ಪೊಲೀಸರಿಗೆ ದೂರು ನೀಡಿದ್ದ. ಅವರಿಂದ ಪ್ರಾಣಭಯ ಇದೆ ಎಂದು ಮನೆಯಲ್ಲೂ ಆಗಾಗ್ಗೆ ಹೇಳುತ್ತಿದ್ದ’ ಎಂದು ವಿಜಯಲಕ್ಷ್ಮಿ ನೀಡಿದ ದೂರು ಆಧರಿಸಿರುವ ಎಫ್‌ಐಆರ್‌ನಲ್ಲಿ ಉಲ್ಲೇಖಿಸಲಾಗಿದೆ.

‘ಮಂಗಳವಾರ ರಾತ್ರಿ 8 ಗಂಟೆಯ ಸುಮಾರಿಗೆ ಮಗ ಮನೆಯಿಂದ ಹೊರಗೆ ಹೋಗಿದ್ದ. ಆಗ, ಮನೆಯ ಹೊರಗಡೆ ಯಾರೋ ಕೂಗಾಡುವ ಶಬ್ದ ಕೇಳಿಸಿತು. ಹೊರಗೆ ಬಂದು ನೋಡಿದಾಗ 9 ಮಂದಿ ಅಪರಿಚಿತರು ಮಗನಿಗೆ ಮಾರಕಾಸ್ತ್ರಗಳಿಂದ ಹೊಡೆಯುತ್ತಿದ್ದರು. ಜಾಗದ ವಿಚಾರವಾಗಿ ಜಗದೀಶ್, ಕಿರಣ್, ವಿಮಲ್, ಅನಿಲ್ ಮತ್ತು ಇತರರು ಬೈರತಿ ಬಸವರಾಜ್ ಅವರ ಕುಮ್ಮಕ್ಕಿನಿಂದ ಕೊಲೆ ಮಾಡಿದ್ದಾರೆ’ ಎಂದು ಎಫ್‌ಐಆರ್‌ನಲ್ಲಿ ವಿವರಿಸಲಾಗಿದೆ.

ತೇಜೋವಧೆಗೆ ಯತ್ನ: ಶಾಸಕ

‘ದುರುದ್ದೇಶದಿಂದ ಪ್ರಕರಣದಲ್ಲಿ ನನ್ನ ಹೆಸರು ಎಳೆದು ತರಲಾಗಿದೆ. ಈ ಪ್ರಕರಣಕ್ಕೂ ನನಗೂ ಯಾವುದೇ ಸಂಬಂಧ ಇಲ್ಲ. ಶಿವು ಯಾರು ಎಂಬುದೇ ಗೊತ್ತಿಲ್ಲ. ಪೊಲೀಸರು ಪ್ರಾಥಮಿಕ ತನಿಖೆ ನಡೆಸದೆ, ನನ್ನ ಮೇಲೆ ಪ್ರಕರಣ ದಾಖಲಿಸಿದ್ದಾರೆ’ ಎಂದು ಶಾಸಕ ಬೈರತಿ ಬಸವರಾಜ್ ಪ್ರತಿಕ್ರಿಯೆ ನೀಡಿದ್ದಾರೆ.

‘ಕ್ಷೇತ್ರದ ಶಾಸಕನಾಗಿ ಜನರ ಸಮಸ್ಯೆಗಳನ್ನು ಬಗೆಹರಿಸುವುದಕ್ಕಾಗಿ ಕೆಲಸ ಮಾಡುತ್ತಿದ್ದೇನೆ. ಅದನ್ನು ಹೊರತು ಪಡಿಸಿ ಜಮೀನು ವ್ಯವಹಾರ, ಕೊಲೆ ಪ್ರಕರಣಕ್ಕೂ ನನಗೂ ಸಂಬಂಧ ಇಲ್ಲ. ಆರೋಪ ಹೊರಿಸಿ ತೇಜೋವಧೆಗೆ ಯತ್ನಿಸಲಾಗಿದೆ’ ಎಂದು ಹೇಳಿದರು.

‘ಅದು ಮಹದೇವಪುರ ಕ್ಷೇತ್ರದ ವ್ಯಾಪ್ತಿಯಲ್ಲಿರುವ ಜಮೀನು. ಕೆ.ಆರ್.ಪುರ ಕ್ಷೇತ್ರಕ್ಕೆ ಏನು ಸಂಬಂಧ? ಕಾನೂನು ಹೋರಾಟ ಮಾಡುತ್ತೇನೆ. ಗೃಹ ಸಚಿವರನ್ನು ಭೇಟಿ ಮಾಡಿ ಚರ್ಚಿಸುತ್ತೇನೆ’ ಎಂದು ತಿಳಿಸಿದರು.

ದೂರು ನೀಡಿದ್ದ ಶಿವಪ್ರಕಾಶ್

ಫೆಬ್ರುವರಿ 21ರಂದು ಜಗದೀಶ್ ಮತ್ತು ಇತರರ ವಿರುದ್ಧ ಭಾರತಿನಗರ ಠಾಣೆಗೆ ಶಿವಪ್ರಕಾಶ್ ದೂರು ನೀಡಿದ್ದರು.

‘ಕಿತ್ತಗನೂರು ಬಳಿ ನಾನು ಖರೀದಿಸಿದ್ದ ಜಾಗವನ್ನು ಮಾರಾಟ ಮಾಡುವಂತೆ ಜಗದೀಶ್ ಮತ್ತು ಇತರರಿಂದ ಜೀವ ಬೆದರಿಕೆ ಇದೆ. ನನ್ನೊಂದಿಗೆ ಆರೋಪಿಗಳು ಗಲಾಟೆ ನಡೆಸಿ ಹಣಕ್ಕೆ ಬೇಡಿಕೆ ಇಟ್ಟಿದ್ದಾರೆ’ ಎಂದು ಶಿವಪ್ರಕಾಶ್ ದೂರಿನಲ್ಲಿ ಉಲ್ಲೇಖಿಸಿದ್ದರು.

ಆಗ ಜಗದೀಶ್ ಮತ್ತು ಇತರರ ವಿರುದ್ಧ ಪ್ರಕರಣ ದಾಖಲಾಗಿತ್ತು.

ನೋಟಿಸ್ ಜಾರಿಗೆ ಸಿದ್ಧತೆ

ಸಿಸಿಟಿವಿ ಕ್ಯಾಮೆರಾಗಳ ದೃಶ್ಯಾವಳಿ ಆಧಾರದಲ್ಲಿ ಕೆಲವು ಶಂಕಿತರನ್ನು ವಶಕ್ಕೆ ಪಡೆಯಲಾಗಿದೆ. ಶಾಸಕ ಬೈರತಿ ಬಸವರಾಜ್ ಅವರಿಗೆ ನೋಟಿಸ್ ಜಾರಿ ಮಾಡಿ ವಿಚಾರಣೆ ನಡೆಸಲಾಗುವುದು. ಬಳಿಕ ಕಾನೂನು ಕ್ರಮ ಕೈಗೊಳ್ಳಲಾಗುವುದು ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ಸುದ್ದಿ ವೈವಿಧ್ಯಕ್ಕೆ
prajavani.netಗೆ ಭೇಟಿ ಮಾಡಿ

ಸಕ್ಷಮ ಪ್ರಾಧಿಕಾರಿ ಹಾಗೂ ಅಪರ ಪ್ರಾದೇಶಿಕ ಆಯುಕ್ತರು,
ಪ್ರಾದೇಶಿಕ ಆಯುಕ್ತರವರ ಕಚೇರಿ, ಕಂದಾಯ ಇಲಾಖೆ, ಬೆಂಗಳೂರು ವಿಭಾಗ ಮತ್ತು
ನೋಡಲ್ ಅಧಿಕಾರಿ, ಪದನಿಮಿತ್ತ ಕಾರ್ಯದರ್ಶಿ (ಆರ್ಥಿಕ ಅಪರಾಧಗಳು)ರವರ ಕಾರ್ಯಾಲಯ, ಬೆಂಗಳೂರು
ಬಿಎಂಟಿಸಿ ಬಿಲ್ಡಿಂಗ್, 2ನೇ ಮಹಡಿ, ಶಾಂತಿನಗರ, ಕೆ.ಎಚ್ ರಸ್ತೆ, ಬೆಂಗಳೂರು–560027

ಸ್ಥಿರಾಸ್ತಿಯ ಇ-ಹರಾಜಿಗೆ ಆಹ್ವಾನ / ಸೂಚನೆ

ಕರ್ನಾಟಕ ಹಣಕಾಸು ಸಂಸ್ಥೆಗಳಲ್ಲಿ ಠೇವಣಿದಾರರ ಹಿತಾಸಕ್ತಿ ಸಂರಕ್ಷಣಾ ಕಾಯ್ದೆ, 2004 ರ ಅಡಿಯಲ್ಲಿ ಸರ್ಕಾರವು ಸ್ಥಿರಾಸ್ತಿ ಸ್ವತ್ತುಗಳನ್ನು ಮುಟ್ಟುಗೋಲು ಹಾಕಿಕೊಂಡಿದ್ದು, ಮಾನ್ಯ ವಿಶೇಷ ನ್ಯಾಯಾಲಯವು ಕೆಪಿಐಡಿಎಫ್‌ಇ ಕಾಯ್ದೆ ಅಡಿಯಲ್ಲಿಸ್ಥಿರೀಕರಿಸಿದ ಆದೇಶದ ಅನುಸಾರವಾಗಿ, ಅಪರ ಪ್ರಾದೇಶಿಕ ಆಯುಕ್ತರು ಮತ್ತು ಸಕ್ಷಮ ಪ್ರಾಧಿಕಾರದ ವತಿಯಿಂದ ಸ್ಥಿರಾಸ್ತಿ ಸ್ವತ್ತುಗಳನ್ನು ಇ–ಹರಾಜಿನ ಮೂಲಕ ವಿಲೇವಾರಿ ಮಾಡಲು ಪ್ರಕಟಣೆಯನ್ನು ಹೊರಡಿಸಲಾಗಿದೆ. (ಎಲ್ಲಿದೇಯೋ, ಹೇಗಿದೇಯೋ, ಯಾವ ಸ್ಥಿತಿಯಲ್ಲಿದೇಯೋ ಅದೇ ಆಧಾರದ ಮೇಲೆ) (as is where is and whatever there is basis)

ಆಸಕ್ತ ಬಿಡ್‌ದಾರರು ಅರ್ನೆಸ್ಟ್ ಮನಿ ಡೆಪಾಸಿಟ್ (EMD) ಅನ್ನು ಒದಗಿಸಬೇಕಾಗುತ್ತದೆ (ಸೇವಾ ಪೂರೈಕೆದಾರರು/ಕರ್ನಾಟಕ ಸಾರ್ವಜನಿಕ ಸಂಗ್ರಹಣೆ ಪೋರ್ಟಲ್ ಒದಗಿಸಿದ ಇ–ಪೋರ್ಟಲ್‌ನಲ್ಲಿ ಮಾತ್ರ

Properties are free of all encumbrances and are in the name of Competent Authority appointed by Government and confirmed by the Special Court under KPIDFE Act, 2004. Clear Title: Khata stands in the name of Competent Authority and Auctioning Authority

ಸ್ಥಿರ ಆಸ್ತಿಯ ಸಂಕ್ಷಿಪ್ತ ವಿವರಣೆ

ಕ್ರ. ಸಂ.	ಆಸ್ತಿಯ ವಿವರಗಳು (Clear Title by Court in Order No.Misc.No.829/2022, 834/2022,835/2022 ,101/2023,91/2024)	ಕನಿಷ್ಠ ಬೆಲೆ (ರೂ)	ಇಎಂಡಿ (ರೂ)	ಬಿಡ್ ಮೌಲ್ಯ ಹೆಚ್ಚಳ (ರೂ)	Clear Title
1.	ಚೊಕ್ಕಹಳ್ಳಿ ಗ್ರಾಮ, ಅಗಲಗುರ್ಕಿ ಗ್ರಾಮ ಪಂಚಾಯಿತಿ, ನಂದಿ ಹೋಬಳಿ, ಚಿಕ್ಕಬಳ್ಳಾಪುರ ತಾಲೂಕು ಮತ್ತು ಜಿಲ್ಲೆಯ ನಿವೇಶನ ಸಂಖ್ಯೆ 118, ಆಸ್ತಿ ಸಂಖ್ಯೆ 847/118, ಪಿಐಡಿ ನಂ.152800202200520767, ಸುಮಾರು 1500 ಚದರ ಅಡಿ. Google Location: https://maps.app.goo.gl/fZSEK97tFfU8UgvcA ಅಕ್ಷಾಂಶ ಮತ್ತು ರೇಖಾಂಶ: 13°23'42.8"N 77°44'34.6"E	45,00,000/-	90,000/-	23,000/-	ಖಾತಾ ಸರ್ಕಾರವು ನೇಮಿಸಿದ ಸಕ್ಷಮ ಪ್ರಾಧಿಕಾರ ಮತ್ತು ಹರಾಜು ಪ್ರಾಧಿಕಾರದ ಹೆಸರಿನಲ್ಲಿ ದಾಖಲಾಗಿರುತ್ತದೆ.
2.	ಚೊಕ್ಕಹಳ್ಳಿ ಗ್ರಾಮ, ಅಗಲಗುರ್ಕಿ ಗ್ರಾಮ ಪಂಚಾಯಿತಿ, ನಂದಿ ಹೋಬಳಿ, ಚಿಕ್ಕಬಳ್ಳಾಪುರ ತಾಲೂಕು ಮತ್ತು ಜಿಲ್ಲೆಯ ನಿವೇಶನ ಸಂಖ್ಯೆ 119, ಆಸ್ತಿ ಸಂಖ್ಯೆ 847/119, ಪಿಐಡಿ ನಂ. 152800202200520769, ಸುಮಾರು 1500 ಚದರ ಅಡಿ. Google Location: https://maps.app.goo.gl/fZSEK97tFfU8UgvcA ಅಕ್ಷಾಂಶ ಮತ್ತು ರೇಖಾಂಶ: 13°23'42.8"N 77°44'34.6"E	45,00,000/-	90,000/-	23,000/-	
3.	ಚೊಕ್ಕಹಳ್ಳಿ ಗ್ರಾಮ, ಅಗಲಗುರ್ಕಿ ಗ್ರಾಮ ಪಂಚಾಯಿತಿ, ನಂದಿ ಹೋಬಳಿ, ಚಿಕ್ಕಬಳ್ಳಾಪುರ ತಾಲೂಕು ಮತ್ತು ಜಿಲ್ಲೆಯ ನಿವೇಶನ ಸಂಖ್ಯೆ 120, ಆಸ್ತಿ ಸಂಖ್ಯೆ 847/120, ಪಿಐಡಿ ನಂ. 152800202200520350, ಸುಮಾರು 1500 ಚದರ ಅಡಿ. Google Location: https://maps.app.goo.gl/fZSEK97tFfU8UgvcA ಅಕ್ಷಾಂಶ ಮತ್ತು ರೇಖಾಂಶ: 13°23'42.8"N 77°44'34.6"E	45,00,000/-	90,000/-	23,000/-	
4.	ಚೊಕ್ಕಹಳ್ಳಿ ಗ್ರಾಮ, ಅಗಲಗುರ್ಕಿ ಗ್ರಾಮ ಪಂಚಾಯಿತಿ, ನಂದಿ ಹೋಬಳಿ, ಚಿಕ್ಕಬಳ್ಳಾಪುರ ತಾಲೂಕು ಮತ್ತು ಜಿಲ್ಲೆಯ ನಿವೇಶನ ಸಂಖ್ಯೆ 126, ಆಸ್ತಿ ಸಂಖ್ಯೆ 847/126, ಪಿಐಡಿ ನಂ. 152800202200520363, ಸುಮಾರು 1500 ಚದರ ಅಡಿ. Google Location: https://maps.app.goo.gl/fZSEK97tFfU8UgvcA ಅಕ್ಷಾಂಶ ಮತ್ತು ರೇಖಾಂಶ: 13°23'42.8"N 77°44'34.6"E	45,00,000/-	90,000/-	23,000/-	
5.	ಚೊಕ್ಕಹಳ್ಳಿ ಗ್ರಾಮ, ಅಗಲಗುರ್ಕಿ ಗ್ರಾಮ ಪಂಚಾಯಿತಿ, ನಂದಿ ಹೋಬಳಿ, ಚಿಕ್ಕಬಳ್ಳಾಪುರ ತಾಲೂಕು ಮತ್ತು ಜಿಲ್ಲೆಯ ನಿವೇಶನ ಸಂಖ್ಯೆ 122, ಆಸ್ತಿ ಸಂಖ್ಯೆ 847/122, ಪಿಐಡಿ ನಂ. 152800202200520357, ಸುಮಾರು 1500 ಚದರ ಅಡಿ. Google Location: https://maps.app.goo.gl/fZSEK97tFfU8UgvcA ಅಕ್ಷಾಂಶ ಮತ್ತು ರೇಖಾಂಶ: 13°23'42.8"N 77°44'34.6"E	45,00,000/-	90,000/-	23,000/-	
6.	ಆವರಗೆರೆ ಗ್ರಾಮ, ದಾವಣಗೆರೆ ಜಿಲ್ಲೆಯ ನಿವೇಶನ ಸಂಖ್ಯೆ 34, ಸ .ನಂ 193/11, ಡೋರ್ ಸಂಖ್ಯೆ 804/34, ವಾರ್ಡ್ ಸಂಖ್ಯೆ 35, ಸುಮಾರು 1498.76 ಚದರ ಅಡಿ. Google Location: https://maps.app.goo.gl/zg3b3LLG7XQacsa59 ಅಕ್ಷಾಂಶ ಮತ್ತು ರೇಖಾಂಶ:14°25'35.2"N 75°56'43.5"E	38,96,777/-	78,000/-	20,000/-	
7.	ಸೈಟ್ ಸಂಖ್ಯೆ 10 & 11ಬಿ ಸ.ನಂ 980/ ಎ , ಉಪ ಸೈ ನಂ.980/ಎ5, ಅಸೆಸ್ಮೆಂಟ್ ಸಂಖ್ಯೆ 50380/ಇ/10 ಮತ್ತು 11ಬಿ ಶಾಂತಿನಗರ, ಮಹಾಲಕ್ಷ್ಮಿ ಲೇಔಟ್ ಪಕ್ಕದಲ್ಲಿ, ಕಲಗಲ್ಲು ರಸ್ತೆ ಬಳ್ಳಾರಿ, ಸುಮಾರು 974.5 ಚದರ ಅಡಿ ಅಳತೆ. Google Location: https://maps.app.goo.gl/Ehz2R4Q2pZviCSGy8 ಅಕ್ಷಾಂಶ ಮತ್ತು ರೇಖಾಂಶ: 15°09'59.3"N 76°53'11.8"E	24,35,000/-	49,000/-	13,000/-	
8.	ಸ್ವತ್ತಿನ ಸಂಖ್ಯೆ:2252/6/1/15,ಬಿ.ಬಿ.ಎಂ.ಪಿ ವಾರ್ಡ ಸಂಖ್ಯೆ:129, ಅಸ್ಸೆಸಮೆಂಟ್ ನಂ 6/1, ಪಿ.ಐ.ಡಿ ನಂ 1666176447, ಜ್ಞಾನಭಾರತಿ ವಾರ್ಡ, ಮಲ್ಲತ್ತಹಳ್ಳಿ ಗ್ರಾಮ, ಯಶವಂತಪುರ ಹೋಬಳಿ, ಬೆಂಗಳೂರು ಉತ್ತರ ತಾಲ್ಲೂಕು ಸುಮಾರು 1239 ಚದರ ಅಡಿ Google Location: https://maps.app.goo.gl/cdiDYD7PFULGGno1A ಅಕ್ಷಾಂಶ ಮತ್ತು ರೇಖಾಂಶ: 12°57'48.0"N 77°30'09.9"E	1,05,31,500/-	2,11,000/-	53,000/-	

ತಪಾಸಣೆಯ ದಿನಾಂಕ ಮತ್ತು ಸಮಯ.	ಪ್ರೀ–ಬಿಡ್ ಸಭೆಯ ದಿನಾಂಕ, ಸಮಯ ಮತ್ತು ಸ್ಥಳ.	ಬಿಡ್‌ಗಳ ಸಲ್ಲಿಕೆ ಮತ್ತು ಇಎಮ್‌ಡಿ ಸಲ್ಲಿಕೆಯ ಕೊನೆಯ ದಿನಾಂಕ	ಇ–ಹರಾಜಿನ ದಿನಾಂಕ ಮತ್ತು ಸಮಯ
5th August 2025, Tuesday 11:00 am to 5:00 pm	23rd July 2025, Wednesday 3:00PM to 4:00 PM. Place: Office of the Regional Commissioner, 2nd floor, BMTC building, KH Road, Shantinagar, Bengaluru-560027.	4th August 2025, before 5:00pm	11th August 2025, Monday 11.00am to 1.00pm

ನೋಂದಣಿ ಮತ್ತು ಆನ್‌ಲೈನ್ ಹರಾಜಿಗಾಗಿ, https://kppp.karnataka.gov.in ಗೆ ಲಾಗಿನ್ ಮಾಡಬಹುದು. (ಹೆಲ್ಪ್‌ಡೆಸ್ಕ್ ಸಂಖ್ಯೆ: 080–46010000, 080–68948777) ಹರಾಜಿಗೆ ಸಂಬಂಧಿಸಿದ ಮಾಹಿತಿಯ ಅಗತ್ಯವಿರುವ ಆಸಕ್ತ ಬಿಡ್‌ದಾರರು ಸಕ್ಷಮ ಪ್ರಾಧಿಕಾರಿ & ಅಪರ ಪ್ರಾದೇಶಿಕ ಆಯುಕ್ತರು, ಪ್ರಾದೇಶಿಕ ಆಯುಕ್ತರ ಕಛೇರಿ, 2ನೇ ಮಹಡಿ, ಬಿಎಂಟಿಸಿ ಕಟ್ಟಡ, ಕೆಎಚ್ ರಸ್ತೆ, ಶಾಂತಿನಗರ, ಬೆಂಗಳೂರು–560027, ಇವರನ್ನು ಸಂಪರ್ಕಿಸಬಹುದು. ಇ–ಮೇಲ್ ಐಡಿ: arcishauction@gmail.com ಅಥವಾ ಮೊಬೈಲ್ ಸಂಖ್ಯೆ: 9945515174 ನ್ನು ಸಂಪರ್ಕಿಸಬಹುದು.

ಸಹಿ/–
ಅಪರ ಪ್ರಾದೇಶಿಕ ಆಯುಕ್ತರು ಮತ್ತು ಸಕ್ಷಮ ಪ್ರಾಧಿಕಾರ ಪ್ರಾದೇಶಿಕ ಆಯುಕ್ತರ ಕಚೇರಿ, ಬೆಂಗಳೂರು ವಿಭಾಗ, ಬೆಂಗಳೂರು.

ಸ್ಥಳ: ಬೆಂಗಳೂರು
ದಿನಾಂಕ: 17–07–2025
DIPR/CP/1842/ZEN/2025-26

ಅಭಿಮತದ ವಿಳಾಸ: ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75
ಮಹಾತ್ಮ ಗಾಂಧಿ ರಸ್ತೆ, ಬೆಂಗಳೂರು-01 editpage@prajavani.co.in



ಸುಭಾಷಿತ

ಈ ಪ್ರಪಂಚದಲ್ಲಿ ಒಳ್ಳೆಯದನ್ನೆಲ್ಲಾ ಹೇಳಿ ಆಗಿದೆ. ಉಳಿದಿರುವುದು ಆಚರಣೆ ಮಾತ್ರ.

–ಸಾಕ್ರಟೀಸ್

ಸಂಪಾದಕೀಯ

ಚಾರಿತ್ರಿಕ ರೈತ ಹೋರಾಟಕ್ಕೆ ಜಯ ಸಂತಸದ ಜೊತೆಗೆ ಎಚ್ಚರವೂ ಅಗತ್ಯ

ಕೃಷಿ ಭೂಮಿ ಸ್ವಾಧೀನ ವಿರೋಧಿಸಿ ರೈತರು ನಡೆಸುತ್ತಿದ್ದ ಹೋರಾಟಕ್ಕೆ ಮನ್ನಣೆ ನೀಡಿರುವ ರಾಜ್ಯ ಸರ್ಕಾರ, ಭೂಸ್ವಾಧೀನ ಪ್ರಕ್ರಿಯೆಯಿಂದ ಹಿಂದೆ ಸರಿದಿದೆ. ಈ ನಿರ್ಧಾರ, ಚುನಾಯಿತ ಸರ್ಕಾರವೊಂದು ನಡೆದುಕೊಳ್ಳಬೇಕಾದ ಜವಾಬ್ದಾರಿಯುತ ನಡೆಯಾಗಿದೆ. ದೇವನಹಳ್ಳಿ ತಾಲ್ಲೂಕಿನ ಚನ್ನರಾಯಪಟ್ಟಣ ಹೋಬಳಿಯ ರೈತರು ನಡೆಸಿದ 1,198 ದಿನಗಳ ಹೋರಾಟಕ್ಕೆ ಸರ್ಕಾರ ವಿಳಂಬವಾಗಿಯಾದರೂ ಸ್ಪಂದಿಸಿದ್ದು, ಭೂಸ್ವಾಧೀನಕ್ಕೆ ಹೊರಡಿಸಿದ್ದ ಅಧಿಸೂಚನೆಯನ್ನು ಹಿಂಪಡೆದಿದೆ. ರಕ್ಷಣಾ ಮತ್ತು ವೈಮಾಂತರಿಕ್ಷ ಪಾರ್ಕ್ ಸ್ಥಾಪನೆಗಾಗಿ 13 ಗ್ರಾಮಗಳ ವ್ಯಾಪ್ತಿಯಲ್ಲಿ 1,777 ಎಕರೆ ಜಮೀನನ್ನು ಸ್ವಾಧೀನಪಡಿಸಿಕೊಳ್ಳಲು, 2021ರಲ್ಲಿ ಅಂದಿನ ಬಿಜೆಪಿ ಸರ್ಕಾರ ಪ್ರಾಥಮಿಕ ಅಧಿಸೂಚನೆ ಹೊರಡಿಸಿತ್ತು. 2022ರಲ್ಲಿ ಅಂತಿಮ ಆದೇಶ ಪ್ರಕಟಗೊಂಡ ನಂತರ ಭೂಸ್ವಾಧೀನ ವಿರೋಧಿಸಿ ರೈತರು ಹೋರಾಟ ಆರಂಭಿಸಿದ್ದರು. ಕಳೆದ ಏಪ್ರಿಲ್‌ನಲ್ಲಿ ಭೂಸ್ವಾಧೀನದ ಅಂತಿಮ ಅಧಿಸೂಚನೆ ಪ್ರಕಟಗೊಂಡ ನಂತರ ರೈತರ ಹೋರಾಟ ತೀವ್ರಗೊಂಡಿತ್ತು ಹಾಗೂ ಆ ಹೋರಾಟಕ್ಕೆ ವಿವಿಧ ಕ್ಷೇತ್ರಗಳ ಮುಖಂಡರ ಬೆಂಬಲವೂ ದೊರೆತಿತ್ತು. ಅಂತಿಮವಾಗಿ ರೈತರ ಹೋರಾಟಕ್ಕೆ ಸ್ಪಂದಿಸಿರುವ ಸರ್ಕಾರ, ಭೂಸ್ವಾಧೀನದ ಅಧಿಸೂಚನೆಯನ್ನು ಹಿಂದಕ್ಕೆ ಪಡೆದುಕೊಂಡಿದೆ.

ಭೂಮಿ ಉಳಿಸಿಕೊಳ್ಳಲು ರೈತರು ನಡೆಸಿದ ಹೋರಾಟ ಹಾಗೂ ಭೂಸ್ವಾಧೀನ ಅಧಿಸೂಚನೆ ಹಿಂತೆಗೆದುಕೊಂಡಿರುವ ರಾಜ್ಯ ಸರ್ಕಾರದ ನಿರ್ಧಾರ, ಎರಡಕ್ಕೂ ಚಾರಿತ್ರಿಕ ಮಹತ್ವವಿದೆ. ಸಾವಿರ ದಿನಗಳಿಗೂ ಹೆಚ್ಚು ಕಾಲ ಹೋರಾಟವೊಂದನ್ನು ಜೀವಂತವಾಗಿ ಉಳಿಸಿಕೊಳ್ಳುವುದು ಸಮಕಾಲೀನ ಸಂದರ್ಭದಲ್ಲಿ ಸುಲಭವಲ್ಲ. ವ್ಯವಸ್ಥೆ ಹಾಗೂ ಸರ್ಕಾರ ಮಾನವೀಯ ಸ್ಪಂದನಗಳನ್ನು ಕಳೆದುಕೊಂಡಂತೆ ವರ್ತಿಸುವ ಉದಾಹರಣೆಗಳೇ ಹೆಚ್ಚಾಗಿರುವ ಸಂದರ್ಭದಲ್ಲಿ, ಹಿಂಸೆಗೆ ಆಸ್ಪದ ಕೊಡದೆ ಸತ್ಯಾಗ್ರಹ ಮಾರ್ಗದಲ್ಲಿ ಚಳವಳಿಯನ್ನು ನಡೆಸಿ ರಾಜ್ಯದ ರೈತರು ಯಶಸ್ಸು ಪಡೆದಿದ್ದಾರೆ. ಈ ಯಶಸ್ಸು, ದೃಢಸಂಕಲ್ಪದ ಪ್ರಾಮಾಣಿಕ ಚಳವಳಿಗಳಿಗೆ ವಿಳಂಬವಾಗಿಯಾದರೂ ನ್ಯಾಯ ದೊರೆಯುತ್ತದೆ ಎನ್ನುವುದಕ್ಕೆ ನಿದರ್ಶನದಂತಿದೆ. ಸರ್ಕಾರ ತನ್ನ ನಿರ್ಧಾರದಿಂದ ಹಿಂದೆ ಸರಿಯುವಂತೆ ಮಾಡಿರುವ ಹೋರಾಟದ ಯಶಸ್ಸಿನ ಶ್ರೇಯಸ್ಸು, ವಿವೇಕ ಮತ್ತು ಸಂಯಮ ಕಳೆದುಕೊಳ್ಳದೆ ಚಳವಳಿಯನ್ನು ದೀರ್ಘ ಕಾಲ ಮುನ್ನಡೆಸಿದ ರೈತರು ಹಾಗೂ ರೈತ ಸಂಘಟನೆಗಳ ಕಾರ್ಯಕರ್ತರಿಗೆ ಸಲ್ಲಬೇಕು. ರೈತರಿಂದ ಬಲವಂತವಾಗಿ ಭೂಮಿ ಪಡೆಯದಿರುವ ಸರ್ಕಾರದ ನಡೆಯೂ ಮೆಚ್ಚುವಂತಹದ್ದು. ಭೂಸ್ವಾಧೀನದ ಅಧಿಸೂಚನೆ ಹೊರಬಿದ್ದ ಆರಂಭದಲ್ಲೇ ಚಳವಳಿನಿರತ ರೈತರನ್ನು ಭೇಟಿ ಮಾಡಿದ್ದ ಸಿದ್ದರಾಮಯ್ಯ, ಕಾಂಗ್ರೆಸ್ ಪಕ್ಷ ಅಧಿಕಾರಕ್ಕೆ ಬಂದರೆ ರೈತರ ಹಿತಾಸಕ್ತಿಯನ್ನು ರಕ್ಷಿಸುವುದಾಗಿ ಭರವಸೆ ನೀಡಿದ್ದರು. ಹಾಗಾಗಿ, ಭೂಸ್ವಾಧೀನದ ಅಧಿಸೂಚನೆಯನ್ನು ಹಿಂಪಡೆಯುವುದು ಅವರಿಗೆ ಕೊಟ್ಟ ಮಾತು ಉಳಿಸಿಕೊಳ್ಳುವ ಅನಿವಾರ್ಯ ದಾರಿಯೂ ಆಗಿತ್ತು. ಕರ್ನಾಟಕಕ್ಕೆ ಬಂದಿರುವ ಯೋಜನೆ ಬೇರೆ ರಾಜ್ಯದ ಪಾಲಾಗಬಹುದು ಎನ್ನುವ ಆತಂಕದ ನಡುವೆಯೂ, ರೈತರ ಹಿತಾಸಕ್ತಿ ಕಾಪಾಡುವ ಇಚ್ಛಾಶಕ್ತಿಯನ್ನು ಸರ್ಕಾರ ಹಾಗೂ ಮುಖ್ಯಮಂತ್ರಿ ಪ್ರದರ್ಶಿಸಿದ್ದಾರೆ.

ಭೂಸ್ವಾಧೀನ ವಿರೋಧಿಸಿದ ರೈತರ ಚಳವಳಿಗೆ ಯಶಸ್ಸು ದೊರೆತಿದೆ. ಆದರೆ, ಪ್ರತಿಕೂಲ ಸನ್ನಿವೇಶಗಳ ನಡುವೆ ಭೂಮಿ ಉಳಿಸಿಕೊಳ್ಳಬೇಕಾದ ಸವಾಲು ಮುಂದುವರಿದಿದೆ.

ಭೂಸ್ವಾಧೀನದ ಅಧಿಸೂಚನೆಯನ್ನು ಕೈಬಿಟ್ಟಿರುವ ಸರ್ಕಾರದ ನಿರ್ಧಾರಕ್ಕೆ ರೈತರು ಸಂತಸ ವ್ಯಕ್ತಪಡಿಸಿದ್ದಾರೆ. ಹೋರಾಟಕ್ಕೆ ಯಶಸ್ಸು ದೊರೆತಾಗ ಸಂಭ್ರಮಿಸುವುದು ಸಹಜ. ಆದರೆ, ರೈತರು ಸಾಗಬೇಕಾಗಿರುವ ದಾರಿ ಹಾಗೂ ಎದುರಿಸಬೇಕಾದ ಸವಾಲು ದೀರ್ಘವಾದುದು. ಭೂಸ್ವಾಧೀನದ ಅಧಿಸೂಚನೆ ಕೈಬಿಟ್ಟಿದ್ದರೂ, ಸ್ವಯಂ ಪ್ರೇರಣೆಯಿಂದ ಜಮೀನು ನೀಡುವ ರೈತರ ಭೂಮಿಯನ್ನು ಪಡೆಯುವುದಾಗಿ ಹಾಗೂ ಆ ಜಮೀನಿಗೆ ಮಾರ್ಗಸೂಚಿ ದರಕ್ಕಿಂತ ಹೆಚ್ಚಿನ ಪರಿಹಾರ ನೀಡುವುದಾಗಿ ಸರ್ಕಾರ ಹೇಳಿದೆ. ಈ ನಿರ್ಧಾರ, ಭೂಮಿಯನ್ನು ಮಾರುವ ಇಲ್ಲವೇ ಮಾರದಿರುವ ಸ್ವಾತಂತ್ರ್ಯವನ್ನು ರೈತರಿಗೆ ಉಳಿಸಿರುವಂತೆ ಮೇಲ್ನೋಟಕ್ಕೆ ಕಾಣಿಸುತ್ತದೆ. ಆದರೆ, ಭೂಮಿಯನ್ನು ಮಾರುವ ಅವಕಾಶ ಮುಕ್ತವಾಗಿರುವುದು ರೈತರಲ್ಲಿ ಗೊಂದಲ ಮೂಡಿಸಬಹುದು ಹಾಗೂ ಕೃಷಿಯ ಬಗ್ಗೆ ಭರವಸೆಗಳನ್ನು ಕಳೆದುಕೊಂಡವರು ತಮ್ಮ ಭೂಮಿ ಬಿಟ್ಟುಕೊಡಲು ಒತ್ತಾಸೆಯಾಗಿ ಪರಿಣಮಿಸಬಹುದು. ಕೃಷಿ ಭೂಮಿಯನ್ನು ಉಳಿಸಿಕೊಳ್ಳಲು ಅನುಕೂಲ ಕಲ್ಪಿಸಬೇಕಾದ ಸರ್ಕಾರವೇ, ಮಾರಾಟದ ಸಾಧ್ಯತೆಗಳನ್ನು ರೈತರ ಮುಂದಿಡುವ ವಿರೋಧಾಭಾಸ ಸುಲಭ ವ್ಯಾಖ್ಯಾನಕ್ಕೆ ನಿಲುಕುವಂತಹದ್ದಲ್ಲ. ಆರಂಭದಲ್ಲಿ ಕೆಲವಷ್ಟೇ ರೈತರು ಭೂಮಿಯನ್ನು ಬಿಟ್ಟುಕೊಟ್ಟರೂ, ಆ ಮಾದರಿ ದೀರ್ಘಾವಧಿಯಲ್ಲಿ ಉಳಿದ ರೈತರಿಗೂ ತಮ್ಮ ಭೂಮಿಯನ್ನು ಮಾರುವ ಸ್ವಯಂ ಒತ್ತಡ ಸೃಷ್ಟಿಸಬಹುದು. ಕೃಷಿ ಭೂಮಿಯನ್ನು ಉಳಿಸಿಕೊಳ್ಳುವ ಹಾಗೂ ಕೃಷಿಯಲ್ಲಿ ಮುಂದುವರಿಯುವ ಅಗ್ನಿದಿವ್ಯವನ್ನು ಹಾಯುವ ಅವಕಾಶ ಈಗ ರೈತರೆದುರು ಇದೆ. ರೈತರ ಹೋರಾಟಕ್ಕೆ ಜಯ ಸಂದಿದೆಯೆಂದು ಸದ್ಯಕ್ಕೆ ಭಾವಿಸಬಹುದಾದರೂ, ಆ ಯಶಸ್ಸಿನ ಫಲಿತ ಯಾವ ರೂಪದ್ದು ಹಾಗೂ ಎಷ್ಟು ಅವಧಿಯದ್ದು ಎನ್ನುವುದನ್ನು ತೀರ್ಮಾನಿಸುವ ಅವಕಾಶವನ್ನು ಸರ್ಕಾರ ರೈತರಿಗೇ ಬಿಟ್ಟುಕೊಟ್ಟಿದೆ.

ಚಾಟಿ

ನಗರಗಳಲ್ಲೇಕೆ ಸಮಾವೇಶ?

ರಾಜಕೀಯ ಪಕ್ಷಗಳು ಪ್ರಮುಖ ಜಿಲ್ಲೆಗಳ ನಗರ ಕೇಂದ್ರಗಳಲ್ಲಿ, ಅದರಲ್ಲೂ ಬೆಂಗಳೂರು ಅರಮನೆ ಮೈದಾನ, ಮೈಸೂರು ಮಹಾರಾಜ ಕಾಲೇಜು ಮೈದಾನವನ್ನು ಕೇಂದ್ರೀಕರಿಸಿ ಲಕ್ಷಾಂತರ ಜನರನ್ನು ಸೇರಿಸಿ ಬೃಹತ್ ಸಮಾವೇಶ ಮಾಡುವುದೇಕೆ? ನಗರ ಪ್ರದೇಶಗಳಾಚೆ ನೂರಾರು ಎಕರೆ ಖಾಲಿ ಜಾಗಗಳಿವೆ, ಅಂತಹ ಜಾಗಗಳನ್ನು ಸಮಾವೇಶಗಳಿಗೆ ಆಯ್ಕೆ ಮಾಡಿಕೊಳ್ಳಬಾರದೇಕೆ?

ಎಂ. ಜವರಾಜ್, ಲೇಖಕ, ಫೇಸ್‌ಬುಕ್‌ನಿಂದ

ಕಿಡಿನುಡಿ

ಮುಖ್ಯಮಂತ್ರಿ ಸಿದ್ದರಾಮಯ್ಯಗೆ ಆಡಳಿತದ ಮೇಲೆ ಹಿಡಿತವಿಲ್ಲ. ಡಿ.ಕೆ. ಶಿವಕುಮಾರ್‌ಗೆ ಶಾಸಕರ ಬೆಂಬಲ ಇಲ್ಲ. ತಮಗೆ ಬೇಕಾದವರನ್ನು ಸಿ.ಎಂ ಮಾಡಲು ರಾಹುಲ್ ಗಾಂಧಿಗೆ ಶಕ್ತಿ ಇಲ್ಲ. ಒಟ್ಟಿನಲ್ಲಿ ರಾಜ್ಯದ ಕಾಂಗ್ರೆಸ್ ಪಕ್ಷದಲ್ಲಿ ಮುಖ್ಯಮಂತ್ರಿ ಸ್ಥಾನವನ್ನು ಸಮರ್ಥವಾಗಿ ನಿಭಾಯಿಸಬಲ್ಲ ಒಬ್ಬ ನಾಯಕನೂ ಇಲ್ಲದೆ, ಆ ಪಕ್ಷದ ಹೈಕಮಾಂಡ್ ತ್ರಿಶಂಕು ಸ್ಥಿತಿಯಲ್ಲಿದೆ.

ಆರ್. ಅಶೋಕ, ವಿಧಾನಸಭೆ ವಿರೋಧ ಪಕ್ಷದ ನಾಯಕ

25 ವರ್ಷಗಳ ಹಿಂದೆ

ಸೋಮವಾರ, 17-7-2000

• ಕೇಂದ್ರದ ಸೂಚನೆ ಅನ್ವಯ 6 ಟಿಎಂಸಿ ನೀರು ಬಿಡುಗಡೆ

ಬೆಂಗಳೂರು, ಜುಲೈ 16– ‘ಮುಂದಿನ 30 ದಿನಗಳ ಒಳಗೆ ತಮಿಳುನಾಡಿಗೆ ಬಿಡಬೇಕಾಗಿರುವ ಕಾವೇರಿ ನೀರಿನ ಪ್ರಮಾಣ ಕುರಿತು ಕೇಂದ್ರ ಸರ್ಕಾರದ ಸಂಪುಟ ಕಾರ್ಯದರ್ಶಿ ನೀಡಿರುವ ಹೇಳಿಕೆಗೆ ಕರ್ನಾಟಕ ಬದ್ಧವಾಗಿದೆ’ ಎಂದು ಮುಖ್ಯಮಂತ್ರಿ ಎಸ್.ಎಂ. ಕೃಷ್ಣ ಇಂದು ಇಲ್ಲಿ ಹೇಳಿದರು.

ನೀರು ಬಿಡುವುದಕ್ಕೆ ಸಂಬಂಧಿಸಿದಂತೆ ‘ಯಾವುದೇ ಕಾರಣಕ್ಕೂ ರೈತರ ಹಿತವನ್ನು ಬಲಿಕೊಡುವುದಿಲ್ಲ’ ಎಂದು ಅವರು ಸ್ಪಷ್ಟಪಡಿಸಿದರು.

• ಸರ್ಕಾರ ವಜಾಕ್ಕೆ ಕೇಂದ್ರಕ್ಕೆ ಒತ್ತಾಯ: ಠಾಕ್ರೆ ಬೆದರಿಕೆ

ಮುಂಬೈ, ಜುಲೈ 16– (ಪಿಟಿಐ, ಯುಎನ್‌ಐ)– ‘ರಾಜ್ಯ ಸರ್ಕಾರವು ನನ್ನನ್ನು ವಿಚಾರಣೆಗೆ ಒಳಪಡಿಸಲು ಐಪಿಸಿ 153 (ಎ) ಕಲಮಿನನ್ವಯ ಮುಂದುವರಿದರೆ ಕಾಂಗ್ರೆಸ್, ಎನ್‌ಸಿಪಿ ಪ್ರಜಾಸತ್ತಾತ್ಮಕ ರಂಗ (ಡಿಎಫ್) ಸರ್ಕಾರವನ್ನು ವಜಾ ಮಾಡಲು ಸಂವಿಧಾನದ 356ನೇ ವಿಧಿಯನ್ವಯ ಕ್ರಮ ಕೈಗೊಳ್ಳಬೇಕೆಂದು ನಾನು ಕೇಂದ್ರ ಸರ್ಕಾರವನ್ನು ಒತ್ತಾಯಿಸುವೆ’ ಎಂದು ಶಿವಸೇನಾ ಮುಖ್ಯಸ್ಥ ಬಾಳ ಠಾಕ್ರೆ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

75 ವರ್ಷಗಳ ಹಿಂದೆ

ಸೋಮವಾರ, 17-7-1950

• ಸಾಧುಗಳ ಕದನ ಕುತೂಹಲ!

ಕಾಶಿ, ಜುಲೈ 16– ನಿನ್ನೆ ಸಂಜೆ ಸ್ಥಳೀಯ ಪೌರಸಭಾ ಭವನದ ಆಸ್ತಿಯೊಂದರ ಬಗ್ಗೆ ತಮ್ಮ ಹಕ್ಕು ಸ್ಥಾಪಿಸಲು ಬಂದಿದ್ದ ಇಬ್ಬರು ‘ಸಾಧು’ಗಳಿಗೆ ಕಲಹವಾಗಿ ಒಬ್ಬ ಇನ್ನೊಬ್ಬನ ಮೂಗನ್ನು ಕಚ್ಚಿಬಿಟ್ಟ. ಈ ಸಾಧುಗಳ ಹಿಂದೆ ಬಂದಿದ್ದ ಅನುಯಾಯಿಗಳಿಗೂ ಪರಸ್ಪರ ಹೊಡೆದಾಟವಾಯಿತು.

ಆ ನಂತರ ಪೊಲೀಸರು ಒಬ್ಬ ಸಾಧುವನ್ನು ಬಂಧಿಸಿ, ಮತ್ತೊಬ್ಬನನ್ನು ಚಿಕಿತ್ಸೆಗಾಗಿ ಆಸ್ಪತ್ರೆಗೆ ಕಳಿಸಿದರು.

ಇದು ಬಿಹಾರಕ್ಕಷ್ಟೇ ಸೀಮಿತವಲ್ಲ

ವಿಶ್ಲೇಷಣೆ

ಯೋಗೇಂದ್ರ ಯಾದವ್

ಬಿಹಾರದಲ್ಲಿ ಮತದಾರರ ಪಟ್ಟಿಯ ‘ವಿಶೇಷ ತೀವ್ರ ಪರಿಷ್ಕರಣೆ’ (ಎಸ್‌ಐಆರ್) ಬಗೆಗಿನ ಅರ್ಜಿಯ ವಿಚಾರಣೆ ನಡೆಸಿ, ಸುಪ್ರೀಂ ಕೋರ್ಟ್ ಸೂಚಿಸಿರುವ ಪರಿಹಾರ ಸ್ವಾಗತಾರ್ಹವೇನೋ ಹೌದು. ಆದರೆ, ನಿಜವಾದ ಸಮಸ್ಯೆಯಿಂದ ಗಮನವನ್ನು ಬೇರೆಡೆಗೆ ತಿರುಗಿಸುವ ಅಪಾಯವೂ ಅದರಲ್ಲಿ ಇದೆ. ಬಿಹಾರದಲ್ಲಿ ‘ಆಧಾರ್’ ಪರಿಶೀಲಿಸಿ ಮತದಾರರ ಗುರುತು ಪತ್ತೆ ಮಾಡುವುದು ಕಾಲಮಿತಿಯಲ್ಲಿ ಮಾಡಬಹುದಾದ ಕಾರ್ಯ ಅಲ್ಲ. ಬರೀ ಆಧಾರ್ ಹೊಂದಿದ್ದಾರೆಯೇ ಎಂದು ಪರಿಶೀಲಿಸುವ ಕೆಲಸವು, ಭಾರತದ ಪ್ರಜಾತಂತ್ರ ವ್ಯವಸ್ಥೆಯ ಭವಿಷ್ಯದ ದೃಷ್ಟಿಯಿಂದ ಗಮನಹರಿಸಬೇಕಾದ ನೈಜ ಸಂಗತಿಯ ಮೇಲೆ ಮೋಡ ಕವಿಯುವಂತೆ ಮಾಡುತ್ತದೆ. ‘ಎಸ್‌ಐಆರ್’ ವಿರೋಧಿಸುತ್ತಿರುವ (ಲೇಖಕನಾದ ನನ್ನನ್ನೂ ಒಳಗೊಂಡಂತೆ) ನಾವು ಜಾಗ್ರತೆ ವಹಿಸದಿದ್ದರೆ, ಎಸ್‌ಐಆರ್ ವಿರೋಧಿಗಳು (ಈ ಲೇಖಕನೂ ಸೇರಿ) ಸಣ್ಣ ಹೋರಾಟ ಗೆದ್ದು, ದೊಡ್ಡ ಯುದ್ಧದಲ್ಲಿ ಸೋಲುವ ಅಪಾಯ ಎದುರಿಸಬೇಕಾಗುತ್ತದೆ.

‘ಎಸ್‌ಐಆರ್’ ಎನ್ನುವುದು ಬಿಹಾರಕ್ಕೆ ಮಾತ್ರ ಸೀಮಿತವಾದುದಲ್ಲ. ಅದು ಬಿಹಾರದಲ್ಲಿ ಪ್ರಾಯೋಗಿಕವಾಗಿಯೂ ನಡೆಯುತ್ತಿಲ್ಲ. ಪತ್ರಿಕೆಯಲ್ಲಿ ಪ್ರಕಟವಾದ ವರದಿಗಳ ಪ್ರಕಾರ, ‘ಭಾರತೀಯ ಚುನಾವಣಾ ಆಯೋಗ’ವು ದೇಶದ ಉಳಿದೆಲ್ಲೆಡೆ ಮತದಾರರ ಪಟ್ಟಿ ಪರಿಷ್ಕರಣೆಯ ಕಾರ್ಯ ಕೈಗೆತ್ತಿಕೊಳ್ಳುವಂತೆ ನಿರ್ದೇಶಿಸಿದೆ; ಅದೂ ಈ ಪ್ರಕ್ರಿಯೆಯು ಕಾನೂನಿಗೆ ಅನುಗುಣವಾಗಿದೆಯೇ ಎಂದು ಸುಪ್ರೀಂ ಕೋರ್ಟ್ ವಿಚಾರಣೆ ನಡೆಸುತ್ತಿರುವ ಹಂತದಲ್ಲಿ. ಇದು ಮತದಾರರ ಪಟ್ಟಿಯ ಪರಿಷ್ಕರಣೆ ಅಷ್ಟೇ ಆಗಿರದೆ, ಹೊಸ ಪಟ್ಟಿಯ ಕ್ರೋಡೀಕರಣವೂ ಆಗಿದೆ. ಅಷ್ಟೇ ಅಲ್ಲ, ಮತದಾರರ ಪಟ್ಟಿ ಸಿದ್ಧಪಡಿಸಲು ಇರುವ ನಿಯಮಗಳು, ಪ್ರಕ್ರಿಯೆ, ಶಿಷ್ಟಾಚಾರ ಎಲ್ಲವನ್ನೂ ತಿದ್ದುವಂತಹ ಕಾರ್ಯವಾಗಿದೆ. ಎಲ್ಲ ನಾಗರಿಕರಿಗೆ ತಮ್ಮ ಸಾಮಾಜಿಕ, ಆರ್ಥಿಕ ಸ್ಥಾನಮಾನ, ಹಿನ್ನೆಲೆಯ ಹೊರತಾಗಿಯೂ ಇರುವ ಮತದಾನದ ಹಕ್ಕನ್ನೇ ಹೊಸ ಪರಿಷ್ಕರಣೆಯು ಪ್ರಶ್ನಿಸುತ್ತದೆ. ಬಿಹಾರದ ವಿಷಯದಲ್ಲಿ ಯಾವ ಪರಿಹಾರ ಸಿಕ್ಕಿದೆ ಎನ್ನುವುದಕ್ಕಿಂತಲೂ, ಇಂತಹ ಪರಿಷ್ಕರಣೆ ರದ್ದಾಗದೆ ಹೋದಲ್ಲಿ ಮತದಾನದ ಸಾರ್ವತ್ರೀಕರಣವನ್ನೇ ನಾವು ಕಳೆದುಕೊಳ್ಳಬೇಕಾಗುತ್ತದೆ ಎನ್ನುವುದು ಮುಖ್ಯ.

‘ಸಾರ್ವತ್ರಿಕ ಮತದಾನದ ಹಕ್ಕು’ ನಮ್ಮ ಸ್ವಾತಂತ್ರ್ಯ ಹೋರಾಟದ ಮುಖ್ಯ ತತ್ವಗಳಲ್ಲಿ ಒಂದಾಗಿತ್ತು. 1928ರಲ್ಲಿ ಮೋತಿಲಾಲ್ ನೆಹರೂ ವರದಿಯನ್ವಯ ಅದು ರೂಪಿತವಾಗಿತ್ತು. 1929ರಲ್ಲಿ ‘ಪೂರ್ಣ ಸ್ವರಾಜ್’ ಘೋಷಣೆಯಾದಾಗಲೂ ಅದನ್ನೇ ಪುನರುಚ್ಚರಿಸಲಾಗಿತ್ತು. ಸಂವಿಧಾನವು ವಯಸ್ಕರ ಮತದಾನ ತತ್ವವನ್ನು 326ನೇ ವಿಧಿಯಲ್ಲಿ ಸೇರಿಸಿತು. 21 ವರ್ಷ ದಾಟಿದ ಭಾರತದ ಪ್ರತಿಯೊಬ್ಬ ನಾಗರಿಕನಿಗೂ ಮತದಾರನಾಗಿ ನೋಂದಾಯಿಸಿಕೊಳ್ಳುವ ಹಕ್ಕು ಇದೆ ಎನ್ನುವುದನ್ನು ಅದು ಪ್ರತಿಪಾದಿಸಿತು. ಭಾರತದ ಪೌರತ್ವವು ಜನನ ಹಾಗೂ ವಾಸಸ್ಥಾನದ ಆಧಾರದ ಮೇಲೆ (ವಂಶದ ಹಿನ್ನೆಲೆ ಅಥವಾ ಜನಾಂಗದ ಆಧಾರದ ಮೇಲೆ ಅಲ್ಲ) ನಿರ್ಧಾರವಾಗುತ್ತದೆ ಎಂದು ಸಂವಿಧಾನದ 5ನೇ ವಿಧಿ ಒತ್ತಿಹೇಳಿದೆ. ಪೌರತ್ವ ಮುಂದುವರಿಸಿಕೊಂಡು ಹೋಗುವ ಹಾಗೂ ಅದನ್ನು ರಕ್ಷಿಸುವ ಕಾರ್ಯವನ್ನು 10ನೇ ವಿಧಿ ಮಾಡುತ್ತದೆ. ಅದರಂತೆ, ಭಾರತದ ಪ್ರತಿ ನಾಗರಿಕ ಅಥವಾ ಹಾಗೆ ಪರಿಗಣಿತವಾಗಿರುವ ವ್ಯಕ್ತಿ ಅದೇ ಸ್ಥಿತಿಯಲ್ಲಿ ಮುಂದುವರಿಯುತ್ತಾನೆ.

ಮೊದಲ 75 ವರ್ಷಗಳಲ್ಲಿ ಭಾರತೀಯ ಜನತಂತ್ರ ವ್ಯವಸ್ಥೆಯು ಸಾಂವಿಧಾನಿಕ ಭರವಸೆಯನ್ನು ಸಾಕಾರಗೊಳಿಸುವ ನಿಟ್ಟಿನಲ್ಲಿ ‘ಒಳಗೊಳ್ಳುವ ತತ್ವ’ವನ್ನು ಅನುಸರಿಸಿತು. ಸಂವಿಧಾನದ ಆಶಯ ಈಡೇರಿಸುವುದೇ ಅದರ ಉದ್ದೇಶವಾಗಿತ್ತು. ‘ಮ್ಯಾಪಿಂಗ್ ಆಫ್ ಸಿಟಿಜನ್ಸ್ ಆಫ್ ಇಂಡಿಯಾ’ ಪುಸ್ತಕದಲ್ಲಿ ಅನುಪಮಾ ರಾಯ್ ಅವರು ಒಳಗೊಳ್ಳುವಿಕೆಯ ತರ್ಕದ ಕುರಿತು ಚರ್ಚಿಸಿದ್ದಾರೆ. ಒಂದು ಭೌಗೋಳಿಕ ಪರಿಸರದಲ್ಲಿರುವ ಎಲ್ಲರನ್ನೂ ಒಳಗೊಳ್ಳುವುದು ವಿಶ್ವಮಾನವ ತತ್ವದೆಡೆಗಿನ ಒಂದು ಹೆಜ್ಜೆಯಾಗಿದ್ದು, ಎಲ್ಲರಿಗೂ ಪೌರತ್ವ ವಿಸ್ತರಿಸುವ ಮೂಲಕ ಭಿನ್ನತೆಗಳನ್ನು ಮಾನ್ಯ ಮಾಡುವ ಕೆಲಸವಾಗಿತ್ತು. ಜತೆಯಲ್ಲೇ, ಅದಕ್ಕೆ ವಿರುದ್ಧವಾದ ರೀತಿಯಲ್ಲಿ ಪೌರತ್ವ ನಿರಾಕರಣೆ, ಶಂಕೆ, ಪ್ರತ್ಯೇಕಗೊಳಿಸುವಿಕೆಯೂ ಇತ್ತು. ಹಾಗೆಂದ ಮಾತ್ರಕ್ಕೆ, ಈ ತರ್ಕವನ್ನು ಮತದಾನದ ಹಕ್ಕನ್ನು ಮೊಟಕುಗೊಳಿಸುವ ಮಟ್ಟಕ್ಕೆ ವಿಸ್ತರಿಸಲಾಗದು. ಮಾನವಶಾಸ್ತ್ರಜ್ಞೆ ಮುಕುಲಿಕಾ ಬ್ಯಾನರ್ಜಿ ಅವರ ‘ವೈ ಇಂಡಿಯಾ ವೋಟ್ಸ್?’ ಕೃತಿಯಲ್ಲಿ ಒಂದು ವಾದವಿದೆ: ಮತದಾನದ ಜಾತ್ಯತೀತ ರಿವಾಜು ಈಗ ಭಾರತದಲ್ಲಿ ಪರಮಪವಿತ್ರ ಸ್ಥಾನಮಾನವನ್ನು ಪಡೆದುಕೊಂಡಿದೆ. ಅದೀಗ ಸ್ವೀಕೃತ ಅಭಿಪ್ರಾಯವಾಗಿ ಬದಲಾಗಿರುವುದು ಕೂಡ ನಿಜ.

ಎಲ್ಲರನ್ನೂ ಒಳಗೊಳ್ಳುವ ತತ್ವವು ಆಕಸ್ಮಿಕವಾಗಿ ಸಂಭವಿಸಿದ್ದಾಗಿರದೆ, ಕಾನೂನು, ನಿಯಮ ಹಾಗೂ ಸಾಂಸ್ಥಿಕ ನಡಾವಳಿಗಳಲ್ಲಿ ಬೆರೆತುಹೋಗಿತ್ತು. ಯಾವ ಮತದಾರನನ್ನೂ ಮತದಾನದಿಂದ ಹೊರಗೆ ಇಡಬಾರದು ಎನ್ನುವುದೇ ಇವೆಲ್ಲವುಗಳ ಗುರಿಯಾಗಿತ್ತು. ಅಮೆರಿಕದಲ್ಲಿ ಹಾಗೂ ಇತರ ಕೆಲವು ದೇಶಗಳಲ್ಲಿ ಅರ್ಹ ವ್ಯಕ್ತಿಯು ಮತದಾರನಾಗಿ ನೋಂದಣಿ ಮಾಡಿಸಲು ಅರ್ಜಿ ಸಲ್ಲಿಸಬೇಕು. ಇದರಿಂದಾಗಿ, ಅಮೆರಿಕದಲ್ಲಿ ನೋಂದಾಯಿತ ಮತದಾರರು ಶೇ 74ರಷ್ಟು ಇದ್ದರೆ, ಭಾರತದಲ್ಲಿ ಶೇ 96ರಷ್ಟು ನಾಗರಿಕರಿಗೆ ಮತದಾನದ ಹಕ್ಕು ಇದೆ. ಮತದಾರರ ಪಟ್ಟಿಗೆ ಜನರು ತಾವೇ ಹೆಸರು ನೋಂದಾಯಿಸುವ ಅವಕಾಶ ನಮ್ಮಲ್ಲಿ ಇದೆಯಾದರೂ, ತಾತ್ವಿಕವಾಗಿ ಅದರ ಹೊಣೆಗಾರಿಕೆ ಚುನಾವಣಾ ಅಧಿಕಾರಿಗಳ ಮೇಲಿದೆ (ಈಗ ಬೂತ್ ಮಟ್ಟದ ಅಧಿಕಾರಿ– ಬಿಎಲ್‌ಒ ಹಾಗೂ ಚುನಾವಣಾ ನೋಂದಣಾ ಅಧಿಕಾರಿ– ಇಆರ್‌ಒ). ಪ್ರತಿ ವಯಸ್ಕ ನಿವಾಸಿಯನ್ನು ಸಂಪರ್ಕಿಸಿ, ಅರ್ಹರು ಮತದಾರರ ಪಟ್ಟಿಯಿಂದ ಹೊರಗೆ ಉಳಿಯದಂತೆ ಮಾಡುವುದು ಅವರ ಹೊಣೆ. ಎರಡನೆಯದಾಗಿ, ಪೌರತ್ವ ಕುರಿತು ಒಂದು ಸಾಮಾನ್ಯ ಭಾವನೆ ಇದೆ– ವಯಸ್ಕನಂತೆ ಕಾಣುವ ಯಾವುದೇ ನಿವಾಸಿಗೂ ದೇಶದ ಪೌರತ್ವ ಸಿಗುತ್ತದೆ ಹಾಗೂ ಮತದಾರರ ಪಟ್ಟಿಗೆ ಹೆಸರು ಸೇರುತ್ತದೆ. ಯಾವುದೋ ದೂರು ಅಥವಾ ಶಂಕೆಯ ಕಾರಣದಿಂದ ಅದು ತಪ್ಪಬಹುದು ಅಷ್ಟೇ. ಒಂದು ಸಲ ಮತದಾರರ ಪಟ್ಟಿಗೆ ಹೆಸರು ಸೇರಿದರೆ, ಆಮೇಲೆ ಸಮರ್ಪಕ ಪ್ರಕ್ರಿಯೆ ಇಲ್ಲದೆ ಅದನ್ನು ತೆಗೆಯುವಂತಿಲ್ಲ. ಹೆಸರಾಂತ ಇತಿಹಾಸಕಾರ ಆರ್ನಿಟ್ ಶಾನಿ ಅವರ ಜನಪ್ರಿಯ ಕೃತಿ ‘ಹೌ ಇಂಡಿಯಾ ಬಿಕೇಮ್ ಡೆಮಾಕ್ರೆಟಿಕ್’ ಕೂಡ ಮತದಾರರ ಸಾರ್ವತ್ರೀಕರಣಕ್ಕೆ ಭಾರತೀಯ ಚುನಾವಣಾ ಆಯೋಗ ಏನೆಲ್ಲಾ ಅಸಾಮಾನ್ಯವಾದ ಕ್ರಮಗಳನ್ನು ತೆಗೆದುಕೊಳ್ಳಬೇಕು ಎಂದು ಹೇಳುತ್ತದೆ. ಅಂಚಿನಲ್ಲಿ ಇರುವ ಜನರನ್ನು ಮತದಾರರ ಪಟ್ಟಿಗೆ ಸೇರಿಸಲು ಆಯೋಗ ಅನೇಕ ವರ್ಷಗಳಿಂದ ದಾರಿಗಳನ್ನು ಹುಡುಕುತ್ತಾ ಬಂದಿದೆ. ಅಲೆಮಾರಿ ಸಮುದಾಯಗಳು, ವಸತಿರಹಿತರು, ಲೈಂಗಿಕ ಕಾರ್ಯಕರ್ತರು, ಲಿಂಗತ್ವ ಅಲ್ಪಸಂಖ್ಯಾತರು, ಅನಾಥರು, ದಾಖಲೆಗಳಿಲ್ಲದ ನಾಗರಿಕರು ಹಾಗೂ ಅನಿವಾಸಿ ಭಾರತೀಯರಿಗೆ ಮತದಾನದ ಹಕ್ಕು ಒದಗಿಸುವ ಪ್ರಯತ್ನಗಳನ್ನು ನಡೆಸಿದೆ.

> ಚುನಾವಣಾ ಆಯೋಗ, ಬಿಹಾರದಲ್ಲಿ ಮತದಾರರ ಪಟ್ಟಿಯ ‘ವಿಶೇಷ ತೀವ್ರ ಪರಿಷ್ಕರಣೆ’ ನಡೆಸುತ್ತಿದೆ. ಈ ಪರಿಷ್ಕರಣೆ ಬಿಹಾರಕ್ಕಷ್ಟೇ ಸೀಮಿತವಾಗಿಲ್ಲ, ಅಲ್ಲಿಗೆ ಮುಗಿಯುವುದಿಲ್ಲ. ಇದು, ಮತದಾನ ಪದ್ಧತಿಯಲ್ಲಿ ಎಲ್ಲರನ್ನೂ ಒಳಗೊಳ್ಳುವ ಭಾರತದ ಚುನಾವಣಾ ಪದ್ಧತಿಯ ಅಂತಃಸತ್ವವನ್ನೇ ಬದಲಿಸಲು ಹೊರಟಿದೆ.

ಸಾರ್ವತ್ರೀಕರಣದ ತರ್ಕವನ್ನು ಚುನಾವಣಾ ಆಯೋಗ ಮಗುಚಿಹಾಕಲು ಹೊರಟಿದೆ. ಮತದಾನದ ಅವಕಾಶಕ್ಕೆ ತಡೆ ಒಡ್ಡುವ ತರ್ಕವನ್ನು ಅಧಿಕೃತವಾಗಿಸುವ ಅದರ ಉದ್ದೇಶ, ಪೌರತ್ವದಲ್ಲಿ ಎದ್ದುಕಾಣುವಂತಹ ಅಸಮಾನತೆ ಉಂಟುಮಾಡಬಲ್ಲದು. ಮುಕ್ತ ಹಾಗೂ ಸಮಾನ ರಾಜಕೀಯ ಸಮುದಾಯದ ಸದಸ್ಯತ್ವ ನೀಡುವ ಭರವಸೆಯನ್ನು ಭಾರತ ಸರ್ಕಾರವು ಮೊದಲ 75 ವರ್ಷಗಳಲ್ಲಿ ಈಡೇರಿಸುವಲ್ಲಿ ವಿಫಲವಾಗಿದೆ. ‘ಸಿಟಿಜನ್‌ಶಿಪ್ ಇಂಪೆರಿಲ್ಡ್: ಇಂಡಿಯಾಸ್ ಫ್ರ್ಯಾಜೈಲ್ ಡೆಮಾಕ್ರಸಿ’ ಕೃತಿಯಲ್ಲಿ ನೀರಜ್ ಗೋಪಾಲ್ ಜಯಾಲ್, ಪೌರತ್ವದ ವಿನ್ಯಾಸದಲ್ಲಿ ವಿಪರೀತ ಬದಲಾವಣೆ ತರುವುದರಿಂದ ಕಟ್ಟುಪಾಡುಗಳ ಹೇರಿಕೆಯ ಪೌರತ್ವ ಸೃಷ್ಟಿಸುವುದು ಹಾಗಿರಲಿ, ಅಧಿಕೃತ ಪೌರತ್ವ ವ್ಯವಸ್ಥೆಯೂ ನಾಶವಾಗುತ್ತದೆ ಎಂದು ಆತಂಕ ವ್ಯಕ್ತಪಡಿಸಿದ್ದಾರೆ.

‘ವಿಶೇಷ ತೀವ್ರ ಪರಿಷ್ಕರಣೆ’ ಎನ್ನುವ, ಯಾರಿಗೂ ಹಾನಿಯಾಗದೆನ್ನುವ ಧೋರಣೆಯ ಪದಪುಂಜಗಳ ಬಳಕೆಯ ಈಗಿನ ಕಸರತ್ತು, ಮತದಾನದ ಸಾರ್ವತ್ರೀಕರಣದ ಮೂಲ ತರ್ಕ ತಿರುಚಲು ಮುಂದಾಗಿದೆ. ಸಂವಿಧಾನದ 326ನೇ ವಿಧಿಯನ್ನು ಜಾರಿಗೆ ತರುವುದಾಗಿ ಅದು ತೋರಿಕೆಗಾಗಿ ಹೇಳುತ್ತಿದೆಯಾದರೂ, ಪೌರತ್ವ ಮುಂದುವರಿಕೆಯ ಭರವಸೆ ನಿರಾಕರಿಸುವ ಮೂಲಕ ಮೂಲ ಉದ್ದೇಶವನ್ನು ತಿರುಚುತ್ತಿದೆ. ಲ್ಯಾಟಿನ್‌ನಲ್ಲಿ ‘ಯುಸ್ ಸಾಲಿ’ ಎಂಬ ತತ್ವವಿದೆ. ನೆಲದ ಜನರಿಗೆ ಪೌರತ್ವ ಎನ್ನುವ ಅರ್ಥವನ್ನು ಅದು ಹೊಮ್ಮಿಸುತ್ತದೆ. ಅದೇ ಭಾಷೆಯಲ್ಲಿ ‘ಯುಸ್ ಸಂಗ್ವಿನಿಸ್’ ಎಂಬ ಇನ್ನೊಂದು ತತ್ವವೂ ಬರುತ್ತದೆ. ಅದರ ಅರ್ಥ, ರಕ್ತದ ಆಧಾರದ ಮೇಲಿನ ಪೌರತ್ವ. ಜಯಾಲ್ ಅವರು ಭಾರತದಲ್ಲಿ ಆಗುತ್ತಿರುವ ಬದಲಾವಣೆಯನ್ನು ಇದನ್ನೇ ಉದಾಹರಿಸಿ ಹೇಳಿದ್ದಾರೆ.

ವಯಸ್ಕರ ಮತದಾನದ ಸಾರ್ವತ್ರೀಕರಣಕ್ಕೆ ಭಾರತದಲ್ಲಿ ಆದ್ಯತೆ ನೀಡಿದ್ದ ಕ್ರಮಗಳನ್ನೆಲ್ಲ ‘ವಿಶೇಷ ತೀವ್ರ ಪರಿಷ್ಕರಣೆ’ ತಿರುವುಮುರುವು ಮಾಡ ಹೊರಟಿದೆ. ಮೊದಲನೆಯದಾಗಿ, ಮತದಾರರ ಪಟ್ಟಿಯಲ್ಲಿ ಹೆಸರು ಇದೆ ಎನ್ನುವ ಬದಲು ಮತದಾರರ ಪಟ್ಟಿಯಲ್ಲಿ ಅರ್ಹ ಮತದಾರರು ಇದ್ದಾರೆ ಎಂದು ಬದಲಾಗುತ್ತದೆ. ಇದೇ ಮೊದಲ ಬಾರಿಗೆ, ಮೂಲ ಮತದಾರರೆಲ್ಲರಿಗೂ ಎಣಿಕೆ ಪತ್ರವೊಂದನ್ನು ತುಂಬಲು ಸೂಚಿಸಲಾಗಿದೆ. ಅದನ್ನು ಮಾಡದೇ ಇದ್ದಲ್ಲಿ ಮತದಾರರ ಕರಡು ಪಟ್ಟಿಯಲ್ಲಿ ಹೆಸರೇ ಬರುವುದಿಲ್ಲ. ಇದುವರೆಗೆ ಜನರು ಯಾವುದೇ ಮತದಾರರ ಪಟ್ಟಿಯಲ್ಲಿ ಇದ್ದರೂ ಅದು ಮುಖ್ಯವಲ್ಲ, 2023ರ ಪಟ್ಟಿಯಲ್ಲಿ ಇರಬೇಕು (2023ರ ಪಟ್ಟಿಯನ್ನೇ ಮೂಲವಾಗಿ ಯಾಕೆ ಇಟ್ಟುಕೊಳ್ಳಲಾಗಿದೆ ಎನ್ನುವುದಕ್ಕೂ ಸಮರ್ಥನೆಯಿಲ್ಲ. ಯಾಕೆಂದರೆ, ಯಾವುದೇ ದಾಖಲೆಗಳನ್ನು ಪರಿಶೀಲಿಸಿ ಪೌರತ್ವದ ಸ್ಥಿತಿ ನಿರ್ಧರಿಸುವ ಕ್ರಮ ಇಲ್ಲಿ ಇಲ್ಲ). ಎರಡನೆಯದಾಗಿ, ಪೌರತ್ವ ಕುರಿತು ಇರುವ ಸಹಜ ಭಾವನೆಯನ್ನು ಮಗುಚಿಹಾಕಲಾಗಿದೆ. ಈಗ ನೀವು ಅಕ್ರಮ ನಿವಾಸಿ ಅಲ್ಲ ಎನ್ನುವುದನ್ನು ಸಾಬೀತುಪಡಿಸಬೇಕು. ಇದೇ ಮೊದಲ ಬಾರಿಗೆ, ಎಲ್ಲರೂ ದಾಖಲೆಗಳನ್ನು ಒದಗಿಸಬೇಕಾದ ಒತ್ತಡ ಸೃಷ್ಟಿಯಾಗಿದೆ (2023ರ ಮತದಾರರ ಪಟ್ಟಿಯ ಪ್ರತಿ ಅಥವಾ ಜನನ ಪ್ರಮಾಣಪತ್ರ ಹಾಗೂ ವಾಸ ದೃಢೀಕರಣದ ಪತ್ರ). ಕೆಲವರಿಗೆ ಇದುವರೆಗೆ ಇಂತಹ ದಾಖಲೆಗಳನ್ನೇ ನೀಡಿಲ್ಲ. ಕೊನೆಯದಾಗಿ, ಪೌರತ್ವವನ್ನು ಕಾನೂನಾತ್ಮಕವಾಗಿ ಪಡೆಯಲು ಹಲವು ದಾಖಲೆ ಪತ್ರಗಳನ್ನು ಸ್ಥಳೀಯ ಅಧಿಕಾರಿಯಿಂದ ಪಡೆಯಬೇಕಾಗುತ್ತದೆ. ಅಲ್ಲಿಯೂ ಒಂದು ಸಮಗ್ರವಾದ ಪತ್ರ ದೊರೆಯುವುದಿಲ್ಲ.

ಕಳೆದ ಕೆಲವು ದಿನಗಳಿಂದ ಮಾಧ್ಯಮಗಳು, ಬಿಹಾರದಲ್ಲಿ ‘ವಿಶೇಷ ತೀವ್ರ ಪರಿಷ್ಕರಣೆ’ ಮೂಲಕ ನಡೆದ ಗೋಜಲುಗಳನ್ನು, ದುರಂತಗಳನ್ನು ದಾಖಲಿಸಿವೆ. ‘ವಿಶೇಷ ತೀವ್ರ ಪರಿಷ್ಕರಣೆ’ ಜಾರಿಗೆ ತರುವುದರಲ್ಲಿನ ಅದಕ್ಷತೆ ಅಥವಾ ಅಪ್ರಾಮಾಣಿಕತೆ ನಿಜವಾದ ಸಮಸ್ಯೆಯೇ ಅಲ್ಲ. ಇದು, ಕೇಡು ಬಗೆಯುವ, ಅಸಾಂವಿಧಾನಿಕವಾದ ಹಾಗೂ ಪ್ರಜಾಪ್ರಭುತ್ವ ವಿರೋಧಿಯಾದ ಯೋಜನೆ ಎನ್ನುವುದನ್ನು ಗಮನಿಸಬೇಕು. ಅದು ಜಾರಿಗೆ ಬರಕೂಡದು.

ವಾಚಕರ ವಾಣಿ

ಕೃಷಿ ಭೂಮಿ: ಶಾಶ್ವತ ಕ್ರಮ ಬೇಕು

ದೇವನಹಳ್ಳಿ ರೈತರ ಪ್ರತಿಭಟನೆಗೆ ಓಗೊಟ್ಟು 1,777 ಎಕರೆ ಕೃಷಿ ಭೂಮಿಯ ಸ್ವಾಧೀನ ಪ್ರಕ್ರಿಯೆಯನ್ನು ಕೈಬಿಟ್ಟಿರುವ ರಾಜ್ಯ ಸರ್ಕಾರ, ತಡವಾಗಿಯಾದರೂ ಸರಿಯಾದ ನಿರ್ಣಯಕ್ಕೆ ಬಂದಿದೆ. ಹಿಂಸೆಯಿಲ್ಲದ ಸತ್ಯಾಗ್ರಹ ನಡೆಸಿದ ರೈತರ ಸಂಯಮ ಸ್ತುತ್ಯರ್ಹ. ಅಧಿಸೂಚನೆ ಕೈಬಿಟ್ಟ ತಕ್ಷಣ ಸರ್ಕಾರದ ಕೆಲಸ ಮುಗಿದಿಲ್ಲ. ದೇವನಹಳ್ಳಿ ಸುತ್ತಮುತ್ತಲಿನ ಫಲವತ್ತಾದ ಪ್ರದೇಶಗಳನ್ನು ಶಾಶ್ವತವಾಗಿ ಕೃಷಿ ವಲಯವೆಂದು ಘೋಷಿಸಬೇಕು. ರಿಯಲ್ ಎಸ್ಟೇಟ್ ಲಾಬಿಯ ಏಜೆಂಟರಂತೆ ಸರ್ಕಾರಕ್ಕೆ ಭೂಮಿ ಒಪ್ಪಿಸಲು ಹೊರಟಿರುವವರಿಗೆ ಪ್ರೋತ್ಸಾಹ ನೀಡಬಾರದು. ದೊಡ್ಡ ಮೊತ್ತದ ಆಸೆಗೆ ಭೂಮಿ ಮಾರಿಕೊಂಡ ಯಾರೂ ಬಹುಕಾಲ ನೆಮ್ಮದಿಯಿಂದ ಇದ್ದ ನಿದರ್ಶನ ನಮ್ಮ ಮುಂದಿಲ್ಲ.

ಶ್ರೀಕಂಠ, ಬೆಂಗಳೂರು

ದರ ನಿಗದಿ: ಸಿನಿಪ್ರಿಯರಿಗೆ ಸಂತಸ

ಮಲ್ಟಿಪ್ಲೆಕ್ಸ್ ಚಿತ್ರಮಂದಿರಗಳಲ್ಲಿನ ಪ್ರವೇಶ ದರವನ್ನು ಗರಿಷ್ಠ ₹200ಕ್ಕೆ ನಿಗದಿಪಡಿಸಲು ರಾಜ್ಯ ಸರ್ಕಾರ ಮುಂದಾಗಿರುವುದು ಸ್ವಾಗತಾರ್ಹ (ಪ್ರ.ವಾ., ಜುಲೈ 16). ಬೆಂಗಳೂರಿನ ಮಲ್ಟಿಪ್ಲೆಕ್ಸ್‌ಗಳಲ್ಲಿ ಪ್ರವೇಶ ದರವನ್ನು ಮನಸ್ಸಿಗೆ ಬಂದಂತೆ ನಿಗದಿಪಡಿಸಿರುವ ಮಾಲೀಕರು ಪ್ರೇಕ್ಷಕರ ಮೇಲೆ ದುಬಾರಿ ಹೊರೆ ಹೊರಿಸಿದ್ದಾರೆ. ಆ ದರಕ್ಕೆ ಕಡಿವಾಣ ಹಾಕುವುದು ಸಿನಿಮಾ ಪ್ರೇಮಿಗಳ ಪಾಲಿಗೆ ಒಳ್ಳೆಯ ಬೆಳವಣಿಗೆ.

ಕೆ.ವಿ. ವಾಸು, ಮೈಸೂರು

ಜಾತಿಯ ವಿಷ ಬೀಜ ಬಿತ್ತದಿರಿ

ಮಂಡ್ಯಕ್ಕೆ ವರ್ಗಾವಣೆಯಾಗಿ ಬಂದ ಸಹೋದ್ಯೋಗಿಗೆ ಬಾಡಿಗೆಗಾಗಿ ಮನೆ ಹುಡುಕುತ್ತಿದ್ದೆವು. ಒಪ್ಪಿಗೆಯಾದ ಮನೆಯೊಂದಕ್ಕೆ ಮುಂಗಡ ನೀಡಿ, ಕೀ ಪಡೆದು ಇನ್ನೇನು ಹೊರಡಬೇಕು ಎನ್ನುವಷ್ಟರಲ್ಲಿ ಮಾಲೀಕ, ಏನನ್ನೋ ಮರೆತಿದ್ದವರಂತೆ ‘ಇವ್ರು ಯಾವ ಕಮ್ಯುನಿಟಿ?’ ಎಂದು ಮಧ್ಯವರ್ತಿಯನ್ನು ಪ್ರಶ್ನಿಸಿದರು. ಸಹೋದ್ಯೋಗಿ ಮಿತ್ರರು ಮುಜುಗರವಿಲ್ಲದೆ ‘ನಾವು ಎಸ್.ಸಿ’ ಎಂದರು. ತಕ್ಷಣ ಆತ ‘ಮೊದ್ಲೆ ಯೇಳ್ಬಾರ್ದ? ನಾವು ಎಸ್.ಸಿಯವರಿಗೆ ಮನೆ ಕೊಡಲ್ಲ’ ಎಂದು ಹಣ ವಾಪಸ್ ನೀಡಿ ಕೀ ಪಡೆದುಕೊಂಡರು. ಮನಸ್ಸಿಗೆ ಕಸಿವಿಸಿಯಾಯಿತು.

ಬಳಿಕ ನಾವು ಅದೇ ಬಡಾವಣೆಯ ಪಕ್ಕದ ಬೀದಿಗೆ ಹೋಗಿ ಮನೆ ಹುಡುಕಿ ಮುಂಗಡ ಕೊಡುವುದಕ್ಕೆ ಮುಂಚಿತವಾಗಿ ‘ನಾವು ಎಸ್.ಸಿ ಸರ್, ಏನೂ ಅಭ್ಯಂತರ ಇಲ್ಲವೇ’ ಎಂದು ಕೇಳಿದೆವು. ಆಗ ಮನೆ ಮಾಲೀಕ ‘ನಾನೇನಾದ್ರು ಕೇಳಿದ್ನ? ನೀವ್ಯಾಕೆ ಯೇಳ್ತಿದೀರಿ? ಅಂದರು. ಹಿಂದಿನ ಮನೆಯಲ್ಲಿ ನಡೆದುದನ್ನು ಹೇಳಿದೆವು. ‘ಈ ಭೂಮಿ ಮೇಲೆ ಎಲ್ಲ ಜನಾಂಗದೋರು ಉಸಿರಾಡ್ತಿದ್ದಾರೆ ಅಲ್ವ? ಭೂಮಿ ಬಿಟ್ಟು ಬೇರೆ ಗ್ರಹಕ್ಕೆ ಹೋಗಾಕ್ಕೇಳಿ’ ಎಂದು ನಗುತ್ತಾ ಮುಂಗಡ ಪಡೆದು ಕೀ ಕೊಟ್ಟರು. ಅಕ್ಕಪಕ್ಕದ ಬೀದಿಯಲ್ಲೇ ವಾಸಿಸುತ್ತಿರುವ ಒಂದೇ ಸಮುದಾಯಕ್ಕೆ ಸೇರಿದ ವಿರುದ್ಧ ಮನಃಸ್ಥಿತಿಯುಳ್ಳ ವ್ಯಕ್ತಿಗಳನ್ನು ನೋಡಿ ಅಚ್ಚರಿಯಾಯಿತು.

ಪುಟ್ಟದಾಸು, ಮಂಡ್ಯ

ಚಾರಿತ್ರ್ಯಹೀನ ಬೋಧಕರಿಗೆ ಶಿಕ್ಷೆಯಾಗಲಿ

ಮೂಡುಬಿದಿರೆಯ ಇಬ್ಬರು ಉಪನ್ಯಾಸಕರು ಹಾಗೂ ಅವರ ಸ್ನೇಹಿತ, ವಿದ್ಯಾರ್ಥಿನಿಯ ಮೇಲೆ ಅತ್ಯಾಚಾರ ಎಸಗಿದ್ದಾರೆ. ಭುವನೇಶ್ವರದ ಒಬ್ಬ ಉಪನ್ಯಾಸಕನೂ ವಿದ್ಯಾರ್ಥಿನಿಯ ಮೇಲೆ ಲೈಂಗಿಕ ದೌರ್ಜನ್ಯವೆಸಗಿದ ಆರೋಪಕ್ಕೆ ಗುರಿಯಾಗಿದ್ದಾನೆ. ಜೀವನ ಪಾಠ ಕಲಿಸಬೇಕಾದವರೇ ವಿದ್ಯಾರ್ಥಿನಿಯರ ಜೀವನ ಹಾಳು ಮಾಡುತ್ತಿದ್ದಾರೆ ಎಂಬ ಸುದ್ದಿ ಓದಿ ಆಘಾತಗೊಂಡೆ. ಬೇಲಿಯೇ ಎದ್ದು ಹೊಲ ಮೇದಂತಾಯಿತು. ಈ ಚಾರಿತ್ರ್ಯಹೀನರಿಗೆ ಕಠಿಣ ಶಿಕ್ಷೆಯಾಗಬೇಕು.

ಮಾಲತಿ ಪಟ್ಟಣಶೆಟ್ಟಿ, ಧಾರವಾಡ

ಘನತೆಯ ಬದುಕು ಬೇಕಲ್ಲವೇ?

ಸರ್ಕಾರವು ಕನಿಷ್ಠ ವೇತನ ನಿಗದಿಪಡಿಸಿದೆ. ಇದಕ್ಕಿಂತಲೂ ಕಡಿಮೆ ವೇತನದಲ್ಲಿ ಸೇವೆ ಸಲ್ಲಿಸುತ್ತಾ ಬಂದಿರುವ ಪದವಿ ಕಾಲೇಜಿನ ಅತಿಥಿ ಉಪನ್ಯಾಸಕರಿಗೆ ಘನತೆಯ ಬದುಕು ಬೇಕಿದೆ. ಯುಜಿಸಿ ಮತ್ತು ಯುಜಿಸಿಯೇತರ ತಾರತಮ್ಯದಿಂದಾಗಿ ಐದು ಸಾವಿರಕ್ಕೂ ಹೆಚ್ಚು ಉಪನ್ಯಾಸಕರ ಬದುಕು ಕತ್ತಲೆಯತ್ತ ಸಾಗಿದೆ. ದೇವನಹಳ್ಳಿ ರೈತರ ಪರವಾಗಿ ಮುಖ್ಯಮಂತ್ರಿ ಅವರು ಜೀವಪರವಾದ ನಿಲುವು ತಳೆದಿದ್ದಾರೆ. ಸೇವೆ ಕಾಯಂಗೊಳಿಸುವ ಮೂಲಕ ಅತಿಥಿ ಉಪನ್ಯಾಸಕರು ಮತ್ತು ಅವರ ಕುಟುಂಬದವರು ಘನತೆಯಿಂದ ಬದುಕಲು ಅವಕಾಶ ನೀಡುವರೇ?

ಗುರುಪ್ರಸಾದ ಎಚ್.ಎಸ್., ಮರಿಯಮ್ಮನಹಳ್ಳಿ

ಎಗ್ಗಿಲ್ಲದೆ ಸಾಗಿದೆ ವನ್ಯಜೀವಿ ಬೇಟೆ

ಚಳ್ಳಕೆರೆ ತಾಲ್ಲೂಕಿನ ಪರಶುರಾಂಪುರ ಹೋಬಳಿಯ ಚೆನ್ನಮ್ಮ ನಾಗತಿಹಳ್ಳಿ ಕಾವಲ್ ವ್ಯಾಪ್ತಿಗೆ ಬರುವ ಪರ್ಲೆಹಳ್ಳಿ, ದ್ಯಾವರನಹಳ್ಳಿ, ದೇವರ ಮರಿಕುಂಟೆ, ಬೊಂಬೆರಹಳ್ಳಿ, ವಡೇರಹಳ್ಳಿ, ಸೂರನಹಳ್ಳಿ ಮತ್ತಿತರ ಗ್ರಾಮಗಳ ಸುತ್ತಮುತ್ತ ವಾಸಿಸುತ್ತಿರುವ ಜಿಂಕೆ, ಸಾರಂಗ ಮೊದಲಾದ ಕಾಡು ಪ್ರಾಣಿಗಳನ್ನು ಬೇಟೆಗಾರರು ಹಗಲು ಹೊತ್ತಿನಲ್ಲೇ ರಾಜಾರೋಷವಾಗಿ ಬೇಟೆಯಾಡುತ್ತಿದ್ದಾರೆ.

ಕಾಡು ಮತ್ತು ಕಾಡು ಪ್ರಾಣಿಗಳ ಸಂರಕ್ಷಣೆಗೆ ಇರುವ ಅರಣ್ಯ ಇಲಾಖೆಯು ಜಾಣಕುರುಡು ಪ್ರದರ್ಶಿಸುತ್ತಿದೆ. ಪ್ರಾಣಿ ಪ್ರಿಯರು ಧೈರ್ಯ ಮಾಡಿ ಇಲಾಖೆಗೆ ದೂರು ನೀಡಿದರೂ ಹಿರಿಯ ಅಧಿಕಾರಿಗಳು ಕ್ರಮಕೈಗೊಂಡಿಲ್ಲ. ಜನರಲ್ಲಿ ಇಲಾಖೆ ಬಗ್ಗೆ ಅಪನಂಬಿಕೆ ಬೆಳೆಯುವಂತಾಗಿದೆ. ತಪ್ಪಿತಸ್ಥರನ್ನು ಬಂಧಿಸಿದ ಉದಾಹರಣೆಗಳೇ ಇಲ್ಲ. ಪ್ರಾಣಿ ಪೀಡಕರು ನಿರಾತಂಕವಾಗಿ ಅನಾಚಾರದಲ್ಲಿ ತೊಡಗಿದ್ದಾರೆ. ಅರಣ್ಯ ಸಚಿವರು ಇತ್ತ ಗಮನ ಹರಿಸುವರೇ?

ಚೆನ್ನಮ್ಮ ನಾಗತಿಹಳ್ಳಿ ಕಾವಲ್ ವ್ಯಾಪ್ತಿಯ ಗ್ರಾಮಸ್ಥರು, ಚಳ್ಳಕೆರೆ ತಾಲ್ಲೂಕು

ಚುರುಮುರಿ

ಬಾಡು ಭಾಗ್ಯ

• ಸಿ.ಎನ್. ರಾಜು

ಬಿಬಿಎಂಪಿ ಕಚೇರಿ ಎದುರು ಬೀದಿನಾಯಿಗಳು ನಾಲಿಗೆ ಚಾಚಿಕೊಂಡು ಕುಳಿತಿದ್ದವು.

ಹಿರಿಯ ಅಧಿಕಾರಿ ಬಂದು, ‘ನಾಯಿಗಳು ಪ್ರತಿಭಟನೆ ಮಾಡ್ತಿವೆಯೇನ್ರೀ?’ ಎಂದು ಕೇಳಿದರು.

‘ಬಾಡು ಭಾಗ್ಯ ಯೋಜನೆ ಯಾವಾಗಿನಿಂದ, ಮೆನು ಏನೇನು ಎಂದು ತಿಳಿಯಲು ನಾಯಿಗಳು ಬಂದಿರಬಹುದು ಸಾರ್’ ಕಿರಿಯ ಅಧಿಕಾರಿ ಹೇಳಿದರು.

‘ಬಾಡು ಭಾಗ್ಯ ಯೋಜನೆಯನ್ನು ಪ್ರಾಣಿದಯಾ ಸಂಘದವರು ಸ್ವಾಗತಿಸಿದ್ದಾರೆ ಕಣ್ರೀ’.

‘ಆದರೆ, ಪ್ರಾಣಿ ಭಯಾ ಸಂಘದವರು ಆಕ್ಷೇಪ ಮಾಡಿದ್ದಾರೆ. ನಾಯಿಗಳಿಗೆ ಮಾಂಸದ ರುಚಿ ತೋರಿಸಿದರೆ ಮನುಷ್ಯರನ್ನು ಕಚ್ಚುತ್ತವಂತೆ’.

‘ಬಾಡು ಭಾಗ್ಯ ಉಂಡುಕೊಂಡಿರಿ, ಮನುಷ್ಯರ ಮೇಲೆ ದಾಳಿ ಮಾಡಬೇಡಿ ಎಂದು ನಾಯಿ ತಜ್ಞರಿಂದ ನಾಯಿಗಳಿಗೆ ಬುದ್ಧಿ ಹೇಳಿಸಬೇಕು’.

‘ಕಚ್ಚೋದು, ಬೊಗೊಳೋದು ನಾಯಿಗಳ ಹುಟ್ಟುಗುಣ ಸಾರ್. ಪ್ಲೇಟ್ ಮೀಲ್ಸ್ ಕೊಟ್ಟರೆ ಅವು ಮನುಷ್ಯರನ್ನು ಕಚ್ಚುತ್ತವೆ, ಫುಲ್ ಮೀಲ್ಸ್ ಕೊಟ್ಟರೆ ತಿಂದು ತೆಪ್ಪಗಿರ್ತವೆ’.

‘ನಾಯಿಗಳು ಉಭಯ ಆಹಾರಿಗಳು. ವೆಜ್, ನಾನ್‌ವೆಜ್ ಎರಡನ್ನೂ ತಿನ್ನುತ್ತವೆ’.

‘ಮಾಂಸದ ರುಚಿ ಕಂಡ ನಾಯಿಗಳು ಅನ್ನ–ಸಾಂಬಾರ್ ಮೂಸಿ ನೋಡಲ್ಲ ಸಾರ್...’

ಅಷ್ಟೊತ್ತಿಗೆ ನಾಯಿಗಳ ಇನ್ನೊಂದು ಗುಂಪು ಬಂತು. ಈ ನಾಯಿಗಳು ಆ ನಾಯಿಗಳ ಮೇಲೆ ದಾಳಿ ಮಾಡಿ ಕಚ್ಚಾಡಿದವು.

‘ಯಾಕ್ರಿ ನಾಯಿಗಳು ಹೀಗೆ ಕಚ್ಚಾಡ್ತಿವೆ?’ ಎಂದು ಹಿರಿಯ ಅಧಿಕಾರಿ ಕೇಳಿದರು.

‘ಸಾರ್, ಬಾಡು ಭಾಗ್ಯ ಅರಸಿ ಹೊರ ಊರಿನಿಂದ ಬೆಂಗಳೂರಿಗೆ ವಲಸೆ ಬಂದ ನಾಯಿಗಳವು. ಅಕ್ರಮ ನಿವಾಸಿಗಳ ವಿರುದ್ಧ ಮೂಲ ನಿವಾಸಿಗಳು ಸಿಟ್ಟಿಗೆದ್ದಿವೆ’.

‘ಬೆಂಗಳೂರು ನಾಯಿಗಳಿಗೆ ವಾಸಸ್ಥಳ ಪತ್ರ ವಿತರಿಸಿ’.

‘ನಾಯಿಗಳು ಪತ್ರವನ್ನು ಎಲ್ಲಿ ಇಟ್ಟುಕೊಳ್ತವೆ ಸಾರ್? ಪತ್ರದ ಬದಲು ಬಿಬಿಎಂಪಿಯ ಬೆಲ್ಟ್ ಕಟ್ಟಿ ನಮ್ಮ ನಾಯಿಗಳನ್ನು ದೃಢೀಕರಿಸಿಕೊಳ್ಳೋಣ’ ಎಂದರು ಕಿರಿಯ ಅಧಿಕಾರಿ.

‘ವೆರಿ ಗುಡ್, ಒಳ್ಳೆಯ ಐಡಿಯಾ...’ ಎಂದು ಹಿರಿಯ ಅಧಿಕಾರಿ ಹೊರಟರು.

ಸಂಗತ

ವ್ಯಾಕರಣ ನಿರ್ಲಕ್ಷಿಸಿದರೆ ಭಾಷೆಗೆ ಹಿನ್ನಡೆ

ಹೊಸ ತಲೆಮಾರು ಕನ್ನಡದ ಮೇಲಿನ ಹಿಡಿತ ಕಳೆದುಕೊಳ್ಳುತ್ತಿರುವುದಕ್ಕೂ, ಕನ್ನಡ ಕಲಿಕೆಯಲ್ಲಿ ವ್ಯಾಕರಣವನ್ನು ನಿರ್ಲಕ್ಷ್ಯ ಮಾಡುತ್ತಿರುವುದಕ್ಕೂ ಸಂಬಂಧವಿದೆ.

• ಎಂ.ಜಿ. ರಾಮಚಂದ್ರ

ಕನ್ನಡವನ್ನು ಒಂದು ಭಾಷೆಯನ್ನಾಗಿ ಕಲಿಸುವಲ್ಲಿ ನಮ್ಮ ಶಿಕ್ಷಣ ಕ್ರಮ ವಿಫಲವಾಗುತ್ತಿದೆಯೆ? ಶಾಲೆ– ಕಾಲೇಜುಗಳಿಂದ ಹೊರಬರುತ್ತಿರುವ ಮಕ್ಕಳನ್ನು ಗಮನಿಸಿದರೆ, ಈ ಪ್ರಶ್ನೆಗೆ ಸ್ಪಷ್ಟ ಉತ್ತರ ದೊರೆಯುತ್ತದೆ. ಪದವಿ ಗಳಿಸಿದವರೂ ಕನ್ನಡವನ್ನು ಸರಳವಾಗಿ ಹಾಗೂ ಸ್ಪಷ್ಟವಾಗಿ ಬರೆಯಲು ತಿಣುಕುತ್ತಿರುವ ಸ್ಥಿತಿ ಕನ್ನಡ ಭಾಷೆಯ ಕಲಿಕೆಯಲ್ಲಿನ ಸಮಸ್ಯೆಗಳನ್ನು ಸೂಚಿಸುವಂತಿದೆ.

ಭಾಷಾ ಬೋಧನೆಯಲ್ಲಿ ವಿಷಯಕ್ಕೆ ಮಹತ್ವ ನೀಡಿ ಅದನ್ನಷ್ಟೇ ಬೋಧಿಸುವುದು ನಮ್ಮ ಕಲಿಕಾ ಕ್ರಮದಲ್ಲಿನ ಬಹುದೊಡ್ಡ ಸಮಸ್ಯೆಯಾಗಿದೆ. ಬರಹದಲ್ಲಿನ ವಿಷಯದ ಜೊತೆಗೆ, ಆ ವಿಷಯ ನಿರೂಪಣೆಗೊಂಡಿರುವ ಭಾಷೆ ಹಾಗೂ ಆ ಭಾಷೆಯಲ್ಲಿನ ವ್ಯಾಕರಣದ ಸಂಗತಿಗಳ ಬಗ್ಗೆ ಗಮನ ಕೊಡುವುದು ಪರಿಣಾಮಕಾರಿ ಕಲಿಕೆಯ ಲಕ್ಷಣವಾಗಿದೆ. ವ್ಯಾಕರಣದೊಂದಿಗೆ ಭಾಷಾ ವಿಷಯಗಳನ್ನು ಬೋಧಿಸಿದಾಗ, ಮಕ್ಕಳು ಭಾಷಾ ಕೌಶಲಗಳನ್ನು ಸುಲಭವಾಗಿ ಸಾಧಿಸುತ್ತಾರೆ. ಕನ್ನಡ ಭಾಷಾ ಬೋಧಕರು ತಮ್ಮ ಬೋಧನಾ ಕಾರ್ಯವನ್ನು ಕೊಂಚ ಪರಿಷ್ಕರಿಸಿಕೊಂಡು, ವಿಷಯದ ಜೊತೆಗೆ ವ್ಯಾಕರಣ ಬೋಧನೆಯನ್ನು ವ್ಯವಸ್ಥಿತವಾಗಿ ಮಾಡಿದಾಗ ಮಾತ್ರ ಕನ್ನಡ ಭಾಷೆಯ ಕಲಿಕೆಯಲ್ಲಿ ವಿದ್ಯಾರ್ಥಿಗಳು ಹೆಚ್ಚಿನ ಪರಿಣತಿ ಹೊಂದುವುದು ಸಾಧ್ಯವಾಗುತ್ತದೆ.

ತಪ್ಪು ತಿಳಿವಳಿಕೆಯಿಂದಾಗಿ ವ್ಯಾಕರಣವನ್ನು ನಿರ್ಲಕ್ಷಿಸುವವರಿದ್ದಾರೆ. ಗಣಿತ ಸೂತ್ರಗಳ ರೂಪದಲ್ಲಿ ವ್ಯಾಕರಣವನ್ನು ನೋಡುತ್ತಾ, ‘ವ್ಯಾಕರಣ ಪಂಡಿತರಿಗೇ ಹೊರತು ಜನಸಾಮಾನ್ಯರಿಗಲ್ಲ’ ಎಂದು ಭಾವಿಸಿದವರೂ ಇದ್ದಾರೆ. ಇದು ತಪ್ಪು ತಿಳಿವಳಿಕೆ. ಭಾಷೆಯ ಬಗ್ಗೆ ಪ್ರೀತಿಯುಳ್ಳ ಎಲ್ಲರೂ ವ್ಯಾಕರಣ ವನ್ನು ತಿಳಿಯುವುದು ಅಗತ್ಯ. ನಮ್ಮ ದೇಹದ ಹೊರ ಆಕಾರವನ್ನು ಭಾಷೆ ಎಂದು ಕರೆಯುವುದಾದರೆ, ಒಳಗಿನ ಅಂಗಾಂಗಗಳ ರಚನೆಯೇ ವ್ಯಾಕರಣವಾಗಿದೆ.

ಭಾಷೆಯೊಂದರ ಪ್ರಾಯೋಗಿಕ ವಿಶ್ಲೇಷಣೆಯೇ ವ್ಯಾಕರಣ ಎಂದು ತಜ್ಞರು ಹೇಳಿದ್ದಾರೆ. ಈ ಮಾತಿನಂತೆ, ಯಾವುದೇ ಒಂದು ಭಾಷೆಯನ್ನು ಪ್ರಾಯೋಗಿಕವಾಗಿ (ವೈಜ್ಞಾನಿಕವಾಗಿ) ವಿಶ್ಲೇಷಿಸುವುದು ಸಾಧ್ಯವಿದೆ ಹಾಗೂ ಆ ವಿಶ್ಲೇಷಣೆಯೇ ವ್ಯಾಕರಣ. ಅಂದರೆ, ವ್ಯಾಕರಣವು ಒಂದು ಭಾಷೆಯಲ್ಲಿ ಪದಗಳನ್ನು ಪ್ರಯೋಗಿಸುವ ರೀತಿನೀತಿಗಳನ್ನು ಪ್ರಾಯೋಗಿಕವಾಗಿ ಹೇಳುವ ಶಾಸ್ತ್ರವಾಗಿದೆ.

ಮನಸ್ಸಿನ ಭಾವನೆಗಳನ್ನು ಅಭಿವ್ಯಕ್ತಿಸಲು ಭಾಷೆಯನ್ನು ಮಾಧ್ಯಮವನ್ನಾಗಿ ಉಪಯೋಗಿಸುತ್ತೇವೆ. ಭಾವನೆಗಳನ್ನು ವ್ಯವಸ್ಥಿತ ರೂಪಕ್ಕೆ ತರುವಲ್ಲಿ ವ್ಯಾಕರಣ ಮಹತ್ವದ ಪಾತ್ರ ವಹಿಸುತ್ತದೆ.

ವ್ಯಾಕರಣವನ್ನು ಪ್ರೌಢ ಹಂತದಲ್ಲಿ ಕಲಿಸಿದರಾಯಿತು; ಶಾಲೆಗಳಲ್ಲಿ ವ್ಯಾಕರಣ ಬೋಧನೆಯ ಅವಶ್ಯಕತೆ ಇದೆಯೇ ಎಂದು ಪ್ರಶ್ನಿಸುವವರೂ ಇದ್ದಾರೆ. ಪ್ರಾಥಮಿಕ ಹಂತದಲ್ಲಿ ವ್ಯಾಕರಣ ಕಲಿಯದೆ ಹೋದರೆ, ಭಾಷಾ ಕಲಿಕೆಯ ತಳಹದಿಯೇ ದುರ್ಬಲಗೊಳ್ಳುತ್ತದೆ. ವ್ಯಾಕರಣದ ಪ್ರಾಥಮಿಕ ಸಂಗತಿಗಳನ್ನು ಶಾಲೆ ಗಳಲ್ಲಿಯೇ ಪರಿಚಯಿಸಿಕೊಳ್ಳುವುದು ಅಗತ್ಯ. ಕನ್ನಡವನ್ನು ಕಲಿಸುವ ಭಾಷಾ ಶಿಕ್ಷಕ, ತರಗತಿಯಲ್ಲಿ ಪಠ್ಯದಲ್ಲಿನ ವ್ಯಾಕರಣದ ಸಂಗತಿಗಳನ್ನು ಪರಿಚಯಿಸಿದರಷ್ಟೇ ಸಾಲದು; ಪ್ರತ್ಯೇಕವಾಗಿ ವ್ಯಾಕರಣ ಬೋಧನೆಯನ್ನೂ ಮಾಡಬೇಕು.

ಭಾಷಾ ಬೋಧನೆ ಉಳಿದೆಲ್ಲಾ ವಿಷಯಗಳ ಬೋಧನೆಯಂತಲ್ಲ. ಇಲ್ಲಿ ಭಾಷೆಯೇ ಪ್ರಧಾನವಾಗಿರುವುದರಿಂದ, ಭಾಷಾ ಬೋಧಕ ಮಕ್ಕಳಲ್ಲಿ ಭಾಷಾ ಬೆಳವಣಿಗೆಯ ಕಡೆಗೆ ಹೆಚ್ಚು ಒತ್ತು ನೀಡಬೇಕಾಗುತ್ತದೆ. ಭಾಷೆಯಲ್ಲಿ ಬರುವ ಅಕ್ಷರ, ಪದ, ವಾಕ್ಯ, ಧ್ವನಿ ಮುಂತಾದವುಗಳನ್ನು ಪ್ರಾಯೋಗಿಕವಾಗಿ (ಮಾತನಾಡಲು ಮತ್ತು ಬರೆಯಲು) ಕಲಿಸುವುದರ ಕಡೆಗೆ ಗಮನವನ್ನು ನೀಡಬೇಕಾಗುತ್ತದೆ. ಅಲ್ಲದೆ, ಮಕ್ಕಳ ಭಾವಕೋಶದ ಪೋಷಣೆಗೆ ಮತ್ತು ಅವರ ಬರವಣಿಗೆಯಲ್ಲಿ, ಓದುಗಾರಿಕೆಯಲ್ಲಿ ಪರಿಣಾಮಕಾರಿಯಾದ ಬದಲಾವಣೆಯನ್ನು ತರಬೇಕಾದರೆ ವ್ಯಾಕರಣದ ನೆರವು ಅಗತ್ಯ.

ಮಕ್ಕಳಿಗೆ ಪ್ರತ್ಯೇಕವಾಗಿ ವ್ಯಾಕರಣ ಬೋಧನೆ ಮಾಡುವುದರಿಂದ ಸಾಕಷ್ಟು ಪ್ರಯೋಜನಗಳಿವೆ. ವ್ಯಾಕರಣ ಕಲಿಸುವುದರಿಂದ ಮಕ್ಕಳ ಭಾಷಾಭ್ಯಾಸಕ್ಕೆ ಮತ್ತು ಭಾಷಾ ಬೆಳವಣಿಗೆಗೆ ನೀರೆರೆದಂತಾಗುತ್ತದೆ. ಮಕ್ಕಳು ಬರೆಯುವುದನ್ನು ವ್ಯಾಕರಣಬದ್ಧವಾಗಿ ಬರೆಯಲು ಪ್ರೋತ್ಸಾಹಿಸಿದಂತಾಗುತ್ತದೆ. ಎಳೆಯರಲ್ಲಿ ಉತ್ತಮ ಮಾತುಗಾರಿಕೆಯನ್ನು ರೂಪಿಸಲು, ಉಚ್ಚಾರಣೆಯಲ್ಲಿರುವ ತಪ್ಪುಗಳನ್ನು ಪರಿಹರಿಸಲು ಸಾಧ್ಯವಾಗುತ್ತದೆ. ಭಾಷಾ ವಿಷಯದಲ್ಲಿ ಹೆಚ್ಚು ಅಂಕಗಳನ್ನು ತೆಗೆಯಲೂ ವ್ಯಾಕರಣದ ಕಲಿಕೆ ಪೂರಕವಾದುದು. ಮಕ್ಕಳಲ್ಲಿ ಸೃಜನಶೀಲತೆಯನ್ನು ಬೆಳೆಸುವ ಹಾಗೂ ಶಬ್ದ– ವಾಕ್ಯ ರಚನೆಯ ಕೌಶಲದ ಬೆಳವಣಿಗೆಯೂ ವ್ಯಾಕರಣದಿಂದ ಸಾಧ್ಯವಾಗುತ್ತದೆ.

ಮಕ್ಕಳಿಗೆ ವ್ಯಾಕರಣವನ್ನು ಕಲಿಸುವುದು, ಭಾಷಾ ಬೋಧಕರಿಗೆ ಬೋಧನೆಯಲ್ಲಿ ಸಂತೃಪ್ತಿ ಹೆಚ್ಚಿಸುವ ಸಂಗತಿಗಳಲ್ಲೊಂದು. ಹಳಗನ್ನಡದ ಕೃತಿಗಳನ್ನು ಅರ್ಥಪೂರ್ಣವಾಗಿ ವಾಚಿಸಲು ವ್ಯಾಕರಣದ ಕೌಶಲ ಬೇಕೇ ಬೇಕು. ಹೊಸ ತಲೆಮಾರು ಪ್ರಾಚೀನ ಕನ್ನಡ ಪಠ್ಯಗಳಿಂದ ದೂರವಾಗಿರುವುದಕ್ಕೆ, ಅವರಿಗಿರುವ ವ್ಯಾಕರಣ ಜ್ಞಾನದ ಕೊರತೆಯೇ ಕಾರಣವಾಗಿದೆ.

ಕನ್ನಡವನ್ನು ಒಂದು ಭಾಷೆಯಾಗಿ ಕಲಿಸುವುದು ಭಾಷಾ ಶಿಕ್ಷಕರ ಪಾಲಿಗೆ ಬರೀ ಶೈಕ್ಷಣಿಕ ಚಟುವಟಿಕೆ ಅಥವಾ ಕರ್ತವ್ಯವಾಗಿಯಷ್ಟೇ ಈಗ ಉಳಿದಿಲ್ಲ. ಕನ್ನಡದ ಅಕ್ಷರಗಳನ್ನು ಮಕ್ಕಳ ಎದೆಯಲ್ಲಿ ಅಕ್ಕರೆಯಿಂದ ಬಿತ್ತುವುದು ಬದ್ಧತೆಯೂ ಹೌದು. ಹಿಂದಿ ಮತ್ತು ಇಂಗ್ಲಿಷ್ ನಡುವೆ ಬಸವಳಿಯುತ್ತಿರುವ ಕನ್ನಡಕ್ಕೆ ತ್ರಾಣ ತುಂಬುವಲ್ಲಿ ‘ಕನ್ನಡ ಶಿಕ್ಷಕ’ರ ಪಾತ್ರ ಮಹತ್ವದ್ದು.

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Praveen Kulkarni. Editorial Office: 75, Mahatma Gandhi Road, Bengaluru-560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete. All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ಒಂದು ಕಾಲದ 'ಕ್ರಿಕೆಟ್ ದೈತ್ಯ' ಇಂದು ಟೆಸ್ಟ್, ಏಕದಿನದಲ್ಲಿ ದುರ್ಬಲ

ಅವನತಿಯತ್ತ ವೆಸ್ಟ್ ಇಂಡೀಸ್ ಕ್ರಿಕೆಟ್

1979ರಲ್ಲಿ ಏಕದಿನ ವಿಶ್ವಕಪ್ ಗೆದ್ದಾಗ ವೆಸ್ಟ್ ಇಂಡೀಸ್ ತಂಡದ ದಿಗ್ಗಜ ಆಟಗಾರರ ಸಂಭ್ರಮ

ಒಂದು ಕಾಲದಲ್ಲಿ ಟೆಸ್ಟ್ ಮತ್ತು ಏಕದಿನ ಕ್ರಿಕೆಟ್ ಮಾದರಿಗಳಲ್ಲಿ 'ದೈತ್ಯ ಶಕ್ತಿ'ಯಾಗಿ ಜಾಗತಿಕ ಕ್ರಿಕೆಟ್‌ನ ಅನಭಿಷಿಕ್ತ ದೊರೆಯಾಗಿ ಮೆರೆದಿದ್ದ ವೆಸ್ಟ್ ಇಂಡೀಸ್ ತಂಡ ಈಗ ಈ ಎರಡೂ ಮಾದರಿಗಳಲ್ಲಿ ತಳ ಕಾಣುತ್ತಿದೆ. ಇತ್ತೀಚೆಗೆ ಆಸ್ಟ್ರೇಲಿಯಾ ವಿರುದ್ಧದ ಟೆಸ್ಟ್‌ನಲ್ಲಿ ಕೇವಲ 27 ರನ್‌ಗಳಿಗೆ ಎಲ್ಲ ವಿಕೆಟ್‌ಗಳನ್ನು ಕಳೆದುಕೊಂಡಿದ್ದು, ವೆಸ್ಟ್ ಇಂಡೀಸ್‌ನ ಈಗಿನ ದೈನ್ಯ ಸ್ಥಿತಿಗೆ ಕನ್ನಡಿ ಹಿಡಿಯುತ್ತಿದೆ. ಹಲವು ಸಾರ್ವಕಾಲಿಕ ಶ್ರೇಷ್ಠ ಕ್ರಿಕೆಟಿಗರನ್ನು ಹುಟ್ಟುಹಾಕಿದ್ದ ಕೆರಿಬಿಯನ್ ನಾಡಿನ ಕ್ರಿಕೆಟ್ ಅವನತಿಯತ್ತ ಸಾಗುತ್ತಿರುವಂತೆ ಕಾಣುತ್ತಿದೆ

ಬ್ರಯನ್ ಲಾರಾ

• ನಾಗೇಶ್ ಶೆಣೈ

ಅನಪೇಕ್ಷಿತ ಕಾರಣಗಳಿಂದಾಗಿಯೇ ವೆಸ್ಟ್ ಇಂಡೀಸ್ ಕ್ರಿಕೆಟ್ ತಂಡ ಇತ್ತೀಚಿನ ದಿನಗಳಲ್ಲಿ ಸುದ್ದಿಯಾಗುತ್ತಿದೆ. ಅದು ಸಾಗುತ್ತಿರುವ ಅವನತಿಯ ಹಾದಿ ಕ್ರಿಕೆಟ್ ಪ್ರೇಮಿಗಳಲ್ಲಿ ಮರುಕ ಮೂಡಿಸುತ್ತಿದೆ. ಕೆರಿಬಿಯನ್ ಅಧಃಪತನದ ಬಗ್ಗೆ ಸಾಕಷ್ಟು ವಿಮರ್ಶೆ, ವಿಶ್ಲೇಷಣೆಗಳೂ ನಡೆದಿವೆ. 2023ರ ಜೂನ್-ಜುಲೈನಲ್ಲಿ ಹರಾರೆಯಲ್ಲಿ ನಡೆದಿದ್ದ ಏಕದಿನ ವಿಶ್ವಕಪ್ ಟೂರ್ನಿಯ ಅರ್ಹತಾ ಸುತ್ತಿನಲ್ಲಿ ನೆದರ್ಲೆಂಡ್ಸ್, ಜಿಂಬಾಬ್ವೆ ತಂಡಗಳೆದುರು, ಕೊನೆಗೆ ಸ್ಕಾಟ್ಲೆಂಡ್ ವಿರುದ್ಧವೂ ಸೋಲುತ್ತ, ವಿಶ್ವಕಪ್‌ನಲ್ಲಿ ಎರಡು ಬಾರಿಯ ಚಾಂಪಿಯನ್, ಒಮ್ಮೆ ರನ್ನರ್ ಅಪ್ ಆಗಿದ್ದ ತಂಡ ಹೊರಬಿದ್ದಾಗ ಅಭಿಮಾನಿಗಳು ವ್ಯಥೆಪಟ್ಟಿದ್ದರು.

ಈಗ ಟೆಸ್ಟ್ ಇತಿಹಾಸದಲ್ಲಿ ಎರಡನೇ ಅತಿ ಕಡಿಮೆ ಮೊತ್ತಕ್ಕೆ- ಕೇವಲ 27 ರನ್‌ಗಳಿಗೆ ಉರುಳಿರುವುದು ತಂಡಕ್ಕೆ ಮುಖಭಂಗ ಉಂಟುಮಾಡಿದೆ. ನ್ಯೂಜಿಲೆಂಡ್ (26) ಮಾತ್ರ ಅದಕ್ಕಿಂತ ಕಡಿಮೆ ಮೊತ್ತಕ್ಕೆ ಆಲೌಟ್ ಆಗಿತ್ತು. ಕಳೆದ ಭಾನುವಾರ ರಾತ್ರಿ ವೆಸ್ಟ್ ಇಂಡೀಸ್ ತಂಡಕ್ಕೆ ಒಂದು ಇನಿಂಗ್ಸ್‌ನಲ್ಲಿ 15 ಪೂರ್ಣ ಓವರುಗಳನ್ನೂ ಆಡಲಾಗಲಿಲ್ಲ ಎನ್ನುವುದು ದುರಂತ. ಜಮೈಕಾದ ಸಬೀನಾ ಪಾರ್ಕ್‌ನಲ್ಲಿ ನಡೆದ ಹಗಲು ರಾತ್ರಿ ಟೆಸ್ಟ್‌ನ ಮೂರನೇ ದಿನ ವೆಸ್ಟ್ ಇಂಡೀಸ್ ಪಾಲಿಗೆ ದುಃಸ್ವಪ್ನವಾಯಿತು. ನೂರನೇ ಟೆಸ್ಟ್‌ನಲ್ಲಿ ಅತಿ ವೇಗದ [illegible] ಪಡೆದು ಮಿಂಚಿದ ಮಿಚೆಲ್ ಸ್ಟಾರ್ಕ್ (9ಕ್ಕೆ6), ಹ್ಯಾಟ್ರಿಕ್ ಸಾಧಿಸಿದ ಸ್ಕಾಟ್ ಬೋಲ್ಯಾಂಡ್ (2ಕ್ಕೆ3) ವೇಗದ ದಾಳಿಗೆ ವೆಸ್ಟ್ ಇಂಡೀಸ್ ಆಟಗಾರರು ತರಗೆಲೆಗಳಂತೆ ಉದುರಿದರು. ಫ್ರಾಂಕ್ ವೊರೆಲ್ ಟ್ರೋಫಿ ಸರಣಿಯಲ್ಲಿ ಆತಿಥೇಯ ತಂಡವನ್ನು ತವರು ನೆಲದಲ್ಲೇ ಆಸ್ಟ್ರೇಲಿಯಾ ತಂಡ 3-0ಯಿಂದ ಹೊಸಕಿಹಾಕಿದ ರೀತಿ ಅದು ಸಾಗಿರುವ ಅವನತಿಯ ಹಾದಿಗೆ ಕನ್ನಡಿ.

ದೈತ್ಯ ಶಕ್ತಿ: ವೆಸ್ಟ್ ಇಂಡೀಸ್ ಕ್ರಿಕೆಟ್ ಎಂದಾಕ್ಷಣ 'ದೈತ್ಯರು' ಎಂಬ ವಿಶೇಷಣ ಬಳಸುವುದು ಸಾಮಾನ್ಯವಾಗಿತ್ತು. ದೈಹಿಕವಾಗಿ ಮಾತ್ರವಲ್ಲ, ತಮ್ಮ ಆಟದ ಬಲದಿಂದಲೂ ಅವರು ಈ ಆಟದಲ್ಲಿ ದೈತ್ಯಶಕ್ತಿಯೇ ಆಗಿದ್ದರು. ಆದರೆ ಅದು ಗತವೈಭವವಾಗಿ ದಶಕಗಳೇ ಉರುಳಿವೆ. ತಂಡ ಹಲವು ಕಾರಣಗಳಿಂದಾಗಿ ನಿಶ್ಶಕ್ತಗೊಳ್ಳುತ್ತಾ ಸಾಗಿದೆ.

ಆರಂಭ ಆಟಗಾರರಾದ ಗಾರ್ಡನ್ ಗ್ರೀನಿಜ್, ಡೆಸ್ಮಂಡ್ ಹೇನ್ಸ್, ಮಧ್ಯಮ ಕ್ರಮಾಂಕದಲ್ಲಿ ಲ್ಯಾರಿ ಗೋಮ್ಸ್, ವಿವಿಯನ್ ರಿಚರ್ಡ್ಸ್, ಕ್ಲೈವ್ ಲಾಯ್ಡ್, ಆಲ್ವಿನ್ ಕಾಳಿಚರಣ್, ಡೆರೆಕ್ ಮರ್ರೆ, ಜೆಫ್ ಡ್ಯುಜಾನ್ (ವಿಕೆಟ್ ಕೀಪರ್), ವೇಗದ ಪಡೆಯಲ್ಲಿ ಮಾಲ್ಕಂ ಮಾರ್ಷಲ್, ಮೈಕೆಲ್ ಹೋಲ್ಡಿಂಗ್, ಜೋಲ್ ಗಾರ್ನರ್, ಆಂಡಿ ರಾಬರ್ಟ್ಸ್, ಕಾಲಿನ್ ಕ್ರಾಫ್ಟ್ ಅವರನ್ನು ಒಳಗೊಂಡ ತಂಡ ಏಕದಿನದಂತೆ ಟೆಸ್ಟ್ ಕ್ರಿಕೆಟ್‌ನಲ್ಲೂ ವಿಶ್ವವಿಜೇತವಾಗಿತ್ತು. ಅವರಿಗಿಂತ ಹಿಂದೆ ರೋಹನ್ ಕನ್ಹಾಯ್, ಗ್ಯಾರಿ ಸೋಬರ್ಸ್, ಸ್ಪಿನ್ನರ್ ಲ್ಯಾನ್ಸ್ ಗಿಬ್ಸ್ ತಂಡದ ಹೆಸರನ್ನು ಬೆಳಗಿದ್ದರು. 1984ರಿಂದ 1986ರ ಅವಧಿಯಲ್ಲಿ ವೆಸ್ಟ್ ಇಂಡೀಸ್ ಸತತ 11 ಟೆಸ್ಟ್ ಸರಣಿಗಳನ್ನು ಗೆದ್ದಿತ್ತು. ಸತತ 27 ಟೆಸ್ಟ್‌ಗಳಲ್ಲಿ ಸೋಲೇ ಕಂಡಿರಲಿಲ್ಲ.

40ನೇ ವಯಸ್ಸಿನವರೆಗೆ ಆಡಿದ ಲಾಯ್ಡ್ ಸಮರ್ಥ ನಾಯಕರಾಗಿ ಹೆಸರು ಮಾಡಿದವರು. ವಿವಿಯನ್ ರಿಚರ್ಡ್ಸ್ ಯಾವುದೇ ದಾಳಿಯನ್ನು ದಂಡಿಸಬಲ್ಲ ದೈತ್ಯ ಆಟಗಾರ. ಟಿ20 ಕ್ರಿಕೆಟ್ ಹುಟ್ಟುವ ಸುಮಾರು 20 ವರ್ಷ ಮೊದಲೇ ಟೆಸ್ಟ್ ಕ್ರಿಕೆಟ್‌ನಲ್ಲಿ ಅತಿ ವೇಗದ ಶತಕ (1986ರಲ್ಲಿ ಇಂಗ್ಲೆಂಡ್ ವಿರುದ್ಧ 56 ಎಸೆತಗಳಲ್ಲಿ) ಸಿಡಿಸಿದ್ದು ಅಂದಿನ ದಿನಗಳಲ್ಲಿ ಗಮನ ಸೆಳೆದಿತ್ತು. ಬ್ರೆಂಡನ್ ಮೆಕ್ಕಲಂ ಅದನ್ನು ಮುರಿಯುವ ಮೊದಲು 30 ವರ್ಷ ಆ ದಾಖಲೆ ಉಳಿದಿತ್ತು.

ಕೆರೀಬಿಯನ್ ನಾಡಿನಲ್ಲಿ ನಂತರದ ವರ್ಷಗಳಲ್ಲಿ ತಾರಾ ವರ್ಚಸ್ಸಿನ ಆಟಗಾರರು ಆ ಪ್ರಮಾಣದಲ್ಲಿ ಮೂಡಲಿಲ್ಲ. ಅವರ ಸಂಖ್ಯೆ ಕಡಿಮೆಯಾಗತೊಡಗಿತು. ಆರಂಭ ಆಟಗಾರ ಬ್ರಯನ್ ಲಾರಾ ದಾಖಲೆಗಳನ್ನು ಸ್ಥಾಪಿಸಿದರು. ಪ್ರಥಮ ದರ್ಜೆಯಲ್ಲಿ ಅಜೇಯ 501, ಟೆಸ್ಟ್ ಕ್ರಿಕೆಟ್‌ನಲ್ಲಿ ಅಜೇಯ 400 ರನ್ ಈಗಲೂ ದಾಖಲೆಯಾಗಿ ಉಳಿದಿವೆ. ಕೆಲಕಾಲ ಅವರನ್ನು ಸಚಿನ್ ತೆಂಡೂಲ್ಕರ್ ಅವರಿಗೆ ಹೋಲಿಕೆ ಮಾಡಲಾಗಿತ್ತು. ಲಾರಾ ತಮ್ಮ ಸಾಹಸದಿಂದಲೇ ಕೆಲವು ಪಂದ್ಯಗಳನ್ನು ಗೆಲ್ಲಿಸಿಕೊಟ್ಟರು. ಬ್ಯಾಟರ್‌ಗಳಾದ ರಿಚಿ ರಿಚರ್ಡ್‌ಸನ್, ಶಿವನಾರಾಯಣ ಚಂದ್ರಪಾಲ್, ಜಿಮ್ಮಿ ಆ್ಯಡಮ್ಸ್, ಕ್ರಿಸ್ ಗೇಲ್, ಬೌಲರ್‌ಗಳಾದ ಕೋರ್ಟ್ನಿ ವಾಲ್ಶ್, ಕರ್ಟ್ಲಿ ಆ್ಯಂಬ್ರೋಸ್, ಇಯಾನ್ ಬಿಷಪ್, ಆಲ್‌ರೌಂಡರ್‌ಗಳಾದ ರೋಜರ್ ಹಾರ್ಪರ್, ಕಾರ್ಲ್ ಹೂಪರ್, ರೋಲಂಡ್ ಹೋಲ್ಡರ್, ಡ್ಯಾರೆನ್ ಸಮಿ, ಕ್ರೇಗ್ ಬ್ರಾಥ್‌ವೇಟ್ ಹೀಗೆ ವಿವಿಧ ಅವಧಿಗಳಲ್ಲಿ ಪ್ರಮುಖ ಕ್ರಿಕೆಟಿಗರು ಮೂಡಿದರು. ಈಗ ನಿಕೋಲಸ್ ಪೂರನ್, ಶಾಯ್ ಹೋಪ್, ಕೆಮಾರ್ ರೋಚ್ ಅಂಥ ಆಟಗಾರರು ಟಿ20 ಕ್ರಿಕೆಟ್‌ನತ್ತ ಹೆಚ್ಚು ಆಸಕ್ತಿ ತೋರುತ್ತಿದ್ದಾರೆ. ಪೂರನ್ 29ನೇ ವಯಸ್ಸಿಗೇ ಅಂತರರಾಷ್ಟ್ರೀಯ ಕ್ರಿಕೆಟ್‌ಗೆ ವಿದಾಯ ಹೇಳಿದ್ದು, ಫ್ರಾಂಚೈಸಿ ಕ್ರಿಕೆಟ್‌ನತ್ತ ಗಮನಹರಿಸಲು.

ಹೆಚ್ಚಿನ ಆಟಗಾರರು ಟಿ20ಗೆ ಹೆಚ್ಚಿನ ಒತ್ತು ನೀಡಿದ ಪರಿಣಾಮ ವೆಸ್ಟ್ ಇಂಡೀಸ್ ಎರಡು ಬಾರಿ ಚುಟುಕು ಕ್ರಿಕೆಟ್‌ನಲ್ಲಿ ವಿಶ್ವ ಚಾಂಪಿಯನ್ ಆಯಿತು. ಆದರೆ ಇತರ ಎರಡು ಮಾದರಿಗಳಲ್ಲಿ ಇನ್ನಷ್ಟು ಹಿನ್ನಡೆ ಕಾಣುತ್ತ ಹೋಯಿತು.

ನಿರೀಕ್ಷಿತವೇ ಆಗಿದ್ದ ಹಿನ್ನಡೆ: ವೆಸ್ಟ್ಇಂಡೀಸ್ ಟೆಸ್ಟ್‌ನಲ್ಲಿ ಹಿನ್ನಡೆ ಸಾಧಿಸುತ್ತಿರುವುದು ಅಂಕಿ ಅಂಶಗಳಿಂದ ಮನದಟ್ಟಾಗುತ್ತದೆ. ಅದು 2000ದಿಂದ ಈಚೆಗೆ ಆಡಿರುವ 87 ಟೆಸ್ಟ್‌ಗಳಲ್ಲಿ ಗೆದ್ದಿರುವುದು 23ರಲ್ಲಿ ಮಾತ್ರ. ಇವುಗಳಲ್ಲಿ ಬಹುತೇಕ ಗೆಲುವು ಜಿಂಬಾಬ್ವೆ, ಬಾಂಗ್ಲಾದೇಶ ಮತ್ತು ಅಫ್ಘಾನಿಸ್ತಾನ ವಿರುದ್ಧ ದಾಖಲಾಗಿತ್ತು.

ಇನ್ನು ಹಾಲಿ ಸರಣಿಯ ಕಡೆ ಗಮನಹರಿಸಿದರೆ, ಬೌಲರ್‌ಗಳಿಗೆ ನೆರವಾಗುತ್ತಿದ್ದ ಪಿಚ್‌ನಲ್ಲಿ ಆಸ್ಟ್ರೇಲಿಯಾ ತಂಡ ಅನುಭವಿಗಳಿಂದ ಕೂಡಿತ್ತು. ರ್‍ಯಾಂಕಿಂಗ್‌ನಲ್ಲಿ ಆಸ್ಟ್ರೇಲಿಯಾ ತಂಡ ಮೊದಲ ಸ್ಥಾನಲ್ಲಿದ್ದರೆ, ವೆಸ್ಟ್ ಇಂಡೀಸ್ ಎಂಟನೇ ಸ್ಥಾನದಲ್ಲಿದೆ. ಕಾಂಗರೂ ಪಡೆಯ ನಾಲ್ವರು ಪ್ರಮುಖ ಬ್ಯಾಟರ್‌ಗಳು (ಸ್ಟೀವ್ ಸ್ಮಿತ್, ಟ್ರಾವಿಸ್ ಹೆಡ್, ಅಲೆಕ್ಸ್ ಕ್ಯಾರಿ ಮತ್ತು ಉಸ್ಮಾನ್ ಖ್ವಾಜಾ) ಅಗ್ರ 20ರಲ್ಲಿದ್ದರು. ವೆಸ್ಟ್ ಇಂಡೀಸ್ ತಂಡದಲ್ಲಿ ಒಬ್ಬ ಬ್ಯಾಟರ್ ಸಹ ಅಗ್ರ 50ರಲ್ಲಿರಲಿಲ್ಲ.

ಬೌಲರ್‌ಗಳಲ್ಲಿ ಆಸ್ಟ್ರೇಲಿಯಾದ ಮಿಚೆಲ್ ಸ್ಟಾರ್ಕ್, ಪ್ಯಾಟ್ ಕಮಿನ್ಸ್ ತಮ್ಮ ನಡುವೆ 700 ವಿಕೆಟ್ ಹಂಚಿಕೊಂಡವರು. ವೆಸ್ಟ್ ಇಂಡೀಸ್ ಬೌಲರ್‌ಗಳ ಪೈಕಿ ಅಲ್ಜಾರಿ ಜೋಸೆಫ್ ಮಾತ್ರ ನೂರಕ್ಕಿಂತ ಹೆಚ್ಚು ವಿಕೆಟ್ ಪಡೆದವರು. ಟೆಸ್ಟ್ ರ್‍ಯಾಂಕಿಂಗ್ ಅಗ್ರ 10ರಲ್ಲಿ ಆಸ್ಟ್ರೇಲಿಯಾದ ನಾಲ್ಕು ಮಂದಿ ಇಲ್ಲಿ ಆಡಿದ್ದರು. ವೆಸ್ಟ್ ಇಂಡೀಸ್‌ನ ಒಬ್ಬ ಬೌಲರ್ ಕೂಡ ಅಗ್ರ 10ರಲ್ಲಿ ಇರಲಿಲ್ಲ. ಜೇಡನ್ ಸೀಲ್ಸ್ 11ನೇ ಕ್ರಮಾಂಕ ಹೊಂದಿದ್ದರು. (ಜುಲೈ 12ರ ಐಸಿಸಿ ರ್‍ಯಾಂಕಿಂಗ್ ಪ್ರಕಾರ).

ಹೀಗಾಗಿ, ಆಸ್ಟ್ರೇಲಿಯಾ ತಂಡ ಬಲಾಢ್ಯವೇ ಆಗಿತ್ತು. ಆದರೆ ವೆಸ್ಟ್ ಇಂಡೀಸ್ ಇಷ್ಟು ಹೀನಾಯ ಸೋಲಿಗೆ ಒಳಗಾಗಲು ಎದುರಾಳಿಗಳ ಪರಿಣಾಮಕಾರಿ ಬೌಲಿಂಗ್ ಜೊತೆಗೆ, ಅದರ ಕೆಟ್ಟ ಬ್ಯಾಟಿಂಗ್‌ನ ಕೊಡುಗೆಯೂ ಇದೆ. ಅಗ್ರ ಬ್ಯಾಟರ್‌ಗಳು ಪರೇಡ್ ಮಾಡಿದ ನಂತರ, ಬೌಲರ್‌ಗಳಾದ ಅಲ್ಜಾರಿ ಜೋಸೆಫ್ ಮತ್ತು ಜಸ್ಟಿನ್ ಗ್ರೀವ್ಸ್ ಕ್ರಮವಾಗಿ 24 ಮತ್ತು 28 ಎಸೆತಗಳನ್ನು ಆಡಿದ್ದರು. ಇದೂ ಅಗ್ರ ಆಟಗಾರರ ವೈಫಲ್ಯ ತೋರಿಸುತ್ತದೆ.

ವೆಸ್ಟ್ ಇಂಡೀಸ್ ಕ್ರಿಕೆಟ್‌ಗೆ ಕಾಯಕಲ್ಪ ಆಗಬೇಕಾಗಿದೆ. ಟೆಸ್ಟ್, ಏಕದಿನ ಕ್ರಿಕೆಟ್ ಬೆಳೆಯಲು ಪೂರಕ ವಾತಾವರಣ ನಿರ್ಮಿಸಬೇಕಾಗಿದೆ. ತಂಡಕ್ಕೆ ಸ್ಫೂರ್ತಿಯುತ ನಾಯಕತ್ವದ ಜೊತೆಗೆ, ದೇಶಕ್ಕೆ ಆಡುವಂತೆ ಪ್ರತಿಭಾನ್ವಿತ ಆಟಗಾರರ ಮನವೊಲಿಸಬೇಕಾಗಿದೆ. ಆಟಗಾರರ ಅಶಿಸ್ತಿನ ವಿರುದ್ಧವೂ ಕ್ರಮ ಕೈಗೊಳ್ಳಬೇಕಾಗಿದೆ. ಇದೆಲ್ಲದರ ಜೊತೆ ಆಟಗಾರರ ಸಂಭಾವನೆ ಹೆಚ್ಚಿಸುವುದು ಮಂಡಳಿಯ ಮುಂದಿರುವ ದೊಡ್ಡ ಸವಾಲು. ದೇಶದ ದಿಗ್ಗಜ ಆಟಗಾರರನ್ನು ಒಳಗೊಳ್ಳುವತ್ತ ಮಂಡಳಿ ಈಗ ಹೆಜ್ಜೆಯಿಟ್ಟಿರುವುದು ಒಳ್ಳೆಯ ಬೆಳವಣಿಗೆ. ❖

ಕಾರಣಗಳೇನು?

ವೆಸ್ಟ್ ಇಂಡೀಸ್ ಕ್ರಿಕೆಟ್ ಸೊರಗಿಹೋಗಲು ಪ್ರಮುಖ ಕಾರಣಗಳು– ಹೇರಳ ಹಣ, ಜನಪ್ರಿಯತೆ ತಂದುಕೊಡುವ ಟಿ20 ಫ್ರಾಂಚೈಸಿ ಲೀಗ್‌ನತ್ತ ಹೆಚ್ಚಿದ ಆಕರ್ಷಣೆ, ಹಿಂದಿನ ತಲೆಮಾರುಗಳಿಗೆ ಹೋಲಿಸಿದಲ್ಲಿ ಕೆರೀಬಿಯನ್ ನಾಡಿನಲ್ಲಿ ಕ್ರಿಕೆಟ್ ಆಸಕ್ತಿ, ಅಭಿಮಾನ ಕಡಿಮೆಯಾಗಿರುವುದು, ಕ್ರಿಕೆಟ್ ಪ್ರೇಮಿಗಳನ್ನು ಸೆಳೆಯುವಂಥ ತಾರಾ ಆಟಗಾರರ ಕೊರತೆ, ತಂಡ ವಿವಿಧ ದ್ವೀಪಗಳಲ್ಲಿ ಹಂಚಿಹೋಗಿರುವುದು, ಮಂಡಳಿ ಆರ್ಥಿಕವಾಗಿ ದುರ್ಬಲವಾಗಿರುವುದು... ಇದರಿಂದಾಗಿ ಏಕದಿನ ಕ್ರಿಕೆಟ್ ಮತ್ತು ಟೆಸ್ಟ್ ಕ್ರಿಕೆಟ್ ನಿಶ್ಶಕ್ತವಾಗುತ್ತ ಸಾಗಿದೆ. ಮಂಡಳಿಗೆ ಆಟಗಾರರ ಮೇಲೆ ಹಿಡಿತವಿಲ್ಲ. ವೆಸ್ಟ್ ಇಂಡೀಸ್‌ನಲ್ಲಿ ಈ ಆಟದ ಜನಪ್ರಿಯತೆ ಕಡಿಮೆಯಾದ ಮೇಲೆ ಹಣಕಾಸು ಹರಿವೂ ಕ್ಷೀಣವಾಗತೊಡಗಿದೆ. ಇದರಿಂದಾಗಿ ಬೇರೆ ದೇಶಗಳ ತಂಡಗಳು ಪ್ರವಾಸ ಮಾಡುವುದು ಕಡಿಮೆಯಾಗಿದೆ.

ದಿಗ್ಗಜರ ಕಡೆ ಮುಖ...

ತಂಡದ ಹಿನ್ನಡೆಯಿಂದ ಕಂಗಾಲಾಗಿರುವ ಆಯ್ಕೆ ಸಮಿತಿ, ಈ ಹಿಂದೆ ತಂಡದ ಸುವರ್ಣ ಯುಗ ಕಂಡಿದ್ದ ದಿಗ್ಗಜ ಆಟಗಾರರ ಮೊರೆಹೋಗಿದೆ. ಕ್ಲೈವ್ ಲಾಯ್ಡ್, ವಿವಿಯನ್ ರಿಚರ್ಡ್ಸ್ ಮತ್ತು ಬ್ರಯನ್ ಲಾರಾ ಅವರ ನೆರವು ಕೋರಿದೆ. ಪರಿವರ್ತನೆಯ ಹಾದಿಯಲ್ಲಿರುವ ತಂಡವನ್ನು ಉತ್ತಮಗೊಳಿಸಲು ಎಲ್ಲರೂ ಸೇರಿ ಯೋಜನೆ ರೂಪಿಸಲಿದ್ದಾರೆ ಎಂದು ಅಧ್ಯಕ್ಷ ಕಿಶೋರ್ ಶಾಲೊ ಹೇಳಿದ್ದಾರೆ.

ಮಾಜಿ ಆರಂಭ ಆಟಗಾರ ಡೆಸ್ಮಂಡ್ ಹೇನ್ಸ್ ಮುಖ್ಯಸ್ಥರಾಗಿರುವ ಆಯ್ಕೆ ಸಮಿತಿಯಲ್ಲಿ ಶಿವನಾರಾಯಣ ಚಂದ್ರಪಾಲ್ ಅವರೂ ಇದ್ದಾರೆ.

ಸಂಕಷ್ಟದಿಂದ ತಂಡವನ್ನು ಮೇಲೆತ್ತಲು ಹೊಣೆ ಈಗ ದಿಗ್ಗಜರ ಮೇಲಿದೆ.



ವಿವಿಯನ್ ರಿಚರ್ಡ್ಸ್ | ಕ್ಲೈವ್ ಲಾಯ್ಡ್

ಪ್ರಜಾವಾಣಿ- ಡೆಕ್ಕನ್ ಹೆರಾಲ್ಡ್ ನೆರವು ನಿಧಿ

ಎಸ್‌ಎಸ್‌ಎಲ್‌ಸಿಯಲ್ಲಿ ಪಾಸಾಗಿರುವ ಬಡ ವಿದ್ಯಾರ್ಥಿಗಳಿಗೆ ದಾನಿಗಳ ನೆರವಿನಿಂದ ಪ್ರಜಾವಾಣಿ–ಡೆಕ್ಕನ್ ಹೆರಾಲ್ಡ್ ಪತ್ರಿಕೆಗಳು ಆರ್ಥಿಕ ನೆರವು ನೀಡಲಿವೆ. ಇದಕ್ಕಾಗಿ ದಾನಿಗಳು ಆನ್‌ಲೈನ್ ಮೂಲಕ ಹಣವನ್ನು 'Deccan Herald-Prajavani relief Trust'ಗೆ ಕಳುಹಿಸಬಹುದು. ದಾನಿಗಳು ಹೆಸರು, ವಿಳಾಸ, ಮೊಬೈಲ್ ಸಂಖ್ಯೆ, ಆಧಾರ್/ಪ್ಯಾನ್ ಕಾರ್ಡ್ ಪ್ರತಿಯನ್ನು dept.finc@printersmysore.co.inಗೆ ಮೇಲ್ ಕಳುಹಿಸಿ.

₹ 5,000ಕ್ಕಿಂತ ಹೆಚ್ಚು ಹಣ ನೀಡುವವರ ಹೆಸರನ್ನು ಪತ್ರಿಕೆಗಳಲ್ಲಿ ಪ್ರಕಟಿಸಲಾಗುವುದು. ಸೆಕ್ಷನ್ 80 ಜಿ ಅನ್ವಯ ಆದಾಯ ತೆರಿಗೆ ವಿನಾಯಿತಿ ಇದೆ.

ಆನ್‌ಲೈನ್‌ನಲ್ಲಿ ಹಣ ಸಂದಾಯ ಮಾಡುವವರು ಪಕ್ಕದಲ್ಲಿರುವ ಕೋಡ್ ಸ್ಕ್ಯಾನ್ ಮಾಡಿ ಅಥವಾ ಲಿಂಕ್ ಬಳಸಿ https://bit.ly/3xFpoz4

ಅರ್ಹ ವಿದ್ಯಾರ್ಥಿಗಳಿಂದ ಅರ್ಜಿ ಆಹ್ವಾನ

2025ನೇ ಸಾಲಿನ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಹೆಚ್ಚು ಅಂಕ ಗಳಿಸಿದ ಸಾಮಾಜಿಕ ಹಾಗೂ ಆರ್ಥಿಕವಾಗಿ ಹಿಂದುಳಿದ ವಿದ್ಯಾರ್ಥಿಗಳು ಅರ್ಜಿ ಸಲ್ಲಿಸಬಹುದು. ಅರ್ಜಿ ಜೊತೆಗೆ ಆಧಾರ್, ಮೊಬೈಲ್ ಸಂಖ್ಯೆ, ಬ್ಯಾಂಕ್ ವಿಳಾಸ ಮತ್ತು ಐಎಸ್‌ಎಫ್‌ಸಿ ಕೋಡ್ ಇರುವ ಬ್ಯಾಂಕ್ ಪಾಸ್‌ಬುಕ್ ಪುಟದ ಪ್ರತಿ ಅಥವಾ ಚೆಕ್ ಹಾಳೆಯ ಪ್ರತಿಯನ್ನು ಕಡ್ಡಾಯವಾಗಿ ಸಲ್ಲಿಸಬೇಕು. ಲಕೋಟೆಯ ಮೇಲೆ **ಶೈಕ್ಷಣಿಕ ನೆರವಿಗೆ ಅರ್ಜಿ** ಎಂದು ಸ್ಪಷ್ಟವಾಗಿ ಬರೆದಿರಬೇಕು.

ಯಾವ ಕಾರಣಕ್ಕೆ ತಮಗೆ ಶೈಕ್ಷಣಿಕ ನಿಧಿಯ ಅವಶ್ಯಕತೆಯಿದೆ ಎಂದು ವಿದ್ಯಾರ್ಥಿಯು ವಿವರವನ್ನು ಸ್ವಬರಹದಲ್ಲಿ ನೀಡಬೇಕು.

ವಿಳಾಸ: ಮ್ಯಾನೇಜರ್, ಡೆಕ್ಕನ್‌ಹೆರಾಲ್ಡ್– ಪ್ರಜಾವಾಣಿ ಪರಿಹಾರ ಟ್ರಸ್ಟ್, ನಂ. 75, ಮಹಾತ್ಮಗಾಂಧಿ ರಸ್ತೆ, ಬೆಂಗಳೂರು – 560001

ರಾಷ್ಟ್ರೀಯ

ಆದಾಯ ತೆರಿಗೆ ಮಸೂದೆ

ಆರೋಪಿಗಳ ಜಾಲತಾಣ ಖಾತೆ ಪರಿಶೀಲನೆಗೆ ಅನುಮತಿ

ಪ್ರಜಾವಾಣಿ ವಾರ್ತೆ

ನವದೆಹಲಿ: ಸಂಸತ್ತಿನ ಆಯ್ಕೆ ಸಮಿತಿಯು ಯಾವುದೇ ಮಹತ್ವದ ಬದಲಾವಣೆಗಳನ್ನು ಮಾಡದೆಯೇ ಪ್ರಸ್ತಾವಿತ ಆದಾಯ ತೆರಿಗೆ ಮಸೂದೆ, 2025 ಅನ್ನು ಬುಧವಾರ ಅನುಮೋದಿಸಿದೆ ಎಂದು ತಿಳಿದು ಬಂದಿದೆ.

ವಿವಿಧ ಕಾರಣಗಳಿಗಾಗಿ ಶೋಧ ಅಥವಾ ಜಪ್ತಿ ಕ್ರಮ ಎದುರಿಸುತ್ತಿರುವ ತೆರಿಗೆದಾರರ, ವಾಟ್ಸ್‌ಆ್ಯಪ್ ಸೇರಿ ವಿವಿಧ ಸಾಮಾಜಿಕ ಮಾಧ್ಯಮಗಳ ಖಾತೆಗಳನ್ನು ಆದಾಯ ತೆರಿಗೆ ಇಲಾಖೆ ಅಧಿಕಾರಿಗಳು ಪರಿಶೀಲಿಸಲು ಅನುಮತಿ ನೀಡುವ ಅವಕಾಶವನ್ನು ಈ ಮಸೂದೆ ಒಳಗೊಂಡಿದೆ. ಇದು ಭಾರಿ ವಿವಾದಕ್ಕೆ ಕಾರಣವಾಗಿತ್ತು. ಆದರೆ, ಮಸೂದೆಯಲ್ಲಿನ ಈ ಅವಕಾಶದಲ್ಲಿ ಕೂಡ ಸಮಿತಿಯು ಬದಲಾವಣೆ ಮಾಡಿಲ್ಲ ಎನ್ನಲಾಗಿದೆ.

ಮಸೂದೆಯನ್ನು ಫೆಬ್ರುವರಿ 13ರಂದು ಲೋಕಸಭೆಯಲ್ಲಿ ಮಂಡಿಸಲಾಗಿತ್ತು. ಈಗ, ಮಸೂದೆ ಕುರಿತ ವರದಿಗೆ ಬಿಜೆಪಿ ಸಂಸದ ಬೈಜಯಂತ ಪಾಂಡಾ ನೇತೃತ್ವದ ಸಂಸದೀಯ ಆಯ್ಕೆ ಸಮಿತಿಯು ಸರ್ವಾನುಮತದ ಒಪ್ಪಿಗೆ ನೀಡಿದೆ ಎಂದು ಮೂಲಗಳು ಹೇಳಿವೆ.

ಇದೇ 21ರಿಂದ ಆರಂಭವಾಗಲಿರುವ ಸಂಸತ್‌ನ ಮುಂಗಾರು ಅಧಿವೇಶನದಲ್ಲಿ ಈ ಮಸೂದೆ ಮಂಡನೆಗೆ ದಾರಿ ಸುಗಮವಾದಂತಾಗಿದೆ. ಸಮಿತಿಯು ಅಧಿವೇಶನದ ಮೊದಲ ದಿನವೇ ಮಸೂದೆ ಮಂಡಿಸುವ ಸಾಧ್ಯತೆ ಇದ್ದು, ಅಂಗೀಕಾರವೂ ದೊರೆಯುವ ನಿರೀಕ್ಷೆ ಇದೆ.

ನೂತನ ಆದಾಯ ತೆರಿಗೆ ಕಾಯ್ದೆಯನ್ನು ಮುಂದಿನ ವರ್ಷ ಏಪ್ರಿಲ್ 1ರಿಂದ ಜಾರಿಗೊಳಿಸಲು ಕೇಂದ್ರ ಸರ್ಕಾರ ಉದ್ದೇಶಿಸಿದೆ. ಸದ್ಯ ಜಾರಿಯಲ್ಲಿರುವ ಆದಾಯ ತೆರಿಗೆ ಕಾಯ್ದೆ–1961, ಈವರೆಗೆ 65 ಬಾರಿ ತಿದ್ದುಪಡಿ ಮಾಡಿ ನಾಲ್ಕು ಸಾವಿರಕ್ಕೂ ಹೆಚ್ಚು ಬದಲಾವಣೆಗಳನ್ನು ಮಾಡಲಾಗಿದೆ.

'ಸಮಿತಿಯು 285 ಸಲಹೆಗಳನ್ನು ನೀಡಿದೆ. ಒಟ್ಟಾರೆ ಕಾಯ್ದೆಯ ರಚನೆಯಲ್ಲಿ ಯಾವುದೇ ಬದಲಾವಣೆ ಮಾಡಿಲ್ಲ. ಅವಕಾಶಗಳಲ್ಲಿನ ಬದಲಾವಣೆಗಳು ತಾಂತ್ರಿಕ ಸ್ವರೂಪದವುಗಳು. ಹಣಕಾಸು ಸಚಿವಾಲಯ ಕೂಡ ಸಮಿತಿ ನೀಡಿರುವ ಬಹುತೇಕ ಎಲ್ಲ ಸಲಹೆಗಳನ್ನು ಒಪ್ಪಿಕೊಂಡಿದೆ' ಎಂದು ಸಮಿತಿ ಸದಸ್ಯರಾಗಿರುವ ಸಂಸದರೊಬ್ಬರು ತಿಳಿಸಿದ್ದಾರೆ.

ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ 9606038256

ಪಹಲ್ಗಾಮ್ ಭಯೋತ್ಪಾದನಾ ದಾಳಿಗೆ ಪ್ರತೀಕಾರವಾಗಿ ಭಾರತವು ಪಾಕಿಸ್ತಾನದ ವಿರುದ್ಧ ಕೈಗೊಂಡಿದ್ದ 'ಆಪರೇಷನ್ ಸಿಂಧೂರ' ನಂತರ ನಡೆದಿದ್ದ ಸೇನಾ ಸಂಘರ್ಷದಲ್ಲಿ ಭಾರತ ಮೂರು ರಫೇಲ್ ಯುದ್ಧ ವಿಮಾನಗಳನ್ನು ಕಳೆದುಕೊಂಡಿದೆ ಎಂದು ವಿದೇಶಾಂಗ ವ್ಯವಹಾರಗಳ ಸಚಿವ ಎಸ್.ಜೈಶಂಕರ್ ಅವರು ಹೇಳಿದ್ದಾರೆ ಎನ್ನಲಾದ ವಿಡಿಯೊ ತುಣುಕೊಂದು ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತಿದೆ. ಆದರೆ, ಇದು ಸುಳ್ಳು.

ವಿಡಿಯೊ ತುಣುಕಿನ ಕೀ ಫ್ರೇಮ್ ಒಂದನ್ನು ಗೂಗಲ್ ಲೆನ್ಸ್‌ನಲ್ಲಿ ಹಾಕಿ ಹುಡುಕಿದಾಗ ಹಲವರು ಇದೇ ಪೋಸ್ಟ್ ಹಂಚಿಕೊಂಡಿರುವುದು ಕಂಡು ಬಂತು. ಜೈಶಂಕರ್ ಅವರು ಈ ಹೇಳಿಕೆ ನೀಡಿದ್ದಾರೆಯೇ ಎಂದು ಪರಿಶೀಲಿಸಲು ನಿರ್ದಿಷ್ಟ ಪದಗಳನ್ನು ಬಳಸಿಕೊಂಡು ಗೂಗಲ್‌ನಲ್ಲಿ ಹುಡುಕಾಡಿದಾಗ, ಅದನ್ನು ದೃಢಪಡಿಸುವಂತಹ ನಂಬಲರ್ಹ ವರದಿಗಳು ಸಿಗಲಿಲ್ಲ. ಮತ್ತೆ ಕೀ ಫ್ರೇಮ್‌ಗಳನ್ನು ಗೂಗಲ್ ಲೆನ್ಸ್‌ನಲ್ಲಿ ಹಾಕಿದಾಗ ಅಮೆರಿಕದ ನಿಯತಕಾಲಿಕವಾದ ನ್ಯೂಸ್‌ವೀಕ್ ತನ್ನ ಯೂಟ್ಯೂಬ್ ಚಾನೆಲ್‌ನಲ್ಲಿ ಜುಲೈ 1ರಂದು ಪ್ರಕಟಿಸಿದ ವಿಡಿಯೊ ಸಿಕ್ಕಿತು. ಇದು ಜಾಲತಾಣಗಳಲ್ಲಿ ಹಂಚಿಕೆಯಾಗುತ್ತಿರುವ ವಿಡಿಯೊವನ್ನೇ ಹೋಲುತ್ತಿತ್ತು. ಹಾಗಾಗಿ, ವಿಡಿಯೊವನ್ನು ಕೂಲಂಕಷ ಪರಿಶೀಲನೆಗೆ ಒಳಪಡಿಸಲಾಯಿತು. ವಿಡಿಯೊದ 43.05ನೇ ನಿಮಿಷದಲ್ಲಿ ಜೈಶಂಕರ್ ಅವರು 'ಪಾಕಿಸ್ತಾನದವರು ಆ ರಾತ್ರಿ ನಮ್ಮ ಮೇಲೆ ಭಾರಿ ಪ್ರಮಾಣದಲ್ಲಿ ದಾಳಿ ಮಾಡಿದರು. ಆ ಬಳಿಕ ನಾವು ಕ್ಷಿಪ್ರವಾಗಿ ಪ್ರತಿದಾಳಿ ನಡೆಸಿದೆವು. ಮರು ದಿನ ಬೆಳಿಗ್ಗೆ ರುಬಿಯೋ (ಅಮೆರಿಕ ವಿದೇಶಾಂಗ ಕಾರ್ಯದರ್ಶಿ) ನನಗೆ ಕರೆ ಮಾಡಿ, ಪಾಕಿಸ್ತಾನವರು ಮಾತುಕತೆಗೆ ಸಿದ್ಧರಿದ್ದಾರೆ ಎಂದು ಹೇಳಿದರು' ಎನ್ನುವುದು ವಿಡಿಯೊದಲ್ಲಿದೆ. ಭಾರತ ರಫೇಲ್ ಯುದ್ಧವಿಮಾನಗಳನ್ನು ಕಳೆದುಕೊಂಡಿದೆ ಎಂದು ಅವರೆಲ್ಲೂ ಹೇಳಿಲ್ಲ. ಜಾಲತಾಣಗಳಲ್ಲಿ ಹರಿದಾಡುತ್ತಿರುವ ವಿಡಿಯೊದಲ್ಲಿರುವ ಜೈಶಂಕರ್ ಅವರ ಧ್ವನಿಯನ್ನು ಪರಿಶೀಲಿಸುವುದಕ್ಕಾಗಿ ಎಐ ಆಧಾರಿತ ಟೂಲ್ ಬಳಸಲಾಯಿತು. ಅವರ ಧ್ವನಿಯನ್ನು ಎಡಿಟ್ ಮಾಡಿರುವುದು ಅದರಲ್ಲಿ ದೃಢಪಟ್ಟಿತು. ಜೈಶಂಕರ್ ಅವರ ಧ್ವನಿಯನ್ನು ಡಿಜಿಟಲ್ ರೂಪದಲ್ಲಿ ತಿರುಚಿ ಈ ವಿಡಿಯೊ ಪೋಸ್ಟ್ ಮಾಡಲಾಗಿದೆ ಎಂದು ಪಿಟಿಐ ಫ್ಯಾಕ್ಟ್ ಚೆಕ್ ತಿಳಿಸಿದೆ.

ನುಡಿ ಬೆಳಗು

ಪಿ.ಚಂದ್ರಿಕಾ

ವಿವೇಕವೆಂದರೆ

ಗುರುವನ್ನು ಶಿಷ್ಯ ಕೇಳಿದ, 'ನಿನ್ನೆ ನೀವು ವಿವೇಕದ ಬಗ್ಗೆ ದಿನವಿಡೀ ಉಪನ್ಯಾಸವನ್ನು ಕೊಟ್ಟಿರಿ. ಆದರೆ ಅದು ಹೇಗೆ ದಕ್ಕುತ್ತದೆ ಎನ್ನುವುದನ್ನು ಹೇಳಲೇ ಇಲ್ಲ' ಎಂದನು. ಗುರು ಅವನ ಕಡೆಗೆ ನೋಡಿ, 'ನಿನ್ನೆ ನನ್ನ ಮಾತುಗಳನ್ನು ಪೂರ್ಣ ಕೇಳಿಸಿಕೊಂಡೆಯಾ' ಎಂದ. ಶಿಷ್ಯನು ಗುರು ಹೇಳಿದ ಕಥೆಯ ಸಮೇತ ವಿಷಯಗಳನ್ನು ಹೇಳತೊಡಗಿದ. ಗುರು, 'ಇಷ್ಟೆಲ್ಲಾ ನೆನಪಿಟ್ಟುಕೊಳ್ಳುವ ನಿನಗೆ ಅದನ್ನು ಅರ್ಥ ಮಾಡಿಕೊಳ್ಳಲು ಆಗಲಿಲ್ಲವೇ? ಹಾಗಾದರೆ ಇಷ್ಟು ದಿನ ನಿನಗೆ ನಾನೇನು ಹೇಳಿದೆ ಎಂದು ಗೊತ್ತೇ ಆಗಲಿಲ್ಲವೇ' ಎಂದ ವಿಷಾದದಿಂದ. 'ಗಮನ ಇಟ್ಟು ಕೇಳಿದೆ, ಯೋಚಿಸಿದೆ ಆದರೆ ವಿವೇಕವನ್ನು ಪಡೆದುಕೊಳ್ಳುವುದು ಹೇಗೆಂದು ಗೊತ್ತೇ ಆಗಲಿಲ್ಲ' ಎಂದು ಉತ್ತರಿಸಿದ. ಶಿಷ್ಯನ ಸಮಸ್ಯೆ ಏನೆಂದು ಗುರುವಿಗೆ ಅರ್ಥವಾಯಿತು. ಮೊದಲಿಗೆ ತಾನು ಹೇಳಲಿ ಎಂದು ಬಯಸಿದ, ಈಗ ಗೊತ್ತಾಗಲಿಲ್ಲ ಎನ್ನುತ್ತಿದ್ದಾನೆ ಇವನಿಗೆ ಅರ್ಥ ಮಾಡಿಸಲಿಕ್ಕೆ ಬೇರೆಯದ್ದೇ ದಾರಿ ಬೇಕು ಎಂದು ನಿರ್ಧರಿಸಿದ.

ಗುರು, ರಸ್ತೆ ಬದಿಯಲ್ಲಿ ಬೆಳೆದಿದ್ದ ಆಲದ ಮರದ ಬಳಿಗೆ ಶಿಷ್ಯನನ್ನು ಕರೆದುಕೊಂಡು ಹೋಗಿ ನಿಲ್ಲಿಸಿದ. ಅದು ಎಕರೆಗಟ್ಟಲೆ ಜಾಗದಲ್ಲಿ ಬೆಳೆದು ಬಿಳಲುಗಳನ್ನು ಬಿಟ್ಟು, ಬಿಟ್ಟ ಬಿಳಲುಗಳನ್ನೇ ಆಧಾರ ಮಾಡಿಕೊಂಡು ಬೆಳೆದು, ಬೇರು ಬಿಟ್ಟು ಮತ್ತೆ ಕೊಂಬೆಗಳಲ್ಲಿ ಕಣ್ಣಾಗಿ ಚಿಗುರುತ್ತಿತ್ತು. ಆದರೆ, ರಸ್ತೆಯ ಕಡೆ ಬಿಳಲುಗಳನ್ನು ಮೊಟಕು ಗೊಳಿಸಿ ಕೊಂಬೆಗಳನ್ನು ಚಾಚದೆ ಉಳಿದಿತ್ತು. 'ಈ ಮರವನ್ನು ನೋಡಿದರೆ ಏನನ್ನಿಸುತ್ತದೆ' ಎಂದು ಕೇಳಿದ ಗುರು. ಅದಕ್ಕೆ ಶಿಷ್ಯ ಮರವನ್ನು ಗಮನಿಸುತ್ತಾ 'ಅರೆ ಇದೇಕೆ ಹಿಂದೆಲ್ಲಾ ಬೆಳೆದು ಮುಂದೆ ಮಾತ್ರ ಬಿಳಲನ್ನು ಬಿಡದೆ ಹೋಗಿದೆ? ರಸ್ತೆಯನ್ನು ದಾಟಿ ಮುಂದೆಯೂ ಬೇಕಾದಷ್ಟು ಜಾಗವಿದೆಯಲ್ಲವೇ' ಎಂದ. ಗುರು ನಕ್ಕ, 'ಅದು ಅದರ ವಿವೇಕ'. ಈಗ ಶಿಷ್ಯನಿಗೆ ನಿಜಕ್ಕೂ ಕೋಪ ಬಂತು, 'ಗುರುವೇ ನನ್ನನ್ನು ಅಣಕಿಸುತ್ತಿರುವೆಯಾ? ಮರಕ್ಕೆಂಥಾ ವಿವೇಕ' ಎಂದು ಪ್ರಶ್ನಿಸಿದ. ಗುರು ಶಿಷ್ಯನ ಕಡೆಗೆ ನೋಡಿ ನಗುತ್ತಾ, 'ಮರಕ್ಕೆ ವಿವೇಕವಿಲ್ಲ ಅಂತಾ ನೀನು ಹೇಗೆ ತೀರ್ಮಾನಿಸುವೆ? ಅದು ತನಗೆ ಬೇಕಾದ ಸುರಕ್ಷಿತವಾದ ಜಾಗವನ್ನು ಹೇಗೆ ಹುಡುಕಿಕೊಂಡಿದೆ ನೋಡು. ಜಾಗವಿದ್ದರೂ ರಸ್ತೆಯ ಬದಿಯನ್ನು ದಾಟಿ ತನ್ನ ಬಿಳಲನ್ನು ಬಿಟ್ಟರೆ ಓಡಾಡುವ ಜನ ಸುಮ್ಮನಿರುತ್ತಾರೆಯೇ? ಚಿವುಟುತ್ತಾರೆ, ಆಕಸ್ಮಾತ್ ಕಣ್ತಪ್ಪಿ ಸ್ವಲ್ಪ ಬೆಳೆದರೂ ಅದನ್ನು ಕೊಡಲಿಯಿಂದ ಕಡಿಯುತ್ತಾರೆ. ಇಷ್ಟಾಗಿಯೂ ಓಡಾಡುವ ಜನಕ್ಕೆ ತೊಂದರೆಯೂ ಆಗಬಾರದಲ್ಲವೇ? ಹೀಗೆ ಯಾರಿಗೂ ಕೇಡನ್ನು ಮಾಡದೆ, ಜನ ಓಡಾಡದ ಜಾಗದಲ್ಲಿ ಬಿಳಲು ಬಿಟ್ಟು ದೊಡ್ಡದಾಗುತ್ತಾ ತಾನು ಬೆಳೆಯಬಹುದಾದ ವಿಸ್ತೀರ್ಣವನ್ನು ತಾನೇ ಗುರುತಿಸಿಕೊಳ್ಳುತ್ತಿದೆ. ತಾನು ಬೆಳೆದು ಪಶು ಪಕ್ಷಿಗಳಿಗೂ ಆಶ್ರಯ ಕೊಡುತ್ತದೆ' ಎಂದ.

'ವಿವೇಕ ಎನ್ನುವುದು ಯಾರೋ ಹೇಳಿದರೆ ದಕ್ಕುವುದಲ್ಲ. ಅದು ನಾವು ಗಳಿಸಿಕೊಳ್ಳಬೇಕಾದ ಸಂಗತಿ. ಒಂದು ಮರಕ್ಕೆ ತಾನು ಹೇಗೆ ಇರಬೇಕೆಂದು ಯಾರೂ ತಿಳಿಸಿಕೊಡುವುದಿಲ್ಲ. ತಾನು ನಿಂತ ನೆಲದ ಒಳಿತನ್ನು ಕೆಡಿಸದ ಹಾಗೆ ಬೆಳೆಯುವುದು ಹೇಗೆ ಎಂದು ಅದಕ್ಕೆ ಗೊತ್ತಾಗುತ್ತದೆ ಎಂದ ಮೇಲೆ ಮನುಷ್ಯನಿಗೆ ಯಾಕೆ ಅರ್ಥವಾಗುವುದಿಲ್ಲ? ಮೊದಲು ನಿನ್ನ ಸುತ್ತ ಏನು ನಡೆಯುತ್ತಿದೆ ಎಂದು ಕಣ್ಣು ಮನಸ್ಸನ್ನು ಬಿಟ್ಟು ನೋಡು. ಯಾರಿಗೂ ಕೆಡುಕಾಗದ ಹಾಗೆ ಹೇಗೆ ನಡೆದುಕೊಳ್ಳಬೇಕು, ಪ್ರತಿಕ್ರಿಯಿಸಬೇಕು ಎಂದು ತೀರ್ಮಾನಿಸು. ಅದೇ ವಿವೇಕ' ಎಂದ ಗುರು.

ನಿಜ. ಪ್ರಕೃತಿ ಒಂದು ಮರಕ್ಕೆ ಇಷ್ಟೆಲ್ಲಾ ವಿವೇಕ ವಿವೇಚನೆ ಕೊಟ್ಟಿರುವಾಗ, ಮನುಷ್ಯರಾದ ನಮಗೂ ಅಷ್ಟೇ ಕೊಟ್ಟಿರುತ್ತದೆ ಅಲ್ಲವೆ? ಜಗತ್ತನ್ನು ಕೇಡಿಲ್ಲದ ಸ್ಥಿತಿಯಲ್ಲಿ ಅರ್ಥ ಮಾಡಿಕೊಂಡರೆ ಅದೇ ವಿವೇಕ. ❖

ಪದಬಂಧ 6106

ವಿದ್ಯಾ ವಿನಯ್



ಎಡದಿಂದ ಬಲಕ್ಕೆ

1.ಸಾಧಕನಿಗುಂಟಾದ ಅಡ್ಡಿ! (3)
3.ಕೊನೆಗೆ ಬೆಲೆಯಿಟ್ಟಾಗಲೇ ಮಡಿಕೆ ಕಂಡೀತು (3)
5.ಪದಾತಿ ಹತ್ತಿರವಿರುವ ಗಂಡ (2)
6.ತರ್ಕ ಮಾಡುತ್ತಿರುವ ವ್ಯಾಪಾರಿ (3)
7.ನೆನಪಲ್ಲೇ ಇರುವ ಕಾರಣ (2)
9.ವಸತಿ ಹತ್ತಿರ ಕಾಣಿಸಿದ ತರುಣಿ (3)
10.ತಾಂಬೂಲವಿಲ್ಲಿ ಉಲ್ಟಾಪಲ್ಟಾ ಆಗಿದೆ (3)
11.ಹರಕೆ ಹೊತ್ತಿರುವವನ ಮೆಟ್ಟು (2)
13.ಹೆಣ್ಣಿಗೆ ಬೇಕಾಗಿರುವ ಬಾಚಣಿಕೆ (3)
15.ಮಾವನ ಮರ್ಯಾದೆ! (2)
16.ಪೈರು ಕೊಯ್ಯುವುದು (3)
17.ಲೋಭಿ ಇಲ್ಲಿದ್ದಾನೆ (3)

ಮೇಲಿಂದ ಕೆಳಕ್ಕೆ

1.ಹೆರಿಗೆಯಾದ ಹೆಂಗಸು (3)
2.ಕಕ್ಕಾಬಿಕ್ಕಿಯಾಗಿ ನಿಂತಿರುವ ಪೆದ್ದ! (3)
3.ಪದ ಹೇಳಿದ್ದಕ್ಕೆ ಬಹುಮಾನವಾಗಿ ಸಿಕ್ಕ ಬಿಲ್ಲೆ (3)
4.ಸಾಗಿಸುವಿಕೆಗೊಂದು ಪರ್ಯಾಯ ಪದ (3)
5.ಹಿಂದಿನಿಂದ ಉಳಿದು ಬಂದ ಪ್ರಾಣಿ ಪಕ್ಷಿಗಳ ಅವಶೇಷ (5)
8.ವಿದ್ಯಾರ್ಹತೆಯ ಪ್ರಶಸ್ತಿಯನ್ನು ನೀಡುವುದು (5)
12.ಈತ ಕಾಪಾಡುವವನು (3)
13.ಧಾನ್ಯಗಳನ್ನು ತುಂಬಿಡುವ ಕಣಜ (3)
14.ಮರಮಟ್ಟುಗಳನ್ನು ತಿಂದು ಮಣ್ಣುಮಾಡುವ ಹುಳು (3)
15.ತಿಂಗಳಿಗೊಮ್ಮೆ ಜರುಗುವಂಥದ್ದು (3)

6105ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:

1.ಗುಂಗು 3.ಒನಕೆ
5.ರಿಕಂಪು 7.ರುಗ್ಣಾಲಯ
9.ಅರಣ್ಯ 10.ಬಹಳ
11.ಯಮದೂತ 13.ಕಪಟ
15.ರಸಿಕ 16.ರುಜು

ಮೇಲಿಂದ ಕೆಳಕ್ಕೆ:

2.ಗುಜರಿ 3.ಒನಪು
4.ಕೆಸರು 6.ಕಾರುಣ್ಯ
8.ಯಮಳ 9.ಅಳಿಯ
10.ಬಳಪ 12.ತಸ್ಕರ
13.ಕಣಕ 14.ಟಗರು

ಸುಡೊಕು 6490

ಆಡುವುದು ಹೀಗೆ: ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

		1		7		6		2
			2		9			
2	8			1			9	5
	5		7		4	8		
				8		5		9
8		6	5					4
6				5		9		7
	7		1	3			5	
5		3		6		1		8

6489 ಸುಡೊಕು

9	2	1	6	5	7	8	4	3
8	5	7	3	4	9	6	2	1
6	4	3	2	1	8	9	5	7
1	3	2	5	9	4	7	8	6
5	8	6	1	7	2	3	9	4
7	9	4	8	3	6	2	1	5
3	1	8	9	6	5	4	7	2
2	7	5	4	8	3	1	6	9
4	6	9	7	2	1	5	3	8

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ, ಕಮ್ಮರಡಿ

17 ಜುಲೈ 2025 ಗುರುವಾರ, ಶ್ರೀ ವಿಶ್ವಾವಸು ನಾಮ ಸಂವತ್ಸರ ದಕ್ಷಿಣಾಯನ ಗ್ರೀಷ್ಮ ಋತು ತಿಥಿ: ಆಷಾಢ ಕೃಷ್ಣ ಸಪ್ತಮಿ ಗಂ. 19-10 ನಕ್ಷತ್ರ: ರೇವತಿ ಗಂ. 27-39 ಯೋಗ: ಅತಿಗಂಡ ಗಂ. 9-29 ಕರಣ: ವಿಷ್ಟಿ ಗಂ. 8-08, ಕರ್ಕಾಟಕ ಮಾಸದ 01 ನೇ ದಿನ. ಮಳೆ ನಕ್ಷತ್ರ : ಪುನರ್ವಸು 4 ನೇ ಪಾದ. ರಾಹುಕಾಲ : ಮಧ್ಯಾಹ್ನ 01-30– 03-00, ಸೂರ್ಯೋದಯ : 06-16 ಸೂರ್ಯಾಸ್ತ : 06-58 ಮುಸ್ಲಿಂ ದಿನಾಂಕ : 21 ಮೊಹರಮ್ ದಿನ ವಿಶೇಷ : ದಕ್ಷಿಣಾಯನ ಪುಣ್ಯಕಾಲ, ಅದೃಷ್ಟ ಸಂಖ್ಯೆ : 2, 9

ಮೇಷ: ನಿಶ್ಚಿತ ಗುರಿ ಸಾಧಿಸಲು ಬಹಳ ಶ್ರಮಪಡಬೇಕಾಗಿಲ್ಲ. ಸಾಮಾಜಿಕ ಕ್ಷೇತ್ರಕ್ಕೆ ನೀಡಿರುವ ಕೊಡುಗೆಯು ಎಲ್ಲರ ಪ್ರಶಂಸೆಗೆ ಪಾತ್ರವಾಗುತ್ತದೆ. ತಂದೆ-ತಾಯಿಯ ಆರೋಗ್ಯದ ಬಗ್ಗೆ ಕಾಳಜಿವಹಿಸುವುದು ಅತ್ಯಗತ್ಯ

ವೃಷಭ: ಯಂತ್ರೋಪಕರಣಗಳ ಮಾರಾಟ, ಪಶು ಸಂಗೋಪನೆಯಿಂದ ಹೆಚ್ಚಿನ ಲಾಭ. ಜೀವನದ ಅಭಿವೃದ್ಧಿಗೆ ಬೇಕಾದ ಕಾರ್ಯ ಮುಂದುವರಿಯಲಿದೆ. ಕೆಲಸದ ಅನ್ವೇಷಣೆಯಲ್ಲಿರುವವರಿಗೆ ಶುಭ ಫಲಗಳು ಲಭಿಸುವುದು.

ಮಿಥುನ: ಸ್ವಯಂ ಉದ್ಯೋಗಿಗಳಿಗೆ ಶ್ರಮಕ್ಕೆ ತಕ್ಕ ಪ್ರತಿಫಲವಿರುವುದು. ರಾಜಕೀಯ ವಿಷಯಗಳಲ್ಲಿ ಮೌನ ವಹಿಸುವುದು ಅತ್ಯಂತ ಲೇಸು. ಉದ್ವೇಗಕ್ಕೆ ಒಳಗಾಗದಿರಿ. ವಿದ್ಯಾರ್ಥಿಗಳಿಗೆ ವಿದ್ಯಾಭ್ಯಾಸಕ್ಕೆ ಹೆಚ್ಚಿನ ಪ್ರೋತ್ಸಾಹ ಸಿಗುವುದು.

ಕರ್ಕಾಟಕ: ಮನೆಯಲ್ಲಿ ಅಹಿತಕರ ಘಟನೆ ನಡೆಯುವ ಸೂಚನೆ ಕಾಣಿಸಬಹುದು. ತಾಳ್ಮೆಯಿಂದ ನಿಮ್ಮ ಹಾದಿ ಸುಗಮವಾಗಿ ಸಾಗುತ್ತದೆ. ದುರ್ಗಾಪರಮೇಶ್ವರಿಯ ಆರಾಧನೆಯು ನಿಮಗೆ ಶಾಂತಿದಾಯಕವಾಗಿರುತ್ತದೆ.

ಸಿಂಹ: ಆರ್ಥಿಕತೆ ಮತ್ತು ಆರೋಗ್ಯದ ವಿಷಯದಲ್ಲಿ ಹೆಚ್ಚಿನ ನೆಮ್ಮದಿಯನ್ನು ನೀವು ಈ ದಿನ ಅಪೇಕ್ಷಿಸಬಹುದು. ಶನಿಯು ಪ್ರವಾಸದಿಂದ ಪ್ರಯಾಸ ಪಡಿಸುತ್ತಾನೆ. ಧಾರ್ಮಿಕ ಚಿಂತನೆಯನ್ನು ಮುಂದುವರಿಸಿ.

ಕನ್ಯಾ: ಗುರು-ಹಿರಿಯರ ಅನುಗ್ರಹದಿಂದ, ನಿಮ್ಮ ಶಾಂತಿಯುತ ಸ್ವಭಾವದಿಂದ ನೆಮ್ಮದಿ ಕಾಣುವಿರಿ. ನ್ಯಾಯಾಲಯದಲ್ಲಿ ಜಯ ಪ್ರಾಪ್ತಿಯಾಗುವುದು ಹಾಗೆಯೇ ಸರ್ಕಾರಿ ಕಛೇರಿಯಲ್ಲಿ ನಿಮ್ಮಿಷ್ಟದಂತೆ ಕೆಲಸ-ಕಾರ್ಯಗಳು ಆಗುತ್ತವೆ.

ತುಲಾ: ವಿದ್ಯಾರ್ಥಿಗಳಿಗೆ ಪರಿಶ್ರಮ ಅಗತ್ಯವಾಗುವುದು. ಹೂವು-ಹಣ್ಣು ಮಾರಾಟಗಾರರಿಗೆ ಲಾಭವು ದುಪ್ಪಟ್ಟಾಗಲಿದೆ. ಹೊಸ ಪರಿವರ್ತನೆ ನಿಮ್ಮ ಬಾಳಲ್ಲಿ ಬರಲಿದೆ. ಬಿಳಿ ಬಣ್ಣ ಶುಭವನ್ನು ಉಂಟುಮಾಡಲಿದೆ.

ವೃಶ್ಚಿಕ: ಸಮಸ್ಯೆಯ ಗೋಪುರವನ್ನು ಹೊತ್ತಿರುವ ನಿಮಗೆ ಹಂತಹಂತವಾಗಿ ಪರಿಹಾರ ದೊರಕಲಿದೆ. ನೂತನ ಮನೆ ನಿರ್ಮಾಣ ಅಥವಾ ನಿವೇಶನಗಳ ಖರೀದಿಗೆ ಪೂರಕವಾದ ವಾತಾವರಣ ಸ್ನೇಹಿತರಿಂದ ಸಿಗಲಿದೆ.

ಧನು: ಸರ್ಕಾರಿ ನೌಕರರಿಗೆ ವರ್ಗಾವಣೆಯ ಯೋಗವಿದೆ. ಲೋಹದ ಕಾರ್ಖಾನೆಯವರು, ಚಿನ್ನಾಭರಣ ವ್ಯಾಪಾರಿಗಳು ಅಧಿಕ ಲಾಭವನ್ನು ಹೊಂದುವಿರಿ. ಬದುಕಿನ ಬಗ್ಗೆ ಸರಿಯಾದ ಮಾರ್ಗದರ್ಶನ ದೊರೆಯಲಿದೆ.

ಮಕರ: ಗ್ರಹದ ಫಲಗಳು ಅನುಕೂಲಕರವಾಗಿ ತೋರುವುದರಿಂದ ದೈನಂದಿನ ವ್ಯಾಪಾರೋದ್ಯಮಗಳಲ್ಲಿ ನಿರೀಕ್ಷೆಗೂ ಮಿಕ್ಕಿ ಲಾಭವಾಗುವುದು. ನಿಮ್ಮನ್ನು ಕಾಡುವ ಸಮಸ್ಯೆ ಹೆಚ್ಚಿನ ಶ್ರಮವಿಲ್ಲದೆ ಪರಿಹಾರವಾಗುವುದು.

ಕುಂಭ: ಹೈನುಗಾರಿಕೆಯವರಿಗೆ ವೃತ್ತಿಯಲ್ಲಿ ಆಸಕ್ತಿ ಮೂಡಲಿದೆ. ತಾತ್ಕಾಲಿಕ ಹುದ್ದೆಯವರಿಗೆ ಕಾಯಂ ಆಗುವ ಸಾಧ್ಯತೆ ಇರುತ್ತದೆ. ಸಹೋದರರಿಂದ ಧನಾಗಮನ. ಜಗದ್ಗುರುಗಳ ಸೇವೆಯಿಂದ ಅಭೀಷ್ಟ ಸಿದ್ಧಿಯಾಗುವುದು.

ಮೀನ: ಸಮಯೋಚಿತ ಕಾರ್ಯ ನಡೆಸುವಲ್ಲಿ ಆಲಸ್ಯ, ವಾದ-ವಿವಾದಗಳಲ್ಲಿ ನಿಷ್ಕಾರಣ ವೈಷಮ್ಯ, ಪರಿವಾರದಲ್ಲಿ ಅಭಿಪ್ರಾಯ ಭೇದಗಳಿಂದ ತಾಪತ್ರಯಕ್ಕೆ ಗುರಿಯಾಗುವಿರಿ. ಪದವೀಧರರಿಗೆ ಸನ್ಮಾನದಂತಹ ಗೌರವ ದೊರಕಲಿದೆ.

ಗುಂಡಣ್ಣ

ವಿನಿಮಯ ದರ: ಡಾಲರ್ 85.92 | ಪೌಂಡ್ 115.11 | ಯುರೊ 99.82 | ಯೆನ್ (100ಕ್ಕೆ) 58

ಅಡಿಕೆ ಧಾರಣೆ

ಪುತ್ತೂರು		ರಾಶಿ	46099-57899	ರಾಶಿ	42899-47399
ಕೋಕ	20000-27500	ಸರಕು	40100-61599	ತಟ್ಟಿಬೆಟ್ಟೆ	28119-36339
ಹೊಸತು	26000-47500	**ಸಿದ್ದಾಪುರ**		**ಕುಮಟಾ**	
ಹಳತು	37500-52500	ಬಿಳಿಗೋಟು	24299-30109	ಚಾಲಿ	38969-42799
ಶಿವಮೊಗ್ಗ		ಚಾಲಿ	34399-40699	ಚಿಪ್ಪು	23019-29569
ಬೆಟ್ಟೆ	50400-60310	ಕೋಕ	14299-22689	ಕೋಕ	7089-21019
ಗೊರಬಲು	15500-30700	ಕೆಂಪುಗೋಟು	22119-23119	ಫ್ಯಾಕ್ಟರಿ	5069-26169
				ಹೊಸಚಾಲಿ	34219-42099

ಷೇರುಪೇಟೆ ವಹಿವಾಟು

ಹಿಂದಿನ ಅಂತ್ಯ 82,570 | 63 | ಇಂದಿನ ಅಂತ್ಯ 82,634

ಎನ್ಎಸ್ಇ ನಿಫ್ಟಿ

ಹಿಂದಿನ ಅಂತ್ಯ:	25,195
ಇಂದಿನ ಅಂತ್ಯ:	25,212
ದಿನದ ಗರಿಷ್ಠ:	25,255
	16

ಮೊಟ್ಟೆ ಧಾರಣೆ (ಎನ್ಇಸಿಸಿ)

ಬೆಂಗಳೂರು		
	100 ಕ್ಕೆ	₹580
	12 ಕ್ಕೆ	₹80
ಮೈಸೂರು:	100 ಕ್ಕೆ	₹590

ಮುದ್ರೆಮನೆ ಕಾಫಿ (50 ಕೆಜಿಗೆ)

ಎಪಿ	₹25,750
ಎಸಿ	₹14,280
ಆರ್‌ಪಿ	₹16,900
ಆರ್‌ಸಿ	₹9,585

ರಾಮನಗರ ರೇಷ್ಮೆಗೂಡು

ಮಿಶ್ರತಳಿ(ಸಿ.ಬಿ)	₹311-558
ದ್ವಿತಳಿ (ಬಿ.ವಿ)	₹416-680

ಎನ್.ಆರ್.ಪುರ ರಬ್ಬರ್ (ಪ್ರತಿ ಕೆ.ಜಿಗೆ)

ಆರ್‌ಎಸ್‌ಎಸ್-4	₹205
ಆರ್‌ಎಸ್‌ಎಸ್-5	₹199
ಗುಡ್ ಲಾಟ್	₹184

ಮುಂಬೈ ಖಾದ್ಯ ತೈಲ (10 ಕೆ.ಜಿಗೆ) (ಆವರಣದಲ್ಲಿ ಕಳೆದ ವಹಿವಾಟಿನ ದರ)

ಶೇಂಗಾ (ರಿಫೈನ್ಡ್)	₹1440 (1440)
ಸೋಯಾ (ರಿಫೈನ್ಡ್)	₹1220 (1215)
ಸೂರ್ಯಕಾಂತಿ (ರಿಫೈನ್ಡ್)	₹1355 (1335)
ಪಾಮೋಲಿನ್	₹1190 (1190)

ಕೊಬ್ಬರಿ ಧಾರಣೆ (ಕ್ವಿಂಟಲ್‌ಗೆ)

ಅರಸೀಕೆರೆ	₹27000-27000
ತುಮಕೂರು	₹25600-26500

ಮುಂಬೈ ಧಾರಣೆ (ಶೇಂಗಾ)

16-07-2025	
ಜಾವಾ 70/80(ಹೊಸ)	9700-9800
ಜಾವಾ 80/90(ಹೊಸ)	9200-9300
ದಪ್ಪ ಮಧ್ಯಪ್ರದೇಶ (ಹೊಸ)	7700-7800
ದಪ್ಪ ಗುಜರಾತ್ (ಹೊಸ)	8000-8100
ಶೇಂಗಾ ಎಣ್ಣೆ (10 ಕೆಜಿಗೆ)	
ಕಚ್ಚಾ (ತೆರಿಗೆ ಬಿಟ್ಟು)	1450 (1450)
ಒಂದು ವಾರದ ಡೆಲಿವರಿ	1445 (1445)
ಪಾಮ್ ವಾರದ ಡೆಲಿವರಿ	1188 (1188)
ಸೂರ್ಯಕಾಂತಿ ಎಣ್ಣೆ ಕಚ್ಚಾ	1275 (1270)
ಚಿನ್ನ-ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)	
ಅಪರಂಜಿ ಚಿನ್ನ 10 ಗ್ರಾಂ	97,100 (97,250)
ಬೆಳ್ಳಿ ಕೆ.ಜಿಗೆ	1,11,000 (1,11,600)

ಆವರಣದಲ್ಲಿ ಹಿಂದಿನ ವಹಿವಾಟಿನ ಧಾರಣೆ

ಪ್ರಜಾವಾಣಿ

ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು

Log on to : https://homages.deccanherald.com

or

Scan QR code to access booking form

ನಾಲ್ಕನೇ ವರ್ಷದ ಪುಣ್ಯಸ್ಮರಣೆ

ಶ್ರೀಮತಿ ಲಕ್ಷ್ಮಮ್ಮ

ಲೇಟ್ ರೈಲ್ವೇ ವೆಂಕಟಯ್ಯನವರ ಧರ್ಮಪತ್ನಿ ಮರಣ: 18.07.2021. ಶ್ರೀಮತಿ ಲಕ್ಷ್ಮಮ್ಮನವರ 4ನೇ ವರ್ಷದ ಪುಣ್ಯಸ್ಮರಣೆಯನ್ನು ದಿನಾಂಕ: 17.07.2025 ಗುರುವಾರ ಮಧ್ಯಾಹ್ನ 12.30 ಗಂಟೆಗೆ ಏರ್ಪಡಿಸಲಾಗಿದೆ. ಸ್ಥಳ: ಗಗನ್ ಪಾರ್ಟಿಹಾಲ್, ವೀರೇಶ್ ಚಿತ್ರಮಂದಿರ ಹಿಂಭಾಗ, ಮಾಗಡಿ ರಸ್ತೆ, ಬೆಂಗಳೂರು-23

ಸದಾ ನಿಮ್ಮ ನೆನಪಿನಲ್ಲಿರುವ ಮಕ್ಕಳು, ಸೊಸೆಯಂದಿರು, ಅಳಿಯಂದಿರು ಹಾಗೂ ಮೊಮ್ಮಕ್ಕಳು

ಏಳನೆಯ ಚಿರಸ್ಮರಣೆ



ಶ್ರೀ ಬಿ.ಪಿ.ತಿಪ್ಪಯ್ಯ BA, BL, B.Ed

Director of Public Instruction, DPI, (Retd.)

(ನಿಧನ: 17-07-2018)

ನೀವು ನಮ್ಮನ್ನು ಅಗಲಿ ಏಳು ವರ್ಷಗಳೇ ಉರುಳಿವೆ ಆದರೆ ನಿಮ್ಮ ನೆನಪುಗಳು ಮಾತ್ರ ಸದಾ ನಮ್ಮ ಜೀವನದಲ್ಲಿ ಬೆಳಕನ್ನು ಚೆಲ್ಲಿದೆ. "ಎಂದಿಗೂ ನೀವೇ ನಮ್ಮ ಪ್ರಪಂಚ"

ಇಂತಿ: ಪತ್ನಿ ಮತ್ತು ಮಕ್ಕಳು

ಆರ್‌ಬಿಐನಿಂದ ಕಾದುನೋಡುವ ಮಾರ್ಗ

ಆರ್ಥಿಕ ಬೆಳವಣಿಗೆ ಹಾಗೂ ಬೆಲೆಗಳಲ್ಲಿ ಸ್ಥಿರತೆಗೆ ಸಮಾನ ಆದ್ಯತೆ ಬದಲಾಗುತ್ತಿರುವ ಪರಿಸ್ಥಿತಿ ಗಮನಿಸಿ ನಿರ್ಧಾರ: ಗವರ್ನರ್

ನವದೆಹಲಿ (ಪಿಟಿಐ): ರೆಪೊ ದರ ಇಳಿಸಬೇಕೇ ಬೇಡವೇ ಎಂಬ ತೀರ್ಮಾನ ತೆಗೆದುಕೊಳ್ಳುವುದಕ್ಕೂ ಮೊದಲು ಕಾದುನೋಡುವ, ಬದಲಾಗುತ್ತಿರುವ ಪರಿಸ್ಥಿತಿಯನ್ನು ಗಮನಿಸುವ ಕೆಲಸವನ್ನು ಆರ್‌ಬಿಐ ಮಾಡಲಿದೆ. ಆರ್ಥಿಕ ಬೆಳವಣಿಗೆ ಹಾಗೂ ಬೆಲೆಗಳಲ್ಲಿ ಸ್ಥಿರತೆಗೆ ಆರ್‌ಬಿಐ ಸಮಾನ ಆದ್ಯತೆ ನೀಡಲಿದೆ.

ಚಿಲ್ಲರೆ ಹಣದುಬ್ಬರ ಪ್ರಮಾಣವು ಇಳಿಮುಖವಾಗಿರುವ ಕಾರಣಕ್ಕೆ ಆರ್‌ಬಿಐನ ಹಣಕಾಸು ನೀತಿ ಸಮಿತಿಯು (ಎಂಪಿಸಿ) ರೆಪೊ ದರವನ್ನು ತಗ್ಗಿಸುತ್ತಿದೆ. ಸಮಿತಿಯು ಈಗ 'ತಟಸ್ಥ' ಹಣಕಾಸಿನ ನೀತಿಯನ್ನು ಅನುಸರಿಸುತ್ತಿದೆ. ಈ ನೀತಿಯ ಕಾರಣದಿಂದಾಗಿ, ಮುಂದಿನ ದಿನಗಳಲ್ಲಿ ರೆಪೊ ದರವನ್ನು ಕಡಿಮೆ ಮಾಡುವ ಅಥವಾ ಹೆಚ್ಚು ಮಾಡುವ ಆಯ್ಕೆಗಳು ಆರ್‌ಬಿಐ ಮುಂದೆ ಇವೆ. ಫೆಬ್ರುವರಿಯ ನಂತರದಲ್ಲಿ ಆರ್‌ಬಿಐ

ಸಂಜಯ್ ಮಲ್ಹೋತ್ರಾ

ರೆಪೊ ದರವನ್ನು ಒಟ್ಟು ಶೇ 1ರಷ್ಟು ಕಡಿಮೆ ಮಾಡಿದೆ.

ಆರ್‌ಬಿಐ ಗವರ್ನರ್ ಸಂಜಯ್ ಮಲ್ಹೋತ್ರಾ ಅವರು ಸುದ್ದಿ ವಾಹಿನಿಯೊಂದಕ್ಕೆ ನೀಡಿರುವ ಸಂದರ್ಶನದಲ್ಲಿ 'ಹಣದುಬ್ಬರ ಕಡಿಮೆ ಇದ್ದರೆ, ಆರ್ಥಿಕ ಬೆಳವಣಿಗೆ ಕಡಿಮೆ ಆಗಿದ್ದರೆ ರೆಪೊ ದರವನ್ನು ಖಂಡಿತವಾಗಿಯೂ ಕಡಿಮೆ ಮಾಡಬಹುದು. ಆದರೆ ಅದನ್ನು ನಾವು ಕಾದುನೋಡಬೇಕಾಗುತ್ತದೆ' ಎಂದು ಹೇಳಿದ್ದಾರೆ.

ಆರ್ಥಿಕ ಬೆಳವಣಿಗೆ ದರಕ್ಕಿಂತ ಹೆಚ್ಚಿನ ಆದ್ಯತೆಯನ್ನು ಹಣದುಬ್ಬರ ಪ್ರಮಾಣಕ್ಕೆ ನೀಡಬೇಕು ಎಂಬ ಮಾತು ಸರಿಯಲ್ಲ ಎಂದು ಅವರು ಹೇಳಿದ್ದಾರೆ. 'ಬೆಲೆಯಲ್ಲಿ ಸ್ಥಿರತೆ ಸಾಧಿಸುವುದು ನಮ್ಮ ಮೇಲೆ ಇರುವ ಮುಖ್ಯ ಹೊಣೆ. ನಾವು ಆರ್ಥಿಕ ಬೆಳವಣಿಗೆಯನ್ನೂ ಗಮನಿಸುತ್ತೇವೆ. ಇವೆರಡೂ ನಮಗೆ ಪ್ರಮುಖವಾಗುತ್ತವೆ. ಇವೆರಡರಲ್ಲಿ ಯಾವುದೋ ಒಂದಕ್ಕೆ ಮಾತ್ರ ನಾವು ಈಗ ಹೆಚ್ಚು ಒತ್ತು ನೀಡುತ್ತೇವೆ ಎಂದು ಹೇಳಲಾರೆ' ಎಂದಿದ್ದಾರೆ.

ಚಿಲ್ಲರೆ ಹಣದುಬ್ಬರ ಪ್ರಮಾಣವು ಜೂನ್‌ನಲ್ಲಿ ಆರು ವರ್ಷಗಳ ಕನಿಷ್ಠ ಮಟ್ಟವಾದ ಶೇಕಡ 2.1ಕ್ಕೆ ಇಳಿಕೆ ಕಂಡಿದೆ. ತರಕಾರಿ ಸೇರಿದಂತೆ ಆಹಾರ ವಸ್ತುಗಳ ಬೆಲೆಯಲ್ಲಿನ ಇಳಿಕೆಯು ಹಣದುಬ್ಬರ ಇಳಿಕೆಗೆ ಕಾರಣವಾಗಿದೆ.

ಆರ್‌ಬಿಐ ರೆಪೊ ದರವನ್ನು ಪರಿಷ್ಕರಿಸುವಾಗ ಚಿಲ್ಲರೆ ಹಣದುಬ್ಬರ ಪ್ರಮಾಣವನ್ನು ಪರಿಗಣಿಸುತ್ತದೆ. ಆರ್‌ಬಿಐನ ಹಣಕಾಸು ನೀತಿ ಸಮಿತಿಯ ಸಭೆಯು ಆಗಸ್ಟ್‌ನಲ್ಲಿ ನಡೆಯಲಿದೆ.

ಹಣದುಬ್ಬರ ಶೇ 4ರಷ್ಟು ನಿರೀಕ್ಷೆ: ಕ್ರಿಸಿಲ್

ಕೋಲ್ಕತ್ತ (ಪಿಟಿಐ): ಪ್ರಸಕ್ತ ಆರ್ಥಿಕ ವರ್ಷದಲ್ಲಿ ಗ್ರಾಹಕ ಬೆಲೆ ಸೂಚ್ಯಂಕ ಆಧಾರಿತ ಚಿಲ್ಲರೆ ಹಣದುಬ್ಬರವು ಸರಾಸರಿ ಶೇ 4ರಷ್ಟು ಇರುವ ನಿರೀಕ್ಷೆ ಇದೆ ಎಂದು ರೇಟಿಂಗ್ಸ್ ಸಂಸ್ಥೆ ಕ್ರಿಸಿಲ್‌ನ ಸಂಶೋಧನಾ ವರದಿ ತಿಳಿಸಿದೆ. ಕಳೆದ ಆರ್ಥಿಕ ವರ್ಷದಲ್ಲಿ ಸರಾಸರಿ ಹಣದುಬ್ಬರ ಶೇ 4.6ರಷ್ಟಿತ್ತು.

ಭಾರತೀಯ ಹವಾಮಾನ ಇಲಾಖೆಯ ಅಂದಾಜಿನಂತೆ ಈ ಬಾರಿ ಸಾಮಾನ್ಯಕ್ಕಿಂತ ಹೆಚ್ಚಿನ ಮಳೆ ಆಗಲಿದೆ. ಹೀಗಾಗಿ ಆಹಾರ ಪದಾರ್ಥಗಳ ಬೆಲೆಯು ತಗ್ಗುವ ನಿರೀಕ್ಷೆ ಇದೆ. ಸರಕುಗಳ ದರ ಇಳಿಕೆಯಿಂದ ಆಹಾರೇತರ ಪದಾರ್ಥಗಳ ಬೆಲೆಯು ಕಡಿಮೆ ಆಗಬಹುದು ಎಂದು ಕ್ರಿಸಿಲ್ ಅಂದಾಜಿಸಿದೆ.

ದೇಶದ ಒಟ್ಟು ಆಂತರಿಕ ಉತ್ಪಾದನೆಯ (ಜಿಡಿಪಿ) ಬೆಳವಣಿಗೆ ಶೇ 6.5ರಷ್ಟಾಗಬಹುದು. ಅಮೆರಿಕದ ಸುಂಕ ನೀತಿಯು ರಫ್ತುದಾರರಿಗೆ ಒತ್ತಡ ಸೃಷ್ಟಿಸಲಿದೆ. ಆದರೆ, ಹೆಚ್ಚಿನ ಮುಂಗಾರು ಮಳೆ ಮತ್ತು ರೆಪೊ ದರ ಕಡಿತದಂತಹ ಅಂಶಗಳು ಬೆಳವಣಿಗೆಗೆ ಬೆಂಬಲ ನೀಡಲಿವೆ.

2025ರ ಮೇ ವರೆಗಿನ ದಾಖಲೆಗಳ ಪ್ರಕಾರ ಬ್ಯಾಂಕ್ ನೀಡುವ ಸಾಲದ ಪ್ರಮಾಣ ಮೊದಲ ತ್ರೈಮಾಸಿಕದಲ್ಲಿ ಇಳಿಕೆಯಾಗಿದೆ. ಹಣದುಬ್ಬರ ಇಳಿಕೆಯಿಂದಾಗಿ, ಪ್ರಸಕ್ತ ಆರ್ಥಿಕ ವರ್ಷದಲ್ಲಿ ಆರ್‌ಬಿಐ ಮತ್ತೊಮ್ಮೆ ರೆಪೊ ದರ ಕಡಿತ ಮಾಡಬಹುದು ಎಂದು ಕ್ರಿಸಿಲ್ ಅಂದಾಜು ಮಾಡಿದೆ.

Together We Can
ಕೆನರಾ ಬ್ಯಾಂಕ್
Canara Bank
A Government of India Undertaking

ಎಸ್‌ಬಿಐನಿಂದ ₹20 ಸಾವಿರ ಕೋಟಿ ಸಂಗ್ರಹ

ನವದೆಹಲಿ (ಪಿಟಿಐ): ಪ್ರಸಕ್ತ ಆರ್ಥಿಕ ವರ್ಷದಲ್ಲಿ ಬಾಂಡ್ ಹಂಚಿಕೆಯ ಮೂಲಕ ದೇಶಿ ಹೂಡಿಕೆದಾರರಿಂದ ₹20 ಸಾವಿರ ಕೋಟಿ ಬಂಡವಾಳ ಸಂಗ್ರಹಿಸಲು ನಿರ್ಧರಿಸಲಾಗಿದೆ ಎಂದು ಭಾರತೀಯ ಸ್ಟೇಟ್ ಬ್ಯಾಂಕ್ (ಎಸ್‌ಬಿಐ) ತಿಳಿಸಿದೆ.

ಬಾಸೆಲ್-3, ಹೆಚ್ಚುವರಿ ಟಯರ್-1 ಮತ್ತು ಟಯರ್-2 ಬಾಂಡ್‌ಗಳ ಮೂಲಕ ಬಂಡವಾಳ ಸಂಗ್ರಹಿಸಲು ಬ್ಯಾಂಕ್‌ನ ಆಡಳಿತ ಮಂಡಳಿ ಅನುಮೋದನೆ ನೀಡಿದೆ ಎಂದು ಬ್ಯಾಂಕ್ ಷೇರುಪೇಟೆಗೆ ಬುಧವಾರ ತಿಳಿಸಿದೆ.

ಈ ಬಂಡವಾಳ ಸಂಗ್ರಹಕ್ಕೆ ಅಗತ್ಯ ಇರುವೆಡೆಗಳಲ್ಲಿ ಸರ್ಕಾರದ ಅನುಮತಿಯನ್ನೂ ಪಡೆಯಬೇಕಾಗುತ್ತದೆ ಎಂದು ಅದು ತಿಳಿಸಿದೆ.

ಜಿಯೊಬ್ಲ್ಯಾಕ್‌ರಾಕ್ ಎಂ.ಎಫ್ ಆರಂಭಕ್ಕೆ ಸೆಬಿ ಒಪ್ಪಿಗೆ

ನವದೆಹಲಿ (ಪಿಟಿಐ): ಜಿಯೊ ಫೈನಾನ್ಶಿಯಲ್ ಸರ್ವಿಸಸ್ ಮತ್ತು ಅಮೆರಿಕದ ಬ್ಲ್ಯಾಕ್‌ರಾಕ್‌ನ ಜಂಟಿ ಪಾಲುದಾರಿಕೆಯ ಜಿಯೊಬ್ಲ್ಯಾಕ್‌ರಾಕ್ ಅಸೆಟ್ ಮ್ಯಾನೇಜ್‌ಮೆಂಟ್ ಕಂಪನಿಯು ಐದು ಮ್ಯೂಚುವಲ್ ಫಂಡ್‌ಗಳನ್ನು (ಎಂ.ಎಫ್) ಆರಂಭಿಸಲು ಭಾರತೀಯ ಷೇರುಪೇಟೆ ನಿಯಂತ್ರಣ ಮಂಡಳಿ (ಸೆಬಿ) ಅನುಮತಿ ನೀಡಿದೆ.

ಜಿಯೊಬ್ಲ್ಯಾಕ್‌ರಾಕ್ ನಿಫ್ಟಿ 50 ಇಂಡೆಕ್ಸ್ ಫಂಡ್, ಜಿಯೊಬ್ಲ್ಯಾಕ್‌ರಾಕ್ ನಿಫ್ಟಿ (8 ವರ್ಷದಿಂದ 13 ವರ್ಷ) ಜಿ-ಸೆಕ್ಯುರಿಟೀಸ್ ಇಂಡೆಕ್ಸ್ ಫಂಡ್, ಜಿಯೊಬ್ಲ್ಯಾಕ್‌ರಾಕ್ ನಿಫ್ಟಿ ಸ್ಮಾಲ್‌ಕ್ಯಾಪ್ 250 ಇಂಡೆಕ್ಸ್ ಫಂಡ್, ಜಿಯೊಬ್ಲ್ಯಾಕ್‌ರಾಕ್ ನಿಫ್ಟಿ ನೆಕ್ಸ್ಟ್ 50 ಇಂಡೆಕ್ಸ್ ಫಂಡ್ ಮತ್ತು ಜಿಯೊಬ್ಲ್ಯಾಕ್‌ರಾಕ್ ನಿಫ್ಟಿ ಮಿಡ್‌ಕ್ಯಾಪ್ 150 ಇಂಡೆಕ್ಸ್ ಫಂಡ್‌ಗೆ ಅನುಮತಿ ಸಿಕ್ಕಿದೆ.

ಈ ಪೈಕಿ ನಾಲ್ಕು ಫಂಡ್‌ಗಳು ಈಕ್ವಿಟಿ ಆಧಾರಿತ, ಒಂದು ಫಂಡ್ ಸಾಲಪತ್ರ ಆಧಾರಿತವಾಗಿದೆ.

ಜಿಯೊಬ್ಲ್ಯಾಕ್‌ರಾಕ್ ಅಸೆಟ್ ಮ್ಯಾನೇಜ್‌ಮೆಂಟ್ ಕಂಪನಿಯು ತನ್ನ ಹೊಸ ಮೂರು ಮ್ಯೂಚುವಲ್ ಫಂಡ್‌ಗಳ ಮೂಲಕ ₹17,800 ಕೋಟಿ ಹೂಡಿಕೆ ಸಂಗ್ರಹಿಸಿರುವುದಾಗಿ ಇತ್ತೀಚೆಗೆ ತಿಳಿಸಿತ್ತು.

ಸುದ್ದಿ ವೈವಿಧ್ಯಕ್ಕೆ prajavani.netಗೆ ಭೇಟಿ ಮಾಡಿ

10ಕ್ಕೂ ಹೆಚ್ಚು ನಗರಕ್ಕೆ 'ಸ್ಪಿನ್ನಿ' ವಿಸ್ತರಣೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಳಸಿದ ಕಾರುಗಳ ಖರೀದಿ ಮತ್ತು ಮಾರಾಟ ಕ್ಷೇತ್ರದ ಪ್ರಮುಖ ಕಂಪನಿಗಳಲ್ಲಿ ಒಂದಾಗಿರುವ 'ಸ್ಪಿನ್ನಿ', ರಾಜ್ಯದ 10ಕ್ಕೂ ಹೆಚ್ಚು ನಗರಗಳಿಗೆ ತನ್ನ ಸೇವೆಯನ್ನು ವಿಸ್ತರಿಸಿರುವುದಾಗಿ ತಿಳಿಸಿದೆ.

ಬೆಳಗಾವಿ, ಹುಬ್ಬಳ್ಳಿ, ಧಾರವಾಡ, ದಾವಣಗೆರೆ, ತುಮಕೂರು, ಮೈಸೂರು, ಹಾಸನ, ಮಂಗಳೂರು, ಉಡುಪಿ, ಶಿವಮೊಗ್ಗ ಸೇರಿ ಒಟ್ಟು 10ಕ್ಕೂ ಹೆಚ್ಚು ನಗರಗಳಲ್ಲಿ ಕಂಪನಿಯ ಸೇವೆ ಲಭ್ಯವಿದೆ.

'ಮಹಾನಗರದಲ್ಲಿನ ಕಾರು ಖರೀದಿದಾರರು ಮತ್ತು ಮಾರಾಟಗಾರರು ನಮ್ಮನ್ನು ಆದ್ಯತೆಯ ಕಂಪನಿಯನ್ನಾಗಿ ಪರಿಗಣಿಗಣಿಸಿದ್ದಾರೆ. ಅವರಿಗೆ ಸಿಗುವ ಸೇವೆಗಳನ್ನು ಇತರ ನಗರಗಳ ಗ್ರಾಹಕರಿಗೂ ಒದಗಿಸುವ ಉದ್ದೇಶ ಹೊಂದಿದ್ದೇವೆ' ಎಂದು ಸ್ಪಿನ್ನಿ ಕಂಪನಿಯ ಪೂರೈಕೆ ವಿಭಾಗದ ಹಿರಿಯ ಉಪಾಧ್ಯಕ್ಷ ಗುರ್ವೀನ್ ಬೇಡಿ ಹೇಳಿದ್ದಾರೆ.

ಗಾಂಧಿ ತೈಲವರ್ಣಚಿತ್ರ ₹1.75 ಕೋಟಿಗೆ ಮಾರಾಟ

ಲಂಡನ್ (ಪಿಟಿಐ): ಮಹಾತ್ಮ ಗಾಂಧಿ ಅವರ ಅಪರೂಪದ ತೈಲವರ್ಣ ಚಿತ್ರವು ಬಾನ್‌ಹಮ್ಸ್ ಹರಾಜಿನಲ್ಲಿ ಅಂದಾಜಿಗಿಂತ ಮೂರು ಪಟ್ಟು ಹೆಚ್ಚು ಬೆಲೆಗೆ ಮಾರಾಟವಾಗಿದೆ. ₹1.75 ಕೋಟಿಗೆ (152,800 ಪೌಂಡ್) ಈ ತೈಲವರ್ಣ ಚಿತ್ರವು ಬಿಕರಿಯಾಗಿದೆ.

ಹಿಂದಿನ ಯಾವುದೇ ಹರಾಜಿನಲ್ಲಿ ಮಾರಾಟಕ್ಕಿಡದ ಈ ತೈಲವರ್ಣಚಿತ್ರಕ್ಕೆ ₹57.55 ಲಕ್ಷದಿಂದ (50000 ಪೌಂಡ್) ₹80.59 ಲಕ್ಷ (70000 ಪೌಂಡ್) ಬೆಲೆ ನಿಗದಿಪಡಿಸಿ ಆನ್‌ಲೈನ್ ಹರಾಜಿನಲ್ಲಿಡಲಾಗಿತ್ತು. ಮಂಗಳವಾರ ಮುಕ್ತಾಯಗೊಂಡ ಹರಾಜಿನಲ್ಲಿ ಅಗ್ರಸ್ಥಾನದೊಂದಿಗೆ ₹1.75 ಕೋಟಿಗೆ ಮಾರಾಟವಾಗಿದೆ.

ಎರಡನೇ ದುಂಡು ಮೇಜಿನ ಸಮ್ಮೇಳನದಲ್ಲಿ ಪಾಲ್ಗೊಳಲು 1931ರಲ್ಲಿ ಲಂಡನ್‌ಗೆ ಭೇಟಿ ನೀಡಿದ್ದಾಗ ಕಲಾವಿದರಾದ ಕ್ಲೇರ್ ಲೈಟನ್ ಅವರನ್ನು ಗಾಂಧಿ ಅವರಿಗೆ ಪರಿಚಯಿಸಲಾಗಿತ್ತು. ಆಗ ರಚನೆಗೊಂಡ ಕಲಾಕೃತಿಯಿದು.

ಮಹಾತ್ಮ ಗಾಂಧಿ ಅವರ ಏಕೈಕ ತೈಲವರ್ಣಚಿತ್ರವಿದು ಎಂದು ಭಾವಿಸಲಾಗಿದೆ ಎಂದು ಬಾನ್‌ಹಮ್ಸ್ ಮಾರಾಟ ವಿಭಾಗದ ಮುಖ್ಯಸ್ಥರಾದ ರಿಯಾನಾನ್ ಡೆಮೆರಿ ಹೇಳಿದ್ದಾರೆ.

ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಎಚ್ಚರಿಕೆ ಕಡೆಗಣನೆ

ಉಕ್ರೇನ್ ಮೇಲೆ ರಷ್ಯಾ ತೀವ್ರ ದಾಳಿ

ಕೀವ್/ಉಕ್ರೇನ್ (ಎಎಫ್‌ಪಿ): ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಎಚ್ಚರಿಕೆಯನ್ನು ಸಂಪೂರ್ಣವಾಗಿ ಕಡೆಗಣಿಸಿರುವ ರಷ್ಯಾ, ಉಕ್ರೇನ್ ಮೇಲೆ ತೀವ್ರ ದಾಳಿ ಮುಂದುವರಿಸಿದೆ.

ಉಕ್ರೇನ್ ಜತೆಗೆ ಮೂರು ವರ್ಷಗಳಿಂದ ನಡೆಯುತ್ತಿರುವ ಯುದ್ಧವನ್ನು ನಿಲ್ಲಿಸಲು 50 ದಿನಗಳ ಒಳಗೆ ಶಾಂತಿ ಒಪ್ಪಂದಕ್ಕೆ ಬರಬೇಕು. ಇಲ್ಲದಿದ್ದಲ್ಲಿ ರಷ್ಯಾ ಮೇಲೆ ಹಲವು ನಿರ್ಬಂಧ ವಿಧಿಸಲಾಗುವುದು ಎಂದು ಟ್ರಂಪ್ ಎಚ್ಚರಿಕೆ ನೀಡಿದ್ದರು. ಈ ಹೇಳಿಕೆ ಹೊರಬಿದ್ದ ಎರಡು ದಿನಗಳಲ್ಲೇ ರಷ್ಯಾ, ಉಕ್ರೇನ್ ಮೇಲೆ ಮತ್ತೆ ದಾಳಿ ನಡೆಸಿದೆ.

ಉಕ್ರೇನ್ ಅಧ್ಯಕ್ಷ ಅಧ್ಯಕ್ಷ ವೊಲೊಡಿಮಿರ್ ಝೆಲೆನ್‌ಸ್ಕಿ ಅವರ ತವರು ಕ್ರಿವಿ ರಿಗ್ ಪಟ್ಟಣವನ್ನು ಗುರಿಯಾಗಿಸಿಕೊಂಡು ರಷ್ಯಾ ನಡೆಸಿದ ಕ್ಷಿಪಣಿ ದಾಳಿಯಲ್ಲಿ ಅಲ್ಲಿನ ಕೈಗಾರಿಕೆ, ವಿದ್ಯುತ್ ಮತ್ತು ನೀರು ಪೂರೈಕೆ ಸೇರಿದಂತೆ ಮೂಲಸೌಕರ್ಯಕ್ಕೆ ಅಪಾರ ಪ್ರಮಾಣದ ಹಾನಿಯಾಗಿದೆ. ಒಬ್ಬ ಮಹಿಳೆ ಮೃತಪಟ್ಟಿದ್ದು, 24ಕ್ಕೂ ಹೆಚ್ಚು ಮಂದಿ ಗಾಯಗೊಂಡಿದ್ದಾರೆ ಎಂದು ಮೂಲಗಳು ತಿಳಿಸಿವೆ.

ವಿನ್ನಿಟ್ಸಿಯ, ಖಾರ್ಕೀವ್, ಕ್ರಿವಿ ರಿಗ್ ಸೇರಿದಂತೆ ಹಲವೆಡೆ ಮಂಗಳವಾರ ತಡರಾತ್ರಿ ಮತ್ತು ಬುಧವಾರ ಬೆಳಗಿನ ಜಾವ 400ಕ್ಕೂ ಹೆಚ್ಚು ಡ್ರೋನ್ ಮತ್ತು ಕ್ಷಿಪಣಿ ಬಳಸಿ ರಷ್ಯಾ ದಾಳಿ ನಡೆಸಿದೆ ಎಂದು ಉಕ್ರೇನ್ ಹೇಳಿದೆ.

> **ರಷ್ಯಾ ತನ್ನ ನೀತಿಯನ್ನು ಬದಲಿಸಿಕೊಂಡಿಲ್ಲ. ರಷ್ಯಾಕ್ಕೆ ಪರಿಣಾಮಕಾರಿಯಾಗಿ ಉಕ್ರೇನ್‌ನ ಪ್ರತಿಕ್ರಿಯೆ ತಿಳಿಸಲು ನಮ್ಮ ರಕ್ಷಣಾ ಬಲವನ್ನು ವ್ಯವಸ್ಥಿತವಾಗಿ ಹೆಚ್ಚಿಸಿಕೊಳ್ಳಬೇಕಿದೆ**
> **ವೊಲೊಡಿಮಿರ್ ಝೆಲೆನ್‌ಸ್ಕಿ,** ಉಕ್ರೇನ್ ಅಧ್ಯಕ್ಷ

'ಕಾರ್ಯಸೂಚಿ ಬಗ್ಗೆ ನಿಗಾ: ಕ್ರೆಮ್ಲಿನ್'

ಮಾಸ್ಕೊ (ರಾಯಿಟರ್ಸ್): 'ನ್ಯಾಟೊ' ಮೂಲಕ ಉಕ್ರೇನ್‌ಗೆ ಹೆಚ್ಚಿನ ಶಸ್ತ್ರಾಸ್ತ್ರ ಪೂರೈಸಲು ಅಮೆರಿಕ ಒಪ್ಪಿಗೆ ನೀಡಿರುವುದರ ಹಿಂದಿನ ಕಾರ್ಯಸೂಚಿ ಬಗ್ಗೆ ತೀವ್ರ ನಿಗಾ ವಹಿಸುತ್ತಿರುವುದಾಗಿ ರಷ್ಯಾದ ಆಡಳಿತ ಕಚೇರಿ ಕ್ರೆಮ್ಲಿನ್ ಹೇಳಿದೆ.

ಕದನ ವಿರಾಮಕ್ಕೆ ಸಂಬಂಧಿಸಿದಂತೆ ಅಮೆರಿಕದ ಹಸ್ತಕ್ಷೇಪವನ್ನು ತಳ್ಳಿಹಾಕಿರುವ ಕ್ರೆಮ್ಲಿನ್, 'ನೇರ ಶಾಂತಿ ಮಾತುಕತೆ'ಗೆ ಸಿದ್ಧವಿರುವುದಾಗಿ ಪುನರುಚ್ಚರಿಸಿದೆ. ಆದರೆ, ಈ ಮಾತುಕತೆಗೆ ಸಂಬಂಧಿಸಿದಂತೆ ಯಾವುದೇ ದಿನವನ್ನು ಸೂಚಿಸಿಲ್ಲ.

'ಉಕ್ರೇನ್‌ಗೆ ಶಸ್ತ್ರಾಸ್ತ್ರ ಪೂರೈಸುವುದು ವ್ಯಾಪಾರ. ಯುರೋಪಿನ ಕೆಲವು ದೇಶಗಳು ಇದಕ್ಕೆ ಹಣ ಒದಗಿಸುತ್ತಿವೆ' ಎಂದು ಕ್ರೆಮ್ಲಿನ್ ವಕ್ತಾರ ಡಿಮಿತ್ರಿ ಪೆಸ್ಕೋವ್ ಹೇಳಿದ್ದಾರೆ.

ರನ್ ವೇಗೆ ಇಳಿದು ಮತ್ತೆ ಟೇಕಾಫ್ ಆದ ವಿಮಾನ

ಪಟ್ನಾ (ಪಿಟಿಐ): ದೆಹಲಿಯಿಂದ ಹೊರಟಿದ್ದ ಇಂಡಿಗೊ ವಿಮಾನವು ಪಟ್ನಾದ ಜಯಪ್ರಕಾಶ್ ನಾರಾಯಣ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದ ರನ್ ವೇನಲ್ಲಿ ಇಳಿದ ತಕ್ಷಣ ಮತ್ತೆ ಟೇಕ್ ಆಫ್ ಆಗಿ ಆಕಾಶದಲ್ಲಿ ಕೆಲ ಹೊತ್ತು ಸುತ್ತು ಹಾಕಿತು.

ಮಂಗಳವಾರ ರಾತ್ರಿ 9 ಗಂಟೆ ಸುಮಾರಿಗೆ ಘಟನೆ ನಡೆದಿದೆ. ಈ ಸಂದರ್ಭದಲ್ಲಿ ವಿಮಾನದಲ್ಲಿ 173 ಪ್ರಯಾಣಿಕರು ಇದ್ದರು ಎಂದು ವಿಮಾನ ನಿಲ್ದಾಣದ ಅಧಿಕಾರಿಗಳು ತಿಳಿಸಿದರು.

'ಇಂಡಿಗೊ ವಿಮಾನವು ರನ್‌ವೇ ಮೇಲೆ ಇಳಿದಿತ್ತು. ಆದರೆ, ಅಗತ್ಯವಾದ ರನ್ ವೇ ಇಲ್ಲದಿರುವುದನ್ನು ಅರಿತ ಪೈಲಟ್ ಮತ್ತೆ ಟೇಕ್ ಆಫ್ ಮಾಡಿದರು. ಆಕಾಶದಲ್ಲಿ ಕೆಲ ಹೊತ್ತು ಸುತ್ತಿ ನಂತರ ಸುರಕ್ಷಿತವಾಗಿ ಕೆಳಗಿಳಿಸಿದರು' ಎಂದು ಅವರು ಮಾಹಿತಿ ನೀಡಿದರು.

ಸ್ವೀಡಾದಲ್ಲಿನ ಸಂಘರ್ಷ ನಿಯಂತ್ರಿಸಲು ಭದ್ರತಾ ಸಿಬ್ಬಂದಿ ನಿಯೋಜಿಸಿರುವ ಸಿರಿಯಾ ಸರ್ಕಾರ — ಎಎಫ್‌ಪಿ ಚಿತ್ರ

ಡಮಾಸ್ಕಸ್: ಇಸ್ರೇಲ್ ದಾಳಿ

ಡಮಾಸ್ಕಸ್ (ಎಪಿ): ಸಿರಿಯಾ ರಕ್ಷಣಾ ಸಚಿವಾಲಯದ ಬಳಿ ದಾಳಿ ನಡೆಸಲಾಗಿದೆ ಎಂದು ಇಸ್ರೇಲ್ ಸೇನೆ ಬುಧವಾರ ತಿಳಿಸಿದೆ.

ಸರ್ಕಾರಿ ಪಡೆಗಳು ಹಾಗೂ ದುರೂಸ್ ಬಂಡುಕೋರ ಗುಂಪಿನ ನಡುವಿನ ಕದನ ವಿರಾಮ ಒಪ್ಪಂದವು ಮುರಿದುಬಿದ್ದಿದ್ದು, ಸಂಘರ್ಷ ತಾರಕಕ್ಕೇರಿದೆ.

ದಕ್ಷಿಣ ಸಿರಿಯಾದ ಸ್ವೀಡಾದಲ್ಲಿ ಘರ್ಷಣೆ ಮುಂದುವರಿದಿರುವುದಾಗಲೇ ಈ ದಾಳಿ ನಡೆದಿದ್ದು, ದುರೂಸ್ ಬಂಡುಕೋರರ ರಕ್ಷಣೆಗಾಗಿಯೇ ಇಸ್ರೇಲ್ ಈ ದಾಳಿ ನಡೆಸಿದೆ ಎನ್ನಲಾಗಿದೆ.

ಶಿಯಾ ಮುಸ್ಲಿಮರ ಶಾಖೆಯಾಗಿ ಹತ್ತನೇ ಶತಮಾನದಲ್ಲಿ ಉದಯವಾದ ದುರೂಸ್ ಪಂಥದ ಜನರು ಜಗತ್ತಿನಾದ್ಯಂತ 10 ಲಕ್ಷದಷ್ಟಿದ್ದಾರೆ. ಇದರಲ್ಲಿ ಅರ್ಧದಷ್ಟು ಮಂದಿ ಸಿರಿಯಾದ ವಾಸಿಗಳಾಗಿದ್ದಾರೆ.

ಗೋಲನ್ ಹೈಟ್ಸ್ ಸೇರಿದಂತೆ ಲೆಬನಾನ್ ಹಾಗೂ ಇಸ್ರೇಲ್‌ನಲ್ಲೂ ದುರೂಸ್ ಪಂಗಡದ ಜನರು ವಾಸಿಸುತ್ತಿದ್ದಾರೆ.

'ಇರಾನ್‌ಗೆ ಅನಗತ್ಯ ಪ್ರಯಾಣ ಬೇಡ'

ಟೆಹರಾನ್/ಡಮಾಸ್ಕಸ್ (ಪಿಟಿಐ/ಎಪಿ): 'ಅಗತ್ಯ ಇಲ್ಲದಿದ್ದರೆ ಇರಾನ್‌ಗೆ ಬರಬೇಡಿ' ಎಂದು ಇಲ್ಲಿನ ಭಾರತೀಯ ರಾಯಭಾರ ಕಚೇರಿ ಭಾರತೀಯರಿಗೆ ಸಲಹೆ ನೀಡಿದೆ. 'ಇರಾನ್‌ನಲ್ಲಿ ನಡೆಯುತ್ತಿರುವ ಬೆಳವಣಿಗೆಗಳ ಬಗ್ಗೆ ಗಮನಹರಿಸಿ, ನಮ್ಮ ಸಲಹೆಗಳನ್ನು ಕಾಲ ಕಾಲಕ್ಕೆ ಅನುಸರಿಸಿ' ಎಂದೂ ಅದು ಹೇಳಿದೆ.

'ಕೆಲವು ವಾರಗಳಿಂದ ಇರಾನ್‌ನಲ್ಲಿ ಭದ್ರತಾ ವಿಚಾರಗಳಿಗೆ ಸಂಬಂಧಿಸಿ ಬೆಳವಣಿಗೆಗಳು ನಡೆಯುತ್ತಿವೆ. ಒಂದು ವೇಳೆ ಈಗಾಗಲೇ ಇರಾನ್‌ನಲ್ಲಿ ಇದ್ದರೆ, ತಕ್ಷಣವೇ ಇಲ್ಲಿಂದ ವಾಪಸಾಗಿ' ಎಂದಿದೆ. ಕಳೆದ ತಿಂಗಳು ಇರಾನ್ ಮತ್ತು ಇಸ್ರೇಲ್ ನಡುವೆ 12 ದಿನ ಯುದ್ಧ ನಡೆದಿತ್ತು.

ಮತ್ತೆ ಕದನ ವಿರಾಮ: ಸಿರಿಯಾದ ಸರ್ಕಾರಿ ಅಧಿಕಾರಿಗಳು ಮತ್ತು ದುರೂಸ್ ಧಾರ್ಮಿಕ ಅಲ್ಪ ಸಂಖ್ಯಾತರ ನಾಯಕರು ಬುಧವಾರ ಹೊಸದಾಗಿ ಕದನ ವಿರಾಮ ಘೋಷಿಸಿದ್ದಾರೆ.

ದುರೂಸ್ ಬಂಡುಕೋರರ ರಕ್ಷಣೆಗಾಗಿ ಇಸ್ರೇಲ್ ಡಮಾಸ್ಕಸ್ ಮೇಲೆ ಸರಣಿ ದಾಳಿ ನಡೆಸಿದ ಬೆನ್ನಲ್ಲೇ ಈ ಕದನ ವಿರಾಮದ ಘೋಷಣೆ ಆಗಿದೆ. ಸರ್ಕಾರಿ ಸ್ವಾಮ್ಯದ 'ಸನಾ' ಸುದ್ದಿ ಸಂಸ್ಥೆ, ದುರೂಸ್ ಮುಖಂಡರು ವಿಡಿಯೊ ಸಂದೇಶದಲ್ಲಿ ಈ ಒಪ್ಪಂದದ ಕುರಿತು ಪ್ರಕಟಿಸಿದ್ದಾರೆ.

ಬಾಂಗ್ಲಾದೇಶದ ಹಂಗಾಮಿ ಸರ್ಕಾರದ ಕ್ರಮಕ್ಕೆ ಭಾರತೀಯರ ಖಂಡನೆ

ಸತ್ಯಜಿತ್ ರೇ ಪೂರ್ವಜರ ಮನೆ ನೆಲಸಮ

ಪ್ರಜಾವಾಣಿ ವಾರ್ತೆ

ನವದೆಹಲಿ: ಭಾರತ ಮತ್ತು ಬಾಂಗ್ಲಾದೇಶದ ಸಾಂಸ್ಕೃತಿಕ ಕೊಂಡಿಯಂತಿದ್ದ ಖ್ಯಾತ ಸಿನಿಮಾ ನಿರ್ದೇಶಕ ಸತ್ಯಜಿತ್ ರೇ ಅವರ ಅಜ್ಜನ ಮನೆಯನ್ನು ಬಾಂಗ್ಲಾದೇಶದ ಹಂಗಾಮಿ ಸರ್ಕಾರ ನೆಲಸಮ ಕಾರ್ಯ ಆರಂಭಿಸಿದೆ. ಇದು ಶತಮಾನಕ್ಕೂ ಹೆಚ್ಚು ಹಳೆಯ ಬಂಗಲೆಯಾಗಿದೆ. ಇಲ್ಲಿ ಕಾಂಕ್ರೀಟ್ ಕಟ್ಟಡವೊಂದನ್ನು ಕಟ್ಟಲು ಸರ್ಕಾರ ಮುಂದಾಗಿದೆ.

ಹಂಗಾಮಿ ಸರ್ಕಾರದ ಈ ಕ್ರಮವನ್ನು ಭಾರತವು ತೀವ್ರವಾಗಿ ಖಂಡಿಸಿದ್ದು, ಇದೊಂದು 'ತೀವ್ರ ವಿಷಾದದ ವಿಚಾರ' ಎಂದು ಬಣ್ಣಿಸಿದೆ. ಪಶ್ಚಿಮ ಬಂಗಾಳ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಕೂಡ ಇದನ್ನು ವಿರೋಧಿಸಿದ್ದಾರೆ. ಎರಡೂ ದೇಶಗಳ ಬಾಂಧವ್ಯವು ವಿಷಮಗೊಂಡಿರುವ ಈ ಹೊತ್ತಿನಲ್ಲಿ ಹಂಗಾಮಿ ಸರ್ಕಾರದ ಈ ಕ್ರಮವು ಬೇರೊಂದು ರೀತಿಯ ತಿಕ್ಕಾಟಕ್ಕೆ ಕಾರಣವಾಗಿದೆ.

ಸಾಮಾಜಿಕ ಜಾಲತಾಣಗಳಲ್ಲಿ ಈ ಬಗ್ಗೆ ತೀವ್ರ ಚರ್ಚೆ ನಡೆಯುತ್ತಿದ್ದು, ಬಾಂಗ್ಲಾ ಸರ್ಕಾರದ ಕ್ರಮಕ್ಕೆ ಭಾರತೀಯರು ಆಕ್ರೋಶ ವ್ಯಕ್ತಪಡಿಸಿದ್ದಾರೆ. 'ದೇಶದೊಳಗಿರುವ ಎಲ್ಲ ಹಿಂದೂ ಬೇರುಗಳನ್ನು ಕಿತ್ತೆಸೆಯಲಾಗುತ್ತಿದೆ' ಎಂದು ಕೆಲವು ಬಾಂಗ್ಲಾದೇಶದ ಧ್ವಜವಿರುವ ಖಾತೆಗಳು ಪೋಸ್ಟ್ ಹಂಚಿಕೊಂಡಿವೆ.

ಟ್ಯಾಗೋರ್ ಪೂರ್ವಜರ ಮನೆಗೆ ಹಾನಿ: ಲೇಖಕ ರವೀಂದ್ರನಾಥ ಟ್ಯಾಗೋರ್ ಅವರ ಪೂರ್ವಜರ ಮನೆಯೂ ಬಾಂಗ್ಲಾದ ಸಿರಾಜ್‌ಗಂಜ್ ಜಿಲ್ಲೆಯಲ್ಲಿದೆ. ಇದನ್ನು ವಸ್ತುಸಂಗ್ರಹಾಲಯವನ್ನಾಗಿ ಮಾಡಲಾಗಿದೆ. ಸಿಬ್ಬಂದಿ ಹಾಗೂ ವೀಕ್ಷಕರೊಬ್ಬರ ಮಧ್ಯೆ ನಡೆದಿದ್ದ ಜಗಳ ನಡೆದಿತ್ತು. ಇದಾದ ಬಳಿಕ ಗುಂಪೊಂದು ವಸ್ತುಸಂಗ್ರಹಾಲಯಕ್ಕೆ ಜೂನ್‌ನಲ್ಲಿ ಹಾನಿ ಮಾಡಿತ್ತು.

ಮಾಹಿತಿ: ಬಾಂಗ್ಲಾದೇಶದ 'ದಿ ಡೈಲಿ ಸ್ಟಾರ್' ಪತ್ರಿಕೆ, ಪಿಟಿಐ

ಕುಟುಂಬದ ಇತಿಹಾಸ

ಸತ್ಯಜಿತ್ ರೇ ಅವರ ಅಜ್ಜ ಪ್ರಸಿದ್ಧ ಸಾಹಿತಿ, ಚಿತ್ರಕಾರ ಮತ್ತು ಪ್ರಕಾಶಕ ಉಪೇಂದ್ರಕಿಶೋರ್ ರೇ ಚೌಧರಿ. ಪ್ರಸಿದ್ಧ ಕವಿ ಸುಕುಮಾರ್ ರೇ ಅವರು ಸತ್ಯಜಿತ್ ರೇ ಅವರ ಅಪ್ಪ. 36 ಎಕರೆ ವಿಸ್ತೀರ್ಣದಲ್ಲಿರುವ ಈ ಬಂಗಲೆಯು ಬಾಂಗ್ಲಾದೇಶದ ಮೈಮೆನ್‌ಶಿಂಘೋ ಜಿಲ್ಲೆಯ ಹರಿಕಿಶೋರ್ ರೇ ಚೌಧರಿ ರಸ್ತೆಯಲ್ಲಿದೆ. ಹರಿಕಿಶೋರ್ ರೇ ಚೌಧರಿ ಅವರು ಉಪೇಂದ್ರಕಿಶೋರ್ ಅವರ ಪೂರ್ವಜರು.

'1947ರ ದೇಶ ವಿಭಜನೆಯ ಬಳಿಕ ಈ ಬಂಗಲೆಯು ಬಾಂಗ್ಲಾ ಸರ್ಕಾರದ ಸುಪರ್ದಿಗೆ ಬಂದಿತು. 1989ರ ಹೊತ್ತಿಗೆ ಸರ್ಕಾರವು ಈ ಬಂಗಲೆಯಲ್ಲಿ 'ಮೈಮೆನ್‌ಶಿಂಘೋ ಶಿಶು ಅಕಾಡೆಮಿ'ಯನ್ನು ಆರಂಭಿಸಿತು' ಎಂದು ಪುರಾತತ್ವ ಇಲಾಖೆ ಮಾಹಿತಿ ನೀಡಿದೆ.

'ಮಕ್ಕಳ ಸುರಕ್ಷತೆಗೆ ಕಂಟಕ'

'ಬಂಗಲೆಯು ಶಿಥಿಲಾವಸ್ಥೆ ತಲುಪಿತ್ತು. ಇದು ಅಕಾಡೆಮಿಯ ಮಕ್ಕಳ ಸುರಕ್ಷತೆಗೆ ಕಂಟಕವಾಗಿತ್ತು. ಈ ಕಾರಣದಿಂದಲೇ 10 ವರ್ಷಗಳ ಹಿಂದೆಯೇ ಅಕಾಡೆಮಿಯ ತರಗತಿಗಳನ್ನು ಬೇರೊಂದು ಕಟ್ಟಡಕ್ಕೆ ಸ್ಥಳಾಂತರಿಸಲಾಗಿತ್ತು. ಈಗ ಇಲ್ಲಿಯೇ ತರಗತಿಗಳನ್ನು ನಡೆಸಲು ನಿರ್ಧರಿಸಲಾಗಿದೆ. ಆದ್ದರಿಂದ ಬಂಗಲೆಯನ್ನು ನೆಲಸಮ ಮಾಡಲು ಮುಂದಾಗಿದ್ದೇವೆ' ಎಂದು ಮೈಮೆನ್‌ಶಿಂಘೋ ಜಿಲ್ಲಾ ಮಕ್ಕಳ ವ್ಯವಹಾರಗಳ ಅಧಿಕಾರಿ ಮೊಹಮ್ಮದ್ ಮೆಹದಿ ಜಮಾನ್ ಮಾಹಿತಿ ನೀಡಿದರು.

'ಸಹಕಾರ ನೀಡಲು ಸಿದ್ಧ'

ಬಂಗಲೆಯು ಬಾಂಗ್ಲಾದ ಸಾಂಸ್ಕೃತಿಕ ನವೋದಯದ ರೂಪಕ. ಇದನ್ನು ನೆಲಸಮ ಮಾಡುವ ನಿರ್ಧಾರವನ್ನು ಪರಿಶೀಲಿಸಿ. ಎರಡೂ ದೇಶಗಳ ಸಾಂಸ್ಕೃತಿಕ ಸಹಭಾಗಿತ್ವದ ದ್ಯೋತಕವಾಗಿ ಇದನ್ನು ದುರಸ್ತಿಗೊಳಿಸಿ, ಸಾಹಿತ್ಯಕ್ಕೆ ಸಂಬಂಧಿಸಿದ ವಸ್ತುಸಂಗ್ರಹಾಲಯವೊಂದನ್ನು ನಿರ್ಮಿಸೋಣ. ಈ ಬಗ್ಗೆ ನಾವು ಸಹಕಾರ ನೀಡಲು ಸಿದ್ಧರಿದ್ದೇವೆ

ಭಾರತದ ವಿದೇಶಾಂಗ ಸಚಿವಾಲಯ (ಮಂಗಳವಾರ ಬಿಡುಗಡೆ ಮಾಡಿದ್ದ ಹೇಳಿಕೆ)

> **ಬಂಗಲೆಯು ಇಲಾಖೆಯ ಅಡಿಯಲ್ಲಿಲ್ಲ. ಇದೊಂದು ಪಾರಂಪರಿಕ ಮಹತ್ವವಿರುವ ಕಟ್ಟಡ. ಇದನ್ನು ಉಳಿಸಿಕೊಳ್ಳುವ ಬಗ್ಗೆ ನಾನು ಅಕಾಡೆಮಿಯವರ ಬಳಿ ಮಾಡಿದ ಮನವಿಗೆ ಯಾರೂ ಸ್ಪಂದಿಸಲಿಲ್ಲ**
> **ಶಬೀನಾ ಯಾಸ್ಮಿನ್,** ಬಾಂಗ್ಲಾ ಪುರಾತತ್ವ ಇಲಾಖೆಯ ಅಧಿಕಾರಿ

> **ಹಲವು ವರ್ಷದಿಂದ ಬಂಗಲೆಯು ಶಿಥಿಲಾವಸ್ಥೆಯಲ್ಲಿತ್ತು. ಆದರೂ ಅಧಿಕಾರಿಗಳು ಇದರ ದುರಸ್ತಿಗೆ ಮುಂದಾಗಲಿಲ್ಲ. ಸ್ಥಳೀಯರು ಈ ಬಗ್ಗೆ ಹಲವು ಬಾರಿ ಮನವಿಯನ್ನೂ ಮಾಡಿದ್ದರು**
> **ಶಮೀಮ್ ಅಶ್ರಫ್,** ಬಾಂಗ್ಲಾ ಕವಿ

ಪ್ರಜಾವಾಣಿ

ಕ್ಲಾಸಿಫೈಡ್ಸ್

ಪ್ರತಿಯೊಬ್ಬರಿಗೂ ಉಪಯುಕ್ತ

email: classifieds@deccanherald.co.in

ಜಾಹೀರಾತುಗಳಿಗಾಗಿ ಸಂಪರ್ಕಿಸಿ:

080 - 45557160 /161/ 162/ 163/ 164
9845114560 / 9731810277/ 9886213331

ಉದ್ಯೋಗಾವಕಾಶ

General

ಉದ್ಯೋಗಾವಕಾಶಗಳು TVS ಬ್ರಿಟಾನಿಯಾ, ವಿಡಿಯೋಕಾನ್, ಹಿಮಾಲಯ ಕಂಪನಿಗಳಿಗೆ 7th,PUC, ITI, Degree. ಸಂಬಳ 16,000-86,000/- (ವಿದ್ಯಾರ್ಹತೆಯಿಲ್ಲದವರಿಗೂ) ವಸತಿಯೂಟವಿರುತ್ತದೆ. 9035710381

ನೇರನೇಮಕಾತಿಯಿದೆ. TVS ಟಾಟಾ ಮೋಟಾರ್ಸ್, ಟಯೋಟಾ, ಬ್ರಿಟಾನಿಯಾಗಳಿಗೆ SSLC, PUC, Degree,ITIನವರು, ಡ್ರೈವರ್‌ಗಳು 18,000/- 68,000/- (ವಿದ್ಯಾರ್ಹತೆಯಿಲ್ಲದವರಿಗೂ) ವಸತಿಯೂಟವಿದೆ. 7204995716

Part-Time Jobs

ಮನೆಯಲ್ಲೇ ಕುಳಿತು ನಾವು ಕೊಡುವ ಪುಸ್ತಕ ಬರೆಯುವ ಹಾಗೂ ಫಾರಂತುಂಬುವ ಮೂಲಕ,ತಿಂಗಳಿಗೆ, 15,000.ರಿಂದ 20,000. ಸಂಪಾದಿಸಿ.'ಕೊರಿಯರ್ ಸೌಲಭ್ಯವಿದೆ. 8884777502, 8884777503.

ವ್ಯಾಪಾರ

Business to Business

Finance

ಗೋಲ್ಡ್ ಲೋನ್ 1 ರಿಂದ 2 ಗ್ರಾಂ ಬಂಗಾರವನ್ನು ಖರೀದಿಸಲು ಸಾಲ ಕೊಡಲಾಗುವುದು. Ph: 9036316959, ಬೆಂಗಳೂರು.

ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.

ಜಾಹೀರಾತು ವ್ಯವಸ್ಥಾಪಕರು, ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

ಕ್ಲಾಸಿಫೈಡ್ಸ್ ADMISSION CORNER

VIVEKANANDA INSTITUTE OF TECHNOLOGY
AN INSTITUTE OF JANATHA EDUCATION SOCIETY ®
Recognised by GOK, Affiliated to VTU Approved by AICTE

KCET CODE: E087

Admissions Open 2025-26

B.E: ENGINEERING
CSE | ISE | AI&ML
ECE | MECH | CIVIL

VIVEKANANDA COLLEGES

PHARMA	LAW	DEGREE	MANAGEMENT
D.PHARM	3 YEAR LL.B	B.COM | B.A	BCA
B.PHARM	5 YR B.A LL.B	B.SC | B.ED	BBA
M.PHARM	5 YR B.COM LL.B	B.COM - BDA	MBA

95139 53482 | 7625013637

R & D Centers | Excellent Placement | 4.4 Lac Avg. P.A CTC | Skill Lab | Campus Hostel

VKIT Campus — Gudimavu, Kumbalagodu, Off Mysore Road, Bengaluru - 560 074. Email ID: principal@vitb.ac.in Web: https://vitb.ac.in

JES Main Campus — Dr.Rajkumar Road, Next to Orion Mall, Rajajinagar II Stage, Bengaluru - 560 055. Email ID : admission@jes-edu.in Web : https://jes-edu.in

ಪ್ರವಾಸ

Travel

ಯಶಸ್ವಿ ನಿಯಾತ್ರಾ: 19.7.2025ರಂದು ಒಂದೇ ದಿನದಲ್ಲಿ 3 ಆಂಜನೇಯದರ್ಶನ. 24.7.2025 2ದಿನ ಕೇರಳ ಮಡಾಯಿಕಾವು, ಮಂಗಳೂರು. ಸಂಪರ್ಕಿಸಿ: 9380403793, 9880028516, 8123719590.

ಪ್ರಜಾವಾಣಿ ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
ಸಾರ್ವಜನಿಕ ಪ್ರಕಟಣೆ
BOOK YOUR PUBLIC NOTICE ADS IN PRAJAVANI ALL KARNATAKA, ON ALL DAYS
www.dhclassifieds.com
BOOK NOW
@ 500/-* PER SQCM
ಹೆಚ್ಚಿನ ವಿವರಗಳಿಗಾಗಿ ಸಂಪರ್ಕಿಸಿ:
+91 9886213331 | +91 9731810277
9845114560
*Conditions apply

‘ಎಡವಿದ್ದೇನೆ ಕಲಿತಿದ್ದೇನೆ...’



• ಅಭಿಲಾಷ್ ಪಿ. ಎಸ್.

‘ಒಂದು ಮೊಟ್ಟೆಯ ಕಥೆ’ ಸಿನಿಮಾ ಬಳಿಕ ಮತ್ತೊಮ್ಮೆ ಕಾಮಿಡಿ ಜಾನರ್ ಸಿನಿಮಾವೊಂದನ್ನು ತೆರೆಗೆ ತರುವ ಉತ್ಸಾಹದಲ್ಲಿದ್ದರು ನಟ ರಾಜ್ ಬಿ.ಶೆಟ್ಟಿ. ತಮ್ಮದೇ ತಂಡದಲ್ಲಿದ್ದ ನಟ ಜೆ.ಪಿ.ತುಮಿನಾಡ್‌ಗೆ ನಿರ್ದೇಶನದ ಸಾರಥ್ಯ ನೀಡಿದ್ದ ರಾಜ್, ತಾವೇ ನಿರೂಪಕರಾಗಿ ‘ಸು ಫ್ರಮ್ ಸೋ’ (ಸುಲೋಚನಾ ಫ್ರಮ್ ಸೋಮೇಶ್ವರ) ಸಿನಿಮಾದ ಟ್ರೇಲರ್ ಬಿಡುಗಡೆ ಕಾರ್ಯಕ್ರಮ ನಡೆಸಿಕೊಟ್ಟರು. ಪ್ರಶ್ನೆಗಳಿಗೆ ಉತ್ತರಿಸುತ್ತಾ ನಿರ್ಮಾಪಕನ ಜವಾಬ್ದಾರಿಯನ್ನೂ ನಿರ್ವಹಿಸಿದರು.

ರಾಜ್ ತಮ್ಮ ಲೈಟರ್ ಬುದ್ಧ ಫಿಲಂಸ್‌ನಡಿ ಈ ಸಿನಿಮಾ ನಿರ್ಮಾಣ ಮಾಡಿದ್ದು, ಶಶಿಧರ ಶೆಟ್ಟಿ ಬರೋಡ ಹಾಗೂ ರವಿ ರೈ ಕಳಸ ಸಾಥ್ ನೀಡಿದ್ದಾರೆ. ಸಿನಿಮಾ ಜುಲೈ 25ಕ್ಕೆ ತೆರೆಕಾಣುತ್ತಿದ್ದು, ಮಂಗಳವಾರ (ಜುಲೈ 15) ಚಿತ್ರದ ಟ್ರೇಲರ್ ಬಿಡುಗಡೆಯಾಯಿತು.

‘ಒಂದು ಮೊಟ್ಟೆಯ ಕಥೆ, ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ಕಾಸರಗೋಡು’, ‘ಹಾಸ್ಟೆಲ್ ಹುಡುಗರು’ ಸಿನಿಮಾಗಳು ಗೆಲ್ಲುವುದಕ್ಕೆ ಮುಖ್ಯ ಕಾರಣ ಹಾಸ್ಯ. ನಮ್ಮ ನಿರ್ಮಾಣ ಸಂಸ್ಥೆಯಡಿ ಹಾಸ್ಯಕ್ಕೆ ಒತ್ತು ನೀಡದೆ ಹಲವು ವರ್ಷಗಳೇ ಆಗಿತ್ತು. ‘ಒಂದು ಮೊಟ್ಟೆಯ ಕಥೆ’ ಬಳಿಕ ಈ ಮಾದರಿಯ ಸಿನಿಮಾಗಳನ್ನೇ ಮಾಡಿಲ್ಲ. ಜೆ.ಪಿ.ತುಮಿನಾಡು ಅವರಿಗೆ ಹಾಸ್ಯದಲ್ಲಿ ಹಿಡಿತವಿದೆ. ಕನ್ನಡ ಚಿತ್ರರಂಗಕ್ಕೆ ಅವರು ಹೊಸಬರಾದರೂ, ತುಳು ರಂಗಭೂಮಿಯಲ್ಲಿ ನಾಟಕಗಳನ್ನು ಬರೆದಿದ್ದಾರೆ. ಅವರ ನಟನೆಯ ಸಾಮರ್ಥ್ಯವನ್ನು ‘ಸಪ್ತ ಸಾಗರದಾಚೆ ಎಲ್ಲೋ’ದಲ್ಲಿ ನೋಡಿದ್ದೇವೆ. ‘ಸು ಫ್ರಮ್ ಸೋ’ ಪ್ರೇಕ್ಷಕರಿಗೆ ಭರಪೂರ ಮನರಂಜನೆ ನೀಡಬಲ್ಲ ಹಾಸ್ಯವನ್ನು ಹೊಂದಿದೆ’ ಎಂದು ಮಾತು ಆರಂಭಿಸಿದರು ರಾಜ್.

ಹಾರರ್–ಕಾಮಿಡಿ ಜಾನರ್: ‘ಕ್ಲಾಸಿಕ್ ಕಥೆಗಳು ಎಂದಿಗೂ ಹಳೆಯದಾಗುವುದಿಲ್ಲ. ಟ್ರೆಂಡ್ ನೋಡಿ ಬರವಣಿಗೆ ಮಾಡಬಾರದು. ಈ ಸಿನಿಮಾದ ಕಥೆ ಆಗಿದ್ದು ಆರು ವರ್ಷಗಳ ಹಿಂದೆ. ಅಂದರೆ ಮಲಯಾಳದ ‘ರೋಮಾಂಚಂ’ ಸಿನಿಮಾಗಿಂತ ಮುಂಚೆಯೇ ಈ ಕಥೆ ಆಗಿತ್ತು. ಕಾಮಿಡಿ ಹಾರರ್ ಅಂಶಗಳಿವೆ ಎಂದಾಕ್ಷಣ ‘ರೋಮಾಂಚಂ’ ಮಾದರಿಯದ್ದಲ್ಲ. ಜಾನರ್‌ನಲ್ಲಿ ಸಾಮ್ಯತೆ ಇದೆ ಅಷ್ಟೇ. ಈ ಸಿನಿಮಾ ಬರವಣಿಗೆಯಲ್ಲಿ ಬಲವಾಗಿದೆ’ ಎಂದರು.


ರಾಜ್ ಬಿ.ಶೆಟ್ಟಿ

ದುಡ್ಡಿನ ಹಿಂದೆ ಹೋಗಿಲ್ಲ...

‘ಮನುಷ್ಯ ಎಂದ ಮೇಲೆ ಎಡವುವುದು ಸಹಜ. ಎಡವಿದಾಗ ಕಲಿತಿದ್ದೇನೆ. ನಾನು ‘ಒಂದು ಮೊಟ್ಟೆಯ ಕಥೆ’ ಮಾಡಿದ ಬಳಿಕ ಅದೇ ಜಾನರ್ ಮುಂದುವರಿಸಿದ್ದರೆ ‘ಗರುಡ ಗಮನ...’, ‘ಸ್ವಾತಿ ಮುತ್ತಿನ..’ ರೀತಿಯ ಸಿನಿಮಾಗಳೇ ಬರುತ್ತಿರಲಿಲ್ಲ. ‘ರೂಪಾಂತರ’ ಸಿನಿಮಾ ಮಾಡಿರುವುದರ ಬಗ್ಗೆ ನನಗೆ ಹೆಮ್ಮೆ ಇದೆ. ‘ಟೋಬಿ’ ನಾವು ನಿರೀಕ್ಷಿಸಿದಂತೆ ಯಶಸ್ಸು ಕಾಣಲಿಲ್ಲ. ಒಂದು ಸಿನಿಮಾ ಎಡವಿದರೆ ಕ್ಷಮೆಯನ್ನೂ ಕೊಡಬೇಕು. ಒಂದೇ ಜಾನರ್‌ನ ಸಿನಿಮಾ ಮಾಡುವುದು ನನಗೆ ಖುಷಿ ಕೊಡುವುದಿಲ್ಲ. ಹಾಗಿದ್ದಲ್ಲಿ ‘ಗರುಡ ಗಮನ..’ ಆದ ನಂತರ ಗ್ಯಾಂಗ್‌ಸ್ಟರ್ ಸಿನಿಮಾವನ್ನೇ ಮಾಡಬೇಕಿತ್ತು. ‘ಸ್ವಾತಿ ಮುತ್ತಿನ..’ ಅಲ್ಲ. ಹಾಗೆ ಮಾಡಿದರೆ ದುಡ್ಡಿನ ಹಿಂದೆ ಹೋದಂತೆ ಅನಿಸುತ್ತದೆ’ ಎನ್ನುತ್ತಾ ತಾವು ಈ ಸಿನಿಮಾದಲ್ಲಿ ನಟಿಸಿಲ್ಲ ಎಂದರು.

ಚಿತ್ರದ ತಾರಾಬಳಗದಲ್ಲಿ ಜೆ.ಪಿ.ತುಮಿನಾಡ್, ಶನೀಲ್ ಗೌತಮ್, ಪ್ರಕಾಶ್ ಕೆ.ತುಮಿನಾಡ್, ದೀಪಕ್ ರೈ ಪಾಣಾಜೆ, ಮೈಮ್ ರಾಮದಾಸ್, ಅರ್ಜುನ್ ಕಜೆ ಇದ್ದಾರೆ. ಎಸ್.ಚಂದ್ರಶೇಖರನ್ ಛಾಯಾಚಿತ್ರಗ್ರಹಣ, ಸಂದೀಪ್ ತುಳಸೀದಾಸ್ ಹಿನ್ನೆಲೆ ಸಂಗೀತ ಚಿತ್ರಕ್ಕಿದೆ. ❖

> ಸಿನಿಮಾದಲ್ಲಿ ಸಣ್ಣ ಸಿನಿಮಾ, ದೊಡ್ಡ ಸಿನಿಮಾ ಎಂದಿಲ್ಲ. ಇರುವುದು ಒಳ್ಳೆಯ ಸಿನಿಮಾ, ಕೆಟ್ಟ ಸಿನಿಮಾವಷ್ಟೇ. ನಮ್ಮ ಸಿನಿಮಾಗಳನ್ನು ನೋಡುತ್ತಿಲ್ಲ ಎನ್ನುವುದಕ್ಕಿಂತ ನಾವು ಒಳ್ಳೆಯ ಸಿನಿಮಾಗಳನ್ನು ಮಾಡಬೇಕು ಎನ್ನುವ ಹೋರಾಟ ನಮ್ಮೊಳಗೆಯೇ ಇರಬೇಕು. ಸುಮಾರು ₹30 ಲಕ್ಷದಲ್ಲಿ ಮಾಡಿದ ಒಂದು ಮೊಟ್ಟೆಯ ಕಥೆ ಸಿನಿಮಾ ಓಡುತ್ತದೆ ಎಂದರೆ ಜನರಿಗೆ ಬಜೆಟ್ ಮುಖ್ಯವಲ್ಲ.
> **ರಾಜ್ ಬಿ.ಶೆಟ್ಟಿ**, ನಟ

ನಿರ್ದೇಶಕನಾಗಬೇಕೆಂದೇ ಬಂದಿದ್ದೆ...

ತಮ್ಮ ಚೊಚ್ಚಲ ನಿರ್ದೇಶನದ ಸಿನಿಮಾ ಬಗ್ಗೆ ಮಾತನಾಡಿದ ಜೆ.ಪಿ.ತುಮಿನಾಡು, ‘ಆರೇಳು ವರ್ಷಗಳ ಮುಂಚೆ ಸಿನಿಮಾ ಕಥೆ ಬರೆಯಿರಿ ಎಂದು ರಾಜ್ ಬಿ.ಶೆಟ್ಟಿ ಅವರು ಹೇಳಿದ್ದರು. ಆ ಸಮಯದಲ್ಲಿ ಇದೇ ಸಿನಿಮಾದ ಕಥೆ ಹೇಳಿದ್ದೆ. ನಮ್ಮೂರಿನಲ್ಲೇ ನೋಡಿದ್ದ ವ್ಯಕ್ತಿಯನ್ನು ಪಾತ್ರವಾಗಿಟ್ಟುಕೊಂಡು ಒನ್ ಲೈನ್ ವಿವರಿಸಿದ್ದೆ. ಇದು ಒಪ್ಪಿಗೆಯಾಗಿ ಇದೀಗ ಸಿನಿಮಾವಾಗಿದೆ. ಹಾರರ್ ಅಂಶಗಳು ಸಿನಿಮಾದಲ್ಲಿವೆ. ಕಾಮಿಡಿ–ಹಾರರ್ ಜಾನರ್‌ನಲ್ಲಿ ಚಿತ್ರವಿದೆ. ನಿರ್ದೇಶನ ಮಾಡಬೇಕೆಂದೇ ಇಲ್ಲಿಗೆ ಹೆಜ್ಜೆ ಇಟ್ಟಿದ್ದೆ. ಆದರೆ ಈ ಸಿನಿಮಾದ ಸಿದ್ಧತೆ ಸಂದರ್ಭದಲ್ಲೇ ನಟನೆಯ ಅವಕಾಶಗಳೂ ದೊರೆತವು’ ಎಂದರು.

ಅಂಕಿತ ಅಮರ್, ಶೈನ್ ಶೆಟ್ಟಿ

‘ಜಸ್ಟ್ ಮ್ಯಾರೀಡ್’ ಶೀಘ್ರದಲ್ಲಿ ತೆರೆಗೆ

ಶೈನ್ ಶೆಟ್ಟಿ, ಅಂಕಿತ ಅಮರ್ ನಟನೆಯ ‘ಜಸ್ಟ್ ಮ್ಯಾರೀಡ್’ ಚಿತ್ರ ತೆರೆಗೆ ಬರಲು ಸಿದ್ಧವಾಗಿದೆ. ಇತ್ತೀಚೆಗಷ್ಟೇ ಚಿತ್ರದ ಸೆನ್ಸಾರ್ ಪ್ರಕ್ರಿಯೆ ಮುಗಿದಿದೆ. ಸಿ.ಆರ್. ಬಾಬಿ ನಿರ್ದೇಶನದ ಚಿತ್ರಕ್ಕೆ ಸಂಗೀತ ನಿರ್ದೇಶಕ ಅಜನೀಶ್ ಲೋಕನಾಥ್ ಬಂಡವಾಳ ಹೂಡಿದ್ದಾರೆ.

‘ಇತ್ತೀಚೆಗೆ ಈ ಚಿತ್ರವನ್ನು ವೀಕ್ಷಿಸಿದ ಪ್ರಾದೇಶಿಕ ಸೆನ್ಸಾರ್ ಮಂಡಳಿ ಯು/ಎ ಪ್ರಮಾಣಪತ್ರವನ್ನು ನೀಡಿದೆ. ಸದ್ಯದಲ್ಲೇ ಚಿತ್ರ ಬಿಡುಗಡೆ ದಿನಾಂಕವನ್ನು ತಿಳಿಸುತ್ತೇವೆ. ಪ್ರೇಮಕಥೆಯೊಂದಿಗೆ ಕೌಟುಂಬಿಕ ಕಥಾಹಂದರವನ್ನೂ ಹೊಂದಿರುವ ಚಿತ್ರವಿದು. ಈಗಾಗಲೇ ಬಿಡುಗಡೆಯಾಗಿರುವ ಚಿತ್ರದ ಹಾಡುಗಳು ಹಾಗೂ ಟೀಸರ್‌ಗೆ ಪ್ರೇಕ್ಷಕರು ಪ್ರಶಂಸೆ ವ್ಯಕ್ತಪಡಿಸಿದ್ದಾರೆ’ ಎಂದಿದೆ ಚಿತ್ರತಂಡ.

ದೇವರಾಜ್, ಅಚ್ಯುತಕುಮಾರ್, ಮಾಳವಿಕ ಅವಿನಾಶ್, ಅನೂಪ್ ಭಂಡಾರಿ, ಶ್ರುತಿ ಹರಿಹರನ್, ಶ್ರುತಿ ಕೃಷ್ಣ, ಸಾಕ್ಷಿ ಅಗರವಾಲ್, ಶ್ರೀಮಾನ್, ರವಿಶಂಕರ್ ಗೌಡ, ರವಿ ಭಟ್, ವಾಣಿ ಹರಿಕೃಷ್ಣ ಮುಂತಾದವರು ಈ ಚಿತ್ರದಲ್ಲಿ ಅಭಿನಯಿಸಿದ್ದಾರೆ.

ಚಿತ್ರದಲ್ಲಿ ಆರು ಹಾಡುಗಳಿದ್ದು ಅಜನೀಶ್ ಲೋಕನಾಥ್ ಅವರೇ ಸಂಗೀತ ಸಂಯೋಜನೆ ಮಾಡಿದ್ದಾರೆ. ಚಿತ್ರಕಥೆ ಸಿ.ಆರ್.ಬಾಬಿ ಹಾಗೂ ಧನಂಜಯ್ ರಂಜನ್ ಅವರದ್ದು. ರಘು ನಿಡುವಳ್ಳಿ ಸಂಭಾಷಣೆ, ಪಿ.ಜಿ. ಛಾಯಾಚಿತ್ರಗ್ರಹಣ, ಶ್ರೀಕಾಂತ್ ಮತ್ತು ಪ್ರತೀಕ್ ಶೆಟ್ಟಿ ಸಂಕಲನವಿದೆ. ❖

‘ಮಗ್ಗಿಪುಸ್ತಕ’ಕ್ಕೆ ಧ್ವನಿಯಾದ ಕೀರವಾಣಿ

ಬಹುತೇಕ ಹೊಸಬರೆ ಸೇರಿ ನಿರ್ಮಿಸುತ್ತಿರುವ ‘ಮಗ್ಗಿಪುಸ್ತಕ’ ಚಿತ್ರದ ಹಾಡೊಂದಕ್ಕೆ ಜನಪ್ರಿಯ ಗಾಯಕ ಎಂ.ಎಂ.ಕೀರವಾಣಿ ಧ್ವನಿಯಾಗಿದ್ದಾರೆ. ಈ ಚಿತ್ರವನ್ನು ಹರಿವರಾಸನಂ ಕಥೆ, ಚಿತ್ರಕಥೆ ಬರೆದು ನಿರ್ದೇಶನ ಮಾಡುತ್ತಿದ್ದಾರೆ. ಚಿನ್ನಸ್ವಾಮಿ ಯತಿರಾಜ್ ಚಿತ್ರಕ್ಕೆ ಬಂಡವಾಳ ಹೂಡಿದ್ದಾರೆ.

‘ಯಶಸ್ ನಾಚಪ್ಪ ಸಂಗೀತ ನಿರ್ದೇಶನವಿದೆ. ‘ಬಾಹುಬಲಿ’, ‘ಆರ್‌ಆರ್‌ಆರ್’ ಖ್ಯಾತಿಯ ಎಂ.ಎಂ.ಕೀರವಾಣಿ ತುಂಬಾ ವರ್ಷಗಳ ನಂತರ ಕನ್ನಡ ಹಾಡಿಗೆ ಧ್ವನಿಯಾಗಿರುವುದು ವಿಶೇಷ. ವಿಷ್ಣುವರ್ಧನ್ ಅವರ ‘ಅಪ್ಪಾಜಿ’, ‘ಜಮೀನ್ದಾರ’ ಚಿತ್ರದ ನಂತರ ಕನ್ನಡದಲ್ಲಿ ಅವರು ನಮ್ಮ ಚಿತ್ರದ ಹಾಡಿಗೆ ಧ್ವನಿಯಾಗಿದ್ದಾರೆ. ಚಿತ್ರದಲ್ಲಿ ಏಳು ಹಾಡುಗಳಿದ್ದು ಕನ್ನಡದ ಹೆಸರಾಂತ ಗಾಯಕರಾದ ರಾಜೇಶ್ ಕೃಷ್ಣನ್, ವಿಜಯ ಪ್ರಕಾಶ್, ಗುರುರಾಜ್ ಹೊಸಕೋಟೆ, ನವೀನ್ ಸಜ್ಜು, ರವೀಂದ್ರ ಸುರಗಾವಿ ಸೇರಿದಂತೆ 18 ಗಾಯಕರು ಹಾಡಿದ್ದಾರೆ. ಇದೊಂದು ಸದಭಿರುಚಿಯ ಮಕ್ಕಳ ಚಿತ್ರ. ಪೋಸ್ಟ್ ಪ್ರೊಡಕ್ಷನ್ ಮುಗಿಸಿ ಸೆನ್ಸಾರ್ ಹಂತದಲ್ಲಿದೆ’ ಎಂದಿದ್ದಾರೆ ನಿರ್ದೇಶಕರು.

ರಂಜನ್ ಕಾಸರಗೋಡು, ರಕ್ಷ ಗೌಡ, ಮೇಘನಾ, ರಾನ್ವಿ ಶೇಖರ್ ಮುಂತಾದವರು ಚಿತ್ರದಲ್ಲಿದ್ದಾರೆ. ಬೆಂಗಳೂರು, ಮೈಸೂರು, ಮಂಡ್ಯ, ಶ್ರೀರಂಗಪಟ್ಟಣ, ಮಂಗಳೂರು, ಎಚ್.ಡಿ. ಕೋಟೆ ಸುತ್ತಮುತ್ತ ಚಿತ್ರೀಕರಣಗೊಂಡಿದೆ. ನಂದಕುಮಾರ್ ಛಾಯಾಚಿತ್ರಗ್ರಹಣ, ಶಿವಕುಮಾರ್ ಸಂಕಲನ ಚಿತ್ರಕ್ಕಿದೆ. ❖

‘ಅಕ್ಬರ್ ಆಳ್ವಿಕೆ: ಕ್ರೌರ್ಯ, ಸಹಿಷ್ಣುತೆ ಮಿಶ್ರಣ’

ಎನ್‌ಸಿಇಆರ್‌ಟಿ ಸಿದ್ಧಪಡಿಸಿರುವ 8ನೇ ತರಗತಿಯ ಹೊಸ ಪಠ್ಯಪುಸ್ತಕದಲ್ಲಿ ವಿವರಣೆ

ನವದೆಹಲಿ (ಪಿಟಿಐ): ಮೊಘಲ್ ದೊರೆಗಳ ಪೈಕಿ ಅಕ್ಬರ್‌ನ ಆಳ್ವಿಕೆಯು ‘ಕ್ರೌರ್ಯ’ ಮತ್ತು ‘ಸಹಿಷ್ಣುತೆ’ಯಿಂದ ಕೂಡಿತ್ತು. ಬಾಬರ್ ‘ನಿರ್ದಯಿ’ ಆಗಿದ್ದರೆ, ಮುಸ್ಲಿಮೇತರರ ಮೇಲೆ ತೆರಿಗೆ ವಿಧಿಸಿದ್ದ ಔರಂಗಜೇಬ್ ‘ಸೇನಾ ಆಡಳಿತಗಾರ’ನಾಗಿದ್ದ...

ರಾಷ್ಟ್ರೀಯ ಶೈಕ್ಷಣಿಕ ಸಂಶೋಧನೆ ಮತ್ತು ತರಬೇತಿ ಪರಿಷತ್ತು (ಎನ್‌ಸಿಇಆರ್‌ಟಿ) ಸಿದ್ಧಪಡಿಸಿರುವ 8ನೇ ತರಗತಿಯ ಹೊಸ ಪಠ್ಯಪುಸ್ತಕದಲ್ಲಿ ಮೊಘಲ್ ದೊರೆಗಳ ಕುರಿತ ಅಂಶಗಳಿವು. ಎನ್‌ಸಿಇಆರ್‌ಟಿ, ‘ಎಕ್ಸ್‌ಪ್ಲೋರಿಂಗ್ ಸೊಸೈಟಿ: ಇಂಡಿಯಾ ಆ್ಯಂಡ್ ಬಿಯಾಂಡ್’ ಎಂಬ ಪಠ್ಯಪುಸ್ತಕ ಬಿಡುಗಡೆ ಮಾಡಿದೆ.

ದೆಹಲಿ ಸುಲ್ತಾನರು, ಮೊಘಲರು, ಮರಾಠರು ಹಾಗೂ ವಸಾಹತುಶಾಹಿ ಕಾಲ ಕುರಿತು ಪಾಠಗಳು ಇದರಲ್ಲಿವೆ. ‘ಪಠ್ಯಪುಸ್ತಕದ ಈ ಹಿಂದಿನ ಆವೃತ್ತಿಗಳಲ್ಲಿ, ಈ ವಿಷಯಗಳಿಗೆ ಸಂಬಂಧಿಸಿದ ಪಾಠಗಳು 7ನೇ ತರಗತಿಗೆ ಇದ್ದವು. ಆದರೆ, ಈಗ ಘಟನಾವಳಿ ಬದಲಾಗಿವೆ. ‘ಶಾಲಾ ಶಿಕ್ಷಣಕ್ಕಾಗಿ ರಾಷ್ಟ್ರೀಯ ಪಠ್ಯಕ್ರಮ ಚೌಕಟ್ಟು–2023’ (ಎನ್‌ಸಿಎಫ್‌ಎಸ್‌ಇ) ಅನುಸಾರ ಈ ಎಲ್ಲ ಪಾಠಗಳನ್ನು 8ನೇ ತರಗತಿ ಪಠ್ಯದಲ್ಲಿ ಅಳವಡಿಸಲಾಗಿದೆ’ ಎಂದು ಎನ್‌ಸಿಇಆರ್‌ಟಿ ಹೇಳಿದೆ.

> **ಪಠ್ಯಪುಸ್ತಕ ಪರಿಷ್ಕರಣೆಯನ್ನು ಸರಿಯಾಗಿಯೇ ಮಾಡಲಾಗಿದೆ. ಮೊಘಲ್ ದೊರೆಗಳನ್ನು ಕೆಟ್ಟದಾಗಿ ಚಿತ್ರಿಸುವ ಪ್ರಯತ್ನ ಮಾಡಿಲ್ಲ**
> **ಮೈಕಲ್ ಡ್ಯಾನಿನೊ**, ಸಮಾಜವಿಜ್ಞಾನ ಪಠ್ಯಕ್ರಮ ಕುರಿತ ಕ್ಷೇತ್ರೀಯ ಗುಂಪಿನ ಮುಖ್ಯಸ್ಥ

> **ಮೊಘಲ್ ದೊರೆಗಳ ದೀರ್ಘ ಕಾಲದ ಆಳ್ವಿಕೆ ಬಗ್ಗೆ ನಮ್ಮ ಮುಂದಿನ ಪೀಳಿಗೆ ತಿಳಿಯಬೇಕು, ದೇಶದಲ್ಲಿ ಏನೇನು ನಡೆದಿದೆ ಎಂಬ ಬಗ್ಗೆ ಅಧ್ಯಯನ ಮಾಡಿ, ನಾವು ಸತ್ಯ ಸಂಗತಿ ಒಪ್ಪಿಕೊಳ್ಳಬೇಕು**
> **ಬಿ.ಎಲ್.ವರ್ಮಾ**, ಕೇಂದ್ರ ಸಚಿವ

ಪಠ್ಯಪುಸ್ತಕದಲ್ಲಿನ ಪ್ರಮುಖ ಅಂಶಗಳು

- ಪಠ್ಯಪುಸ್ತಕದ ಆರಂಭದಲ್ಲಿ ‘ನೋಟ್ ಆನ್ ಸಮ್ ಡಾರ್ಕರ್ ಪಿರಿಯಡ್ಸ್ ಇನ್ ಹಿಸ್ಟರಿ’ ಎಂಬ ಭಾಗ ಇದೆ. ಪ್ರಮುಖವಾಗಿ ಯುದ್ಧ ಮತ್ತು ರಕ್ತಪಾತಕ್ಕೆ ಕಾರಣವಾದ ಘಟನೆಗಳಿಗೆ ಸಂಬಂಧಿಸಿದ ಸೂಕ್ಷ್ಮ ವಿಷಯಗಳನ್ನು ಇಲ್ಲಿ ಕೊಡಲಾಗಿದೆ
- ಕ್ರೌರ್ಯದಿಂದ ಕೂಡಿದ ಹಿಂಸೆ, ದುರಾಡಳಿತ ಮತ್ತು ಅಧಿಕಾರಸ್ಥರ ತಪ್ಪಾದ ಮಹತ್ವಾಕಾಂಕ್ಷೆಗಳ ಕುರಿತು ವಿದ್ಯಾರ್ಥಿಗಳು ತಿಳಿದುಕೊಳ್ಳಬೇಕು. ಗತಕಾಲದ ಈ ಕೃತ್ಯಗಳು/ಘಟನೆಗಳಿಗಾಗಿ ಪ್ರಸ್ತುತ ಯಾವ ವ್ಯಕ್ತಿಯನ್ನೂ ಹೊಣೆ ಮಾಡಕೂಡದು ಎಂಬ ಟಿಪ್ಪಣಿಯೂ ಇದೆ
- ಭಾರತದ 13ರಿಂದ 17ನೇ ಶತಮಾನ ವರೆಗಿನ ಇತಿಹಾಸ ಕುರಿತು ‘ರಿಶೇಪಿಂಗ್ ಇಂಡಿಯಾಸ್ ಪೊಲಿಟಿಕಲ್ ಮ್ಯಾಪ್’ ಎಂಬ ಪಾಠ ಇದೆ. ದೆಹಲಿ ಸುಲ್ತಾನರ ಉಗಮ ಮತ್ತು ಪತನ, ಸುಲ್ತಾನರಿಗೆ ವಿಜಯನಗರ ಸಾಮ್ರಾಜ್ಯದಿಂದ ವ್ಯಕ್ತವಾಗಿದ್ದ ಪ್ರತಿರೋಧ, ಮೊಘಲರ ಆಳ್ವಿಕೆ ಹಾಗೂ ಅವರಿಗೆ ಒಡ್ಡಲಾಗಿದ್ದ ಪ್ರತಿರೋಧ, ಸಿಖ್ ಧರ್ಮದ ಉಗಮ ಕುರಿತು ವಿವರಿಸಲಾಗಿದೆ
- ಮೊಘಲ್ ದೊರೆ ಬಾಬರ್ ಕುರಿತ ಪಠ್ಯದಲ್ಲಿ ಆತನನ್ನು ‘ಕ್ರೂರಿ ಮತ್ತು ನಿರ್ದಯಿ ನಾಯಕ, ನಗರ ಪ್ರದೇಶಗಳ ನಿವಾಸಿಗಳನ್ನು ವಧೆ ಮಾಡಿದ ವ್ಯಕ್ತಿ’ ಎಂದು ವಿವರಿಸಲಾಗಿದೆ. ಔರಂಗಜೇಬ್ ಕುರಿತಂತೆ ‘ದೇವಸ್ಥಾನಗಳು ಹಾಗೂ ಗುರುದ್ವಾರಗಳನ್ನು ಧ್ವಂಸಗೊಳಿಸಿದ ಸೇನಾಡಳಿತಗಾರ’ ಎಂದು ವಿವರಿಸಲಾಗಿದೆ
- ದೆಹಲಿ ಸುಲ್ತಾನರು ಹಾಗೂ ಮೊಘಲರ ಕುರಿತು ವಿವರಿಸುವ ಈ ಪಾಠದಲ್ಲಿ ‘ಈ ರಾಜಮನೆತನಗಳ ಅವಧಿಯಲ್ಲಿ ಧಾರ್ಮಿಕ ಅಸಹಿಷ್ಣುತೆಯ ಹಲವಾರು ಘಟನೆಗಳು ನಡೆದಿವೆ’ ಎಂಬ ಉಲ್ಲೇಖವಿದೆ
- ಅಕ್ಬರ್ ಆಳ್ವಿಕೆಯು ‘ಕ್ರೌರ್ಯ ಮತ್ತು ಸಹಿಷ್ಣುತೆಯ ಮಿಶ್ರಣವಾಗಿತ್ತು’ ಎಂದು ಹೇಳಲಾಗಿದೆ. ಆಡಳಿತದ ಉನ್ನತ ಸ್ಥಾನಗಳಲ್ಲಿ ಮುಸ್ಲಿಮೇತರರ ಸಂಖ್ಯೆ ಕಡಿಮೆ ಇತ್ತು. ಚಿತ್ತೂರಗಢ ವಶಪಡಿಸಿಕೊಂಡ ನಂತರ ಅಂದಾಜು 30 ಸಾವಿರ ನಾಗರಿಕರ ಹತ್ಯೆಗೆ ಅಕ್ಬರ್ ಆದೇಶಿಸಿದ್ದ ಎಂದು ವಿವರಿಸಲಾಗಿದೆ
- ರಕ್ಷಣೆ ಹಾಗೂ ಸೇನೆಗೆ ಸೇರುವುದರಿಂದ ವಿನಾಯಿತಿ ನೀಡುವುದಕ್ಕಾಗಿ ಅಕ್ಬರ್ ಆಳ್ವಿಕೆಯಲ್ಲಿ ಮುಸ್ಲಿಮೇತರರಿಗೆ ‘ಜಿಜಿಯಾ’ ಎಂಬ ತೆರಿಗೆ ವಿಧಿಸಲಾಗುತ್ತಿತ್ತು. ಇಸ್ಲಾಮ್‌ಗೆ ಮತಾಂತರಗೊಂಡವರಿಗೆ ಪ್ರೋತ್ಸಾಹಧನ ನೀಡಲು ತೆರಿಗೆ ಹಣ ಬಳಕೆ ಆಗುತ್ತಿತ್ತು ಎಂಬ ಮಾಹಿತಿ ಇದೆ.
- ಭಾರತೀಯ ಸಮಾಜದಿಂದ ಆಗ ಹೊಂದಿಕೊಳ್ಳುವ ಗುಣ ವ್ಯಕ್ತವಾಗಿತ್ತು. ಪಟ್ಟಣಗಳು, ನಗರಗಳು, ದೇವಸ್ಥಾನಗಳಲ್ಲದೇ, ಅರ್ಥವ್ಯವಸ್ಥೆಯ ಮರುನಿರ್ಮಾಣದ ಮೂಲಕ ಭಾರತೀಯ ಸಮಾಜವು ತನ್ನ ಪುಟಿದೇಳುವ ಗುಣ ಪ್ರದರ್ಶಿಸಿತು.
- ‘ಶಿವಾಜಿ ಮಹಾರಾಜ್ ಮಹಾನ್ ತಂತ್ರಗಾರ’ ಎಂದು ಬಣ್ಣಿಸಲಾಗಿದೆ. ಹಿಂದೂ ಧರ್ಮದ ಮೌಲ್ಯ ಎತ್ತಿ ಹಿಡಿಯುವ ಜೊತೆಗೆ ಇತರ ಧರ್ಮಗಳನ್ನು ಗೌರವಿಸುತ್ತಿದ್ದ ಎಂದು ವಿವರಿಸಲಾಗಿದೆ

ಪ್ರತಿಭಟನೆಯಲ್ಲಿ ಬಿಜೆಪಿ ವಿರುದ್ಧ ಮಮತಾ ಆಕ್ರೋಶ

‘ಬೆಂಗಾಲಿ ಭಾಷಿಕರ ಮೇಲೆ ದೌರ್ಜನ್ಯ’

ಕೋಲ್ಕತ್ತ (ಪಿಟಿಐ): ಬಿಜೆಪಿ ಆಡಳಿತವಿರುವ ರಾಜ್ಯಗಳಲ್ಲಿ ಬೆಂಗಾಲಿ ಭಾಷೆ ಮಾತನಾಡುವ ಜನರ ಮೇಲೆ ದೌರ್ಜನ್ಯ ಎಸಗಲಾಗುತ್ತಿದೆ ಎಂದು ಆರೋಪಿಸಿ ಪಶ್ಚಿಮ ಬಂಗಾಳ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ನೇತೃತ್ವದಲ್ಲಿ ಕೋಲ್ಕತ್ತದಲ್ಲಿ ಬುಧವಾರ ಬೃಹತ್ ಪ್ರತಿಭಟನಾ ಮೆರವಣಿಗೆ ನಡೆಯಿತು.

ಬಳಿಕ ರ‍್ಯಾಲಿಯನ್ನು ಉದ್ದೇಶಿಸಿ ಮಾತನಾಡಿದ ಮಮತಾ, ‘ಪಶ್ಚಿಮ ಬಂಗಾಳದ ಸುಮಾರು 22 ಲಕ್ಷ ವಲಸೆ ಕಾರ್ಮಿಕರು ವಿವಿಧ ರಾಜ್ಯಗಳಲ್ಲಿದ್ದಾರೆ. ಇವರ ಬಳಿ ಆಧಾರ ಕಾರ್ಡ್, ಮತದಾರರ ಗುರುತಿನ ಚೀಟಿಸೇರಿ ಎಲ್ಲ ದಾಖಲೆಗಳಿವೆ. ಬಿಜೆಪಿ ಆಡಳಿತವಿರುವ ರಾಜ್ಯಗಳಲ್ಲಿ ಬೆಂಗಾಲಿ ಮಾತನಾಡುವ ಇವರನ್ನು ರೋಹಿಂಗ್ಯ ಮುಸ್ಲಿಮರು ಎನ್ನಲಾಗುತ್ತಿದೆ. ಇದನ್ನು ಸಾಬೀತು ಮಾಡಿ’ ಎಂದು ಸವಾಲು ಹಾಕಿದರು.

‘ಬೆಂಗಾಲಿ ಜನರನ್ನು ಈ ರೀತಿಯಾಗಿ ಹಿಂಸಿಸಲು ಬಿಜೆಪಿಗೆ ಯಾವ ಅಧಿಕಾರವಿದೆ. ಬೆಂಗಾಲಿ ಜನರನ್ನು ಬಂಧಿಸುತ್ತೀರಿ, ಒತ್ತಾಯಪೂರ್ವಕವಾಗಿ ಬಾಂಗ್ಲಾದೇಶಕ್ಕೆ ಕಳುಹಿಸುತ್ತೀರಿ. ಹಾಗಾದರೆ, ಪಶ್ಚಿಮ ಬಂಗಾಳವು ಭಾರತದ ಭಾಗವಲ್ಲವೇ?’ ಎಂದರು.

ಮಮತಾ ಬ್ಯಾನರ್ಜಿ ನೇತೃತ್ವದಲ್ಲಿ ಕೋಲ್ಕತ್ತದಲ್ಲಿ ಬುಧವಾರ ಪ್ರತಿಭಟನೆ ನಡೆಯಿತು —ಪಿಟಿಐ ಚಿತ್ರ

‘ಎಸ್‌ಐಟಿ ತಾನಾಗಿಯೇ ತನಿಖೆಯ ದಿಕ್ಕು ತಪ್ಪಿಸಿದೆ’

ಅಶೋಕ ವಿವಿ ಪ್ರಾಧ್ಯಾಪಕನ ಪ್ರಕರಣ

ಪ್ರಜಾವಾಣಿ ವಾರ್ತೆ

ನವದೆಹಲಿ: ಅಶೋಕ ವಿಶ್ವವಿದ್ಯಾಲಯದ ಪ್ರಾಧ್ಯಾಪಕ ಅಲಿ ಖಾನ್ ಮಹಮೂದಾಬಾದ್ ವಿರುದ್ಧ ನಡೆಯುತ್ತಿರುವ ತನಿಖೆಯು ದಾರಿ ತಪ್ಪಿದೆ ಎಂದು ಸುಪ್ರೀಂ ಕೋರ್ಟ್ ಬುಧವಾರ ಅಸಮಾಧಾನ ವ್ಯಕ್ತಪಡಿಸಿದೆ.

‘ಪ್ರಕರಣ ಕುರಿತು ತನಿಖೆ ನಡೆಸುವುದಕ್ಕೆ ತನ್ನ ನಿರ್ದೇಶನದ ಪ್ರಕಾರ ಎಸ್‌ಐಟಿ ರಚಿಸಲಾಗಿದೆ. ಆದರೆ, ಸ್ವತಃ ಎಸ್‌ಐಟಿಯೇ ತನಿಖೆಯ ದಿಕ್ಕನ್ನು ಬದಲಿಸಿದೆ’ ಎಂದು ಹೇಳಿದೆ. ಅರ್ಜಿಯ ವಿಚಾರಣೆ ನಡೆಸಿದ, ನ್ಯಾಯಮೂರ್ತಿಗಳಾದ ಸೂರ್ಯಕಾಂತ್ ಮತ್ತು ಜಾಯಮಾಲ್ಯಾ ಬಾಗ್ಚಿ ಅವರು ಇದ್ದ ನ್ಯಾಯಪೀಠ, ‘ತನಿಖೆ ನಡೆಸುವುದಕ್ಕೆ ನಿಮಗೆ ಅವರ (ಅಲಿ ಖಾನ್ ಮಹಮೂದಾಬಾದ್) ಅಗತ್ಯ ಇಲ್ಲ, ನಿಮಗೆ ನಿಘಂಟುವೊಂದರ ಅವಶ್ಯಕತೆ ಇದೆ’ ಎಂದು ಕುಟುಕಿದೆ.

ವಿಚಾರಣೆಗೆ ಹಾಜರಾಗುವಂತೆ ಅಲಿ ಖಾನ್ ಅವರಿಗೆ ಇನ್ನು ಮುಂದೆ ಸಮನ್ಸ್ ಜಾರಿಗೊಳಿಸಬಾರದು. ಅಪರಾಧ ಎಸಗಲಾಗಿದೆಯೇ ಎಂಬ ಬಗ್ಗೆ ಪರಿಶೀಲಿಸಿ, ನಾಲ್ಕು ವಾರಗಳ ಒಳಗಾಗಿ ವರದಿ ಸಲ್ಲಿಸಬೇಕು ಎಂದು ಎಸ್‌ಐಟಿಗೆ ನಿರ್ದೇಶಿಸಿತು.

ಆಪರೇಷನ್ ಸಿಂಧೂರ ಕುರಿತು ಅಲಿ ಖಾನ್ ಅವರು ಸಾಮಾಜಿಕ ಮಾಧ್ಯಮದಲ್ಲಿ ಮಾಡಿದ್ದ ಪೋಸ್ಟ್‌ಗಳಿಗೆ ಸಂಬಂಧಿಸಿ ಅವರ ವಿರುದ್ಧ ಪ್ರಕರಣ ದಾಖಲಿಸಿ, ತನಿಖೆ ಕೈಗೊಳ್ಳಲಾಗಿದೆ. ‘ಸಾಮಾಜಿಕ ಮಾಧ್ಯಮಗಳಲ್ಲಿ ಮಾಡಿದ್ದಾರೆ ಎನ್ನಲಾದ ವಿವಾದಾತ್ಮಕ ಪೋಸ್ಟ್‌ಗಳಿಗೆ ಸಂಬಂಧಿಸಿ ಪ್ರಾಧ್ಯಾಪಕ ಅಲಿ ಖಾನ್ ವಿರುದ್ಧದ ಎರಡು ಎಫ್‌ಐಆರ್‌ಗಳಿಗೆ ಸೀಮಿತವಾಗಿ ತನಿಖೆ ನಡೆಸಬೇಕು’ ಎಂದು ಎಸ್‌ಐಟಿ ಮುಖ್ಯಸ್ಥರಾದ ಹರಿಯಾಣದ ಹಿರಿಯ ಪೊಲೀಸ್ ಅಧಿಕಾರಿಗೆ ನ್ಯಾಯಪೀಠ ಸೂಚಿಸಿತು.

ವಿಚಾರಣೆ ವೇಳೆ, ‘ಎಸ್‌ಐಟಿ ಸ್ವತಃ ತನಿಖೆಯ ದಿಕ್ಕನ್ನೇ ಏಕೆ ಬದಲಿಸಿತು ಎಂಬುದು ನಮ್ಮ ಪ್ರಶ್ನೆ. ಸಾಮಾಜಿಕ ಮಾಧ್ಯಮಗಳಲ್ಲಿ ಮಾಡಲಾಗಿರುವ ಪೋಸ್ಟ್‌ಗಳ ವಿಷಯವಸ್ತು ಕುರಿತು ಎಸ್‌ಐಟಿ ತನಿಖೆ ಮಾಡಬೇಕು’ ಎಂದು ನ್ಯಾಯಪೀಠ ಹೇಳಿತು. ರಾಜ್ಯ ಸರ್ಕಾರ ಪರ ಹಾಜರಿದ್ದ ವಕೀಲ, ‘ವಿಚಾರಣೆಗೆ ಹಾಜರಾಗುವಂತೆ ಸೂಚಿಸಿ, ತನಿಖೆಯ ಯಾವುದೇ ಹಂತದಲ್ಲಿ ಪ್ರಾಧ್ಯಾಪಕ ಅಲಿ ಖಾನ್ ಅವರಿಗೆ ಸಮನ್ಸ್ ನೀಡಬಹುದೇ?’ ಎಂದರು.

ಇದಕ್ಕೆ ಪ್ರತಿಕ್ರಿಯಿಸಿದ ನ್ಯಾಯಪೀಠ, ‘ತನಿಖೆ ನಡೆಸುವುದಕ್ಕೆ ನಿಮಗೆ ಅವರ ಅಗತ್ಯ ಇಲ್ಲ. ಒಂದು ನಿಘಂಟಿನ ಅವಶ್ಯಕತೆ ಇದೆ’ ಎಂದಿತು.

ಅಲಿ ಖಾನ್ ಪರ ಹಿರಿಯ ವಕೀಲ ಕಪಿಲ್ ಸಿಬಲ್ ವಾದ ಮಂಡಿಸಿದರು.

ಸಂಸತ್ ಅಧಿವೇಶನ: 8 ಮಸೂದೆ ಮಂಡನೆ

ನವದೆಹಲಿ (ಪಿಟಿಐ): ಸಂಸತ್ತಿನ ಮುಂಗಾರು ಅಧಿವೇಶನ ಇದೇ 21ರಿಂದ ಆರಂಭವಾಗಲಿದ್ದು, ಭೂಪರಂಪರೆಯ ತಾಣಗಳು ಮತ್ತು ಭೂ ಅವಶೇಷಗಳ ಸಂರಕ್ಷಣೆ ಮತ್ತು ನಿರ್ವಹಣೆ , ರಾಷ್ಟ್ರೀಯ ಕ್ರೀಡಾ ಆಡಳಿತ ಮಸೂದೆ, ಗಣಿ ಮತ್ತು ಖನಿಜಗಳ (ಅಭಿವೃದ್ಧಿ ಮತ್ತು ನಿಯಂತ್ರಣ) ತಿದ್ದುಪಡಿ ಮಸೂದೆ ಕುರಿತ ಮಸೂದೆ ಸೇರಿದಂತೆ ಒಟ್ಟು ಎಂಟು ಮಸೂದೆಗಳು ಮಂಡನೆಯಾಗಲಿವೆ ಎಂದು ಮೂಲಗಳು ತಿಳಿಸಿವೆ.

ಸಂಸತ್ ಅಧಿವೇಶನವು ಆಗಸ್ಟ್ 21ಕ್ಕೆ ಕೊನೆಯಾಗಲಿದೆ.

ಸಂಸತ್ ಕ್ಯಾಂಟೀನ್‌ಗೆ ಹೊಸ ಮೆನು • ಖಾದ್ಯ ಸವಿಯಲು ಸಂದರ್ಶಕರಿಗೂ ಅವಕಾಶ

ಸಂಸದರು, ಅಧಿಕಾರಿಗಳಿಗೆ ಹೆಚ್ಚು ಪೌಷ್ಟಿಕ ಆಹಾರ

ನವದೆಹಲಿ (ಪಿಟಿಐ): ಸಂಸದರು, ಅಧಿಕಾರಿಗಳಿಗೆ ಒದಗಿಸುವ ಆಹಾರವು ಮತ್ತಷ್ಟು ಪೌಷ್ಟಿಕಾಂಶಗಳಿಂದ ಕೂಡಿರಬೇಕು ಎಂಬ ಉದ್ದೇಶದಿಂದ ಸಂಸತ್ ಕ್ಯಾಂಟೀನ್ ಮೆನುವಿನಲ್ಲಿ ಪ್ರಮುಖ ಬದಲಾವಣೆ ಮಾಡಲಾಗುತ್ತಿದೆ.

ಅಧಿಕ ಪ್ರೊಟೀನ್‌ಯುಕ್ತ ಆಹಾರ ನೀಡುವ ಉದ್ದೇಶದಿಂದ ರಾಗಿಯಿಂದ ಮಾಡಿದ ಇಡ್ಲಿ, ಜೋಳದ ಉಪ್ಪಿಟ್ಟು, ಹೆಸರು ಕಾಳಿನ ರೊಟ್ಟಿ/ತಾಲಿಪಟ್ಟು ಹಾಗೂ ತರಕಾರಿಗಳೊಂದಿಗೆ ಬೇಯಿಸಿದ ಮೀನು ಸೇರಿದಂತೆ ವಿವಿಧ ಖಾದ್ಯಗಳನ್ನು ಸಂಸದರು, ಅಧಿಕಾರಿಗಳು ಸವಿಯಬಹುದಾಗಿದೆ.

ಪ್ರಜಾಪ್ರಭುತ್ವದ ದೇಗುಲ ಎಂದೇ ಕರೆಯಲಾಗುವ ಸಂಸತ್‌ಗೆ ಭೇಟಿ ನೀಡುವ ಸಂದರ್ಶಕರು ಕೂಡ ಈ ಪೌಷ್ಟಿಕ ಖಾದ್ಯಗಳ ರುಚಿ ನೋಡಬಹುದಾಗಿದೆ.

ಲೋಕಸಭಾ ಸ್ಪೀಕರ್ ಓಂ ಬಿರ್ಲಾ ಅವರ ಸೂಚನೆ ಮೇರೆಗೆ ಈ ಬದಲಾವಣೆಗಳನ್ನು ಮಾಡಲಾಗುತ್ತಿದೆ. ರುಚಿಗೆ ಧಕ್ಕೆ ಆಗದಂತೆ ಕ್ಯಾಂಟೀನ್‌ನಲ್ಲಿ ಸಿಗುವ ಖಾದ್ಯಗಳ ಪೌಷ್ಟಿಕತೆ ಹೆಚ್ಚಿಸಬೇಕು ಎಂದು ಬಿರ್ಲಾ ಸೂಚಿಸಿದ್ದರು.

ಸಂಸತ್ ಅಧಿವೇಶನದ ವೇಳೆ ಸಂಸದರು ಹಾಗೂ ಅಧಿಕಾರಿಗಳು ಸುದೀರ್ಘ ಅವಧಿ ವರೆಗೆ ಕಲಾಪಗಳಲ್ಲಿ ಪಾಲ್ಗೊಳ್ಳುತ್ತಾರೆ. ಹಾಗಾಗಿ, ಅವರಿಗೆ ಹೆಚ್ಚು ಪೌಷ್ಟಿಕವಾದ ಆಹಾರ ಸಿಗುವುದನ್ನು ಖಾತ್ರಿಪಡಿಸಬೇಕು ಉದ್ದೇಶದಿಂದ ಈ ಕ್ರಮ ಕೈಗೊಳ್ಳಲಾಗಿದೆ.

ಬೊಜ್ಜು ಹಾಗೂ ಅದರಿಂದ ಎದುರಾಗುವ ಆರೋಗ್ಯ ಸಮಸ್ಯೆಗಳ ಬಗ್ಗೆ ಪ್ರಧಾನಿ ನರೇಂದ್ರ ಮೋದಿ ಅವರು ಇತ್ತೀಚಿನ ತಮ್ಮ ‘ಮನದ ಮಾತು’ ಬಾನುಲಿ ಕಾರ್ಯಕ್ರಮದಲ್ಲಿ ಪ್ರಸ್ತಾಪಿಸಿದ್ದರು. ಅಡುಗೆಯಲ್ಲಿ ಎಣ್ಣೆ ಬಳಕೆ ಕಡಿಮೆ ಮಾಡುವುದು ಬೊಜ್ಜು ಸಮಸ್ಯೆಗೆ ಪರಿಹಾರ ಎಂದೂ ಹೇಳಿದ್ದರು.

ಪ್ರಮುಖ ಅಂಶಗಳು

- 2023 ಅನ್ನು ಅಂತರ ರಾಷ್ಟ್ರೀಯ ಸಿರಿಧಾನ್ಯಗಳ ವರ್ಷ ಎಂದು ವಿಶ್ವ ಸಂಸ್ಥೆ ಘೋಷಿಸಿತ್ತು. ಹೀಗಾಗಿ ಸಿರಿಧಾನ್ಯಗಳಿಂದ ತಯಾರಿಸಿದ ಖಾದ್ಯಗಳಿಗೆ ಮೆನುವಿನಲ್ಲಿ ಆದ್ಯತೆ ನೀಡಲಾಗಿದೆ
- ಅಧಿಕ ಪ್ರೊಟೀನ್ ಇರುವ ಸೂಪ್‌ಗಳು, ಹೆಚ್ಚು ನಾರಿನಂಶವಿರುವ ಸಲಾಡ್‌ಗಳನ್ನು ನೀಡಲಾಗುತ್ತದೆ
- ಕಾರ್ಬೊಹೈಡ್ರೇಟ್, ಸೋಡಿಯಂ ಮತ್ತು ಕ್ಯಾಲೋರಿ ಕಡಿಮೆ ಇರುವಂತೆ ನೋಡಿಕೊಳ್ಳಲಾಗುತ್ತದೆ

@SudhaWeekly
ಸುಧಾ
ಸಣ್ಣ ವಯಸ್ಸಿನವರು ಹೃದಯಾಘಾತದಿಂದ ಸಾವನ್ನಪ್ಪುವ ಸಂಗತಿ ಕೇಳುತ್ತಿದ್ದಂತೆ ಜನರಲ್ಲಿ ಆರೋಗ್ಯ ಕಾಳಜಿ ಹೆಚ್ಚಾಗಿದೆ. ದೇಹವನ್ನು ದಂಡಿಸಸಲು ಜಿಮ್‌ಗಳತ್ತ ಜನ ದೌಡಾಯಿಸಲಾರಂಭಿಸಿದ್ದಾರೆ. ‘ಡಯಟ್’ ಮಂತ್ರವನ್ನು ಜಪಿಸಲಾರಂಭಿಸಿದ್ದಾರೆ. ಡಯಟ್ ಎಂದರೇನು? ವಿವಿಧ ರೀತಿಯ ಡಯಟ್‌ಗಳು ಯಾವುವು? ಇವುಗಳಿಂದ ದೇಹಕ್ಕಾಗುವ ಲಾಭಗಳೇನು? ಈ ಪ್ರಶ್ನೆಗಳಿಗೆ ಉತ್ತರ ಕಂಡುಕೊಳ್ಳುವ ಪ್ರಯತ್ನವನ್ನು ‘ಸುಧಾ’ ಮಾಡಿದ್ದು, ಡಯಟ್‌ನ ವಿಸ್ತೃತ ವಿಚಾರದ ಜೊತೆಗೆ ನಮ್ಮ ಆರೋಗ್ಯ ಕಾಳಜಿಗೆ ನೀಡಿದ ದಿಕ್ಸೂಚಿಯಂತಿದೆ.

ದೀಪ್ತಿ ಶರ್ಮಾ ಆಟಕ್ಕೆ ಒಲಿದ ಜಯ

ಮಹಿಳೆಯರ ಏಕದಿನ ಕ್ರಿಕೆಟ್: ಭಾರತ ತಂಡದ ಶುಭಾರಂಭ

ಮುಖ್ಯಾಂಶಗಳು
- ಜೆಮಿಮಾ– ದೀಪ್ತಿ ಆಕರ್ಷಕ ಜೊತೆಯಾಟ
- ಕೊನೆಯಲ್ಲಿ ಬಿರುಸಿನ ಆಟವಾಡಿದ ಅಮನ್ಜೋತ್ ಕೌರ್
- 3 ಪಂದ್ಯಗಳ ಸರಣಿಯಲ್ಲಿ ಭಾರತಕ್ಕೆ 1–0 ಮುನ್ನಡೆ

ಸೌತಾಂಪ್ಟನ್ (ಪಿಟಿಐ): ದೀಪ್ತಿ ಶರ್ಮಾ ಮತ್ತು ಜೆಮಿಮಾ ರಾಡ್ರಿಗಸ್ ಅವರ ಅಮೋಘ ಆಟದ ಬಲದಿಂದ ಭಾರತ ವನಿತೆಯರ ತಂಡವು ಬುಧವಾರ ಆರಂಭವಾದ ಇಂಗ್ಲೆಂಡ್ ಎದುರಿನ ಏಕದಿನ ಕ್ರಿಕೆಟ್ ಸರಣಿಯಲ್ಲಿ ಶುಭಾರಂಭ ಮಾಡಿತು.

ದ ರೋಸ್ ಬೌಲ್ ಕ್ರೀಡಾಂಗಣದಲ್ಲಿ ಬುಧವಾರ ನಡೆದ ಪಂದ್ಯದಲ್ಲಿ ಭಾರತ ತಂಡವು 4 ವಿಕೆಟ್‌ಗಳಿಂದ ಜಯಿಸಿತು. ಮೂರು ಪಂದ್ಯಗಳ ಸರಣಿಯಲ್ಲಿ 1–0 ಮುನ್ನಡೆ ಸಾಧಿಸಿತು.

ಟಾಸ್ ಗೆದ್ದ ಇಂಗ್ಲೆಂಡ್ ತಂಡವು 50 ಓವರ್‌ಗಳಲ್ಲಿ 6 ವಿಕೆಟ್‌ಗಳಿಗೆ 258 ರನ್ ಗಳಿಸಿತು. ಸೋಫಿಯಾ (83; 92ಎ, 4X9) ಮತ್ತು ಅಲೈಸ್ ಡೇವಿಡ್‌ಸನ್ ರಿಚರ್ಡ್ಸ್ (53; 73ಎ, 4X2) ಅವರ ಶತಕದ ಜೊತೆಯಾಟದಿಂದಾಗಿ (108 ರನ್) ಉತ್ತಮ ಮೊತ್ತ ಪೇರಿಸಲು ಸಾಧ್ಯವಾಯಿತು. ಅದಕ್ಕುತ್ತರವಾಗಿ ಭಾರತ ತಂಡವು 48.2 ಓವರ್‌ಗಳಲ್ಲಿ 6 ವಿಕೆಟ್‌ಗಳಿಗೆ 262 ರನ್ ಗಳಿಸಿತು.

ಭಾರತ ತಂಡವು 124 ರನ್‌ಗಳಿಗೆ 4 ವಿಕೆಟ್‌ಗಳನ್ನು ಕಳೆದುಕೊಂಡಿತು. ಇದರಿಂದಾಗಿ ಜಯ ಕೈತಪ್ಪುವ ಆತಂಕ ಮೂಡಿತು. ಈ ಹಂತದಲ್ಲಿ ಜೆಮಿಮಾ (48; 54 ಎ) ಮತ್ತು ಅಜೇಯ ಅರ್ಧಶತಕ ಗಳಿಸಿದ ದೀಪ್ತಿ ಶರ್ಮಾ (ಔಟಾಗದೇ 62) ತಂಡವನ್ನು ಗೆಲುವಿನ ದಡ ಮುಟ್ಟಿಸಿದರು.

ಆಕರ್ಷಕ ಅರ್ಧಶತಕ ಗಳಿಸಿದ ದೀಪ್ತಿ ಶರ್ಮಾ   ಚಿತ್ರಗಳು: ಬಿಸಿಸಿಐ 'ಎಕ್ಸ್' ಖಾತೆ

ಜೆಮಿಮಾ ರಾಡ್ರಿಗಸ್ ಬ್ಯಾಟಿಂಗ್ ವೈಖರಿ

ಡಂಕ್ಲಿ–ಅಲೈಸ್ ಜೊತೆಯಾಟ: ಇಂಗ್ಲೆಂಡ್ ತಂಡವು 97 ರನ್‌ಗಳಿಗೆ 4 ವಿಕೆಟ್‌ಗಳನ್ನು ಕಳೆದುಕೊಂಡಿತ್ತು. ನಾಯಕಿ ನ್ಯಾಟ್ ಶಿವರ್ ಬ್ರಂಟ್ ಕೂಡ ಪೆವಿಲಿಯನ್‌ಗೆ ಮರಳಿದ್ದರು. ಈ ಹಂತದಲ್ಲಿ ಜೊತೆಗೂಡಿದ ಸೋಫಿಯಾ ಮತ್ತು ಅಲೈಸ್ ತಂಡಕ್ಕೆ ಆಸರೆಯಾದರು. 30ನೇ ಓವರ್‌ನಲ್ಲಿ ಮಧ್ಯಮವೇಗಿ ಕ್ರಾಂತಿ ಗೌಡ್ ಅವರು ತಮ್ಮದೇ ಬೌಲಿಂಗ್‌ನಲ್ಲಿ ಡೇವಿಡ್‌ಸನ್ ಕ್ಯಾಚ್ ಕೈಚೆಲ್ಲಿದರು. ನಂತರದ ಓವರ್‌ನಲ್ಲಿ ಸೋಫಿ ಅವರಿಗೆ ಜೆಮಿಮಾ ಜೀವದಾನ ಕೊಟ್ಟರು. ಇದರಿಂದಾಗಿ ಇಂಗ್ಲೆಂಡ್ ತಂಡವನ್ನು ಅಲ್ಪಮೊತ್ತಕ್ಕೆ ಕಟ್ಟಿಹಾಕುವ ಕೌರ್ ಪಡೆಯ ಗುರಿ ಈಡೇರಲಿಲ್ಲ.

ಸೋಫಿಯಾ ಡಂಕ್ಲಿ

ಆರಂಭಿಕ ಪೆಟ್ಟು: ಭಾರತ ತಂಡದ ಭರವಸೆಯ ಮಧ್ಯಮವೇಗಿ ಕ್ರಾಂತಿ ಗೌಡ್ (55ಕ್ಕೆ2) ಅವರು ಆತಿಥೇಯರಿಗೆ ಆರಂಭದಲ್ಲಿಯೇ ಪೆಟ್ಟುಕೊಟ್ಟರು. ತಮ್ಮ ಮೊದಲ ಓವರ್‌ನಲ್ಲಿ ಎಮಿ ಜೋನ್ಸ್ ಅವರನ್ನು ಕ್ಲೀನ್‌ಬೌಲ್ಡ್ ಮಾಡಿದರು. ಎರಡನೇ ಓವರ್‌ನಲ್ಲಿ ಟಾಮಿ ಬೆಮೌಂಟ್ ಅವರನ್ನು ಎಲ್‌ಬಿಡಬ್ಲ್ಯು ಬಲೆಗೆ ಕೆಡವಿದರು.

ಇದರಿಂದಾಗಿ ಇಂಗ್ಲೆಂಡ್ ತಂಡವು ಕೇವಲ 20 ರನ್‌ಗಳಿಗೆ ಎರಡು ವಿಕೆಟ್ ಕಳೆದುಕೊಂಡಿತು. ಈ ಹಂತದಲ್ಲಿ ಎಮಾ ಲ್ಯಾಂಬ್ (39; 50ಎ, 4X4) ಮತ್ತು ನಾಯಕಿ ನ್ಯಾಟ್ ಶಿವರ್ ಬ್ರಂಟ್ (41; 52ಎ, 4X5) ಮೂರನೇ ವಿಕೆಟ್ ಜೊತೆಯಾಟದಲ್ಲಿ 71 ರನ್ ಸೇರಿಸಿದರು. ಈ ಪಾಲುದಾರಿಕೆ ಆಟವು ಇನ್ನಷ್ಟು ದೀರ್ಘವಾಗಿ ಬೆಳೆಯದಂತೆ ಆಫ್‌ಸ್ಪಿನ್ನರ್ ಸ್ನೇಹ ರಾಣಾ ನೋಡಿಕೊಂಡರು. ಅವರು ಮೊದಲಿಗೆ ಬ್ರಂಟ್ ವಿಕೆಟ್ ಪಡೆದರು. ಸ್ನೇಹ ಬೌಲಿಂಗ್‌ನಲ್ಲಿ ಲ್ಯಾಂಬ್ ಕ್ಯಾಚ್ ಪಡೆದ ನಾಯಕಿ ಹರ್ಮನ್‌ಪ್ರೀತ್ ಕೌರ್ ಸಂಭ್ರಮಿಸಿದರು.

ಸ್ನೇಹ ಹಾಕಿದ ಇನ್ನೊಂದು ಓವರ್‌ನಲ್ಲಿ ಜೆಮಿಮಾ ಪಡೆದ ಆಕರ್ಷಕ ಕ್ಯಾಚ್‌ಗೆ ಬ್ರಂಟ್ ಆಟ ಮುಗಿಯಿತು. ಆಗಿನ್ನೂ ತಂಡದ ಮೊತ್ತ 100ರ ಗಡಿ ದಾಟಿರಲಿಲ್ಲ. ಆದರೆ ಭಾರತ ತಂಡದವರ ಸಂಭ್ರಮ ಹೆಚ್ಚು ಹೊತ್ತು ಉಳಿಯಲಿಲ್ಲ. ಸೋಫಿಯಾ ಮತ್ತು ಡೇವಿಡಸನ್ ಜೋಡಿ ಮಿಂಚಿತು.

ಸಂಕ್ಷಿಪ್ತ ಸ್ಕೋರು: ಇಂಗ್ಲೆಂಡ್: 50 ಓವರ್‌ಗಳಲ್ಲಿ 6ಕ್ಕೆ258 (ಎಮಾ ಲ್ಯಾಂಬ್ 39, ನ್ಯಾಟ್ ಶಿವರ್ ಬ್ರಂಟ್ 41, ಸೋಫಿಯಾ ಡಂಕ್ಲಿ 83, ಡೇವಿಡಸನ್ ರಿಚರ್ಡ್ಸ್ 53, ಸೋಫಿ ಎಕ್ಲೆಸ್ಟೊನ್ ಔಟಾಗದೇ 23, ಕ್ರಾಂತಿ ಗೌಡ್ 55ಕ್ಕೆ2, ಸ್ನೇಹ ರಾಣಾ 31ಕ್ಕೆ2)
ಭಾರತ: 48.2 ಓವರ್‌ಗಳಲ್ಲಿ 6 ವಿಕೆಟ್‌ಗಳಿಗೆ 262 (ಪ್ರತೀಕಾ ರಾವಲ್ 36, ಸ್ಮೃತಿ ಮಂದಾನ 28, ಹರ್ಲೀನ್ ಡಿಯೊಲ್ 27, ಜೆಮಿಮಾ ರಾಡ್ರಿಗಸ್ 48, ದೀಪ್ತಿ ಶರ್ಮಾ ಔಟಾಗದೇ 62, ಅಮನ್ಜೋತ್ ಕೌರ್ ಔಟಾಗದೇ 20, ಶಾರ್ಲೆಟ್ ಡೀನ್ 52ಕ್ಕೆ2)
ಪಂದ್ಯದ ಆಟಗಾರ್ತಿ: ದೀಪ್ತಿ ಶರ್ಮಾ
ಫಲಿತಾಂಶ: ಭಾರತ ತಂಡಕ್ಕೆ 4 ವಿಕೆಟ್‌ಗಳ ಜಯ. ಸರಣಿಯಲ್ಲಿ 1–0 ಮುನ್ನಡೆ.

ಫುಟ್‌ಬಾಲ್: ನಿತಿನ್ ಬಾದ್ರಿ ನಾಯಕ

ಬೆಂಗಳೂರು: ನಿತಿನ್ ಬಾದ್ರಿ ಅವರನ್ನು ಕರ್ನಾಟಕ ಜೂನಿಯರ್ ಬಾಲಕರ ಫುಟ್‌ಬಾಲ್ ತಂಡದ ನಾಯಕ ಸ್ಥಾನಕ್ಕೆ ನೇಮಕ ಮಾಡಲಾಗಿದೆ.

ಪಂಜಾಬ್‌ನ ಅಮೃತಸರದಲ್ಲಿ ಇದೇ 20ರಿಂದ ನಡೆಯಲಿರುವ ರಾಷ್ಟ್ರೀಯ ಜೂನಿಯರ್ ಬಾಲಕರ ಫುಟ್‌ಬಾಲ್ ಚಾಂಪಿಯನ್‌ಷಿಪ್‌ನಲ್ಲಿ ಆಡುವ ಕರ್ನಾಟಕ ತಂಡವನ್ನು ನಿತಿನ್ ಮುನ್ನಡೆಸುವರು.



ಜಾಗತಿಕ ಇಮೋಜಿ ದಿನವನ್ನು ಆಚರಿಸಲಾಗುತ್ತಿದೆ!

ಐಸಿಸಿ ಎಜಿಎಂ ಇಂದಿನಿಂದ: ಜಯ್ ಶಾ ಅಧ್ಯಕ್ಷತೆ

ಟೆಸ್ಟ್‌ನಲ್ಲಿ ದ್ವಿಸ್ತರ ಪದ್ಧತಿ ಚರ್ಚೆ ಸಾಧ್ಯತೆ

ಸಿಂಗಪುರ (ಪಿಟಿಐ): ಟೆಸ್ಟ್ ಕ್ರಿಕೆಟ್‌ನಲ್ಲಿ ದ್ವಿಸ್ತರ ಪದ್ಧತಿ ಜಾರಿ, ಟಿ20 ವಿಶ್ವಕಪ್ ಟೂರ್ನಿಗಳಲ್ಲಿ ತಂಡಗಳ ಹೆಚ್ಚಳ ಹಾಗೂ ನೂತನ ಸದಸ್ಯರ ಸೇರ್ಪಡೆಗೆ ಅನುಮೋದನೆಯ ಕುರಿತು ಗುರುವಾರ ಆರಂಭವಾಗಲಿರುವ ಅಂತರರಾಷ್ಟ್ರೀಯ ಕ್ರಿಕೆಟ್ ಕೌನ್ಸಿಲ್ (ಐಸಿಸಿ) ಸರ್ವಸದಸ್ಯರ ಸಭೆಯಲ್ಲಿ (ಎಜಿಎಂ) ಚರ್ಚೆ ನಡೆಯಲಿದೆ.

ಜಯ್ ಶಾ

ನಾಲ್ಕು ದಿನಗಳ ಈ ಸಭೆಯಲ್ಲಿ ಹಲವು ಪ್ರಮುಖ ವಿಷಯಗಳು ಚರ್ಚೆಯಾಗಲಿವೆ. ಪ್ರಸ್ತುತ ನಡೆಯುತ್ತಿರುವ ವಿಶ್ವ ಟೆಸ್ಟ್ ಚಾಂಪಿಯನ್‌ಷಿಪ್ ಆವರ್ತ (2025–27) ನಡೆಯುತ್ತಿದೆ. ಆದ್ದರಿಂದ ಅದರಲ್ಲಿ ಯಾವುದೇ ಬದಲಾವಣೆ ಕುರಿತ ನಿರ್ಧಾರ ಕೈಗೊಳ್ಳುವುದು ಖಚಿತವಿಲ್ಲ. 2027ರ ನಂತರ ಟೆಸ್ಟ್ ಕ್ರಿಕೆಟ್‌ನಲ್ಲಿ ದ್ವಿಸ್ತರ ಮಾದರಿ ಜಾರಿಗೊಳಿಸುವುದು, ಹಣದ ಹಂಚಿಕೆ, ಬಡ್ತಿ ಮತ್ತು ರೆಲಿಗೇಷನ್ ನಿಯಮಗಳ ರಚನೆ ಕುರಿತು ಚರ್ಚೆ ನಡೆಸುವ ಸಾಧ್ಯತೆ ಇದೆ.

ಐಸಿಸಿ ಮುಖ್ಯಸ್ಥ ಜಯ್ ಶಾ ಮತ್ತು ಹೊಸದಾಗಿ ನೇಮಕವಾಗಿರುವ ಸಿಇಒ ಸಂಜೋಗ್ ಗುಪ್ತಾ ಅವರ ಅಧ್ಯಕ್ಷತೆಯಲ್ಲಿ ಈ ಎಜಿಎಂ ನಡೆಯಲಿದೆ.

ಆದರೆ ಏಕದಿನ ಕ್ರಿಕೆಟ್ ಮಾದರಿಯ ವಿಶ್ವಕಪ್ ಟೂರ್ನಿಯಲ್ಲಿ ಯಾವುದೇ ಹೊಸ ತಂಡವನ್ನು ಸೇರ್ಪಡೆ ಮಾಡುವ ಪ್ರಸ್ತಾವ ಇಲ್ಲ. ಆದರೆ ಟಿ20 ವಿಶ್ವಕಪ್ ಟೂರ್ನಿಯಲ್ಲಿ ತಂಡಗಳ ಸಂಖ್ಯೆಯನ್ನು 24ಕ್ಕೆ ಹೆಚ್ಚಿಸುವ ಯೋಚನೆ ಇದೆ. ಈ ಕುರಿತು ಮುಂದಿನ ವರ್ಷದವರೆಗೆ ಯಾವುದೇ ದೃಢ ನಿರ್ಧಾರ ಕೈಗೊಳ್ಳುವ ಸಾಧ್ಯತೆಗಳು ಕಡಿಮೆ ಇವೆ. ಸದ್ಯ ಟೂರ್ನಿಯಲ್ಲಿ 20 ತಂಡಗಳು ಮಾತ್ರ ಆಡುತ್ತಿವೆ.

2028ರಲ್ಲಿ ಲಾಸ್ ಏಂಜಲೀಸ್ ಒಲಿಂಪಿಕ್ಸ್‌ನಲ್ಲಿ ಟಿ20 ಕ್ರಿಕೆಟ್ ಸೇರ್ಪಡೆಯಾಗಿದೆ. ಮುಂಬರುವ ಟಿ20 ವಿಶ್ವಕಪ್ ಟೂರ್ನಿಯು ಭಾರತ ಮತ್ತು ಶ್ರೀಲಂಕಾದ ಜಂಟಿ ಆತಿಥ್ಯದಲ್ಲಿ ನಡೆಯಲಿದೆ. ಈ ಟೂರ್ನಿಗೆ ಹೊಸದಾಗಿ ಇಟಲಿ ತಂಡವು ಈಚೆಗೆ ಅರ್ಹತೆ ಪಡೆದುಕೊಂಡಿದೆ. ಇದರಿಂದಾಗಿ ಮುಂಬರುವ ವರ್ಷಗಳಲ್ಲಿ ಹೊಸ ತಂಡಗಳಿಗೆ ಅವಕಾಶ ಒದಗಿಸುವ ಬಗ್ಗೆ ಚರ್ಚೆಗಳು ನಡೆಯಬಹುದು.

'ಇಟಲಿಯು ಅರ್ಹತೆ ಗಿಟ್ಟಿಸಿರುವುದು ವಿಶ್ವದಲ್ಲಿ ಕ್ರಿಕೆಟ್ ವ್ಯಾಪ್ತಿಯು ಹೆಚ್ಚುತ್ತಿರುವುದರ ಸಂಕೇತ. ಇದರಿಂದಾಗಿ ಜಗತ್ತಿನಾದ್ಯಂತ ಕ್ರಿಕೆಟ್ ಪ್ರೇಕ್ಷಕರ ಸಂಖ್ಯೆಯನ್ನು ವೃದ್ಧಿಸುವತ್ತ ಐಸಿಸಿ ಮಂಡಳಿಯು ಚಿತ್ತ ನೆಟ್ಟಿದೆ' ಎಂದು ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಹೋದ ವರ್ಷ ಅಮೆರಿಕ–ವೆಸ್ಟ್ ಇಂಡೀಸ್ ಜಂಟಿ ಆತಿಥ್ಯದಲ್ಲಿ ನಡೆದಿದ್ದ ಟಿ20 ವಿಶ್ವಕಪ್ ಟೂರ್ನಿಯಲ್ಲಿ ಹಣದ ದುರ್ಬಳಕೆ ನಡೆದಿತ್ತೆನ್ನಲಾಗಿದೆ. ಈ ಆರೋಪದ ಕುರಿತ ಅಂತಿಮ ವರದಿಯ ನಿರೀಕ್ಷೆಯಲ್ಲಿಯೂ ಐಸಿಸಿ ಇದೆ. ಹೋದ ಜನವರಿಯಲ್ಲಿ ಐಸಿಸಿ ಮುಖ್ಯ ಕಾರ್ಯನಿರ್ವಹಣಾ ಅಧಿಕಾರಿ (ಸಿಇಒ) ಜಿಯೊಫ್ ಅಲಾರ್ಡಿಸ್ ಅವರು ರಾಜೀನಾಮೆ ನೀಡಿದ್ದು ಕೂಡ ಇದೇ ಪ್ರಕರಣಕ್ಕೆ ಸಂಬಂಧಿಸಿಯೇ ಎಂಬ ಮಾತುಗಳೂ ಕೇಳಿಬಂದಿದ್ದವು.

ಈ ಮಧ್ಯೆ ಜಾಂಬಿಯಾ ದೇಶವು ಐಸಿಸಿಯ ಸಹಸದಸ್ಯ ಸ್ಥಾನಕ್ಕೆ ಮರಳುವ ಸಾಧ್ಯತೆ ಇದೆ. 2019ರಲ್ಲಿ ನಿಯಮ ಉಲ್ಲಂಘನೆಯ ಕಾರಣಕ್ಕೆ ಜಾಂಬಿಯಾ ಅಮಾನತುಗೊಂಡಿತ್ತು.

ಈ ಬಾರಿ ಈಸ್ಟ್ ತೈಮೊರ್ ಕೂಡ ಮೊದಲ ಬಾರಿಗೆ ಐಸಿಸಿ ಸಹಸದಸ್ಯತ್ವ ಪಡೆಯುವ ಸಾಧ್ಯತೆ ಇದೆ.

ಚಿಟಿಕೆ ಸುದ್ದಿ

ಟೆನಿಸ್: ಎಂಟರ ಘಟ್ಟಕ್ಕೆ ಅರ್ಜುನ್–ಪ್ರಶಾಂತ್

ನವದೆಹಲಿ (ಪಿಟಿಐ): ಭಾರತದ ಅರ್ಜುನ್ ಖಾಡೆ ಮತ್ತು ವಿಜಯ್ ಸುಂದರ್ ಪ್ರಶಾಂತ್ ಅವರು ಬುಧವಾರ ಸ್ವಿಸ್ ಓಪನ್ ಟೆನಿಸ್ ಟೂರ್ನಿಯ ಡಬಲ್ಸ್‌ನಲ್ಲಿ ನೇರ ಸೆಟ್‌ಗಳ ಗೆಲುವಿನೊಡನೆ ಬುಧವಾರ ಎಂಟರ ಘಟ್ಟ ತಲುಪಿದರು. ಆದರೆ ಎನ್.ಶ್ರೀರಾಮ್ ಬಾಲಾಜಿ ಮತ್ತು ರಿತ್ವಿಕ್ ಬೊಲ್ಲಿಪಳ್ಳಿ ಅವರು ಹೊರಬಿದ್ದರು.

ಅರ್ಜುನ್ –ಪ್ರಶಾಂತ್ ಜೋಡಿ ಮೊದಲ ಸುತ್ತಿನಲ್ಲಿ 7–5, 6–3 ರಿಂದ ಕೊಲಂಬಿಯಾದ ನಿಕೋಲಸ್ ಬೆರೀಂಟೋಸ್– ಮಿಗೆಲ್ ರಯಿಸ್ ವರೇಲಾ ಜೋಡಿಯನ್ನು ಸೋಲಿಸಿತು. ಈ ಟೂರ್ನಿಯು ₹6 ಕೋಟಿ ಬಹುಮಾನ ಹೊಂದಿದೆ.

ಬಾಲಾಜಿ– ಬೊಲ್ಲಿಪಳ್ಳಿ ಜೋಡಿ ತೀವ್ರ ಹೋರಾಟದ ಪಂದ್ಯದಲ್ಲಿ 4–6, 7–6 (8), 7–10 ರಿಂದ ವೈಲ್ಡ್ ಕಾರ್ಡ್ ಪಡೆದಿದ್ದ ಸ್ಥಳೀಯ ಜೋಡಿ ಜಾಕುಬ್ ಪಾಲ್– ಡೊಮಿನಿಕ್ ಸ್ಟ್ರಿಕರ್ ಅವರಿಗೆ ಮಣಿಯಿತು.

ಟಿ20 ತ್ರಿಕೋನ ಸರಣಿ: ಕಿವೀಸ್‌ಗೆ ಜಯ

ಹರಾರೆ (ಎಎಫ್‌ಪಿ): ಮ್ಯಾಟ್ ಹೆನ್ರಿ ಮತ್ತು ಜೇಕಬ್ ಡಫಿ ಅವರ ಪರಿಣಾಮಕಾರಿ ಬೌಲಿಂಗ್ ನೆರವಿನಿಂದ ನ್ಯೂಜಿಲೆಂಡ್ ತಂಡ, ಟಿ20 ತ್ರಿಕೋನ ಸರಣಿಯ ಎರಡನೇ ಪಂದ್ಯದಲ್ಲಿ ದಕ್ಷಿಣ ಆಫ್ರಿಕಾ ತಂಡವನ್ನು ಬುಧವಾರ 21 ರನ್‌ಗಳಿಂದ ಸೋಲಿಸಿತು.

ಸಂಕ್ಷಿಪ್ತ ಸ್ಕೋರು: ನ್ಯೂಜಿಲೆಂಡ್: 20 ಓವರುಗಳಲ್ಲಿ 5ಕ್ಕೆ173 (ಟಿ.ರಾಬಿನ್ಸನ್ ಔಟಾಗದೇ 75, ಬಿ.ಜಾಕೋಬ್ಸ್ ಔಟಾಗದೇ 44; ಕೆ.ಮಫಾಕ 38ಕ್ಕೆ2); ದಕ್ಷಿಣ ಆಫ್ರಿಕಾ: 18.2 ಓವರುಗಳಲ್ಲಿ 152 (ಡೆವಾಲ್ಡ್ ಬ್ರೆವಿಸ್ 40, ಜಿ.ಲಿಂಡೆ 30; ಮ್ಯಾಟ್ ಹೆನ್ರಿ 34ಕ್ಕೆ3, ಜೇಕಬ್ ಡಫಿ 30ಕ್ಕೆ2, ಈಶ್ ಸೋಧಿ 34ಕ್ಕೆ2).

ಜಪಾನ್ ಓಪನ್ ಬ್ಯಾಡ್ಮಿಂಟನ್: ಸಿಂಧು ನಿರ್ಗಮನ

ಲಕ್ಷ್ಯ, ಸಾತ್ವಿಕ್–ಚಿರಾಗ್ ಮುನ್ನಡೆ

ಟೋಕಿಯೊ (ಪಿಟಿಐ): ಒಲಿಂಪಿಯನ್ ಪಿ.ವಿ. ಸಿಂಧು ಜಪಾನ್ ಓಪನ್ ಬ್ಯಾಡ್ಮಿಂಟನ್ ಟೂರ್ನಿಯ ಮಹಿಳೆಯರ ಸಿಂಗಲ್ಸ್‌ನ ಮೊದಲ ಸುತ್ತಿನಲ್ಲಿಯೇ ನಿರ್ಗಮಿಸಿದರು. ಪುರುಷರ ಸಿಂಗಲ್ಸ್‌ನಲ್ಲಿ ಲಕ್ಷ್ಯ ಸೇನ್, ಡಬಲ್ಸ್‌ನಲ್ಲಿ ಸಾತ್ವಿಕ್ ಸಾಯಿರಾಜ್ ರಣಕಿರೆಡ್ಡಿ ಮತ್ತು ಚಿರಾಗ್ ಶೆಟ್ಟಿ ಅವರು ಎರಡನೇ ಸುತ್ತು ಪ್ರವೇಶಿಸಿದರು.

ಎರಡು ಒಲಿಂಪಿಕ್ಸ್‌ಗಳಲ್ಲಿ ಪದಕ ಜಯಿಸಿರುವ ಸಿಂಧು ಅವರು ಇಲ್ಲಿ ನಡೆದ ಮೊದಲ ಸುತ್ತಿನಲ್ಲಿ 15–21, 14–21 ರಿಂದ ಕೊರಿಯಾದ ಸಿಮ್ ಯೂ ಜಿನ್ ವಿರುದ್ಧ ಸೋತರು. ಈ ವರ್ಷ ಅವರು ಮೊದಲ ಸುತ್ತಲ್ಲಿ ನಿರ್ಗಮಿಸುತ್ತಿರುವ ಐದನೇ ಟೂರ್ನಿ ಇದಾಗಿದೆ.

ಭಾರತದ ಡಬಲ್ಸ್ ಜೋಡಿ ಸಾತ್ವಿಕ್ ಸಾಯಿರಾಜ್ ರಣಕಿರೆಡ್ಡಿ ಮತ್ತು ಚಿರಾಗ್ ಶೆಟ್ಟಿ

ಸೂಪರ್ 750 ಟೂರ್ನಿ ಇದಾಗಿದ್ದು ಪುರುಷರ ಸಿಂಗಲ್ಸ್‌ನಲ್ಲಿ ಲಕ್ಷ್ಯ ಸೇನ್ ಅವರು 21-11, 21-18ರಿಂದ ನೇರ ಗೇಮ್‌ಗಳಲ್ಲಿ ಚೀನಾದ ವಾಂಗ್ ಝೆಂಗ್ ಶಿಂಗ್ ವಿರುದ್ಧ ಗೆದ್ದರು. ವಿಶ್ವ ರ‍್ಯಾಂಕಿಂಗ್‌ನಲ್ಲಿ 18ನೇ ಸ್ಥಾನದಲ್ಲಿರುವ ಲಕ್ಷ್ಯ ಅವರು ಮೊದಲ ಗೇಮ್‌ನಲ್ಲಿ 11–2ರ ಮುನ್ನಡೆ ಸಾಧಿಸುವ ಮೂಲಕ ಹಿಡಿತ ಸಾಧಿಸಿದ್ದರು. ಆದರೆ ಎರಡನೇ ಗೇಮ್‌ನಲ್ಲಿ ಚೀನಾದ ಆಟಗಾರ ಒತ್ತಡ ಹೆಚ್ಚಿಸಿದರು. ಆಕರ್ಷಕವಾದ ಸ್ಮ್ಯಾಷ್‌ಗಳನ್ನು ಹೊಡೆಯುವ ಮೂಲಕ ಲಕ್ಷ್ಯ ಅವರಿಗೆ ಸವಾಲೊಡ್ಡಿದರು.

ಲಕ್ಷ್ಯ ಸೇನ್

ಆದರೆ ಇದರಿಂದ ಎದೆಗುಂದದ ಒಲಿಂಪಿಯನ್ ಲಕ್ಷ್ಯ ತಿರುಗೇಟು ನೀಡಿದರು. 16ರ ಸುತ್ತಿನಲ್ಲಿ ಲಕ್ಷ್ಯ ಅವರು ಜಪಾನ್‌ನ ಎದುರಾಳಿ, ಏಳನೇ ಶ್ರೇಯಾಂಕದ ಕೊಡೈ ನರೋಕಾ ವಿರುದ್ಧ ಕಣಕ್ಕಿಳಿಯುವರು.

ಪುರುಷರ ಡಬಲ್ಸ್‌ನಲ್ಲಿ ಸಾತ್ವಿಕ್ ಮತ್ತು ಚಿರಾಗ್ ಜೋಡಿಯು 21-18, 21-10 ರಿಂದ ಕೊರಿಯಾದ ಕಾಂಗ್ ಮಿನ್ ಯೂಕ್ ಮತ್ತು ಕಿಮ್ ಡಾಂಗ್ ಜು ಜೋಡಿಯನ್ನು ಮಣಿಸಿತು. 42 ನಿಮಿಷಗಳ ಹೋರಾಟದಲ್ಲಿ ಭಾರತದ ಜೋಡಿಯು ಮೊದಲ ಗೇಮ್‌ನಲ್ಲಿ ತುಸು ಪ್ರತಿರೋಧ ಎದುರಿಸಿತು. ಆದರೆ ಎರಡನೇ ಗೇಮ್‌ನಲ್ಲಿ ಪಾರಮ್ಯ ಮೆರೆಯಿತು.

ಮಹಿಳೆಯರ ಸಿಂಗಲ್ಸ್‌ನಲ್ಲಿ ಅನುಪಮಾ ಉಪಾಧ್ಯಾಯ 21–15, 18–21, 21–18 ರಿಂದ ಸ್ವದೇಶದ ರಕ್ಷಿತಾ ರಾಮರಾಜ್ ಅವರನ್ನು ಮಣಿಸಿದರು. ಅನುಪಮಾ ಮುಂದಿನ ಸುತ್ತಿನಲ್ಲಿ ಚೀನಾದ ಪ್ರಬಲ ಸ್ಪರ್ಧಿ ಎದುರಾಗಿದ್ದಾರೆ. ಎರಡನೇ ಶ್ರೇಯಾಂಕದ ವಾಂಗ್ ಝಿ ಯಿ ಅವರು ಅನುಪಮಾ ಅವರ ಮುಂದಿನ ಎದುರಾಳಿ.

ಆದರೆ ಉನ್ನತಿ ಹೂಡಾ ಹೊರ ಬಿದ್ದರು. ಅವರು 8–21, 12–21 ರಿಂದ ಏಳನೇ ಶ್ರೇಯಾಂಕದ ಪೊರ್ನ್‌ಪವೀ ಚೊಚುವಾಂಗ್ (ಥಾಯ್ಲೆಂಡ್) ಎದುರು ಸೋಲನುಭವಿಸಿದರು.

ಪುರುಷರ ಡಬಲ್ಸ್‌ನಲ್ಲಿ ಹರಿಹರ್ ಅಮ್ಸಕರುಣನ್– ರುಬನ್ ಕುಮಾರ್ ರೆಥಿನಸಭಾಪತಿ ಜೋಡಿ 15–21, 9–21 ರಲ್ಲಿ ಮೂರನೇ ಶ್ರೇಯಾಂಕದ ಕಿಮ್ ವೊನ್ ಹೊ– ಸಿಯೊ ಸಿಯುಂಗ್ ಜೇ (ದಕ್ಷಿಣ ಕೊರಿಯಾ) ಜೋಡಿಯೆದುರು ಪರಾಭವಗೊಂಡಿತು.

ಕವಿಪ್ರಿಯಾ ಸೆಲ್ವಂ– ಸಿಮ್ರಾನ್ ಸಿಂಘಿ ಜೋಡಿ 6–21, 15–21ರಲ್ಲಿ ಹಾಂಗ್ ಕಾಂಗ್‌ನ ಲುಯಿ ಲೊಕ್–ತ್ಸಾಂಗ್ ಹಿಯು ಯಾನ್ ಜೋಡಿಗೆ ಸೋತಿತು.

ದಿವ್ಯಾಗೆ ಮಣಿದ ಚೀನಾದ ಜುನೆರ್

ಬಟುಮಿ (ಜಾರ್ಜಿಯಾ) (ಪಿಟಿಐ): ಭಾರತದ ಐಎಂ ಆಟಗಾರ್ತಿ ದಿವ್ಯಾ ದೇಶಮುಖ್ ಅವರು ಫಿಡೆ ವಿಶ್ವ ಮಹಿಳಾ ಚೆಸ್ ಕಪ್ ಟೂರ್ನಿಯ ಪ್ರಿಕ್ವಾರ್ಟರ್ ಫೈನಲ್‌ನ ಮೊದಲ ಪಂದ್ಯದಲ್ಲಿ ಚೀನಾದ ಪ್ರಬಲ ಆಟಗಾರ್ತಿ ಜುನೆರ್ ಝು ಅವರನ್ನು ಬುಧವಾರ ಮಣಿಸಿದರು.

ದಿವ್ಯಾ ದೇಶಮುಖ್

ಎರಡನೇ ಶ್ರೇಯಾಂಕದ ಜುನೆರ್ ಎದುರಿನ ಮರು ಪಂದ್ಯವನ್ನು ಡ್ರಾ ಮಾಡಿಕೊಂಡರೂ ದಿವ್ಯಾ ಅವರು ಎಂಟರ ಘಟ್ಟಕೆ ಮುನ್ನಡೆಯಲಿದ್ದಾರೆ.

ಭಾರತದ ಗ್ರ್ಯಾಂಡ್‌ಮಾಸ್ಟರ್ ಕೋನೇರು ಹಂಪಿ ಅವರು ಮಾಜಿ ಮಹಿಳಾ ವಿಶ್ವ ಚಾಂಪಿಯನ್ ಅಲೆಕ್ಸಾಂಡ್ರಾ ಕೊಸ್ಟೆನಿಯುಕ್ (ಸ್ವಿಟ್ಜರ್ಲೆಂಡ್) ಜೊತೆ ಪ್ರಯಾಸದ ಡ್ರಾ ಸಾಧಿಸಿದರು.

ಕಣದಲ್ಲಿರುವ ಭಾರತದ ಮತ್ತೊಬ್ಬ ಆಟಗಾರ್ತಿ ಆರ್. ವೈಶಾಲಿ ಅವರು ಕಜಕಸ್ತಾನದ ಮೆರುಯೆರ್ಟ್ ಕಮಲಿದೆನೋವಾ ಜೊತೆ ಡ್ರಾ ಸಾಧಿಸಿದರು. ಫಿಡೆ ಪ್ರತಿನಿಧಿಸುತ್ತಿರುವ ರಷ್ಯನ್ ಆಟಗಾರ್ತಿ ಕ್ಯಾಥರಿನಾ ಲಾಗ್ನೊ ಅವರು ಭಾರತದ ದ್ರೋಣವಲ್ಲಿ ಹಾರಿಕಾ ಜೊತೆ ಪಾಯಿಂಟ್ ಹಂಚಿಕೊಂಡರು.

ಡಬ್ಲ್ಯುಟಿಸಿ ಅಂಕಪಟ್ಟಿಯಲ್ಲಿ ಮೂರನೇ ಸ್ಥಾನಕ್ಕೆ ಕುಸಿತ

ನಿಧಾನಗತಿಯ ಬೌಲಿಂಗ್: ಇಂಗ್ಲೆಂಡ್‌ಗೆ ದಂಡ

ಲಂಡನ್ (ಪಿಟಿಐ): ಲಾರ್ಡ್ಸ್‌ನಲ್ಲಿ ನಡೆದ ಮೂರನೇ ಟೆಸ್ಟ್‌ನಲ್ಲಿ ನಿಧಾನಗತಿಯಲ್ಲಿ ಓವರುಗಳನ್ನು ಮಾಡಿದ್ದಕ್ಕೆ ಇಂಗ್ಲೆಂಡ್ ತಂಡಕ್ಕೆ ದಂಡವಾಗಿ ಎರಡು ಪಾಯಿಂಟ್‌ಗಳನ್ನು ಕಳೆದುಹಾಕಿದ ಪರಿಣಾಮ ಆ ತಂಡ ಐಸಿಸಿ ಟೆಸ್ಟ್ ಚಾಂಪಿಯನ್‌ಷಿಪ್‌ನಲ್ಲಿ ಮೂರನೇ ಸ್ಥಾನಕ್ಕಿಳಿಯಿತು.

ಬೆನ್ ಸ್ಟೋಕ್ಸ್ ಮತ್ತು ತಂಡದ ಇತರ ಆಟಗಾರರಿಗೆ ಪಂದ್ಯ ಸಂಭಾವನೆಯ ಶೇ 10ರಷ್ಟು ದಂಡ ವಿಧಿಸಲಾಗಿದೆ. ಹೋರಾಟದಿಂದ ಕೂಡಿದ ಆ ಟೆಸ್ಟ್ ಪಂದ್ಯವನ್ನು ಇಂಗ್ಲೆಂಡ್ ಅಂತಿಮ ದಿನವಾದ ಸೋಮವಾರ 22 ರನ್‌ಗಳಿಂದ ಗೆದ್ದುಕೊಂಡಿತ್ತು.

ಪಂದ್ಯದ ಸಮಯವನ್ನು ಪರಿಗಣಿಸಿದ ನಂತರ ಇಂಗ್ಲೆಂಡ್ ತಂಡ ಎರಡು ಓವರುಗಳನ್ನು ಕಡಿಮೆ ಮಾಡಿರುವುದು ಖಚಿತಪಟ್ಟಿದ್ದು, ಪಂದ್ಯದ ರೆಫ್ರಿ ರಿಚಿ ರಿಚರ್ಡ್‌ಸನ್ ದಂಡ ವಿಧಿಸಿದರು. ಭಾರತ ಈ ಡಬ್ಲ್ಯುಟಿಸಿ ಅಂಕ ಪಟ್ಟಿಯಲ್ಲಿ ನಾಲ್ಕನೇ ಸ್ಥಾನದಲ್ಲಿದೆ.

ಇಂಗ್ಲೆಂಡ್ ಅಂಕ ಗಳಿಕೆ 24 ರಿಂದ 22ಕ್ಕೆ ಕಡಿತವಾಗಿದೆ. ಪರಿಣಾಮ ಅವರ ಶೇಕಡವಾರು ಪಾಯಿಂಟ್ಸ್ 66.67 ರಿಂದ 61.11ಕ್ಕೆ ಇಳಿದಿದೆ. ಹೀಗಾಗಿ ಮೂರನೇ ಸ್ಥಾನದಲ್ಲಿದ್ದ ಶ್ರೀಲಂಕಾ ಈಗ (66.67 ಶೇ. ಪಾಯಿಂಟ್ಸ್) ಎರಡನೇ ಸ್ಥಾನಕ್ಕೇರಿತು.

ಇಂಗ್ಲೆಂಡ್ ನಾಯಕ ಬೆನ್ ಸ್ಟೋಕ್ಸ್ ತಪ್ಪೊಪ್ಪಿಕೊಂಡ ಪರಿಣಾಮ, ಅವರನ್ನು ಕರೆಸಿ ಔಪಚಾರಿಕ ವಿಚಾರಣೆ ನಡೆಸಲಿಲ್ಲ.

ರ‍್ಯಾಂಕಿಂಗ್: ರೂಟ್ ಮತ್ತೆ ಅಗ್ರಸ್ಥಾನಕ್ಕೆ

ದುಬೈ (ಪಿಟಿಐ): ಇಂಗ್ಲೆಂಡ್‌ನ ಅನುಭವಿ ಬ್ಯಾಟರ್ ಜೋ ರೂಟ್ ಅವರು ಬುಧವಾರ ಪ್ರಕಟವಾದ ಐಸಿಸಿ ಪುರುಷರ ಟೆಸ್ಟ್ ಬ್ಯಾಟರ್‌ಗಳ ರ‍್ಯಾಂಕಿಂಗ್‌ನಲ್ಲಿ ಅಗ್ರಸ್ಥಾನವನ್ನು ಮರಳಿ ಪಡೆದಿದ್ದಾರೆ. ಈ ಸ್ಥಾನ ಪಡೆದ ಎರಡನೇ ಅತಿ ಹಿರಿಯ ವಯಸ್ಸಿನ ಆಟಗಾರ ಎನಿಸಿದ್ದಾರೆ. ಬೌಲರ್‌ಗಳ ಪಟ್ಟಿಯಲ್ಲಿ ಬೂಮ್ರಾ ಅಗ್ರಸ್ಥಾನದಲ್ಲಿ ಮುಂದುವರಿಸಿದ್ದಾರೆ.

ಜೋ ರೂಟ್

ಟಾಪ್ ಟೆನ್ ಬೌಲರ್‌ಗಳಲ್ಲಿ ಆಸ್ಟ್ರೇಲಿಯಾದ ಐವರು ಸ್ಥಾನ ಪಡೆದಿರುವುದು ಗಮನಾರ್ಹ.

ಲಾರ್ಡ್ಸ್ ಟೆಸ್ಟ್‌ನಲ್ಲಿ ರೂಟ್ 104 ಮತ್ತು 40 ರನ್ ಗಳಿಸಿದ್ದರು. 2014ರಲ್ಲಿ ಕುಮಾರ ಸಂಗಕ್ಕರ 37ನೇ ವಯಸ್ಸಿನಲ್ಲಿ ಅಗ್ರಸ್ಥಾನಕ್ಕೇರಿದ ನಂತರ ಈ ಪಟ್ಟಪಡೆದ ಅತಿ ಹಿರಿಯ ಆಟಗಾರ ಎಂಬ ಗೌರವ 34 ವರ್ಷ ವಯಸ್ಸಿನ ರೂಟ್ ಅವರದಾಯಿತು.

ಈ ಹಿಂದೆ ಅಗ್ರಸ್ಥಾನದಲ್ಲಿದ್ದ ಹ್ಯಾರಿ ಬ್ರೂಕ್ ಮೂರನೇ ಸ್ಥಾನಕ್ಕೆ ಇಳಿದಿದ್ದಾರೆ. ನ್ಯೂಜಿಲೆಂಡ್‌ನ ಕೇನ್ ವಿಲಿಯಮ್ಸನ್ ಎರಡನೇ ಸ್ಥಾನದಲ್ಲಿದ್ದಾರೆ. ಭಾರತದ ಆಟಗಾರರ ಪೈಕಿ ಯಶಸ್ವಿ ಜೈಸ್ವಾಲ್ ಮತ್ತು ರಿಷಭ್ ಪಂತ್ ಅವರು ಒಂದು ಸ್ಥಾನ ಕೆಳಗಿಳಿದಿದ್ದು ಕ್ರಮವಾಗಿ ಐದನೇ ಮತ್ತು ಎಂಟನೇ ಸ್ಥಾನದಲ್ಲಿದ್ದಾರೆ. ಶುಭಮನ್ ಗಿಲ್ ಆರರಿಂದ ಒಂಬತ್ತನೇ ಸ್ಥಾನಕ್ಕಿಳಿದಿದ್ದಾರೆ. ಲಾರ್ಡ್ಸ್ ಟೆಸ್ಟ್‌ನಲ್ಲಿ ಹೋರಾಟಕಾರಿ ಅರ್ಧ ಶತಕಗಳನ್ನು ಗಳಿಸಿದ್ದ ರವೀಂದ್ರ ಜಡೇಜ ಐದು ಸ್ಥಾನ ಬಡ್ತಿ ಪಡೆದು 34ನೇ ಸ್ಥಾನಕ್ಕೇರಿದ್ದಾರೆ. ಅದೇ ಪಂದ್ಯದಲ್ಲಿ ಶತಕ ಗಳಿಸಿದ್ದ ಕೆ.ಎಲ್.ರಾಹುಲ್ 35ನೇ ಸ್ಥಾನದಲ್ಲಿದ್ದಾರೆ.

ಇಂಗ್ಲೆಂಡ್ ತಂಡದ ನಾಯಕ ಬೆನ್ ಸ್ಟೋಕ್ಸ್ 42ನೇ ಸ್ಥಾನದಲ್ಲಿದ್ದಾರೆ.

ಬೂಮ್ರಾಗೆ ಅಗ್ರಸ್ಥಾನ: ಭಾರತದ ವೇಗದ ಬೌಲರ್ ಜಸ್‌ಪ್ರೀತ್ ಬೂಮ್ರಾ ಬೌಲರ್‌ಗಳ ಪಟ್ಟಿಯಲ್ಲಿ ಅಗ್ರಸ್ಥಾನ ಪಡೆದಿದ್ದಾರೆ. ಅವರು ದಕ್ಷಿಣ ಆಫ್ರಿಕಾದ ಕಗಿಸೊ ರಬಾಡ ಅವರಿಗಿಂತ 50 ರೇಟಿಂಗ್ ಪಾಯಿಂಟ್ ಮುಂದಿದ್ದು ತಮ್ಮ ಸ್ಥಾನ ಬಲಪಡಿಸಿಕೊಂಡಿದ್ದಾರೆ.

ಜಮೈಕಾ ಟೆಸ್ಟ್‌ನಲ್ಲಿ ಹ್ಯಾಟ್ರಿಕ್ ಸಾಧಿಸಿದ್ದ ಆಸ್ಟ್ರೇಲಿಯಾಸದ ಸ್ಕಾಟ್ ಬೋಲ್ಯಾಂಡ್ ಆರನೇ ಸ್ಥಾನದಲ್ಲಿದ್ದಾರೆ. ಪ್ಯಾಟ್ ಕಮಿನ್ಸ್ (ಮೂರನೇ), ಜೋಶ್ ಹ್ಯಾಜಲ್‌ವುಡ್ (ನಾಲ್ಕನೇ), ನೇಥನ್ ಲಯನ್ (ಎಂಟನೇ) ಮತ್ತು ಮಿಚೆಲ್ ಸ್ಟಾರ್ಕ್ (ಹತ್ತನೇ) ಕೂಡ ಅಗ್ರ 10ರಲ್ಲಿದ್ದಾರೆ. 1958ರಲ್ಲಿ ಇಂಗ್ಲೆಂಡ್‌ನ ಆರು ಮಂದಿ ಅಗ್ರ 12ರಲ್ಲಿದ್ದ ನಂತರ ಒಂದೇ ತಂಡದಿಂದ ಇಂಥ ಪ್ರಾಬಲ್ಯ ಈವರೆಗೆ ಕಂಡಿರಲಿಲ್ಲ.

ಫುಟ್‌ಬಾಲ್ ಅನಿಶ್ಚಿತತೆ: ಸುನಿಲ್ ಚೆಟ್ರಿ ಕಳವಳ

ನವದೆಹಲಿ (ಪಿಟಿಐ): ಭಾರತದ ಫುಟ್‌ಬಾಲ್‌ನ ಪ್ರಸಕ್ತ ವಿದ್ಯಮಾನ, ಐಎಸ್‌ಎಲ್ ಟೂರ್ನಿಯನ್ನು ಅನಿರ್ದಿಷ್ಟ ಅವಧಿಗೆ ಮುಂದೂಡಿರುವ ಕ್ರಮಕ್ಕೆ ಮಾಜಿ ನಾಯಕ ಸುನಿಲ್ ಚೆಟ್ರಿ ಬುಧವಾರ ಕಳವಳ ವ್ಯಕ್ತಪಡಿಸಿದ್ದಾರೆ.

ದೇಶದಲ್ಲಿ ಫುಟ್‌ಬಾಲ್ ಭವಿಷ್ಯದ ಬಗ್ಗೆ ಆತಂಕ ವ್ಯಕ್ತಪಡಿಸಿ ತಮಗೆ ನೂರಾರು ಫೋನ್ ಕರೆ ಮತ್ತು ಸಂದೇಶಗಳು ಹರಿದುಬರುತ್ತಿವೆ ಎಂದು ಇಂಡಿಯನ್ ಸೂಪರ್ ಲೀಗ್‌ನಲ್ಲಿ (ಐಎಸ್‌ಎಲ್) ಬೆಂಗಳೂರು ಎಫ್‌ಸಿ ತಂಡದ ಪರ ಆಡುವ 40 ವರ್ಷ ವಯಸ್ಸಿನ ಚೆಟ್ರಿ ಎಕ್ಸ್‌ನಲ್ಲಿ ಪೋಸ್ಟ್ ಹಾಕಿದ್ದಾರೆ. ಆಟಗಾರರು, ತಂಡದ ಸಿಬ್ಬಂದಿ, ಫಿಸಿಯೊಗಳು ಕರೆ ಮಾಡುತ್ತಿದ್ದಾರೆ ಎಂದು ಉಲ್ಲೇಖಿಸಿದ್ದಾರೆ.

ದೇಶದ ಫುಟ್‌ಬಾಲ್ ಕ್ಷೇತ್ರದ ಬಗ್ಗೆ ಕಾಳಜಿ ಹೊಂದಿರುವವರಿಗೆ ಈಗಿನ ವಿದ್ಯಮಾನದಿಂದ ನೋವು ಮತ್ತು ಆತಂಕವಾಗಿದೆ ಎಂದಿದ್ದಾರೆ.

ಐಎಸ್‌ಎಲ್ ಆಯೋಜಕರಾದ ಫುಟ್‌ಬಾಲ್ ಸ್ಪೋರ್ಟ್ಸ್ ಡೆವಲಪ್‌ಮೆಂಟ್ ಲಿಮಿಟೆಡ್ (ಎಫ್‌ಎಸ್‌ಡಿಎಲ್) ಮತ್ತು ಅಖಿಲ ಭಾರತ ಫುಟ್‌ಬಾಲ್ ಫೆಡರೇಷನ್ ನಡುವಣ ಮೂಲ ಹಕ್ಕುಗಳ ಒಪ್ಪಂದ (ಎಂಆರ್‌ಎ) ನವೀಕರಣಕ್ಕೆ ಸಂಬಂಧಿಸಿ ಅನಿಶ್ಚಿತತೆ ಮನೆಮಾಡಿದ್ದು ಈ ಟೂರ್ನಿಯನ್ನು ಅನಿರ್ದಿಷ್ಟಾವಧಿಗೆ ಮುಂದಕ್ಕೆ ಹಾಕಲಾಗಿದೆ. ಈಗಿನ ಒಪ್ಪಂದ ಈ ವರ್ಷದ ಡಿ. 8ರಂದು ಕೊನೆಗೊಳ್ಳಲಿದೆ.

ಭಾರತದ ಸವಾಲು ಮುನ್ನಡೆಸಲಿರುವ ಪ್ರಜ್ಞಾನಂದ

ಲಾಸ್ ವೇಗಸ್ (ಪಿಟಿಐ): ವಿಶ್ವದ ಅಗ್ರಮಾನ್ಯ ಆಟಗಾರ ಮ್ಯಾಗ್ನಸ್ ಕಾರ್ಲ್‌ಸನ್ ಮತ್ತು ಭಾರತದ ಆರ್. ಪ್ರಜ್ಞಾನಂದ ಅವರು 16 ಆಟಗಾರರು ಭಾಗಹಿಸಲಿರುವ ಫ್ರೀಸ್ಟೈಲ್ ಚೆಸ್ ಟೂರ್ನಿಯ ಒಂದೇ ಗುಂಪಿನಲ್ಲಿದ್ದಾರೆ. ಭಾರತದ ಅರ್ಜುನ್ ಇರಿಗೇಶಿ ಮತ್ತು ವಿದಿತ್ ಎಸ್.ಗುಜರಾತಿ ಇನ್ನೊಂದು ಗುಂಪಿನಲ್ಲಿ ಜೊತೆಯಾಗಿದ್ದಾರೆ. ಈ ಟೂರ್ನಿಗೆ ಬುಧವಾರ ತಡರಾತ್ರಿ ಚಾಲನೆ ದೊರೆಯಿತು.

ಪ್ರಜ್ಞಾನಂದ

ನಾರ್ವೆಯ ದಿಗ್ಗಜ ಆಟಗಾರ ಕಾರ್ಲ್‌ಸನ್ ಮತ್ತೊಮ್ಮೆ ಈ ಟೂರ್ನಿ ಗೆಲ್ಲುವ ನೆಚ್ಚಿನ ಆಟಗಾರ ಎನಿಸಿದ್ದಾರೆ. ಈ ಟೂರ್ನಿಗೆ ಪೂರ್ವಭಾವಿಯಾಗಿ ಆಕರ್ಷಣೆ ಹೆಚ್ಚಿಸಲು ಪ್ರಿ ಇವೆಂಟ್‌ನಲ್ಲಿ ಎನ್‌ಬಿಎ ಆಟಗಾರರನ್ನು ಒಳಗೊಳಿಸಲಾಯಿತು.

ಟೂರ್ನಿಯು ಸುಮಾರು ₹6.5 ಕೋಟಿ ಬಹುಮಾನ ಮೊತ್ತ ಹೊಂದಿದೆ. ಇದರಲ್ಲಿ ₹1.72 ಕೋಟಿ ಬಹುಮಾನ ಹಣ ವಿಜೇತ ಆಟಗಾರನ ಜೇಬಿಗಿಳಿಯಲಿದೆ.

ಇನ್ನೊಂದು ತಿಂಗಳಲ್ಲಿ ನಡೆಯುವ ಗ್ರ್ಯಾಂಡ್‌ಮಾಸ್ಟರ್ಸ್ ಟೂರ್ನಿಯಲ್ಲಿ ಆಡುವ ಉದ್ದೇಶದಿಂದ ಡಿ.ಗುಕೇಶ್ ಅವರು ಲಾಸ್‌ವೇಗಸ್ ಟೂರ್ನಿಯಲ್ಲಿ ಆಡದಿರಲು ತೀರ್ಮಾನಿಸಿದ್ದಾರೆ.

19 ವರ್ಷ ವಯಸ್ಸಿನ ಪ್ರಜ್ಞಾನಂದ ತಮ್ಮ ಮೊದಲ ಪಂದ್ಯದಲ್ಲಿ ಉಜ್ಬೇಕಿಸ್ತಾನದ ನದಿರ್ಬೆಕ್ ಅಬ್ದುಸತ್ತಾರೋವ್ ಅವರನ್ನು ಎದುರಿಸಲಿದ್ದಾರೆ. ಕಾರ್ಲ್‌ಸನ್ ಅವರ ಮೊದಲ ಸುತ್ತಿನ ಎದುರಾಳಿ ಜರ್ಮನಿಯ ವಿನ್ಸೆಂಟ್ ಕೀಮರ್. ಕೀಮರ್ ಈ ಟೂರ್ನಿಯ ಮೊದಲ ಆವೃತ್ತಿಯ ವಿಜೇತರಾಗಿದ್ದಾರೆ.

ಮೊದಲ ಸಲ ಫ್ರೀಸ್ಟೈಲ್ ಚೆಸ್‌ನಲ್ಲಿ ಭಾಗವಹಿಸುತ್ತಿರುವ ಅಮೆರಿಕದ ಹ್ಯಾನ್ಸ್ ನೀಮನ್ ತಮ್ಮ ಮೊದಲ ಪಂದ್ಯವನ್ನು ಭಾರತದ ಅರ್ಜುನ್ ಇರಿಗೇಶಿ ವಿರುದ್ಧ ಆಡುವರು.

ವಿದಿತ್ ಗುಜರಾತಿ ಅವರು ಅಮೆರಿಕದ ಫ್ಯಾಬಿಯಾನೊ ಕರುವಾನ ಅವರನ್ನು ಎದುರಿಸಲಿದ್ದಾರೆ. ಮೊದಲ ಸಲ ಟೂರ್ನಿಯಲ್ಲಿ ಮಹಿಳಾ ಆಟಗಾರ್ತಿ– ಕಜಕಸ್ತಾನದ ಬಿಬಿಸಾರಾ ಅಸ್ಸುಬಯೇವಾ ಅವರು ಕಣಕ್ಕಿಳಿದಿದ್ದಾರೆ.

ಫಿಷರ್ ರ‍್ಯಾಂಡಮ್ ಚೆಸ್ ಅಥವಾ ಚೆಸ್ 360ಗೆ ಫ್ರೀಸ್ಟೈಲ್ ಚೆಸ್ ಎಂಬ ಹೆಸರಿನಿಂದ ಕರೆಯಲಾಗುತ್ತಿದೆ. ಈ ಆಟ ಆರಂಭಿಸುವಾಗ ಎರಡೂ ಕಡೆಯ ಮೊದಲ ಸಾಲಿನಲ್ಲಿ ಪಡೆಗಳು ಅನುಕ್ರಮವಾಗಿ (ಸಾಂಪ್ರದಾಯಿಕ ಚೆಸ್ ಕ್ರಮದಲ್ಲಿರುವ ಹಾಗೆ) ಇರುವುದಿಲ್ಲ. ಹೀಗಾಗಿ ಸಿದ್ಧಾಂತದ ಆಟಕ್ಕಿಂತ ಇದು ಭಿನ್ನವಾಗಿ ಜನಪ್ರಿಯತೆ ಪಡೆದಿದೆ. ನೀರಸ ಡ್ರಾಗಳು ಇಲ್ಲಿ ನಡೆಯುವುದಿಲ್ಲ. ಪಂದ್ಯಗಳು ಹೋರಾಟದಿಂದ ಕೂಡಿರುತ್ತವೆ.

ಇಂಡಿಯನ್ ಓಪನ್: ನಿರೀಕ್ಷೆ ಮೀರಿ ಸ್ಪರ್ಧಿಗಳ ನೋಂದಣಿ

ಎರಡು ದಿನ ಸ್ಪರ್ಧೆ ನಡೆಸಲು ನಿರ್ಧಾರ

ನವದೆಹಲಿ (ಪಿಟಿಐ): ಇದೇ ತಿಂಗಳ 27ರಂದು ಪಂಜಾಬಿನ ಸಂಗ್ರೂರಿನಲ್ಲಿ ನಿಗದಿಯಾಗಿರುವ ಇಂಡಿಯನ್ ಓಪನ್ ಅಥ್ಲೆಟಿಕ್ ಕೂಟವನ್ನು, ಸ್ಪರ್ಧಿಗಳ ಸಂಖ್ಯೆ ನಿರೀಕ್ಷೆ ಮೀರಿದ್ದರಿಂದ ಮತ್ತೊಂದು ದಿನಕ್ಕೆ ವಿಸ್ತರಿಸಲಾಗಿದೆ. ದೇಶೀ ಸರ್ಕಿಟ್‌ನಲ್ಲಿ ಮೊದಲ ಬಾರಿ ಈ ರೀತಿಯ ಬೆಳವಣಿಗೆಯಾಗಿದೆ.

ಸುಮಾರು 900 ಸ್ಪರ್ಧಿಗಳು ನೋಂದಾಯಿಸಿದ ಪರಿಣಾಮ ಒಂದು ದಿನ ಬದಲು ಎರಡು ದಿನ (ಜುಲೈ 27 ಮತ್ತು 28ರಂದು) ಸ್ಪರ್ಧೆಗಳನ್ನು ಹಮ್ಮಿಕೊಳ್ಳಬೇಕಾದ ಅಗತ್ಯ ಎದುರಾಗಿದೆ ಎಂದು ಭಾರತ ಅಥ್ಲೆಟಿಕ್ ಫೆಡರೇಷನ್ (ಎಎಫ್‌ಐ) ಸುತ್ತೋಲೆಯಲ್ಲಿ ತಿಳಿಸಿದೆ.

ಸ್ಪರ್ಧೆಗಳ ಪಟ್ಟಿಯನ್ನು ಶೀಘ್ರವೇ ಎಎಫ್‌ಐ ವೆಬ್‌ಸೈಟ್‌ನಲ್ಲಿ ಪ್ರಕಟಿಸಲಾಗುವುದು. ಅಥ್ಲೀಟುಗಳು ಇದಕ್ಕೆ ಅನುಗುಣವಾಗಿ ತಮ್ಮ ವಾಸ್ತವ್ಯಕ್ಕೆ ವ್ಯವಸ್ಥೆ ಮಾಡಿಕೊಳ್ಳಬೇಕು' ಎಂದು ಅದು ತಿಳಿಸಿದೆ.

ಈ ಕ್ಯಾಲೆಂಡರ್ ವರ್ಷದಿಂದ ಎಎಫ್‌ಐ ಇದೇ ಮೊದಲ ಬಾರಿ ಎಂಟು ಇಂಡಿಯನ್ ಓಪನ್ ಅಥ್ಲೆಟಿಕ್ ಕೂಟಗಳನ್ನು ದೇಶದ ಬೇರೆ ಬೇರೆ ಕಡೆ ನಡೆಸುತ್ತಿದೆ. ಅಥ್ಲೀಟುಗಳಿಗೆ ಹೆಚ್ಚಿನ ಅವಕಾಶ ನೀಡಲು ಮತ್ತು ಅವರು ತಮ್ಮ ತವರು ಅಥವಾ ನೆರೆಯ ರಾಜ್ಯಗಳಲ್ಲಿ ಸ್ಪರ್ಧಿಸಲು ಅನುವಾಗುವಂತೆ ಈ ಕ್ರಮ ಕೈಗೊಂಡಿದೆ.

ಸಂಗ್ರೂರಿನಲ್ಲಿ ಎರಡನೇ ಬಾರಿ ಈ ಕೂಟ ನಡೆಯುತ್ತಿದೆ. ಏಪ್ರಿಲ್ 1ರಂದು ಇಲ್ಲಿ ಇಂಡಿಯನ್ ಓಪನ್ ಕೂಟ ನಡೆದಾಗ 130 ಮಂದಿ ಭಾಗವಹಿಸಿದ್ದರು.

ಗುಜರಾತ್‌ನ ನಡಿಯಾಡ್ (ಏಪ್ರಿಲ್ 5), ರಾಂಚಿ (ಏಪ್ರಿಲ್ 10), ಚೆನ್ನೈ (ಏಪ್ರಿಲ್ 15), ಬೆಂಗಳೂರು (ಜೂನ್ 28) ಮತ್ತು ಪುಣೆಯಲ್ಲಿ (ಜುಲೈ 12) ಇದಕ್ಕೆ ಮೊದಲು ಈ ಕೂಟಗಳು ನಡೆದಿವೆ. ಸಂಗ್ರೂರ್ ಕೂಟಕ್ಕಿಂತ ಮೊದಲು ಜುಲೈ 19ರಂದು ಪಟ್ನಾದಲ್ಲಿ ಇಂಡಿಯನ್ ಓಪನ್ ಕೂಟ ನಡೆಯಲಿದೆ.

ಆಗಸ್ಟ್ 20 ರಿಂದ 24ರವರೆಗೆ ಚೆನ್ನೈನಲ್ಲಿ ರಾಷ್ಟ್ರೀಯ ಅಂತರ–ರಾಜ್ಯ ಸೀನಿಯರ್ ಚಾಂಪಿಯನ್‌ಷಿಪ್ ನಡೆಯಲಿದೆ. ಈ ಕೂಟದಲ್ಲಿ ಭಾಗವಹಿಸಬೇಕಾದರೆ, ಇಂಥ ದೇಶಿ ಕೂಟಗಳಲ್ಲಿ (ಮೇ 1 ರಿಂದ ಆಗಸ್ಟ್ 10ರ ನಡುವೆ) ಎಎಫ್‌ಐ ನಿಗದಿಪಡಿಸಿದ ಮಾನದಂಡಗಳನ್ನು ಅಥ್ಲೀಟುಗಳು ತಲುಪಬೇಕು ಎಂದು ಫೆಡರೇಷನ್ ಕಡ್ಡಾಯಗೊಳಿಸಿದೆ.

ಅಥ್ಲೀಟುಗಳು ತಮ್ಮ ರಾಜ್ಯದ ಸಂಸ್ಥೆಗಳು ಆಯೋಜಿಸಿದ ಚಾಂಪಿಯನ್‌ಷಿಪ್‌ಗಳಲ್ಲಿ ಭಾಗವಹಿಸುವುದರ ಜೊತೆಗೆ ಎಎಫ್‌ಐ ಆಯೋಜಿಸಿದ ಯಾವುದಾದರೂ ಒಂದು ಕೂಟದಲ್ಲಿ ಭಾಗವಹಿಸಬೇಕೆಂದೂ ಎಎಫ್‌ಐ ನಿಯಮ ರೂಪಿಸಿದೆ.

ಒಂದೊಮ್ಮೆ ರಾಜ್ಯ ಸಂಸ್ಥೆಯು ಮೇಲ್ಕಂಡ ಅವಧಿಯಲ್ಲಿ ಯಾವುದೇ ಚಾಂಪಿಯನ್‌ಷಿಪ್ ನಡೆಸದಿದ್ದಲ್ಲಿ, ಎಎಫ್‌ಐನ ಎರಡು ಕೂಟಗಳಲ್ಲಿ (ಇಂಡಿಯನ್ ಓಪನ್ ಅಥವಾ ಗ್ರ್ಯಾನ್‌ಪ್ರಿ ಕೂಟಗಳು) ಅಥ್ಲೀಟುಗಳು ಭಾಗವಹಿಸಿ ನಿಗದಿಪಡಿಸಿದ ಅರ್ಹತಾ ಮಾನದಂಡ ಪೂರೈಸಬೇಕಾಗುತ್ತದೆ.

ಪಿಸಿಬಿಯಲ್ಲಿ ₹180 ಕೋಟಿ ಅಕ್ರಮ

ಇಸ್ಲಾಮಾಬಾದ್ (ಪಿಟಿಐ): ಪಾಕಿಸ್ತಾನ ಕ್ರಿಕೆಟ್ ಮಂಡಳಿಯಲ್ಲಿ (ಪಿಸಿಬಿ) ಸುಮಾರು ₹180 ಕೋಟಿ ಅವ್ಯವಹಾರ ನಡೆದಿರುವುದು ಪತ್ತೆಯಾಗಿದೆ. ಪಾಕಿಸ್ತಾನದ ಪ್ರಧಾನ ಲೆಕ್ಕಪರಿಶೋಧಕರು ಸಿದ್ಧಪಡಿಸಿರುವ 2023–24ನೇ ಹಣಕಾಸು ವರ್ಷದ ವರದಿಯಲ್ಲಿ ಈ ವಿಚಾರ ಬಯಲಾಗಿದೆ.

ಪಿಸಿಬಿಯು ಕಾರ್ಯಕ್ರಮಗಳ ಪ್ರಾಯೋಜಕರಿಂದ 18.6 ಮಿಲಿಯನ್ ಡಾಲರ್ (₹150 ಕೋಟಿ) ಮೌಲ್ಯದ ಶುಲ್ಕ ಸಂಗ್ರಹಿಸುವಲ್ಲಿ ವಿಫಲವಾಗಿದೆ. ಜೂನಿಯರ್ ಕೋಚ್‌ಗಳು ಹಾಗೂ ಮಾಧ್ಯಮ ನಿರ್ದೇಶಕರ ನೇಮಕಾತಿಯಲ್ಲಿ ನಿಯಮಗಳ ಪಾಲನೆಯಾಗಿಲ್ಲ. ಅಲ್ಲದೆ, ಮಂಡಳಿಯು ಎರಡು ವರ್ಷಗಳ ಹಿಂದೆ ಆಡಳಿತಾತ್ಮಕ ಸಮಸ್ಯೆಗಳಿಗೂ ಸಿಲುಕಿತ್ತು ಎಂದು ವರದಿ ಮಾಡಿದೆ.

ಪಾಕಿಸ್ತಾನದಲ್ಲಿ ಅಂತರರಾಷ್ಟ್ರೀಯ ಪಂದ್ಯಗಳನ್ನು ಆಡಲು ಬಂದಿದ್ದ ವಿದೇಶಿ ಆಟಗಾರರ ಭದ್ರತೆಗೆ ನಿಯೋಜಿಸಲಾಗಿದ್ದ ಪೊಲೀಸರು ಹಾಗೂ ಭದ್ರತಾ ಸಿಬ್ಬಂದಿಯ ಊಟೋಪಚಾರಕ್ಕೆ 2.20 ಲಕ್ಷ ಡಾಲರ್ (₹1.8 ಕೋಟಿ) ಖರ್ಚು ಮಾಡಿದೆ ಎಂದು ಪಾಕ್ ಮಾಧ್ಯಮಗಳು ವರದಿ ಮಾಡಿವೆ..

ನೆದರ್ಲೆಂಡ್ಸ್ ವಿರುದ್ಧ ಪ್ರೊ ಲೀಗ್‌ನಲ್ಲಿ ಗಳಿಸಿದ ಗೋಲು

ದೀಪಿಕಾಗೆ 'ಮ್ಯಾಜಿಕ್ ಸ್ಕಿಲ್ ಗೋಲು' ಪ್ರಶಸ್ತಿ

ದೀಪಿಕಾ

ನವದೆಹಲಿ (ಪಿಟಿಐ): ಭಾರತ ಹಾಕಿ ತಂಡದ ಮುಂಚೂಣಿ ಆಟಗಾರ್ತಿ ದೀಪಿಕಾ ಅವರು ಕೌಶಲದ ಗೋಲಿಗಾಗಿ 'ಪಾಲಿಗ್ರಾಸ್ ಮ್ಯಾಜಿಕ್ ಸ್ಕಿಲ್' ಪ್ರಶಸ್ತಿಗೆ ಪಾತ್ರರಾಗಿದ್ದಾರೆ. ಭುವನೇಶ್ವರದಲ್ಲಿ ನಡೆದ 2024–25ನೇ ಸಾಲಿನ ಪಂದ್ಯದಲ್ಲಿ ನೆದರ್ಲೆಂಡ್ಸ್ ವಿರುದ್ಧ ಅವರು ಆ ಚಮತ್ಕಾರದ ಫೀಲ್ಡ್ ಗೋಲು ಗಳಿಸಿದ್ದರು.

ಕೌಶಲ ಮತ್ತು ಸೃಜನಶೀಲ ಆಟದಿಂದ ಗಳಿಸಿದ ಗೋಲನ್ನು ಈ ಪ್ರಶಸ್ತಿಗೆ ನಾಮನಿರ್ದೇಶನ ಮಾಡಲಾಗುತ್ತದೆ. ಈ ಪ್ರಶಸ್ತಿಗೆ ಅಂತಿಮಗೊಂಡ ಆಟಗಾರರನ್ನು ವಿಶ್ವದಾದ್ಯಂತ ಹಾಕಿ ಅಭಿಮಾನಿಗಳು ಮತದಾನದ ಮೂಲಕ ಆಯ್ಕೆ ಮಾಡುತ್ತಾರೆ.

ವಿಶ್ವದ ಅಗ್ರಮಾನ್ಯ ತಂಡದ ವಿರುದ್ಧ ಆ ಪಂದ್ಯದಲ್ಲಿ, ದೀಪಿಕಾ 35ನೇ ನಿಮಿಷ ಏಕಾಂಗಿಯಾಗಿ ಎಡಗಡೆಯಿಂದ ಮುನ್ನುಗ್ಗಿ ಚೆಂಡನ್ನು ಡ್ರಿಬಲ್ ಮಾಡಿ ಎದುರಾಳಿ ಡಿಫೆಂಡರ್‌ಗಳನ್ನು ತಪ್ಪಿಸಿಕೊಂಡು ಗೋಲು ಗಳಿಸಿದ್ದರು. ಭಾರತ ಆ ಪಂದ್ಯದಲ್ಲಿ 0–2 ಹಿನ್ನಡೆಯಲ್ಲಿತ್ತು. ಆ ಗೋಲಿನಿಂದ ಭಾರತ ಚೇತರಿಸಿತ್ತು. ನಂತರ ಸ್ಕೋರ್ 2–2 ಸಮನಾಗಿ ಶೂಟೌಟ್‌ನಲ್ಲಿ ನೆದರ್ಲೆಂಡ್ಸ್ ಗೆದ್ದಿತ್ತು.

'ನನಗೆ ಪ್ರಶಸ್ತಿ ದೊರಕಿರುವುದು ದೊಡ್ಡ ಗೌರವ. ನೆದರ್ಲೆಂಡ್ಸ್‌ನಂಥ ತಂಡದ ಎದುರು ಗೋಲು ಗಳಿಸಿದ ಆ ಗೋಲು ನಿಜಕ್ಕೂ ವಿಶೇಷ ಎನಿಸುತ್ತದೆ. ನನ್ನ ಸಹ ಆಟಗಾರ್ತಿಯರು, ಕೋಚ್‌ಗಳು, ಕುಟುಂಬ ಸದಸ್ಯರು ಮತ್ತು ಸ್ನೇಹಿತರಿಗೆ ಧನ್ಯವಾದ ಸಲ್ಲಿಸುತ್ತೇನೆ' ಎಂದಿದ್ದಾರೆ 21 ವರ್ಷ ವಯಸ್ಸಿನ ದೀಪಿಕಾ.

'ಇದು ನನಗೆ ಮಾತ್ರ ದೊರೆತ ಪ್ರಶಸ್ತಿಯಲ್ಲ. ಇದು ಭಾರತದ ಹಾಕಿಗೆ ಸೇರಿದ್ದು. ಎಲ್ಲರೂ ಜೊತೆಯಾಗಿ ಮುಂದೆ ಸಾಗೋಣ' ಎಂದು ಹೇಳಿದ್ದಾರೆ.

ದೀಪಿಕಾ ಜೊತೆ, ಸ್ಪೇನ್‌ನ ಪೆಟ್ರೀಶಿಯಾ ಆಲ್ವಾರೆಝ್ ಮತ್ತು ಆಸ್ಟ್ರೇಲಿಯಾ ಮಹಿಳಾ ತಂಡ ಗಳಿಸಿದ ಗೋಲು ಸ್ಪರ್ಧೆಯಲ್ಲಿದ್ದವು.

ಪುರುಷರ ವಿಭಾಗದಲ್ಲಿ ಈ ಗೌರವ ಬೆಲ್ಜಿಯಂನ ವಿಕ್ಟರ್ ವೆಗ್ನೆಝ್ ಅವರ ಪಾಲಾಯಿತು. ಸ್ಪೇನ್ ಎದುರು ಮಿಡ್‌ಫೀಲ್ಡ್‌ನಲ್ಲಿ ಅವರು ಆಡಿದ ಚಮತ್ಕಾರಿಕ ಆಟದಿಂದ ತಂಡ ಗೋಲು ಗಳಿಸಿತ್ತು.